UNIVERSAL LIBRARY
OU_200285
UNIVERSAL LIBRARY

ಕರ್ನಾಟಕಗ್ರಂಥಮಾಲೆ—೧೧೦

# ಟ್ರೋಜನ್ ದಂಡಯಾತ್ರೆ

(ಯವನಪುರಾಣಕಥಾವಳಿ: ಎರಡನೆಯ ಗ್ರಂಥ)

ಬಿ. ಕೃಷ್ಣಪ್ಪ, ಎಂ. ಎ.

ಮೈಸೂರು :

ಶ್ರೀನಿವಾಸ್ ಎಲೆಕ್ಟ್ರಿಕ್ ಪ್ರೆಸ್

೧೯೩೪.

ಈ ಗ್ರಂಥದ ಸರ್ವಸ್ವಾತಂತ್ರ್ಯವನ್ನೂ ರೆಜಿಸ್ಟರು ಮಾಡಿಸಿದೆ

ಕ್ರಯ ೧—[illegible]—೦

## ಪೀಠಿಕೆ.

" ಟ್ರೋಜನ್ ದಂಡಯಾತ್ರೆ "ಗೆ ಗ್ರೀಕ್ ಭಾಷೆಯಲ್ಲಿಯೂ ಅನೇಕ ಇತರ ಪಾಶ್ಚಾತ್ಯಭಾಷೆಗಳಲ್ಲಿಯೂ " ಇಲಿಯಡ್ " ಎಂದು ಹೆಸರಿರುವುದು. ಈ ಗ್ರಂಥವನ್ನು ಮೊದಲು ಗ್ರೀಕ್ ಭಾಷೆಯಲ್ಲಿ ರಚಿಸಿದ ಕವಿಯು " ಹೋಮರ್ " ಎಂಬಾತನು ಒಂದಾನೊಂದು ಕಾಲದಲ್ಲಿ, ಹೋಮರನು ಗ್ರೀಕರಲ್ಲಿ ಮಹಾ ವೀರನಾಗಿದ್ದ ಏಕಿಲೀಸಿನ ಸಮಾಧಿಯ ಬಳಿಗೆ ಹೋಗಿದ್ದಾಗ, ಆತನು ಅದ್ಭುತ ಪ್ರಭಾಯುಕ್ತನಾಗಿ ಹೋಮರನಿಗೆ ಕಾಣಿಸಿಕೊಂಡನೆಂದೂ, ಆ ಪ್ರಭೆಯನ್ನು ನೋಡಲಾರದೆ ಹೋಮರಿನ ಕಣ್ಣುಗಳು ಇಂಗಿ ಹೋದುವೆಂದೂ, ಆದುದರಿಂದ ಅವನಿಗೆ " ಹೋಮರಾಸ್ " (ಎಂದರೆ, ಪರಾನುಯಾಯಿ) ಎಂದು ಹೆಸರಾಯಿತೆಂದೂ ಒಂದು ಕಥೆಯು ಇರುವುದು. ಈ ಕವಿಯು ಸುಮಾರು ಕ್ರಿ. ಪೂ. ೮೫೦ರಲ್ಲಿ ಜೀವಿಸುತ್ತಿದ್ದನೆಂದು ಅನೇಕ ವಿದ್ವಾಂಸರು ನಂಬಿರುವರು. ಕವಿಯು ಬದುಕಿದ್ದಾಗ ತನ್ನ ಉದರಭರಣಾರ್ಥವಾಗಿ ಊರೂರನ್ನು ಅಲೆಯಬೇಕಾಗಿದ್ದರೂ, ಆತನು ಸತ್ತ ಬಳಿಕ ಸ್ಮರ್ನ ಮುಂತಾದ ಏಳು ಸ್ಥಳಗಳ ನಿವಾಸಿಗಳು " ಓಹೋ ! ಹೋಮರನೋ ? ನಮ್ಮೂರಿನವನೇ ಆತನು ! " ಎಂದು ಒಬ್ಬರೊಡನೊಬ್ಬರು ವಾಗ್ವಾದಮಾಡುತ್ತಿದ್ದರು. ಅಂತು ಈ ಹೋರಾಟದಿಂದ ಹೋಮರಿನ ಜನ್ಮಸ್ಥಾನವು ಇಂತಹುದೇ ಎಂದು ನಿರ್ಣಯಿಸಲು ಈಗ ಸಾಧ್ಯವಿಲ್ಲದೆ ಇರುವುದು. ಟ್ರೋಜನ್ ದಂಡಯಾತ್ರೆಯಲ್ಲಿ ಗ್ರೀಕರ ಮತ್ತೊಬ್ಬ ಪ್ರಸಿದ್ಧಪುರುಷನಾದ ಒಡಿಸಿಯಸ್ಸನು ಟ್ರಾಯ್‌ಪಟ್ಟಣದ ಬಳಿಯಿಂದ ಹೊರಟ ಬಳಿಕ ತನ್ನ ಮಾತೃಭೂಮಿಯಾದ ಇಥಾಕಾದ್ವೀಪಕ್ಕೆ ಹೋಗಿ ಸೇರುವವರೆಗೆ ನಡೆದ ವೃತ್ತಾಂತವನ್ನು ವಿವರಿಸುವ " ಒಡಿಸಿ " ಎಂಬ ಗ್ರಂಥವನ್ನೂ ಹೋಮರನೇ ರಚಿಸಿರುವನೆಂದು ಅನೇಕವಿದ್ವಾಂಸರು ನಂಬಿರುವರು.

ನಮ್ಮ ಮಹಾಭಾರತ, ರಾಮಾಯಣಗಳಂತೆಯೇ 'ಇಲಿಯಡ್,' 'ಒಡಿಸಿ' ಎಂಬ ಗ್ರಂಥಗಳೂ ಪ್ರಾರಂಭದಲ್ಲಿಯೇ ಲಿಖಿತಗ್ರಂಥಗಳಾಗಿರಲಿಲ್ಲ. ಹಬ್ಬ, ಮದುವೆ, ಸಭೆ, ಮುಂತಾದುವುಗಳಲ್ಲಿ ಗಾಯಕರು ಈ ಗ್ರಂಥಗಳ ಕೆಲ ಕೆಲವು ಭಾಗಗಳನ್ನು ಸದಸ್ಯರ ಮುಂದೆ ಗಾನಮಾಡುತ್ತಿದ್ದರು. ಹೀಗೆ ಗಾನ

ಮಾಡುವಾಗ ಗಾಯಕರು ತಮ್ಮ ಸದಸ್ಯರ ಇಚ್ಛಾನುಸಾರವಾಗಿಯೋ ತಮ್ಮ ತಮ್ಮ ಇಚ್ಛಾನುಸಾರವಾಗಿಯೋ ಕೆಲಕೆಲವು ಭಾಗಗಳನ್ನು ಆರಿಸಿಕೊಂಡು ಒಂದೊಂದು ವೇಳೆ ಕೆಲವು ವಿಷಯಗಳನ್ನು ಬಿಡುತ್ತಲೂ ಮತ್ತೆ ಕೆಲವು ವಿಷಯಗಳನ್ನು ಸೇರಿಸುತ್ತಲೂ ಹಾಡಿ ಸದಸ್ಯರನ್ನು ಮೆಚ್ಚಿಸಿ ತಮ್ಮ ಜೀವನವನ್ನು ಸಂಪಾದಿಸಿಕೊಳ್ಳುತ್ತಿದ್ದರು. ಆದುದರಿಂದ ಈ ಗ್ರಂಥಗಳು ಎಲ್ಲಾ ಸ್ಥಳಗಳಲ್ಲಿಯೂ ಎಲ್ಲಾ ಕಾಲಗಳಲ್ಲಿಯೂ ಒಂದೇ ರೀತಿಯಲ್ಲಿ ಇರಲಿಲ್ಲ. ಕ್ರಿ. ಪೂ. ೬ನೆಯ ಶತಮಾನದಲ್ಲಿ ಅಥೆನ್ಸ್ ಸಂಸ್ಥಾನದಲ್ಲಿದ್ದ ಸೋಲನ್ ಎಂಬ ಧರ್ಮಶಾಸ್ತ್ರಪ್ರವರ್ತಕನು ಒಂದು ಕ್ರಮವನ್ನು ಅನುಸರಿಸಿ ಈ ಗ್ರಂಥಗಳಿಂದ ಭಾಗಗಳನ್ನು ಆರಿಸಿಕೊಂಡು ಗಾಯಕರು ಗಾನಮಾಡಬೇಕೇ ಹೊರತು ಇಲ್ಲೊಂದು ಅಲ್ಲೊಂದು ಭಾಗದಂತೆ ಆರಿಸಿಕೊಳ್ಳಕೂಡದೆಂದು ವಿಧಿಸಿದನು. ಅದೇ ಕಾಲದೇಶದಲ್ಲಿ ಪ್ರಸಿದ್ಧನಾಗಿದ್ದ ಪಿಸಿಸ್ಟ್ರೇಟಸ್ ಎಂಬ ಪ್ರಭುವು ಸುಮಾರು ಎಪ್ಪತ್ತು ಮಂದಿ ಲೇಖಕರನ್ನು ನಿಯಮಿಸಿ ಈ ಗ್ರಂಥಗಳ ಭಾಗಗಳನ್ನು ಕ್ರಮವಾಗಿ ಬರೆಸಿಟ್ಟನಂತೆ. ಅಂದಿನಿಂದ ಗಾಯಕರು, ತಮಗೆ ತೋರಿದಂತೆ ಇದ್ದ ವಿಷಯಗಳನ್ನು ಬಿಟ್ಟೂ ಇಲ್ಲದ ವಿಷಯಗಳನ್ನು ಸೇರಿಸಿಕೊಂಡೂ ಗಾನ ಮಾಡುವುದು ಕಡಿಮೆಯಾಗುತ್ತ ಬಂದಿತು

ಈ ಗ್ರಂಥಗಳು ಮೊದಲಿನಿಂದಲೂ ಬಹುಜನಾದರಣೀಯವಾಗಿರುವುವು. ಇಲಿಯಡ್ಡನ್ನು ತಿಳಿಯದ ಮನುಷ್ಯನನ್ನು ಶುಂಠನೆಂದು ಗ್ರೀಕರು ಭಾವಿಸಿದ್ದರು. 'ಅಲೆಕ್ಸಾಂಡರ್' ಮಹಾಶಯನು ಈ ಗ್ರಂಥವನ್ನು ಅತ್ಯಂತೋತ್ಸಾಹದಿಂದ ಪಠಿಸುತ್ತಿದ್ದುದೂ ಅಲ್ಲದೆ, ಇದರ ಒಂದು ಪ್ರತಿಯನ್ನು ರತ್ನಖಚಿತವಾದ ಒಂದು ಸಂಪುಟದಲ್ಲಿಟ್ಟುಕೊಂಡು ತಾನು ವಿಜಯಾರ್ಥಿಯಾಗಿ ಹೋದ ಸ್ಥಳಗಳಿಗೆಲ್ಲಾ ತೆಗೆದುಕೊಂಡು ಹೋಗಿ ಆಗಾಗ ಓದುತ್ತಿದ್ದನಂತೆ! ನಮ್ಮ ಜ್ಯೋತಿಷಿಕರು ಪ್ರಶ್ನೆ ಹೇಳುವಾಗ ಪೃಚ್ಛಕರ ಕೈಗೆ ಒಂದು ಕಡ್ಡಿಯನ್ನು ಕೊಟ್ಟು ಅದನ್ನು ಶ್ರೀಮದ್ರಾಮಾಯಣದ ನಡುವೆ ಎಲ್ಲಾದರೂ ಒಂದುಕಡೆಯಲ್ಲಿರಿಸಿ ಆ ಕಡ್ಡಿ ಇರುವ ಭಾಗದಲ್ಲಿಯ ವಿಷಯಕ್ಕನುಸಾರವಾಗಿ ಪೃಚ್ಛಕರಿಗೆ ಶುಭಾಶುಭಫಲಗಳನ್ನು ಹೇಳುವ ಹಾಗೆಯೇ, ಪಾಶ್ಚಾತ್ಯ ದೇಶಗಳಲ್ಲಿಯೂ ಮೊದಮೊದಲು ಜ್ಯೋತಿಷ್ಕರು ಇಲಿಯಡ್ಡಿನ ವಿಷಯದಲ್ಲಿ ಇದೇ ಪದ್ಧತಿಯನ್ನು ಅನುಸರಿಸುತ್ತಿದ್ದರಂತೆ!

ಈಗಲೂ ಪಾಶ್ಚಾತ್ಯದೇಶಗಳಲ್ಲಿ ಇಲಿಯಡ್, ಒಡಿಸಿ ಎಂಬ ಗ್ರಂಥಗಳಿಗೆ ಪ್ರಾಶಸ್ತ್ಯವಿದ್ದೇ ಇರುವುದು: ಈ ಗ್ರೀಕ್ ಗ್ರಂಥಗಳಿಂದ ಕೆಲಕೆಲವು ಭಾಗಗಳನ್ನು ಪ್ರೌಢವಿದ್ಯಾರ್ಥಿಗಳಲ್ಲನೇಕರು ಓದಲೇಬೇಕೆಂಬ ನಿಯಮವಿರುವುದು. ತಕ್ಕಮಟ್ಟಿಗೆ ವಿದ್ಯಾವಂತರಾಗಿರುವ ಪಾಶ್ಚಾತ್ಯರೆಲ್ಲರಿಗೂ ಈ ಗ್ರಂಥಗಳ ವಿಷಯವು ಸುಪರಿಚಿತವಾಗಿರುವುದು. ನಮ್ಮ ಭರತಖಂಡದಲ್ಲಿಯಾದರೋ ಪ್ರೌಢಪರೀಕ್ಷೆಗಳನ್ನು ಕೊಟ್ಟಿರುವ ಕೆಲವರ ಹೊರತು ಉಳಿದವರಿಗೆ ಇಲಿಯಡ್ ಒಡಿಸಿಗಳು ಅಷ್ಟು ಚೆನ್ನಾಗಿ ಗೊತ್ತಿರುವುದಿಲ್ಲ. ಪ್ರಪಂಚದ ಉತ್ತಮೋತ್ತಮ ಗ್ರಂಥಗಳಲ್ಲಿ ಒಂದೆಂದು ಪರಿಗಣಿತವಾಗಿರುವ ಇಲಿಯಡ್ಡನ್ನು ಕುರಿತ ಗ್ರಂಥಗಳು ಅನೇಕಭಾರತೀಯ ಭಾಷೆಗಳಲ್ಲಿ ಇದುವರೆಗೂ ಹುಟ್ಟಿರುವುದಿಲ್ಲ. ಆಂಗ್ಲೇಯಭಾಷೆಯನ್ನರಿಯದ ಕನ್ನಡಿಗರಿಗೂ, ಪ್ರೌಢವಿದ್ಯಾಭ್ಯಾಸವಾಗದ ಹಲವರು ಆಂಗ್ಲಭಾಷಾಭ್ಯಾಸಿಗಳಿಗೂ ಟ್ರೋಜನ್ ದಂಡಯಾತ್ರೆಯ ವಿಷಯವು ತಿಳಿದೇ ಇರುವುದಿಲ್ಲವೆಂದರೆ ಅತ್ಯುಕ್ತಿಯಾಗಲಾರದು.

ಈಗ ಕನ್ನಡಿಗರಿಗೆ ಸಮರ್ಪಿಸಿರುವ ಈ ಗ್ರಂಥವು ಸಂಪೂರ್ಣವಾಗಿಯೂ ಮೂಲಗ್ರಂಥಕ್ಕನುಸಾರವಾದ ಪರಿವರ್ತನವೆಂದು ವಾಚಕಮಹಾಶಯರು ಭಾವಿಸಕೂಡದು. ಈ ಗ್ರಂಥದಲ್ಲಿರುವ ಮೂವತ್ತೆರಡು ಪರಿಚ್ಛೇದಗಳಲ್ಲಿ ಮೊದಲಿನ ಮೂರೂ ಕಡೆಯ ಐದೂ ಉಪೋದ್ಘಾತೋಪಸಂಹಾರರೂಪಗಳಲ್ಲಿ ನೂತನವಾಗಿ ಸೇರಿಸಿರುವ ವಿಭಾಗಗಳಾಗಿರುವುವು. ಉಳಿದ ಇಪ್ಪತ್ತುನಾಲ್ಕು ವಿಭಾಗಗಳಲ್ಲಿ ಮೂಲಗ್ರಂಥದ ಇಪ್ಪತ್ತುನಾಲ್ಕು ವಿಭಾಗಗಳ ಸಾರಾಂಶವನ್ನೂ ಕೊಟ್ಟಿರುವುದು. ಇವುಗಳಲ್ಲಿ (ಅಡಿಟಿಪ್ಪಣಿಗಳಲ್ಲಿ ಹೊರತು) ಸ್ವಕಪೋಲಕಲ್ಪಿತವಾದ ಭಾವಗಳಾವುವೂ ಇರುವುದಿಲ್ಲ.

ಗ್ರೀಕರು ತಮ್ಮ ಅಂಕಿತನಾಮಗಳನ್ನು ಹೇಗೆ ಉಚ್ಚರಿಸುತ್ತಿದ್ದರೋ ಹಾಗೆಯೇ ವಾಚಕರೂ ಅವುಗಳನ್ನುಚ್ಚರಿಸಲು ಈ ಗ್ರಂಥದಲ್ಲಿ ಕೂಡಿದಮಟ್ಟಿಗೂ ಅವಕಾಶವನ್ನು ಕಲ್ಪಿಸಿರುವುದು. ಪಾಶ್ಚಾತ್ಯವಿದ್ವಾಂಸರೆಲ್ಲರೂ ಅನ್ಯದೇಶಗಳ ಅಂಕಿತನಾಮಗಳಿಗೆ ಆಯಾ ದೇಶದಲ್ಲಿ ಯಾವ ಉಚ್ಚಾರಣೆಯು ಇರುವುದೋ ಆಯಾ ಉಚ್ಚಾರಣೆಯಾಗುವಂತೆಯೇ ಅವುಗಳನ್ನು ತಮ್ಮ ಗ್ರಂಥಗಳಲ್ಲಿ ಬರೆಯುವ ಸುಸಂಪ್ರದಾಯವನ್ನಿಟ್ಟಿರುವರು. ನಮ್ಮ ದೇಶದಲ್ಲಿಯಾದರೋ ಹಲವರು ಗ್ರಂಥಕರ್ತರು ಅನ್ಯದೇಶದ ಅಂಕಿತನಾಮಗಳನ್ನು ತಮ್ಮ ಮನಸ್ಸಿಗೆ ಒಂದಂತೆ

ಮಾರ್ಪಡಿಸಿ, ಮೂಲಗ್ರಂಥಕರ್ತರಿಗೂ ವಾಚಕವೃಂದಕ್ಕೂ ಒಂದು ಬಗೆಯ ದ್ರೋಹವನ್ನು ಮಾಡುವ ವಿಲಕ್ಷಣಸಂಪ್ರದಾಯವನ್ನಿಟ್ಟಿರುವರು. ಈ ಸಂಪ್ರದಾಯವನ್ನು ಮೆಚ್ಚಿಕೊಂಡಿರುವವರಿಗೆ ನಮ್ಮ ಈ ಗ್ರಂಥದಲ್ಲಿ ಕಂಡುಬರುವ ಅಂಕಿತನಾಮಗಳು ಮೊದಮೊದಲು ವಿಲಕ್ಷಣವಾಗಿ ಕಂಡುಬರಬಹುದು. ಆದರೆ ಗ್ರೀಕ್ ಪುರಾಣವನ್ನು ಕುರಿತ ಒಂದೆರಡು ಗ್ರಂಥಗಳನ್ನು ಓದುವುದರೊಳಗಾಗಿ ಗ್ರೀಕ್ ಅಂಕಿತನಾಮಗಳು ವಾಚಕರಿಗೆ ಸುಪರಿಚಿತವಾಗಿಬಿಡುವುವೆಂದು ಭಾವಿಸಿರುವೆವು.

ಈ ಗ್ರಂಥವನ್ನು ರಚಿಸುವುದರಲ್ಲಿ ಚಾಪ್‌ಮನ್, ಪೋಪ್, ಲೀಫ್-ಲ್ಯಾಂಗ್-ಮೇಯರ್ಸ್, ಬಟ್ಲರ್, ಕಾಲಿನ್ಸ್, ಗೆಯ್ಲಿ ಮೊದಲಾದವರ ಗ್ರಂಥಗಳನ್ನೂ ಲೆಂಪ್ರಿಯರ್, ಸ್ಮಿತ್ ಜೀಟನ್ ಮೊದಲಾದವರ ಪುರಾಣನಾಮಕೋಶಗಳನ್ನೂ ಓದಿ ಅವುಗಳಲ್ಲಿ ಕಂಡುಬಂದ ಸಾರವತ್ತಾದ ಭಾವಗಳನ್ನು ಸಂಗ್ರಹಿಸಿದೆ ಆದುದರಿಂದ ಈ ಎಲ್ಲಾ ಗ್ರಂಥಕರ್ತರುಗಳ ಉಪಕಾರವನ್ನು ಈ ಸಂದರ್ಭದಲ್ಲಿ ಅತ್ಯಂತ ಕೃತಜ್ಞತೆಯಿಂದ ಸ್ಮರಿಸಬೇಕಾಗಿದೆ. ಈ ಗ್ರಂಥದ ಮೂಲಕವಾಗಿ ಅನ್ಯಭಾಷಾಭಿಜ್ಞರಾದ ಕನ್ನಡಿಗರಿಗೆ ಅನ್ಯದೇಶಸಾಹಿತ್ಯಗಳ ಪ್ರಸಿದ್ಧಗ್ರಂಥಗಳ ಸಾಹಾಯ್ಯದಿಂದ ಕರ್ಣಾಟಕಸಾಹಿತ್ಯವನ್ನು ಅಭಿವೃದ್ಧಿಪಡಿಸಬೇಕೆಂಬ ಕುತೂಹಲವು ಜಾಗ್ರತವಾಗಿ ಕಾರ್ಯತಃ ಸಫಲವಾದಲ್ಲಿ, ಈ ಪ್ರಯತ್ನಕ್ಕೆ ಅಧಿಕಫಲವು ದೊರೆಯಿತೆಂದುಭಾವಿಸುವೆವು.

ಮೈಸೂರು,
ಏಪ್ರಿಲ್, ೧೯೨೩.

ಇತಿ,
ಗ್ರಂಥಕರ್ತ.

# ವಿಷಯಾನುಕ್ರಮಣಿಕೆ.


| ಪರಿಚ್ಛೇದ. | ಪ್ಯಾರಾ. | ವಿಷಯ. | ಪುಟ. |
|---|---|---|---|
| I | ೧—೯ | ಪೀಠಿಕಾಪರಿಚ್ಛೇದ | ೧—೮ |
| II | ೧೦—೧೮ | ಪರಿಣಯಗಳು | ೮—೧೫ |
| III | ೧೯—೨೨ | ದಂಡಯಾತ್ರಾಸನ್ನಾಹ | ೧೫—೧೯ |
| IV | ೨೩—೩೦ | ಸ್ವಯೂಥಕಲಹ | ೧೯—೨೬ |
| V | ೩೧—೩೮ | ಆಂತರ್ಯಪರೀಕ್ಷೆ | ೨೬—೩೩ |
| VI | ೩೯—೪೪ | ದ್ವಂದ್ವಯುದ್ಧ | ೩೩—೩೮ |
| VII | ೪೫—೫೧ | ವಿಶ್ವಾಸದ್ರೋಹ | ೩೯—೪೩ |
| VIII | ೫೨—೫೮ | ಡ್ಯೊಮಿಡೀಸಿನ ಪ್ರತಾಪ | ೪೩—೪೮ |
| IX | ೫೯—೬೭ | ಟ್ರೋಜನರ ದೇವತಾಪ್ರಾರ್ಥನೆ | ೪೯—೫೫ |
| X | ೬೮—೭೫ | ಮತ್ತೊಂದು ದ್ವಂದ್ವಯುದ್ಧ | ೫೫—೬೦ |
| XI | ೭೬—೮೧ | ದೇವದೇವನ ಪ್ರಭಾವ | ೬೦—೬೪ |
| XII | ೮೨—೮೭ | ಸ್ವಯೂಥಕಲಹಶಮನಪ್ರಯತ್ನ | ೬೪—೭೦ |
| XIII | ೮೮—೯೫ | ಗೂಢಚಾರರ ಸಾಹಸ | ೭೦—೭೩ |
| XIV | ೯೬—೧೦೪ | ಶತ್ರುಗಳ ಉರವಣೆ; ಏಕಿಲೀಸಿನ ಪಶ್ಚಾತ್ತಾಪ | ೭೪- ೭೯ |
| XV | ೧೦೫—೧೦೭ | ಶತ್ರುಗಳ ಹಾವಳಿ | ೭೯—೮೨ |
| XVI | ೧೦೮—೧೧೬ | ದೈವಸಹಾಯ | ೮೨—೮೮ |
| XVII | ೧೧೭—೧೨೩ | ಸಂಮೋಹನ | ೮೮—೯೩ |
| XVIII | ೧೨೪—೧೨೯ | ಶತ್ರುಗಳ ಪರಾಕ್ರಮ | ೯೩—೯೮ |
| XIX | ೧೩೦—೧೩೫ | ಪೆಟ್ರೋಕ್ಲಸ್ಸಿನಯುದ್ಧಾಗಮನವೂ ಮರಣವೂ | ೯೯- ೧೦೬ |
| XX | ೧೩೬—೧೪೨ | ದುಃಖವೃತ್ತಾಂತಶ್ರವಣವೂ ಸಂತಾಪವೂ | ೧೦೬—೧೧೧ |
| XXI | ೧೪೩-೧೪೬ | ಅದ್ಭುತತನುತ್ರಾಣವೃತ್ತಾಂತ | ೧೧೧—೧೧೫ |
| XXII | ೧೪೭—೧೫೦ | ಏಕಿಲೀಸಿನ ಯುದ್ಧಗಮನ ; ದಿವ್ಯಾಶ್ವದ ಭವಿಷ್ಯದ್ವಾದ | ೧೧೬—೧೧೯ |
| XXIII | ೧೫೧—೧೫೩ | ದೇವಸಭೆ ; ಏಕಿಲೀಸಿನ ಸಾಹಸ | ೧೨೦—೧೨೩ |
| XXIV | ೧೫೪ ೧೬೧ | ದೇವತೆಗಳ ಹೋರಾಟ; ಶತ್ರುಗಳಪಲಾಯನ | ೧೨೩—೧೨೯ |

| | | | |
|---|---|---|---|
| XXV | ೧೬೨—೧೬೭ | ಹೆಕ್ಟರಿನ ಮರಣವೂ ಘೋರಾವಮಾನವೂ | ೧೩೦—೧೩೪ |
| XXVI | ೧೬೮—೧೭೯ | ಪೆಟ್ರೋಕ್ಲಸ್ಸಿನ ಉತ್ತರಕ್ರಿಯೆಗಳು | ೧೩೪—೧೪೧ |
| XXVII | ೧೮೦—೧೮೭ | ಹೆಕ್ಟರಿನ ಉತ್ತರಕ್ರಿಯೆಗಳು | ೧೪೧—೧೪೬ |
| XXVIII | ೧೮೮—೧೯೩ | ಸೌಭಾಗ್ಯತಿಲಾಹರಣ | ೧೪೬—೧೫೧ |
| XXIX | ೧೯೪—೨೦೫ | ಏಕಿಲೀಸಿನ ಮರಣ | ೧೫೧—೧೫೯ |
| XXX | ೨೦೬—೨೧೦ | ನೂತನಯೋಧಾಗಮನ; ಪ್ಯಾರಿಸ್ಸಿನ ಹಸನ | ೧೫೯—೧೬೪ |
| XXXI | ೨೧೧—೨೨೧ | ಟ್ರಾಯ್‘ ಪಟ್ಟಣದ ವಿನಾಶ | ೧೬೪—೧೭೨ |
| XXXII | ೨೨೨—೨೩೦ | ಗ್ರೀಕರ ಸ್ವದೇಶಾಗಮನ | ೧೭೩—೧೮೦ |

ಶ್ರೀಃ.

# ಟ್ರೋಜನ್ ದಂಡಯಾತ್ರೆ.

೧. ‘ಟ್ರೋಜನ್’ ಎಂಬ ಪದವು ‘ಟ್ರಾಯ್’ ಎಂಬ ಪಟ್ಟಣದ ಹೆಸರಿನಿಂದ ಬಂದಿರುವುದು. ‘ದಂಡಯಾತ್ರೆ’ ಎಂದರೆ ವಿಜಯಪ್ರಯಾಣವು; ಅಥವಾ, ಶತ್ರುಗಳನ್ನು ದಂಡಿಸುವುದಕ್ಕಾಗಿ ಹೊರಡುವ ಪ್ರಯಾಣವು. **ಟ್ರೋಜನ್ ದಂಡಯಾತ್ರೆ** ಎಂದರೆ, ಟ್ರಾಯ್ ಪಟ್ಟಣದಲ್ಲಿದ್ದ ತಮ್ಮ ಶತ್ರುಗಳನ್ನು ದಂಡಿಸುವುದಕ್ಕಾಗಿ ಗ್ರೀಕರು ಅನೇಕ ವರುಷಗಳ ವರೆಗೆ ನಡೆಸಿದ ಯುದ್ಧಕಾರ್ಯಗಳು. ಮೂರುಸಾವಿರ ವರುಷಗಳಿಂದಲೂ ಪ್ರಸಿದ್ಧವಾಗಿರುವ ಈ ದಂಡಯಾತ್ರೆಯ ವೃತ್ತಾಂತವನ್ನು ಈ ಗ್ರಂಥದಲ್ಲಿ ವಿವರಿಸಿರುವುದು.

೨. ಈಗ ನಾವು ಏಷ್ಯಾಮೈನರ್ ಎಂದು ಕರೆಯುವ ಪ್ರದೇಶದಲ್ಲಿ ಮೂರುಸಾವಿರ ವರುಷಗಳಿಗೆ ಹಿಂದೆ ಟ್ರೋಡ್, ಫ್ರಿಜಿಯಾ, ಲಿಸಿಯಾ, ಕೇರಿಯಾ, ಲಿಡಿಯಾ—ಇವೇ ಮುಂತಾದ ಅನೇಕ ರಾಜ್ಯಗಳಿದ್ದುವು. ಇವುಗಳಲ್ಲಿ ಟ್ರೋಡ್ ಎಂಬುದೇ ಅತ್ಯಂತಪ್ರಬಲವಾದುದು. ಇದರ ರಾಜಧಾನಿಯೇ ಟ್ರಾಯ್ ಪಟ್ಟಣವು. ಡಾರ್ಡೇನಸ್ ಎಂಬಾತನು ಟ್ರೋಡ್ ರಾಜ್ಯವನ್ನು ಸ್ಥಾಪಿಸಿದುದರಿಂದ ಆ ದೇಶಕ್ಕೆ ಡಾರ್ಡೇನಿಯಾ ಎಂದೂ ಕೆಲವು ಕಾಲದವರೆಗೆ ಹೆಸರಿದ್ದಿತು. ಡಾರ್ಡೇನಿಯಸ್ಸಿನ ಪುತ್ರನಾದ ಟ್ರೋಸ್ ಎಂಬವನೂ ಆ ರಾಜ್ಯದಲ್ಲಿ ಬಹಳ ಪ್ರಸಿದ್ಧನಾದ ದೊರೆಯಾಗಿದ್ದುದರಿಂದ, ಅದಕ್ಕೆ ಟ್ರೋಡ್ ಎಂಬ ಮತ್ತೊಂದು ಹೆಸರುಂಟಾಗಿದ್ದಿತು. ಟ್ರೋಸಿನ ಮಗನಾದ ಐಲಸ್ ಎಂಬವನು ಟ್ರಾಯ್ ಪಟ್ಟಣದಲ್ಲಿ ನಾನೂರು ಅಡಿಗಳ ಎತ್ತರವಾಗಿದ್ದ ಒಂದು ಗುಡ್ಡದ ಪ್ರಗೇಶದಲ್ಲಿ ಬಲವಾದ ದುರ್ಗವೊಂದನ್ನು ಕಟ್ಟಿಸಿದನು. ಆದುದರಿಂದ ಟ್ರಾಯ್ ಪಟ್ಟಣಕ್ಕೆ ಇಲಿಯಾನ್ ಎಂದೂ ಮತ್ತೊಂದು ಹೆಸರಿದ್ದಿತು ಈ ಇಲಿಯಾನ್ ಪಟ್ಟಣದ ಬಳಿಯಲ್ಲಿ ನಡೆದ ಮಹಾಸಮರವನ್ನು ವಿವರಿಸುವ ಈ ಗ್ರಂಥಕ್ಕೆ **ಇಲಿಯಡ್** ಎಂಬ ಹೆಸರು ಪಾಶ್ಚಾತ್ಯಭಾಷೆಗಳಲ್ಲಿ ಬಹಳ ಪ್ರಸಿದ್ಧವಾಗಿರುವುದು. ಐಲಸ್ಸಿನ ಮಗನ ಹೆಸರು ಲ್ಯಾವೋಮಿಡಾನ್. ದೇವದೇವನಾದ ಜ್ಯೂಸಿನ ಕೋಪಕ್ಕೆ ಪಾತ್ರರಾಗಿ ನರಜನ್ಮವನ್ನೆತ್ತಿದ್ದ, ಅಪೋಲೊ ಪೊಸೈಡನ್

ಎಂಬ ಇಬ್ಬರು ದೇವತೆಗಳ ಸಹಾಯದಿಂದ ಲ್ಯಾವೊಮೀಡನ್ನನು ದುರ್ಭೇದ್ಯವಾದ ಒಂದು ಕೋಟೆಯನ್ನು ಟ್ರಾಯ್ ಪಟ್ಟಣದ ಸುತ್ತಲೂ ಕಟ್ಟಿಸಿದ್ದನು. ಆದರೆ ಅವನು ಆ ದೇವತೆಗಳಿಗೆ ಮಾಡಿದ್ದ ವಾಗ್ದಾನದ ಮೇರೆಗೆ ಅವರಿಗೆ ಕೆಲವು ದಿವ್ಯಾಶ್ವಗಳನ್ನು ಕೊಡದೆಹೋದನು. ಕೆಲವು ದಿನಗಳಲ್ಲೇ, ಸಮುದ್ರಸಂಚಾರಿಯಾದ ಅದ್ಭುತಪ್ರಾಣಿಯೊಂದು ಬಂದು ಟ್ರಾಯ್ ಪಟ್ಟಣವನ್ನು ಬಾಧಿಸತೊಡಗಿತು. ಅದರ ಬಾಧೆಯನ್ನು ತಪ್ಪಿಸಿದವರಿಗೆ ಆ ದಿವ್ಯಾಶ್ವಗಳನ್ನು ಕೊಟ್ಟು ಜೊತೆಗೆ ತನ್ನ ಮಗಳನ್ನು ಮದುವೆಮಾಡಿಕೊಡುವುದಾಗಿ ಎಲ್ಲೆಲ್ಲೂ ಸಾರಿಸಲು ಗ್ರೀಕರ ಬಹುಪ್ರಸಿದ್ಧಶೂರನಾದ ಹೆರ್ಯಾಕ್ಲಿಸನು ಬಂದು ಆ ಪ್ರಾಣಿಯ ಬಾಧೆಯನ್ನು ಹೋಗಲಾಡಿಸಿದನು. ಪುನಃ, ವಿಶ್ವಾಸಘಾತುಕನಾದ ಲ್ಯಾವೋಮಿಾಡನ್ನನು ತನ್ನ ಮಾತಿಗೆ ತಪ್ಪಿದನು. ಆದುದರಿಂದ ಜ್ಯೂಸಿಗೆ ಕೋಪಬಂದು 'ಟ್ರಾಯ್ ಪಟ್ಟಣವು ಶತ್ರುಗಳ ವಶವಾಗಲಿ' ಎಂದು ಶಾಪಕೊಟ್ಟುಬಿಟ್ಟಿದ್ದನು. ಆದುದರಿಂದ ಆ ಪಟ್ಟಣವು ಮೊದಲೇ ಒಂದುಸಲ ಗ್ರೀಕರ ತಂಡವೊಂದಕ್ಕೆ ಅಧೀನವಾಗಿಹೋಗಿದ್ದಿತು. ಲ್ಯಾವೊಮೀಡನ್ನಿನ ಮಗನಾದ ಪ್ರಯಾಮ್ ಎಂಬ ರಾಜನ ಕಾಲದಲ್ಲಿ ಟ್ರಾಯ್ ರಾಜ್ಯವು ಎರಡನೆಯ ಸಾರಿ ಶತ್ರುಗಳ ವಶವಾಯಿತು.

೩. ಪ್ರಯಾಮ್ ರಾಜನು ಬಹಳ ಶಕ್ತನು. ಅವನು ತನ್ನ ನೆರೆಹೊರೆಯಲ್ಲಿದ್ದ ರಾಜ್ಯಗಳೆಲ್ಲವನ್ನೂ ಅಧೀನಪಡಿಸಿಕೊಂಡು, ಅವುಗಳಿಂದ ಕಪ್ಪಕಾಣಿಕೆಗಳನ್ನು ತೆಗೆದುಕೊಳ್ಳುತ್ತಿದ್ದನು. ಅವನಿಗೆ ಐವತ್ತುಮಂದಿ ಗಂಡುಮಕ್ಕಳೂ, ಕೆಸಾಂಡ್ರ ಮುಂತಾದ ಹನ್ನೆರಡು ಮಂದಿ ಹೆಣ್ಣುಮಕ್ಕಳೂ ಇದ್ದರು. ಗಂಡುಮಕ್ಕಳಲ್ಲಿ ಹೆಕ್ಟರ್ ಎಂಬಾತನು ಬಹಳ ಶೂರನೂ ಉದಾರಿಯೂ ಆದವನು. ಎರಡನೆಯ ರಾಜಕುಮಾರನ ಹೆಸರು ಪ್ಯಾರಿಸ್. ಪ್ರಯಾಮಿನ ಮತ್ತೊಬ್ಬ ಮಗನಾದ ಹೆಲೆನಸ್ ಎಂಬಾತನಿಗೂ ಇವನ ಸೋದರಿಯಾದ ಕೆಸಾಂಡ್ರಳಿಗೂ ಭವಿಷ್ಯಜ್ಞಾನವಿದ್ದಿತು. ಪ್ಯಾರಿಸ್ ಎಂಬ ರಾಜಪುತ್ರನು ಹುಟ್ಟಿದಾಗ, ಅವನ ತಾಯಿಯಾದ ಹೆಕ್ಯೂಬಳಿಗೆ ಘೋರವಾದ ಒಂದು ಸ್ವಪ್ನವುಂಟಾಗಿದ್ದಿತು. ಆ ಕನಸಿನಲ್ಲಿ ಮಗುವಿಗೆ ಬದಲಾಗಿ ಒಂದು ಕೊಳ್ಳಿಯು ಪ್ರಸವವಾದಂತೆ ಅವಳಿಗೆ ಕಂಡುಬರಲು, ಆಸ್ಥಾನದ ಜ್ಯೋತಿಷಿಕರನ್ನು ವಿಚಾರಿಸಿದಾಗ ಅವರು ಆ ಗರ್ಭದಿಂದ ಹುಟ್ಟುವ ರಾಜಪುತ್ರನು ದೇಶಕ್ಕೆ ವಿನಾಶಕರನಾಗುವನೆಂದು ಫಲ ಹೇಳಿದರು. ಆದುದರಿಂದ, ಆ ಮಗುವು ಹುಟ್ಟಿದ ಕೂಡಲೆ ಅದನ್ನು ಸಮಿಾಪ

ದಲ್ಲಿದ್ದ ಐಡಾಪರ್ವತದ ಒಂದು ಕಡೆ ದೇಶಾಭ್ಯುದಯಾರ್ಥವಾಗಿ ಇಟ್ಟುಬಿಟ್ಟು ಬರಬೇಕೆಂದು ಪ್ರಯಾಮನು ತನ್ನ ನಿಯೋಗಿಗಳಿಗೆ ಆಜ್ಞಾಪಿಸಿದನು. ಹೀಗೆ ಬಿಟ್ಟುಬಿಟ್ಟರೆ ಸಹಾಯಶೂನ್ಯವಾಗಿದ್ದ ಆ ಮಗುವನ್ನು ತೋಳಗಳೋ ಕಾಡು ನಾಯಿಗಳೋ ತಿಂದುಬಿಡುವುವೆಂದೂ, ಅದರಿಂದ ತನ್ನ ರಾಜ್ಯಕ್ಕೆ ಹಾನಿಯು ತಪ್ಪುವುದೆಂದೂ ಪ್ರಯಾಮನು ಭಾವಿಸಿದ್ದನು. ಆದರೆ ಆಯುಃಪರಿಮಿತಿಯು ತೀರದವನನ್ನು ಕೊಲ್ಲಬೇಕೆಂದರೆ ಯಾರಿಗೆ ತಾನೆ ಸಾಧ್ಯವು ? ಪತಿಯಾಜ್ಞೆಯನ್ನು ಮೀರಲಾರದೆ ಹೆಕ್ಯೂಬಳು ಆ ಹಸುಗೂಸನ್ನು ಅಡಿಗಡಿಗೂ ಅಪ್ಪಿಕೊಳ್ಳುತ್ತ, ಕಣ್ಣೀರು ಕೋಡಿ ಹರಿಯುತ್ತಿರಲು, ದೇವತೆಗಳನ್ನು ಪ್ರಾರ್ಥಿಸಿ ಆ ಮಗುವಿನ ಕೊರಳಿಗೆ ಒಂದು ತಾಯಿತಿಯನ್ನು ಕಟ್ಟಿಬಿಟ್ಟು, ಸ್ವಲ್ಪವಾದರೂ ಮನಸ್ಸಿಲ್ಲದೆ ಅದನ್ನು ರಾಜದೂತರ ವಶಮಾಡಿದಳು. ಅವರು ಆ ಮಗುವನ್ನು ತೆಗೆದುಕೊಂಡು ಹೋಗಿ ಐಡಾಪರ್ವತದ ಒಂದು ಪ್ರದೇಶದಲ್ಲಿ ಇಟ್ಟುಬಿಟ್ಟು ಹಿಂದಿರುಗಿದ ಕೂಡಲೆ, ದನಕುರಿಗಳನ್ನು ಕಾಯುತ್ತಿದ್ದ ಕೆಲವರು ಆ ಮಾರ್ಗವಾಗಿ ಬಂದು ಮಗುವನ್ನು ತೆಗೆದುಕೊಂಡು ಹೋಗಿ ಸಂರಕ್ಷಿಸಿದರು.

೪. ಆ ಬಾಲಕನು ಆ ಕಾಲದ ಗಂಡು ಮಕ್ಕಳೆಲ್ಲೆಲ್ಲಾ ಅತ್ಯಂತಸ್ಫುರದ್ರೂಪಿಯಾಗಿದ್ದನು. ಆದುದರಿಂದ ಅವನನ್ನು ನೋಡಿದ ಪ್ರತಿಯೊಬ್ಬರೂ ಅವನು ಕುರುಬರವನಾಗಿರಲಾರನೆಂದು ನಿರ್ಧರಿಸುತ್ತಿದ್ದರು. ಪ್ಯಾರಿಸ್ಸನು ಪ್ರಾಪ್ತವಯಸ್ಕನಾದಮೇಲೆ ಅವನನ್ನು ಈನೋನಿ ಎಂಬ ದೇವಕನ್ನಿಕೆಯೊಬ್ಬಳು ಮೋಹಿಸಿ ವರಿಸಿದ್ದಳು. ಪ್ಯಾರಿಸ್ಸನು ಒಂದಾನೊಂದುದಿನ ದನಕುರಿಗಳನ್ನು ಮೇಯಿಸುತ್ತ ಐಡಾಪರ್ವತದ ಮೇಲೆ ನಿರ್ಜನವಾದ ಒಂದು ಪ್ರದೇಶದಲ್ಲಿದ್ದ ಗುಹೆಯ ಬಳಿಯಲ್ಲಿ ಇದ್ದಾಗ, ಮೂವರು ದೇವತೆಗಳು ತಮ್ಮಲ್ಲಿ ಯಾರು ಅತ್ಯಂತಸುಂದರಿಯರೆಂದು ಬಲವಾಗಿ ವಾಗ್ವಾದಮಾಡುತ್ತಾ ಬಂದು ತಮ್ಮ ವಿವಾದವನ್ನು ವ್ಯವಸ್ಥೆಪಡಿಸಿಕೊಡಬೇಕೆಂದು ಅವನನ್ನು ಕೇಳಿಕೊಂಡರು. ಆ ದೇವತೆಗಳಲ್ಲಿ ನಮ್ಮ ರತಿದೇವಿಯನ್ನು ಸ್ವಲ್ಪಮಟ್ಟಿಗೆ ಹೋಲುತ್ತಿದ್ದ ಆಫ್ರೊಡೈಟಿ ಎಂಬ ಗ್ರೀಕ್ ದೇವತೆಯೇ ಅತ್ಯಂತ ಸುಂದರಿಯೆಂದು ಪ್ಯಾರಿಸ್ಸನು ತೀರ್ಮಾನ ಮಾಡಿದುದರಿಂದ, ಆಕೆಯು ಪ್ಯಾರಿಸ್ಸಿನ ಆ ಉಪಕಾರಕ್ಕೆ ಪ್ರತಿಯಾಗಿ ಅವನಿಗೆ ಅತ್ಯಂತಸುಂದರಿಯಾದ ಒಬ್ಬ ಪತ್ನಿಯನ್ನು ದಯೆಪಾಲಿಸುವುದಾಗಿ ವಾಗ್ದಾನ ಮಾಡಿ ಹೊರಟುಹೋದಳು. ಪ್ಯಾರಿಸ್ಸನು ಐಡಾಪರ್ವತಪ್ರದೇಶದಿಂದ ಕಾರ್ಯಾರ್ಥವಾಗಿ ಒಂದಾನೊಂದುದಿನ ರಾಜಧಾನಿಗೆ ಹೋಗಿದ್ದನು. ಅವನ

ಉಡುಪುಗಳು ಬಹುಸಾಧಾರಣವಾದುವುಗಳಾಗಿದ್ದರೂ, ಅವನ ಆಕೃತಿಯು ಆಶ್ಚರ್ಯಕರವಾಗಿದ್ದಿತು. ಆದುದರಿಂದ ಅವನನ್ನು ನೋಡಲು ಪುರಜನರು ಗುಂಪುಗುಂಪಾಗಿ ಬಂದರು. ರಾಜಧಾನಿಗೆ ಅತ್ಯದ್ಭುತಸೌಂದರ್ಯವುಳ್ಳ ಪುರುಷನೊಬ್ಬನು ಬಂದಿಹ ಸುದ್ದಿಯು ಹೆಕ್ಯೂಬಳಿಗೂ ಮುಟ್ಟಿ, ಆಕೆಯೂ ಪ್ಯಾರಿಸ್ಸನ್ನು ನೋಡುವುದಕ್ಕಾಗಿ ಬಂದಳು. ಅವನ ಕತ್ತಿನಲ್ಲಿದ್ದ ತಾಯಿತಿಯು ಹೆಕ್ಯೂಬಳ ದೃಷ್ಟಿಗೆ ಬೀಳುತ್ತಲೇ ತಾನು ಹಿಂದೆ ರಾಜದೂತರಿಗೆ ಒಪ್ಪಿಸಿಬಿಟ್ಟಿದ್ದ ಮಗುವಿನ ಜ್ಞಾಪಕವು ಆಕೆಗೆ ತಟ್ಟನೆ ಹೊಳೆಯಿತು. ಆದುದರಿಂದ ಹೆಕ್ಯೂಬಳು ಪ್ಯಾರಿಸ್ಸಿನ ಮುಖಲಕ್ಷಣಗಳನ್ನು ಇನ್ನೂ ಚೆನ್ನಾಗಿ ಪರೀಕ್ಷಿಸಿದ ಬಳಿಕ, ಆಗಂತುಕನು ತನ್ನ ಮಗನೇ ಎಂದು ನಿರ್ಧರಿಸಿ ಅವನನ್ನು ಅರಮನೆಗೆ ಕರೆತಂದಳು. ಪ್ರಿಯಾಮನು ಅವನನ್ನು ಕಂಡ ಕೂಡಲೆ ಅವನ ಅದ್ಭುತ ಸೌಂದರ್ಯದಿಂದಲೂ ಪುತ್ರವ್ಯಾಮೋಹದಿಂದಲೂ ಮುಗ್ಧನಾಗಿ ಅವನು ತನ್ನ ಅರಮನೆಯಲ್ಲೇ ವಾಸಮಾಡಿಕೊಂಡಿರುವ ವಿಷಯದಲ್ಲಿ ಹೆಕ್ಯೂಬಳಿಗೆ ಅಡ್ಡಿ ಮಾಡಲಿಲ್ಲ.

೫. ಟ್ರೋಡ್ ಸಂಸ್ಥಾನಕ್ಕೂ ಅದರ ನೆರೆಯಲ್ಲಿದ್ದ ಫ್ರಿಜಿಯಕ್ಕೂ ಅನೇಕವೇಳೆ ಯುದ್ಧಗಳು ನಡೆಯುತ್ತಿದ್ದುವು. ಟ್ರೋಡ್ ರಾಜ್ಯದಲ್ಲಿ ಟ್ರೋಸನು ಆಳುತ್ತಿದ್ದಾಗ ಫ್ರಿಜಿಯದಲ್ಲಿ ಟ್ಯಾಂಟಾಲಸ್ ಎಂಬೊಬ್ಬ ದೊರೆಯು ರಾಜ್ಯಭಾರಮಾಡುತ್ತಿದ್ದನು. ಅವನು ತನಗಿದ್ದ ರಾಜಭೋಗಗಳಿಂದ ಪ್ರಮತ್ತನಾಗಿ ದೇವತೆಗಳನ್ನು ಒಂದು ಔತನಕ್ಕೆ ಬರಮಾಡಿಕೊಂಡು ಅವರ ಮಾಹಾತ್ಮ್ಯೆಯನ್ನು ಪರೀಕ್ಷಿಸಬೇಕೆಂದು ತನ್ನ ಮಗನಾದ ಪೆಲಪ್ಸ್ ಎಂಬವನನ್ನೇ ದಯಾಶೂನ್ಯನಾಗಿ ಕೊಂದು, ಅವನ ಮಾಂಸದಿಂದ ಮಾಡಿದ ಅಡಿಗೆಯನ್ನು ಅವರಿಗೆ ಉಣಬಡಿಸಿದನು. ಇದನ್ನು ದೇವತೆಗಳು ತಿಳಿದು, ಪೆಲಪ್ಸನ್ನು ಬದುಕಿಸಿದುದು ಮಾತ್ರವಲ್ಲದೆ ಟ್ಯಾಂಟಾಲಸ್ಸಿನ ಕ್ರೌರ್ಯದಿಂದ ಬಹುಕ್ರುದ್ಧರಾಗಿ, ಆ ಕ್ರೂರಿಯು ಸತ್ತಬಳಿಕ ಘೋರಯಾತನೆಯನ್ನು ಅನುಭವಿಸುವಂತೆ ಶಿಕ್ಷೆವಿಧಿಸಿದರು. ಕೆಲವು ದಿನಗಳಲ್ಲಿಯೇ ಫ್ರಿಜಿಯಾ ರಾಜ್ಯವು ಟ್ರೋಡಿಗೆ ವಶವಾದುದರಿಂದ, ಟ್ಯಾಂಟಾಲಸ್ಸನು ತನ್ನ ಮಗನೊಡನೆ ಗ್ರೀಸಿಗೆ ಓಡಿಬಂದನು. ಬಳಿಕ ಸ್ವಲ್ಪ ಕಾಲದಲ್ಲಿಯೇ ಟ್ಯಾಂಟಾಲಸ್ಸನು ಕಾಲವಾಗಲು, ನರಕದಲ್ಲಿ ಟ್ಯಾಂಟಾಲಸ್ಸನು ಸ್ವಾದುತರವಾದ ಭಕ್ಷ್ಯಭೋಜ್ಯಾದಿಗಳ ಅಪರಿಮಿತರಾಶಿಗಳ ನಡುವೆ ಇದ್ದರೂ, ಅತಿದಾರುಣವಾದ ಕ್ಷುತ್ಪಿಪಾಸೆಗಳನ್ನು ಅನುಭವಿಸುತ್ತಾ, ತಿನ್ನುವುದ

ಕ್ಕಾಗಲಿ ಕುಡಿಯುವುದಕ್ಕಾಗಲಿ ಅವನು ತನ್ನ ಕೈಯನ್ನು ಚಾಚಿ ಏನನ್ನಾದರೂ ತೆಗೆದುಕೊಳ್ಳಲು ಯತ್ನಿಸಿದಾಗ, ಆ ವಸ್ತುಗಳು ದೂರವಾಗಿ ಹೊರಟುಹೋಗುವಂತೆ ಅವನಿಗೆ ಶಿಕ್ಷೆಯನ್ನು ವಿಧಿಸಿದರು.

೬. ಪೆಲಪ್ಸನು ಓಡಿ ಬಂದ ಗ್ರೀಕ್ ಸಂಸ್ಥಾನದ ಹೆಸರು ಈಲಿಸ್. ಅಲ್ಲಿಯ ದೊರೆಯ ಬಳಿಯಲ್ಲಿ ದೇವದತ್ತವಾದ ಒಂದು ದಿವ್ಯರಥವೂ ಎರಡು ದಿವ್ಯಾಶ್ವಗಳೂ ಇದ್ದುವಲ್ಲದೆ, ದೇವಾಂಶಸಂಭೂತನಾದ ಒಬ್ಬ ಸಾರಥಿಯೂ ಇದ್ದನು. ಆದರೆ ಸುಖದ ನಡುವೆ ಗುಪ್ತವಾಗಿ ಸೇರಿಕೊಂಡಿರುವ ಚಿಂತಾಲವದಂತೆ ಈ ರಾಜನಿಗೆ ಒಂದು ಹೆದರಿಕೆಯು ಸದಾ ಕಾಡುತ್ತಲೇ ಇದ್ದಿತು. ರಥಗಳನ್ನು ಓಡಿಸುವುದರಲ್ಲಿ ತನ್ನನ್ನು ಜಯಿಸಬಹುದಾದ ರಥಿಕನಿಂದಲೇ ಅವನಿಗೆ ಮರಣವುಂಟಾಗುವುದೆಂದು ಪ್ರವಾದವೊಂದಿದ್ದುದೇ ಆ ರಾಜನ ಚಿಂತೆಗೆ ಕಾರಣವಾಗಿದ್ದಿತು. ಹಿಂದೆ ನಡೆದಿದ್ದ ಹನ್ನೆರಡು ಪಂಥಗಳಲ್ಲಿ ಆ ರಾಜನೇ ಜಯಶೀಲನಾಗಿದ್ದುದರಿಂದ, ಯಾರೇ ಬಂದರೂ ಅವರನ್ನು ತಾನೇ ಜಯಿಸಿಬಿಡುವೆನೆಂಬ ಗರ್ವವು ಅವನಿಗೆ ಉಂಟಾಗಿದ್ದಿತು. ಬೀಗಿದವನು ಬಾಗದಿರುವನೆ ? ಕೆಲವು ದಿನಗಳಲ್ಲಿಯೇ ಆ ದೊರೆಯ ಮಗಳು ವಿವಾಹಾರ್ಹವಯಸ್ಕಳಾಗಲು ಆಕೆಯನ್ನು ವರಿಸಬೇಕೆಂದು ಅಪೇಕ್ಷಿಸುತ್ತಿದ್ದವರಲ್ಲಿ ಯಾರೇ ಆದರೂ ರಥಗಳನ್ನು ಓಡಿಸುವುದರಲ್ಲಿ ತನ್ನನ್ನು ಜಯಿಸಿ ಆಕೆಯನ್ನು ಮದುವೆಯಾಗಬಹುದೆಂದು ಡಂಗುರಹೊಡೆಸಿದನು. ಈ ಸುದ್ದಿಯನ್ನು ಕೇಳಿ ಪೆಲಪ್ಸನು, ತಾನು ಆ ಪಂಥದಲ್ಲಿ ಪ್ರವೇಶಿಸುವುದಾಗಿ ಹೇಳಿ, ಫ್ರಿಜಿಯದಿಂದ ಓಡಿಬಂದಾಗ ತಂದಿದ್ದ ಅಪಾರವಾದ ಐಶ್ವರ್ಯದಲ್ಲಿ ಸ್ವಲ್ಪ ಭಾಗವನ್ನು ಆ ದೊರೆಯ ಸಾರಥಿಗೆ ಲಂಚವಾಗಿ ಕೊಟ್ಟು, ದೊರೆಯ ರಥವು ಓಡುತ್ತಿದ್ದ ಕಾಲದಲ್ಲಿ ಅದರ ಕಡಾಣಿಯು ಬಿದ್ದುಹೋಗುವಂತೆ ಕುತಂತ್ರವನ್ನು ಮಾಡಿ, ಆ ರಾಜ್ಯಕ್ಕೆ ಒಡೆಯನಾದನು. ಹೀಗೆ ಕುಮಾರ್ಗದಿಂದ ರಾಜ್ಯವನ್ನು ಸಂಪಾದಿಸಿದ್ದರೂ ಅದನ್ನು ಬಹಳ ಶ್ರದ್ಧೆಯಿಂದ ಆಳುತ್ತಿದ್ದುದರಿಂದ ಅವನು ಬಹಳ ಪ್ರಸಿದ್ಧಿಗೆ ಬಂದನು. ಆದಕಾರಣ ಪೆಲಪ್ಸಿನ ಹೆಸರಿನಿಂದಲೇ ಗ್ರೀಸಿನ ದಕ್ಷಿಣ ಭಾಗದಲ್ಲಿರುವ ಪರ್ಯಾಯದ್ವೀಪಕ್ಕೆಲ್ಲಾ ಪೆಲಪೊನೀಸಸ್ ಎಂದು ಹೆಸರಾಯಿತು. ಪೆಲಪ್ಸಿನ ಮಕ್ಕಳು ಮೊಮ್ಮಕ್ಕಳುಗಳು ಪರಸ್ಪರ ಜಗಳವಾಡುತ್ತಿದ್ದುದಲ್ಲದೆ, ದ್ವೇಷಾಸೂಯೆಗಳಿಂದ ಪ್ರಮತ್ತರಾಗಿ ಅತ್ಯಂತಘೋರಕಾರ್ಯಗಳನ್ನೆಲ್ಲಾ ಮಾಡುತ್ತಿದ್ದರು. ಈ ಬಗೆಯ

ಬಾಂಧವದ್ರೋಹವು, ಅದರಲ್ಲೂ ಭ್ರಾತೃದ್ರೋಹವು, ಒಂದುಸಲ ಪ್ರಾರಂಭವಾದರೆ ಸಂಪೂರ್ಣವಾಗಿ ನಿಲ್ಲುವುದು ಕಷ್ಟವೇ ಸರಿ

೭. ಪೆಲಪ್ಸಿನ ಸಂತತಿಯ ರಾಜರುಗಳು ಆ ಪರ್ಯಾಯದ್ವೀಪದ ಅನೇಕ ಸಂಸ್ಥಾನಗಳಲ್ಲಿ ಆಳುತ್ತಿದ್ದರು. ಅವರುಗಳಲ್ಲಿ ಅತ್ಯಂತಪ್ರಸಿದ್ಧರಾದವರು ಅಗಮೆಮ್ನಾನ್, ಮೆನೆಲಾಸ್ ಎಂಬ ಇಬ್ಬರು ಸಹೋದರರು. ಅಗಮೆಮ್ನಾನ್ ಎಂಬವನು ಆ ಪರ್ಯಾಯದ್ವೀಪದ ಪೂರ್ವಭಾಗದಲ್ಲಿದ್ದ ಮೈಕೆನಿ ಎಂಬ ಸಂಸ್ಥಾನದಲ್ಲಿ ಅತ್ಯಂತವಿಭವದಿಂದ ಆಳುತ್ತಿದ್ದನು. ಆತನು ಮಹಾಶೂರನೂ ಶಕ್ತನೂ ಆಗಿದ್ದುದರಿಂದ, ಗ್ರೀಸ್ ದೇಶದಲ್ಲೆಲ್ಲಾ ಆತನ ಪ್ರಖ್ಯಾತಿಯು ಬಹಳವಾಗಿ ಹರಡಿದ್ದಿತು. ಪ್ರಾಯಶಃ ಆ ಕಾಲದ ಅನೇಕ ಗ್ರೀಕ್ ದೊರೆಗಳು ಅಗಮೆಮ್ನಾನನ್ನೇ ತಮ್ಮ ಪ್ರಮುಖನನ್ನಾಗಿ ಭಾವಿಸಿದ್ದರು. ಆ ಪತ್ತನಸಂಸ್ಥಾನದ ಐಶ್ವರ್ಯವನ್ನು ಕಂಡು ಆ ಕಾಲದ ಜನರು 'ಸ್ವರ್ಣಮಯವಾದ ಮೈಕೆನಿ' ಎಂದು ಆ ರಾಜ್ಯಕ್ಕೆ ಅಡ್ಡಹೆಸರನ್ನು ಕಟ್ಟಿದ್ದರು. ಆ ಸಂಸ್ಥಾನದ ಅಟ್ಟಹಾಸವು ಎಷ್ಟೋ ಶತಮಾನಗಳ ಹಿಂದೆ ಲುಪ್ತವಾಗಿ ಹೋಗಿದ್ದರೂ, ಆ ಪತ್ತನಸಂಸ್ಥಾನವಿದ್ದ ಪ್ರದೇಶದಲ್ಲಿ ನೂರಾರು ಅಡಿಗಳಷ್ಟು ಕೆಳಗಡೆ ಭೂಗರ್ಭದಲ್ಲಿ ಬಹಳ ಬೆಲೆಯುಳ್ಳವೂ ವಿಧವಿಧವಾದುವೂ ಆದ ಸ್ವರ್ಣಾಭರಣಗಳು ಪ್ರಾಚೀನವಸ್ತ್ವನ್ವೇಷಕರಿಗೆ ಈಗಲೂ ದೊರೆಯುತ್ತಿರುವುವು. ಆದುದರಿಂದ ಮೈಕೆನಿಗೆ ಉಂಟಾಗಿದ್ದ ಪ್ರಶಸ್ತಿಯು ಆಧಾರರಹಿತವಾದುದೇನೂ ಅಲ್ಲವೆಂದು ಹೇಳಬಹುದು.

೮ ಮೈಕೆನಿಗೆ ನೈಋತ್ಯದಿಕ್ಕಿನಲ್ಲಿ ಸ್ಪಾರ್ಟಾ ಎಂಬ ಮತ್ತೊಂದು ಸಂಸ್ಥಾನವಿದ್ದಿತು. ಅಲ್ಲಿ ಟಿಂಡಾರಸ್ ಎಂಬೊಬ್ಬ ರಾಜನು ಬಹಳ ಸುಖವಾಗಿ ರಾಜ್ಯಭಾರಮಾಡಿಕೊಂಡಿದ್ದನು. ಆತನಿಗೆ ಪಾಲಿಡ್ಯೂಸಸ್, ಕ್ಯಾಸ್ಟರ್ ಎಂಬ ಗಂಡು ಮಕ್ಕಳೂ, ಹೆಲೆನ್ ಕ್ಲಿಟೆಮ್ನೆಸ್ಟ್ರಾ ಮುಂತಾದ ಕೆಲವರು ಹೆಣ್ಣುಮಕ್ಕಳೂ ಇದ್ದರು. ಈ ಮಕ್ಕಳುಗಳಲ್ಲಿ ಪಾಲಿಡ್ಯೂಸಸನೂ ಹೆಲೆನಳೂ ದೇವಾಂಶಸಂಭೂತರೆಂದು ಪ್ರತೀತಿ ಇದ್ದಿತು. ಪಾಲಿಡ್ಯೂಸಸನು ಮುಷ್ಟಿಯುದ್ಧದಲ್ಲಿ ನಿಸ್ಸೀಮನು; ಕ್ಯಾಸ್ಟರ್ ಎಂಬವನು ನಮ್ಮ ನಳಸಹದೇವರಂತೆ ಅಶ್ವಹೃದಯವನ್ನರಿತವನು; ಹೆಲೆನ್ ಎಂಬವಳು ಆ ಕಾಲದ ಸ್ತ್ರೀಯರಲ್ಲೆಲ್ಲಾ ಅತ್ಯಂತಸುಂದರಿಯಾದವಳು. ಹೆಣ್ಣು ಮಕ್ಕಳಿಗೆ ವಿವಾಹಕಾಲವು ಪ್ರಾಪ್ತವಾಗಲು, ಸುಂದರಿಯಾದ

ಹೆಲೆನಳನ್ನು ಮದುವೆಯಾಗಬೇಕೆಂದು ನಾನಾದೇಶದ ರಾಜಪುತ್ರರುಗಳು ಬಂದು ಟಿಂಡಾರಸ್ಸನ್ನು ಪೀಡಿಸಲಾರಂಭಿಸಿದರು. ಆದುದರಿಂದ ಆ ರಾಜನಿಗೆ ತಕ್ಕವರರನ್ನು ಆರಿಸಿಕೊಳ್ಳುವುದು ಬಲು ಕಷ್ಟವಾಯಿತು. ಅಷ್ಟೊಂದು ಮಂದಿ ಪ್ರಬಲರಾದವರು ನಾನು ತಾನೆಂದು ಸ್ಪರ್ಧಿಸುತ್ತಿದ್ದಾಗ ಯಾರನ್ನೇ ಆಗಲಿ ಪರೋಕ್ಷವಾಗಿ ತನ್ನ ಅಳಿಯಂದಿರನ್ನು ಮಾಡಿಕೊಂಡರೂ, ಇತರರಿಂದ ಬಾಧೆಯುಂಟಾಗದಿರದೆಂದು ಭಾವಿಸಿ, ಟಿಂಡಾರಸ್ಸನು ಒಂದುದಿನ ದೊಡ್ಡ ಸಭೆಯೊಂದನ್ನು ನಡೆಸುವಂತೆ ಗೊತ್ತುಮಾಡಿ ಆ ಸಭೆಗೆ ಕನ್ಯಾಪೇಕ್ಷಿಗಳಾದ ರಾಜಪುತ್ರರುಗಳೆಲ್ಲರೂ ಬರಬೇಕೆಂದು ಎಲ್ಲಾ ರಾಜ್ಯಗಳಿಗೂ ಆಹ್ವಾನಪತ್ರಿಕೆಗಳನ್ನು ಕಳುಹಿಸಿಕೊಟ್ಟನು.

೯. ಗೊತ್ತಾದ ದಿನ ಶೋಭಾಯಮಾನವಾದ ವಿವಾಹಮಂಟಪಕ್ಕೆ ನಾನಾ ಸಂಸ್ಥಾನಗಳಿಂದ ರಾಜಪುತ್ರನಿವಹವು ತಂಡತಂಡವಾಗಿ ಬಂದು ಸೇರಿತು ತನ್ನ ಪುತ್ರಿಯರನ್ನು ಮದುವೆ ಮಾಡಿಕೊಡುವುದಕ್ಕಿಂತ ಮುಂಚೆ ಆ ಸಭಾಸದರುಗಳೆಲ್ಲರೂ ದೈವಸಾಕ್ಷಿಯಾಗಿ ಒಂದು ಪ್ರತಿಜ್ಞೆಯನ್ನು ಮಾಡಬೇಕೆಂದು ಟಿಂಡ್ಯಾರಸ್ಸನು ಕೇಳಿಕೊಂಡನು. ಆ ದಿನದ ಸಂಭ್ರಮದಲ್ಲಿ ಮಗ್ನರಾಗಿದ್ದ ರಾಜಪುತ್ರರುಗಳು ಅದೇ ಮೇರೆಗೆ ಪ್ರಮಾಣಮಾಡಿಕೊಡುತ್ತೇವೆಂದು ಸಂತೋಷದಿಂದ ಒಪ್ಪಿಕೊಂಡರು. ಅನಂತರ ರಾಜನು ತನ್ನ ಮಕ್ಕಳ ಯೋಗಕ್ಷೇಮಾರ್ಥವಾಗಿಯೂ ಆ ರಾಜರುಗಳ ಪರಸ್ಪರಸೌಹಾರ್ದಸಂರಕ್ಷಣಾರ್ಥವಾಗಿಯೂ, ಹೆಲೆನಳ ಮತ್ತು ಆಕೆಯ ಪತಿಯ ವಿಷಯದಲ್ಲಿ ದ್ರೋಹವನ್ನೆಣಿಸುವ ಯಾವ ರಾಜಪುತ್ರನನ್ನೇ ಆಗಲಿ ಉಳಿದವರೆಲ್ಲರೂ ಸೇರಿ ಶಿಕ್ಷಿಸಬೇಕೆಂದು ಪ್ರಾರ್ಥಿಸಿಕೊಂಡನು ಹಿಂದೆ ವಾಗ್ದಾನಮಾಡಿದ್ದಂತೆ ಆ ರಾಜಪುತ್ರರುಗಳೆಲ್ಲರೂ ಸಮ್ಮತಿಸಲು, ಮೊದಲು ಹೆಲೆನಳು ರಾಜಪುತ್ರರ ಪಙ್ಕ್ತಿಯಲ್ಲಿ ಸಂಚರಿಸಿ ಅಗಮೆಮ್ನಾನನ ತಮ್ಮನಾದ ಮೆನೆಲಾಸ್ ಎಂಬವನನ್ನು ವರಿಸಿದಳು. ಕ್ಲಿಟಮ್ನೆಸ್ಟ್ರಳೂ ರಾಜಪುತ್ರರ ನಡುವೆ ಸುತ್ತಾಡಿ ಅಗಮೆಮ್ನಾನನ್ನು ತನ್ನ ಪತಿಯನ್ನಾಗಿ ಪರಿಗ್ರಹಿಸಿದಳು. ಇದೇ ಸಮಯದಲ್ಲೇ ಟಿಂಡಾರಸ್ಸಿನ ತಮ್ಮನಾದ ಐಕೇರಿಯಸ್ ಎಂಬಾತನು ತನ್ನ ಮಗಳಾದ ಪೆನಿಲೋಪಿಯನ್ನು ಇಥಾಕಾದ್ವೀಪದ ಪ್ರಭುವಾದ ಒಡಿಸಿಯಸ್ಸಿಗೆ ಮದುವೆಮಾಡಿಕೊಟ್ಟನು. ವಿವಾಹೋತ್ಸವಗಳು ವಿಜೃಂಭಣೆಯಿಂದ ನಡೆದ ಮೇಲೆ ನಾನಾಸಂಸ್ಥಾನಗಳ ರಾಜಪುತ್ರರುಗಳು ಟಿಂಡಾರಸ್ಸನ ಮತ್ತು ನೂತನದಂಪತಿಗಳ ಅನುಮತಿಬಹುಮತಿಗಳನ್ನು

ಪಡೆದು ತಮ್ಮತಮ್ಮ ರಾಜ್ಯಗಳಿಗೆ ಹಿಂದಿರುಗಿದರು. ಅಗಮೆಮ್ನಾನನೂ ಒಡಿಸಿಯಸ್ಸನೂ ಮಾವಂದಿರ ಮನೆಯಲ್ಲಿ ಕೆಲವು ದಿನಗಳಿದ್ದು ತಮ್ಮ ತಮ್ಮ ಪತ್ನಿಗಳನ್ನು ಕರೆದುಕೊಂಡು ತಮ್ಮ ರಾಜ್ಯಕ್ಕೆ ಹಿಂದಿರುಗಿದರು. ಮೆನೆಲಾಸನು ಮಾತ್ರ ಮಾವನ ಮನೆಯಲ್ಲಿಯೇ ಇದ್ದುಕೊಂಡು ರಾಜ್ಯಭಾರಕಾರ್ಯದಲ್ಲಿ ಸಹಾಯಮಾಡುತ್ತಾ ಕೆಲವು ದಿನಗಳಲ್ಲಿ ಟಿಂಡಾರಸ್ಸಿನ ಅಪ್ಪಣೆಯಿಂದ ಸ್ಪಾರ್ಟಾ ಸಂಸ್ಥಾನದ ರಾಜ್ಯಭಾರವನ್ನು ವಹಿಸಿಕೊಂಡನು. ಮೆನೆಲಾಸನೂ ಹೆಲೆನಳೂ ಕೆಲವು ವರ್ಷಗಳ ವರೆಗೆ ಅತ್ಯಂತಸುಖವನ್ನು ಅನುಭವಿಸುತ್ತಿದ್ದರು.

---

## II

೧೦. ಈ ವಿವಾಹಗಳ ಸುದ್ದಿಯು ಟ್ರೋಡ್ ಸಂಸ್ಥಾನಕ್ಕೂ ಮುಟ್ಟಿದ್ದಿತು. ಕೆಸಾಂಡ್ರಳು ನಿರೋಧಿಸುತ್ತಿದ್ದರೂ ಲಕ್ಷ್ಯಮಾಡದೆ, ಪ್ಯಾರಿಸ್ಸನೂ ಆ ವಿವಾಹೋತ್ಸವಗಳಿಗೆ ಹೋಗಿಬರಬೇಕೆಂದು ಪಯಣಹೊರಟನು. ಸಮುದ್ರಯಾನವು ಆ ಕಾಲದಲ್ಲಿ ಈಗಿನಷ್ಟು ಸುಲಭವಾಗಿರಲಿಲ್ಲ. ಪ್ಯಾರಿಸ್ಸನು ಪ್ರಯಾಣಹೊರಟ ಸ್ವಲ್ಪ ಹೊತ್ತಿನಲ್ಲಿಯೇ ಒಂದು ದೊಡ್ಡ ಬಿರುಗಾಳಿಯು ಎದ್ದು ಅವನ ಹಡಗನ್ನು ಬೇರೊಂದು ದಿಕ್ಕಿಗೆ ಹೊಡೆದುಕೊಂಡು ಹೋಯಿತು. ಆದರೂ ಆ ಹಡಗಿನ ನಾವಿಕರು ತಮ್ಮ ಶಕ್ತಿಯುಕ್ತಿಗಳೆಲ್ಲವನ್ನೂ ಪ್ರಯೋಗಿಸಿ ತಮ್ಮ ಹಡಗನ್ನು ಸ್ಪಾರ್ಟದ ಕಡೆಗೆ ನಡೆಸಿಕೊಂಡುಹೋದರು. ಅವರು ಸ್ಪಾರ್ಟವನ್ನು ಸೇರುವ ಹೊತ್ತಿಗೆ ವಿವಾಹಗಳೆಲ್ಲವೂ ನಡೆದು ಅತಿಥಿಅಭ್ಯಾಗತರುಗಳು ತಮ್ಮ ತಮ್ಮ ಊರುಗಳಿಗೆ ಹಿಂದಿರುಗಿ ಹೊರಟುಹೋಗಿದ್ದರು. ಭಗವಂತನೇ ತಮ್ಮ ಬಳಿಗೆ ಅತಿಥಿಗಳನ್ನು ಕಳುಹಿಸಿ ಕೊಡುವನೆಂದೂ ಕೆಲವುವೇಳೆ ದೇವತೆಗಳೇ ಅತಿಥಿಗಳ ರೂಪದಲ್ಲಿ ತಮಗೆ ಕಾಣಿಸಿಕೊಳ್ಳುವರೆಂದೂ ಗ್ರೀಕರಲ್ಲಿ ಪ್ರಬಲವಾದ ನಂಬಿಕೆ ಇದ್ದಕಾರಣ, ತಮ್ಮಲ್ಲಿಗೆ ಬಂದ ಅತಿಥಿಗಳನ್ನು ಅವರು ಬಹಳವಾಗಿ ಆದರಿಸುತ್ತಿದ್ದರು. ಆದರಸತ್ಕಾರವನ್ನು ಮಾಡುವುದಕ್ಕೆ ರಾಜರೂ ರಾಜ್ಞಿಯರೂ ರಾಜಪುತ್ರರುಗಳೂ ಬಹಳ ಉತ್ಸಾಹದಿಂದ ತವಕಪಡುತ್ತಿದ್ದರು. ತಾನು ಬಂದಿದ್ದ ವೃತ್ತಾಂತವನ್ನು ಪ್ಯಾರಿಸ್ಸನು ಹೇಳಿಕಳುಹಿಸಿದ ಕೂಡಲೆ ಮೆನೆಲಾಸನೂ ಹೆಲೆನಳೂ ಅವನನ್ನು ಇದಿರುಗೊಂಡು ಬಹಳವಾಗಿ ಉಪಚರಿಸಿದರು. ಪ್ಯಾರಿಸ್ಸನು ಅವರ ಸತ್ಕಾರಗಳನ್ನು ಕೈಕೊಳ್ಳುತ್ತಾ ಕೆಲವುದಿನಗಳು ಮೆನೆಲಾಸನ ಅರಮನೆಯಲ್ಲಿಯೇ ನಿಂತನು.

೧೧. ಒಂದಾನೊಂದುದಿನ ಮೆನೆಲಾಸನು ಬೇಟೆಗಾಗಿ ಕಾಡಿಗೆ ಹೋದಾಗ, ಪ್ಯಾರಿಸ್ಸನು ಅಸ್ವಸ್ಥತೆಯ ನೆವದಿಂದ ಅರಮನೆಯಲ್ಲಿಯೇ ಉಳಿದುಕೊಂಡನು. ಮೆನೆಲಾಸನು ಬೇಟೆಯಿಂದ ಹಿಂದಿರುಗುವುದು ಸಾವಕಾಶವಾಯಿತು. ಈ ಮಧ್ಯದಲ್ಲಿ ಪ್ಯಾರಿಸ್ಸನು ಹೆಲೆನಳಿಗೆ ದುರ್ಬೋಧನೆಯನ್ನು ಮಾಡಿ ಅವಳು ತನ್ನೊಡನೆ ಟ್ರೋಡಿಗೆ ಬಂದುಬಿಡುವಂತೆ ಅವಳನ್ನು ಪುಸಲಾಯಿಸಿದನು. ಆಫ್ರೊಡೈಟಿ ದೇವತೆಯು ತನ್ನ ವಾಗ್ದಾನಕ್ಕೆ ಅನುಸಾರವಾಗಿ, ಪ್ಯಾರಿಸ್ಸಿಗೆ ಸಹಾಯ ಮಾಡುವುದಕ್ಕೋಸುಗ, ಹೆಲೆನಳಿಗೆ ದುರ್ಬುದ್ಧಿಯನ್ನುಂಟುಮಾಡಿ ಪ್ಯಾರಿಸ್ಸಿನ ಮಾತಿಗೆ ಮರುಳಾಗುವಂತೆ ಮಾಡಿಬಿಟ್ಟಿದ್ದಳು. ಆದುದರಿಂದ ಅವನ ಮಾತಿಗೆ ಪ್ರತಿಹೇಳದೆ ಅವಳು ಅರಮನೆಯಲ್ಲಿದ್ದ ಕೆಲವು ಅನರ್ಘರತ್ನಾಭರಣಗಳನ್ನು ಗುಟ್ಟಾಗಿ ತೆಗೆದುಕೊಂಡು ಪ್ಯಾರಿಸ್ಸಿನೊಡನೆ ಹೊರಟುಹೋದಳು. ಹೆಲೆನಳಿಗೆ ಮೆನೆಲಾಸಿನಮೇಲೆ ಅಪಾರವಾದ ಪ್ರೇಮವಿದ್ದಿತು. ಅವನೂ ಕುರೂಪಿಯೇನೂ ಆಗಿರಲಿಲ್ಲ; ಅವನ ಶಕ್ತಿಸಾಹಸಗಳಿಗೆ ಕುಂದು ಕೊರತೆಗಳೇನೂ ಇರಲಿಲ್ಲ. ಇದೂ ಅಲ್ಲದೆ ಇಷ್ಟುಹೊತ್ತಿಗೆ ಆ ದಂಪತಿಗಳಿಗೆ ಹರ್ಮಿಯೊನಿ ಎಂಬ ಸುಂದರಿಯಾದ ಒಬ್ಬ ಪುತ್ರಿಯು ಜನಿಸಿದ್ದಳು. ಪ್ಯಾರಿಸ್ಸಿನೊಡನೆ ಹೊರಡುವಾಗ ಹೆಲೆನಳಿಗೆ ಪ್ರೀತಿಪಾತ್ರನಾದ ತನ್ನ ಪತಿಯ ಸ್ಮರಣೆಯಾಗಲೀ, ತನ್ನ ಮುದ್ದು ಮಗುವಿನ ನೆನಪಾಗಲೀ, ತನ್ನ ವೃದ್ಧಮಾತಾಪಿತೃಗಳ ಜ್ಞಾಪಕವಾಗಲೀ ಉಂಟಾಗಲಿಲ್ಲ. ತಾನು ಏನುಮಾಡುತ್ತಿದ್ದಳೆಂಬುದನ್ನು ಅವಳು ಅರಿಯದವಳಾಗಿದ್ದಳು. ದುಷ್ಟಯೋಚನೆಗಳಿಗೆ ಎಡೆಗೊಟ್ಟು ಅವುಗಳನ್ನು ತಡೆಯಲು ಯತ್ನಿಸದೆ ಅವಕ್ಕೆ ಸುಲಭವಾಗಿ ವಶವಾಗುವವರ ಪಾಡು ಹೀಗೆಯೇ ತಾನೆ!

೧೨. ಈ ಸುದ್ದಿಯು ಸ್ವಲ್ಪ ಹೊತ್ತಿನಲ್ಲಿಯೇ ಅರಮನೆಯಲ್ಲೆಲ್ಲಾ ಹಬ್ಬಿಕೊಂಡು ಆ ದುರ್ಮಾರ್ಗಿಗಳನ್ನು ಹಿಡಿದುತರಲು ನಾನಾಪ್ರಯತ್ನಗಳು ನಡೆದುವು. ಆದರೆ ಆ ಕಾಲಕ್ಕೆ ಸರಿಯಾಗಿ ಎದ್ದಿದ್ದ ಪ್ರತಿಕೂಲಮಾರುತಗಳಿಂದ, ಸ್ಪಾರ್ಟನರ ಹಡಗುಗಳಿಗೆ ಪ್ರಯಾಣಹೊರಡಲು ಸಾಧ್ಯವಾಗಲೇ ಇಲ್ಲ. ಸ್ವಲ್ಪ ಹೊತ್ತಿನಲ್ಲಿಯೇ ಮೆನೆಲಾಸನು ಹಿಂದಿರುಗಿ ಬಂದು ತಾನು ಇಲ್ಲದ ವೇಳೆಯಲ್ಲಿ ನಡೆದಿದ್ದ ಅಪಘಾತವನ್ನು ಕೇಳಿದಾಗ ಅವನಿಗೆ ದುರ್ಭರವಾದ ಚಿಂತೆಯೂ ಕೋಪವೂ ಉಂಟಾದುವು.

೧೩. ಟಿಂಡ್ಯಾರಸ್ಸನೂ ಮೆನೆಲಾಸನೂ ಹೀಗೆ ಸ್ವಲ್ಪ ಹೊತ್ತು ಕಳೆದಮೇಲೆ ತಮ್ಮ ಹಿತೈಷಿಗಳಾದ ಅಗಮೆಮ್ನಾನನನ್ನೂ ನೆಸ್ಟರ್, ಪಾಲಮೇಡೀಸ್

ಎಂಬ ರಾಜರುಗಳನ್ನೂ ಬರಮಾಡಿಕೊಂಡು ಮುಂದೆ ಏನುಮಾಡಬೇಕೆಂದು ಯೋಚಿಸಿದರು. ಆ ಕಾಲದ ರಾಜರುಗಳಲ್ಲೆಲ್ಲಾ ನೆಸ್ಟರನೇ ಬಹಳ ವಯೋವೃದ್ಧನು. ಎರಡು ತಲೆಯವರು ಬದುಕಿ ಬಾಳಿ ಕಾಲವಾಗಿ ಹೋಗಿ ಮೂರನೆಯ ತಲೆಯ ಜನರು ಜೀವಿಸುತ್ತಿದ್ದುದನ್ನು ಅತನು ಕಂಡಿದ್ದನು. ಪಾಲಮೇಡೀಸನು ಬಹಳ ಬುದ್ಧಿಶಾಲಿ. ಆದುದರಿಂದಲೇ ಅನುಭವಶಾಲಿಗಳಾದ ಆ ಇಬ್ಬರು ಹೊರಗಿನವರನ್ನೂ ಮಂತ್ರಾಲೋಚನೆಗೆ ಬರಮಾಡಿಕೊಂಡಿದ್ದುದು. ಅಂತಹ ಕೃತಘ್ನಕಾರ್ಯವನ್ನು ಮಾಡಿದ್ದ ಪ್ಯಾರಿಸ್ಸಿಗೆ ತಕ್ಕ ಶಿಕ್ಷೆಯನ್ನು ಮಾಡುವುದು ಅತ್ಯಾವಶ್ಯಕವೆಂದೂ ಅದಕ್ಕಾಗಿ ತಮಗೆ ಸಹಾಯಮಾಡಬೇಕೆಂದು ಗ್ರೀಸಿನ ಅನೇಕ ಸಂಸ್ಥಾನಗಳನ್ನು ಕೇಳಿಕೊಳ್ಳಬೇಕೆಂದೂ ಅವರುಗಳೆಲ್ಲರೂ ನಿರ್ಧರಿಸಿದರು.

೧೪. ಪ್ಯಾರಿಸ್ಸನು ನಡೆಸಿದ್ದ ಹೇಯಕಾರ್ಯದ ವೃತ್ತಾಂತವನ್ನು ಕೇಳಿದ ಕೂಡಲೆ ಗ್ರೀಸಿನ ಅನೇಕ ಸಂಸ್ಥಾನಗಳಲ್ಲಿ ಕೋಲಾಹಲವೆದ್ದಿತು. ಪ್ಯಾರಿಸ್ಸಿನ ಕೃತಘ್ನತೆಗೆ ಪ್ರತೀಕಾರವನ್ನು ಮಾಡಲು ಸಹಾಯಮಾಡಬೇಕೆಂದು ಕೇಳಿಕೊಳ್ಳುವುದಕ್ಕಾಗಿ ನೆಸ್ಟರನೂ, ಪಾಲಮೇಡೀಸನೂ ರಾಯಭಾರಿಗಳಾಗಿ ಹೊರಟು, ಅನೇಕ ಸಂಸ್ಥಾನಾಧಿಪತಿಗಳನ್ನು ಸಂದರ್ಶಿಸಿದರು. ಆ ಸಂಸ್ಥಾನಾಧೀಶರುಗಳಲ್ಲಿ ಅನೇಕರು ಮನಃಪೂರ್ವಕವಾಗಿ ಟ್ರೋಜನರಮೇಲೆ ಯುದ್ಧ ಮಾಡುವುದಕ್ಕಾಗಿ ಸನ್ನಾಹಮಾಡಿಕೊಳ್ಳಲಾರಂಭಿಸಿದರು. ರಾಜವಂಶಕ್ಕೆ ಏಕಮಾತ್ರಪುತ್ರರಿದ್ದ ಸಂದರ್ಭದಲ್ಲಿ, ಆ ಯುದ್ಧಕ್ಕೆ ರಾಜಪುತ್ರರುಗಳನ್ನು ಕಳುಹಿಸಿಕೊಡಬೇಕಾಗಿದ್ದ ಕೆಲವು ಸಂಸ್ಥಾನಗಳಲ್ಲಿ ಮಾತ್ರ ಅಲ್ಪಸ್ವಲ್ಪ ಅಡ್ಡಿಯುಂಟಾಗುತ್ತಿದ್ದಿತು. ಮತ್ತೆ ಒಂದೆರಡು ಸಂಸ್ಥಾನಗಳಲ್ಲಿ ಸುಖಲೋಲುಪರಾದ ರಾಜರುಗಳು ತಮ್ಮ ವಾಗ್ದಾನವನ್ನೂ ಮರೆತು ತಮ್ಮ ಸುಖಸಂಪತ್ತುಗಳು ತಮಗೆ ಶಾಶ್ವತವೆಂದು ಭ್ರಮಿಸಿ ಹಿಂದೆ ನಿಂತುಬಿಟ್ಟರು. ವಾಗ್ದಾನಭಂಗದಂತಹ ಪಾತಕವನ್ನು ದೇವರು ಕ್ಷಮಿಸನೆಂದು ಅವರು ಯೋಚಿಸಲಿಲ್ಲ. ಉಳಿದ ಗ್ರೀಕ್ ದೊರೆಗಳು ತಮ್ಮ ದೇಶದ ಕೀರ್ತಿಯನ್ನೂ ತಮ್ಮ ವಾಗ್ದಾನವನ್ನೂ ಉಳಿಸಿಕೊಳ್ಳುವುದಕ್ಕಾಗಿ ಯುದ್ಧಕ್ಷೇತ್ರದಲ್ಲಿ ತಮ್ಮ ಪ್ರಾಣಗಳನ್ನು ಅರ್ಪಿಸಲು ಸಿದ್ಧರಾಗಿ ಹೊಡೆದಾಡುತ್ತಿದ್ದಾಗ, ತಮ್ಮತಮ್ಮ ಸಂಸ್ಥಾನಗಳಲ್ಲೇ ನಿಂತುಬಿಟ್ಟಿದ್ದ ಸುಖಾಸಕ್ತರಾದ ಕೆಲವು ದೊರೆಗಳಿಗೆ ಅಪಾರವಾದ ಅಪಕೀರ್ತಿಯು ಲಭಿಸಿದುದು

ಮಾತ್ರವೇ ಅಲ್ಲದೆ, ಉಳಿದ ದೊರೆಗಳಿಗಿಂತಲೂ ಮುಂಚೆಯೇ ಅವರಲ್ಲಿ ಅನೇಕರು ಮೃತ್ಯುವಶರಾಗಿ ಹೋದರು.

೧೫. ಪ್ಯಾರಿಸ್ಸಿನೊಡನೆ ನಡೆದ ಆ ಮಹಾಯುದ್ಧಕ್ಕೆ ಹೋಗುವುದರಲ್ಲಿ ಸ್ವಲ್ಪಮಟ್ಟಿಗೆ ಹಿಂದೆಗೆದವರಲ್ಲಿ ಒಡಿಸಿಯಸ್‌ ಏಕಿಲೀಸ್‌ ಎಂಬ ಇಬ್ಬರ ವೃತ್ತಾಂತವನ್ನು ತಿಳಿಸಬೇಕಾಗಿದೆ. ಒಡಿಸಿಯಸ್ಸನು ಮೆನೆಲಾಸಿಗೆ ಸಮಿಾಪ ಬಂಧುವಾಗಿದ್ದರೂ, ಯುದ್ಧಕ್ಕೆ ಹೋಗಲು ಹಿಂದೆಗೆಯುವುದಕ್ಕೆ ಪ್ರಬಲವಾದ ಕಾರಣಗಳಿದ್ದುವು. ಅವನ ತಾಯಿತಂದೆಗಳು ವೃದ್ಧರು. ಯುದ್ಧಕ್ಕೆ ಹೊರಡಬೇಕೆಂದು ಆಹ್ವಾನವು ಬರುವುದಕ್ಕೆ ಸ್ವಲ್ಪ ದಿನಗಳ ಮುಂಚೆ ಒಡಿಸಿಯಸ್ಸಿಗೆ ಟೆಲಿಮಾಕಸ್‌ ಎಂಬ ಒಬ್ಬ ಮಗನು ಹುಟ್ಟಿದ್ದನು. ಒಡಿಸಿಯಸ್ಸಿಗೂ ಪೆನಿಲೊಪಿಗೂ ಅತ್ಯಂತ ಗಾಢವಾದ ಅನುರಾಗವಿದ್ದಿತು. ಒಡಿಸಿಯುಸ್ಸನ್ನು ಯುದ್ಧಕ್ಕೆ ಕಳುಹಿಸಿಕೊಡಲು ಅವನ ಸಂಸಾರದಲ್ಲಿ ಒಬ್ಬರಿಗಾದರೂ ಇಷ್ಟವಿರಲಿಲ್ಲ ಆದುದರಿಂದ ಅವರು ಒಡಿಸಿಯುಸ್ಸಿಗೆ ಬಗೆಬಗೆಯಾಗಿ ಹೇಳಿಕೊಂಡು, ಅವನು ಹುಚ್ಚನ ಸೋಗನ್ನು ಹಾಕಿಕೊಂಡು ತಪ್ಪಿಸಿಕೊಳ್ಳುವಂತೆ ಸೋಧಿಸಿದರು. ಅವರ ಪ್ರಾರ್ಥನೆಗೆ ಕಟ್ಟಿಬಿದ್ದು ಒಡಿಸಿಯಸ್ಸನು ಒಂದು ಏರನ್ನು ಕಟ್ಟಿಕೊಂಡು ಸಮುದ್ರತೀರದಲ್ಲಿದ್ದ ಮರಳನ್ನು ಉಳುತ್ತಾ, ನೀರಸದೃಷ್ಟಿಯಿಂದ ಸಮುದ್ರವನ್ನು ನೋಡುತ್ತಾ, ನಿಷ್ಕಾರಣವಾಗಿ ನಗುತ್ತಾ ಹುಚ್ಚನಂತೆ ಆಚರಿಸುತ್ತಿದ್ದನು. ಒಡಿಸಿಯುಸ್ಸಿನ ತಾಯಿಯತಂದೆಯ ಹೆಸರು ಆಟೊಲಿಕಸ್‌. ಆತನು ಚೌರ್ಯದಲ್ಲಿ ಬಹಳ ಹೆಸರುವಾಸಿಯಾಗಿದ್ದನು. ಅವನ ತಂತ್ರಗಳನ್ನು ಭೇದಿಸುವುದು ಬಹಳ ಕಷ್ಟವಾಗಿದ್ದಿತು. ಅಂತಹ ತಂತ್ರಿಯ ಮೊಮ್ಮಗನಾದ ಒಡಿಸಿಯುಸ್ಸಿನಲ್ಲೂ ತಾತನ ತಂತ್ರಗಳೇ ಇರಬಹುದೆಂದು ಪಾಲಮೇಡೀಸನು ಸಂಶಯಿಸಿ, ಅರಮನೆಯ ಬಳಿಯಲ್ಲಿ ಎತ್ತಿಕೊಂಡು ಆಡಿಸುತ್ತಿದ್ದ ಯೂರಿಕ್ಲಿಯ ಎಂಬ ದಾದಿಯ ಕೈಯಿಂದ ರಾಜಪುತ್ರನಾದ ಟೆಲಿಮಾಕಸ್ಸನ್ನು ಎತ್ತಿಕೊಂಡು ಹೋಗಿ, ಒಡಿಸಿಯಸ್ಸನು ಉಳುತ್ತಿದ್ದ ನೇಗಲಿನ ಸಾಲಿನ ಮುಂಭಾಗದಲ್ಲಿ ಇಟ್ಟುಬಿಟ್ಟನು. ಇದನ್ನು ಕಂಡು ಒಡಿಸಿಯಸ್ಸನು ತನ್ನ ಏರನ್ನು ತಟ್ಟನೆ ಬೇರೊಂದು ದಿಕ್ಕಿಗೆ ತಿರುಗಿಸಲಾಗಿ, ನೆಸ್ಟರ್‌ ಮುಂತಾದವರೆಲ್ಲರಿಗೂ ಒಡಿಸಿಯುಸ್ಸಿನ ತಂತ್ರವು ತಿಳಿದುಹೋಯಿತು. ಕಡೆಗೆ ಅವನು ಉಪಾಯಾಂತರವಿಲ್ಲದೆ ಹನ್ನೆರಡು ಹಡಗುಗಳ ತುಂಬ ಸೈನಿಕರನ್ನು ಕರೆದುಕೊಂಡು ಟ್ರೋಜನ್ ದಂಡಯಾತ್ರೆಗೆ ಹೊರಡಬೇಕಾಯಿತು.

೧೬. ಏಕಿಲೀಸನು ಥೀಟೀಸ್ ಎಂಬ ಸಮುದ್ರಕನ್ಯಕೆಯ ಮಗನು. ಆಕೆಯು ಥೆಸೆಲಿ ಎಂಬ ಒಂದು ಪ್ರದೇಶದಲ್ಲಿ ದೊರೆಯಾಗಿದ್ದ ಪೀಲಿಯಸ್ ಎಂಬಾತನನ್ನು ಮದುವೆಯಾಗಿದ್ದಳು. ಈ ವಿವಾಹವು ನಡೆದಾಗ ಅದಕ್ಕೆ ಅನೇಕರು ರಾಜಾಧಿರಾಜರುಗಳು ಮಾತ್ರವಲ್ಲದೆ ದೇವತೆಗಳೂ ಬಂದಿದ್ದರಂತೆ! ಹೆಲೆನಳ ವಿವಾಹವು ನಡೆದಾಗ ಏಕಿಲೀಸನು ಇನ್ನೂ ಸಣ್ಣಹುಡುಗನಾಗಿದ್ದನು. ಪ್ಯಾರಿಸ್ಸನು ಅವಳನ್ನು ಅಪಹರಿಸಿಕೊಂಡು ಹೋದಾಗ ಗ್ರೀಸಿಗೂ ಟ್ರೋಡಿಗೂ ಮಹಾಘೋರವಾದ ಸಂಗ್ರಾಮವು ನಡೆಯುವುದೆಂದೂ, ಅದರಲ್ಲಿ ನೂರಾರು ಮಂದಿ ರಾಜರುಗಳೂ ಅಪರಿಮಿತವಾಗಿ ಇತರ ಯೋಧರುಗಳೂ ನಾಶವಾಗುವ ರೆಂದೂ ಥೀಟೀಸ್ ದೇವತೆಯು ಮುಂದಾಗಿಯೇ ತಿಳಿದುಕೊಂಡಿದ್ದಳು. ಇದೂ ಅಲ್ಲದೆ ತನ್ನ ಮಗನಾದ ಏಕಿಲೀಸನನ್ನು ಬಹುಪ್ರಸಿದ್ಧನಾದ ಪುರುಷನನ್ನಾಗಿ ಯಾಗಲೀ ಅಥವಾ ಅಪ್ರಸಿದ್ಧನಾದ ಮಾನವಸಾಮಾನ್ಯನನ್ನಾಗಲೀ ಮಾಡು ವುದು ತನ್ನಿಂದಸಾಧ್ಯವಾಗಿದ್ದಿತೆಂದೂ ಆಕೆಯು ತಿಳಿದಿದ್ದಳು. ಆದುದರಿಂದ ಏಕಿಲೀಸನಿಗೆ ಸ್ವಲ್ಪ ಬುದ್ಧಿತಿಳಿದಮೇಲೆ ಅವನನ್ನು ಕುರಿತು—“ ಮಗು, ಗ್ರೀಸ್ ದೇಶದಲ್ಲಿ ಇನ್ನು ಕೆಲವು ಕಾಲದೊಳಗಾಗಿ ಅತಿ ಪ್ರಬಲವಾದ ಯುದ್ಧವು ಸಂಭವಿಸುವುದು. ಅದರಲ್ಲಿ ಅನೇಕ ಶೂರರುಗಳು ಕಾಲವಶರಾಗುವರು ಅವರು ಗಳಲ್ಲಿ ಅನೇಕರು ಬಹುಪ್ರಸಿದ್ಧಿಯನ್ನು ಪಡೆದುಕೊಳ್ಳುವರು. ನೀನು ಈ ಯುದ್ಧಕ್ಕೆ ಹೋದರೆ ನಿನಗೆ ಅಜರಾಮರವಾದ ಕೀರ್ತಿಯೇನೋ ಲಭಿಸುವುದು; ಆದರೆ ಯುದ್ಧದಿಂದ ಜೀವಸಹಿತವಾಗಿ ಹಿಂದಿರುಗುವುದು ಮಾತ್ರ ನಿನ್ನ ಅದೃಷ್ಟ ದಲ್ಲಿಲ್ಲ. ಯುದ್ಧಕ್ಕೆ ಹೋಗದೆ ಹಿಂದೆ ನಿಂತುಬಿಟ್ಟ ಪಕ್ಷದಲ್ಲಿ, ಕೀರ್ತಿಯು ತಪ್ಪಿಹೋದರೂ ನಿನಗೆ ದೀರ್ಘಾಯುಷ್ಯ ಉಂಟಾಗುವುದು. ನನಗೂ ನನ್ನ ಮಗನು ಯಶಸ್ವಿಯಾಗಬೇಕೆಂದು ಬಹಳ ಅಪೇಕ್ಷೆಯಿದ್ದರೂ, ಮಾತೃವಾ ತ್ಸಲ್ಯವು ನನ್ನನ್ನು ಬಹಳ ಬಾಧಿಸುತ್ತಿರುವುದು. ಆದುದರಿಂದ ಯತ್ನವಿಲ್ಲದೆ ಬಂದರೆ ಮಾತ್ರ, ನೀನು ಯುದ್ಧಕ್ಕೆ ಹೋಗುವುದಕ್ಕೆ ಸಮ್ಮತಿಸುತ್ತೇನೆ. ಅಲ್ಲಿಯ ವರೆಗೂ ನೀನು ನನ್ನ ಮಾತಿಗೆ ಪ್ರತಿಹೇಳದೆ, ಸ್ಕೈರಾಸ್‌ದ್ವೀಪದ ರಾಜಪುತ್ರಿ ಯರುಗಳ ಮಧ್ಯದಲ್ಲಿ ನೀನೂ ಒಬ್ಬ ರಾಜಪುತ್ರಿಯ ವೇಷವನ್ನು ಹಾಕಿಕೊಂಡು ಇದ್ದುಬಿಡಪ್ಪ!” ಎಂದು ಬಹಳವಾಗಿ ಗೋಳಾಡುತ್ತಾ ಕೇಳಿಕೊಂಡಳು. ಅದಕ್ಕೆ ಏಕಿಲೀಸನು ಆಕೆಯನ್ನು ಕುರಿತು—“ ಅಮ್ಮಾ, ಸಾವನ್ನು ತಪ್ಪಿಸಿಕೊ ಳ್ಳುವುದಕ್ಕಂತೂ ಸಾಧ್ಯವೇ ಇಲ್ಲ; ಹುಟ್ಟಿದವನು ಎಂದಿದ್ದರೂ ಒಂದು ದಿನ

ಸಾಯಲೇಬೇಕು. ನಶ್ವರವಾದ ಈ ಮಾನವಜೀವನದಲ್ಲಿ ಕೀರ್ತಿಯನ್ನು ಸಂಪಾದಿಸಿಕೊಳ್ಳುವುದು ಯೋಗ್ಯರ ಕರ್ತವ್ಯವಾಗಿರುವುದು. ನೀನು ಇಷ್ಟೊಂದು ಕೇಳಿಕೊಳ್ಳುತ್ತಿರುವುದರಿಂದ ಯುದ್ಧಕ್ಕೆ ನನ್ನನ್ನು ಕರೆಯುವವರೆಗೆ ಮಾತ್ರ ವೇಷಾಂತರದಲ್ಲಿ ಇರುವೆನು ಆಮೇಲೆ ಪುನಃ ಮತ್ತೆ ಯಾವ ಅಡ್ಡಿಯನ್ನೂ ತರಬೇಡವಮ್ಮಾ!" ಎಂದು ಆಕೆಯನ್ನು ಒಪ್ಪಿಸಿ ಸ್ಕೈರಾಸ್ ದ್ವೀಪದಲ್ಲಿ ರಾಜಪುತ್ರಿಯರ ನಡುವೆ ಇದ್ದುಕೊಂಡಿದ್ದನು.

೧೮ ನೆಸ್ಟರನೂ ಪಾಲಮೇಡಿಸನೂ ರಾಜರುಗಳನ್ನು ಯುದ್ಧಕ್ಕೆ ಕರೆದುಕೊಂಡು ಬರಲು ಹೊರಡುವ ಸಮಯದಲ್ಲಿ ಗ್ರೀಸಿನ ಎಪಿರಸ್ ಪ್ರದೇಶದಲ್ಲಿ ಆಕಾಶವಾಣಿಯಾಗುತ್ತಿದ್ದ ಡೋಡೋನಾ ಎಂಬ ಸ್ಥಾನಕ್ಕೆ ಹೋಗಿ ಭವಿಷ್ಯವನ್ನು ವಿಚಾರಿಸಿದ್ದರು. ಏಕಿಲೀಸನು ಗ್ರೀಕರೊಡನೆ ಟ್ರಾಯ್ ಬಳಿಗೆ ಹೋದ ಹೊರತು, ಆ ಪಟ್ಟಣವು ಅವರ ವಶವಾಗುವುದಿಲ್ಲವೆಂದು ಅಲ್ಲಿ ಅವರಿಗೆ ತಿಳಿದು ಬಂದುದರಿಂದ ಏಕಿಲೀಸನನ್ನು ಕರೆತರಲು ಪೀಲಿಯಸ್ಸಿನ ರಾಜ್ಯಕ್ಕೆ ಹೋಗಿ ವಿಚಾರಿಸಲಾಗಿ, ಏಕಿಲೀಸಿನ ವೃತ್ತಾಂತವು ಸ್ವಲ್ಪಸ್ವಲ್ಪ ತಿಳಿದುಬಂದಿತು. ಬಹಳ ಬುದ್ಧಿಶಾಲಿಯಾದ ಒಡಿಸಿಯಸ್ಸಿಗೆ ಅಷ್ಟು ಸ್ವಲ್ಪಮಟ್ಟಿಗೆ ತಿಳಿದಿದ್ದ ವೃತ್ತಾಂತವೇ ಬಹಳ ಸಹಾಯಕಾರಿಯಾಯಿತು. ಅವನು ಹೆಂಗುಸರಿಗೆ ಬೇಕಾದ ಉಡಿಗೆತೊಡಿಗೆಗಳನ್ನು ಮಾರುವವನ ವೇಷವನ್ನು ಹಾಕಿಕೊಂಡು ಏಕಿಲೀಸನು ವಾಸವಾಗಿದ್ದ ಸ್ಕೈರಾಸ್ ದ್ವೀಪದ ಲೈಕೋಮೀಡೀಸ್ ರಾಜನ ಅರಮನೆಗೆ ಹೋಗಿ, ತನ್ನ ಅಪೂರ್ವವಾದ ಪದಾರ್ಥಗಳನ್ನು ಅರಮನೆಯಲ್ಲೀನಾದರೂ ಕೊಂಡುಕೊಳ್ಳುವುದುಂಟೋ ? ಎಂದು ವಿಚಾರಿಸಿದನು. ಉಡಿಗೆತೊಡಿಗೆಗಳ ವ್ಯಾಪಾರಿಯು ಬಂದಿರುವನೆಂಬ ಸುದ್ದಿಯನ್ನು ಕೇಳಿದ ಕೂಡಲೆ, ರಾಜಪುತ್ರಿಯರೆಲ್ಲರೂ ತಮ್ಮ ಆಟಪಾಠಗಳೆಲ್ಲವನ್ನೂ ನಿಲ್ಲಿಸಿ, ಆ ವ್ಯಾಪಾರಿಯ ಸುತ್ತಲೂ ಬಂದು ತುಂಬಿಕೊಂಡರು. ಅವರ ನಡುವೆ ಬಾಲಕಿಯ ವೇಷದಲ್ಲಿದ್ದ ಏಕಿಲೀಸನೂ ನಿಂತಿದ್ದನು. ಆ ವರ್ತಕನು ತನ್ನ ವಸ್ತುಗಳನ್ನು ಪ್ರಶಂಸಿಸುತ್ತಾ ಬಂದಾಗೆಲ್ಲಾ, ಅವುಗಳನ್ನು ನನಗೆ ತನಗೆಂದು ರಾಜಪುತ್ರಿಯರು ತೆಗೆದಿಟ್ಟುಕೊಂಡರು. ಏಕಿಲೀಸನಿಗೆ ಮಾತ್ರ ಅವುಗಳಲ್ಲಿ ಒಂದೂ ರುಚಿಸಲಿಲ್ಲ. ಆಗ ಆ ವರ್ತಕನು ತನ್ನ ಬಳಿಯಲ್ಲಿ ಒಂದು ಅಪೂರ್ವವಾದ ವಸ್ತುವಿರುವುದೆಂದೂ, ಅದನ್ನೂ ಯಾರಾದರೂ ಇಷ್ಟಪಟ್ಟರೆ ತೆಗೆದುಕೊಳ್ಳಬಹುದೆಂದೂ ಹೇಳಿ ರತ್ನಖಚಿತವಾದ ಕತ್ತಿಯೊಂದನ್ನು ತೆಗೆದು ತೋರಿಸಿದನು. ಆಗ ಏಕಿಲೀಸನು

"ಆಹಾ! ಇದೀಗ ನನಗೆ ಬೇಕಾದ ವಸ್ತು" ಎಂದು ಹಿಗ್ಗುತ್ತಾ ಅದನ್ನು ತಟ್ಟನೆ ತೆಗೆದುಕೊಂಡುಬಿಟ್ಟನು. ಇದರಿಂದ ಸೂಕ್ಷ್ಮದರ್ಶಿಯಾದ ಒಡಿಸಿಯಸ್ಸಿಗೆ ಗುಟ್ಟು ಬಯಲಾಗಿಹೋಯಿತು. ಕೂಡಲೆ ಅವನು ತಾನು ಯಾರೆಂಬುದನ್ನು ಲೈಕೊಮೆಡೀಸನಿಗೆ ತಿಳಿಸಿ, ಏಕಿಲೀಸನ್ನು ಯುದ್ಧಕ್ಕೆ ಕಳುಹಿಸಿಕೊಡಬೇಕೆಂದು ಕೇಳಿಕೊಂಡನು. ಒಡಿಸಿಯಸ್ಸಿಗೆ ಪ್ರತಿ ಹೇಳಲಾರದೆ ಆ ದೊರೆಯು ಹತ್ತು ಹಡಗುಗಳ ತುಂಬ ಸೈನಿಕರನ್ನು ಒದಗಿಸಿಕೊಟ್ಟು, ಏಕಿಲೀಸನ್ನು ಪೀಲಿಯುಸ್ಸಿನ ಬಳಿಗೆ ಒಡಿಸಿಯಸ್ ಮೊದಲಾದವರೊಡನೆ ಕಳುಹಿಸಿಕೊಟ್ಟನು. ಆತನೂ ಕೀರ್ತಿಪ್ರದವಾದ ಯುದ್ಧಕ್ಕೆ ತನ್ನ ಮಗನನ್ನು ಬಹಳ ಸಂತೋಷದಿಂದ ಕಳುಹಿಸಿ ಕೊಟ್ಟನು. ಥೀಟೀಸಳೂ ತನ್ನ ಹಿಂದಿನ ವಾಗ್ದಾನಕ್ಕೆ ಅನುಸಾರವಾಗಿ ಮತ್ತೆ ಯಾವ ಅಡ್ಡಿಯನ್ನೂ ತಂದುಹಾಕದೆ, ಅವನನ್ನು ಯುದ್ಧಕ್ಕೆ ಕಳುಹಿಸಿಕೊಟ್ಟಳು ಅದಕ್ಕೆ ಮುಂಚೆ ಆಕೆಯು ದೇವತೆಗಳ ಕಮ್ಮಾರನಾದ ಹೆಫೆಸ್ಟಸ್ಸಿನಿಂದ ಪೀಲಿಯಸ್ಸಿಗಾಗಿ ಹಿಂದೆ ಮಾಡಿಸಿಕೊಟ್ಟಿದ್ದ ಉಕ್ಕಿನ ಕವಚಶೀರ್ಷಕಾದಿಗಳನ್ನೂ ಒಂದು ದೊಡ್ಡ ಕುಂತಾಯುಧವನ್ನೂ (ಈಟಿಯನ್ನೂ) ತನ್ನ ಮಗನಿಗೆ ತಂದು ಕೊಟ್ಟಳು. ಪೀಲಿಯಸ್ಸನೂ ತನ್ನ ಮಗನ ಸಹಾಯಕ್ಕಾಗಿ ಸುಸನ್ನದ್ಧವಾಗಿದ್ದ ಒಂದು ಸೈನ್ಯವನ್ನೂ ಅವನಿಗೆ ಸಮಯೋಚಿತವಾದ ಬುದ್ಧಿವಾದವನ್ನು ಹೇಳುವುದಕ್ಕಾಗಿ ಫೀನಿಕ್ಸೆಂಬ ವೃದ್ಧನೊಬ್ಬನನ್ನೂ ಏಕಿಲೀಸನ ಪರಮಮಿತ್ರನಾದ ಪೆಟ್ರೋಕ್ಲಸ್ಸೆಂಬ ಶೂರ ರಾಜಪುತ್ರನನ್ನೂ ಐವತ್ತು ಹಡಗುಗಳನ್ನೂ ಕಳುಹಿಸಿ ಕೊಟ್ಟನು. ಏಕಿಲೀಸನು ಗ್ರೀಕರಲ್ಲೆಲ್ಲಾ ಬಹು ಶೂರನೂ ಪರಾಕ್ರಮಿಯೂ ಆಗಿದ್ದುದರಿಂದ, ಅವನು ಬಂದುದು ಗ್ರೀಕರಿಗೆ ದೊಡ್ಡ ಲಾಭವಾದಂತಾಯಿತು.

೧೮. ಒಡಿಸಿಯಸ್, ಏಕಿಲೀಸ್, ಪೆಟ್ರೋಕ್ಲಸ್, ನೆಸ್ಟಾರ್, ಪಾಲಮೇಡೀಸ್ ಇವರುಗಳು ಮಾತ್ರವಲ್ಲದೆ, ಗ್ರೀಕರಲ್ಲಿ ಬಹು ಪ್ರಸಿದ್ಧರಾದ ಅನೇಕ ಮಂದಿ ಇತರ ಶೂರರುಗಳಿದ್ದರು. ಅವರುಗಳಲ್ಲಿ ಅತ್ಯಂತಕೀರ್ತಿಯುಕ್ತನಾಗಿದ್ದವನು ಮೈಕೆನಿಯ ರಾಜನಾದ ಅಗಮೆಮ್ನಾನನು. ಅವನು ಟ್ರೋಜನ್ ದಂಡಯಾತ್ರೆಗಾಗಿ, ಒಂದೊಂದರಲ್ಲಿ ಎಂಬತ್ತುಜನ ಯೋಧರು ಕುಳಿತುಕೊಳ್ಳಬಹುದಾಗಿದ್ದ ಒಂದುನೂರು ಹಡಗುಗಳನ್ನು ಸಿದ್ಧಪಡಿಸಿಕೊಂಡುದಲ್ಲದೆ, ತನ್ನ ನೆರೆಯ ರಾಜ್ಯಕ್ಕೂ ಅರುವತ್ತು ಹಡಗುಗಳನ್ನು ಒದಗಿಸಿಕೊಟ್ಟನು. ಮೆನೆಲಾಸನು ಅರುವತ್ತು ಹಡಗುಗಳ ತುಂಬ ಸೈನ್ಯವನ್ನು ಸಿದ್ಧಪಡಿಸಿಕೊಂಡನು. ಗ್ರೀಸಿನ ಪೂರ್ವತೀರದಲ್ಲಿದ್ದ ಸೆಲಾಮಿಸ್ ಎಂಬ ಒಂದು ಸಣ್ಣ ದ್ವೀಪದಲ್ಲಿ ರಾಜನಾಗಿದ್ದ

ಏಯಾಸ್ ಎಂಬವನು ಬಹಳ ಗಟ್ಟಿಗನು. ಏಕಿಲೀಸನ್ನು ಬಿಟ್ಟರೆ ಈ ಏಯಾಸನೇ ಗ್ರೀಕರಲ್ಲೆಲ್ಲಾ ಬಹಳ ಬಲಿಷ್ಠನು. ಅವನೇ ಗ್ರೀಕರುಗಳಲ್ಲೆಲ್ಲಾ ಅತ್ಯಂತ ಎತ್ತರವಾಗಿದ್ದವನು. ಏಯಾಸನು ಹನ್ನೆರಡು ಹಡಗುಗಳನ್ನು ಸಿದ್ಧಪಡಿಸಿಕೊಂಡನು. ಆರ್ಗಾಸ್ ಎಂಬ ಮತ್ತೊಂದು ಸಂಸ್ಥಾನಕ್ಕೆ ಡೈಯೊಮಿಡೀಸ್ ಎಂಬವನು ದೊರೆಯಾಗಿದ್ದನು ಮೆನೆಲಾಸಿಗೆ ಒದಗಿದ್ದ ಅವಮಾನದ ವೃತ್ತಾಂತವನ್ನು ಕೇಳಿದಕೂಡಲೆ, ಡೈಯೊಮಿಡೀಸನು ಎಂಬತ್ತು ಹಡಗುಗಳ ತುಂಬ ಸೈನ್ಯವನ್ನು ತೆಗೆದುಕೊಂಡು ಯುದ್ಧಕ್ಕೆ ಅಣಿಯಾದನು. ರಣರಂಗದಲ್ಲಿ ಇವನ ಆರ್ಭಟವು ಉಳಿದವರ ಗರ್ಜನೆಗಳಿಗಿಂತಲೂ ಬಹಳ ಗಟ್ಟಿಯಾಗಿ ಕೇಳುತ್ತಿದ್ದಿತು. ಇವನಿಗೂ ಒಡಿಸಿಯುಸ್ಸಿಗೂ ಬಲು ಸ್ನೇಹವಿದ್ದಿತು. ಗ್ರೀಸಿನ ದಕ್ಷಿಣಭಾಗದಲ್ಲಿ ಕ್ರೀಟ್ ಎಂಬ ದೊಡ್ಡ ದ್ವೀಪವು ಇರುವುದು ಅಲ್ಲಿ ಈಗ್ಗೆ ಅನೇಕ ಶತಮಾನಗಳಿಗೆ ಹಿಂದಿನಿಂದಲೂ ನಾಗರಕತೆಯು ಪ್ರಬಲವಾಗಿದ್ದಿತು. ಅದರ ಕುರುಹುಗಳು ಈಗಲೂ ಬೇಕಾದಷ್ಟು ಅಲ್ಲಿ ಕಂಡುಬರುವುವು. ಆ ದ್ವೀಪದಲ್ಲಿ ಟ್ರಾಯ್‌ಯುದ್ಧಪ್ರಸಕ್ತಿಗೆ ಮುಂಚೆಯೇ ಒಂದುನೂರು ಪಟ್ಟಣಗಳು ಬಹಳ ಅಭಿವೃದ್ಧಿಸ್ಥಿತಿಯಲ್ಲಿದ್ದುವಂತೆ! ಅಲ್ಲಿ ಐಡೊಮಿನಿಯಸ್ ಎಂಬ ದೊರೆಯು ಕ್ನೋಸಸ್ ಎಂಬ ರಾಜಧಾನಿಯಲ್ಲಿ ಬಹು ವೈಭವದಿಂದ ರಾಜ್ಯಭಾರವನ್ನು ಮಾಡುತ್ತಿದ್ದನು. ಆತನು ಎಂಬತ್ತು ಹಡಗುಗಳನ್ನು ತೆಗೆದುಕೊಂಡು ಟ್ರೋಜನ್ ಯುದ್ಧಕ್ಕೆ ಹೊರಟನು. ಹೀಗೆ ಅನೇಕ ಸಂಸ್ಥಾನಗಳಿಂದ ಒಟ್ಟು ಸುಮಾರು ಒಂದು ಸಾವಿರದ ಇನ್ನೂರು ಹಡಗುಗಳು ಜೊತೆಯಾದುವು. ಸೈನಿಕರೂ ಒಟ್ಟು ಸುಮಾರು ಒಂದು ಲಕ್ಷದಷ್ಟು ಸೇರಿದ್ದರು. ಇಷ್ಟು ದೊಡ್ಡ ಸೈನ್ಯವು ಗ್ರೀಸಿನಲ್ಲಿ ಯಾವಾಗಲೂ ಕೂಡಿರಲಿಲ್ಲ.

## III.

೧೯. ಇಷ್ಟೊಂದು ಸೈನ್ಯವೂ ಅದಕ್ಕೆ ಬೇಕಾದ ಆಹಾರಸಾಮಗ್ರಿಗಳೂ ಬಗೆಬಗೆಯ ಶಸ್ತ್ರಗಳೂ ಸೈನ್ಯಗಳನ್ನು ಸಾಗಿಸುವುದಕ್ಕೆ ಹಡಗುಗಳೂ—ಇವೆಲ್ಲವೂ ಸಿದ್ಧವಾಗುವುದಕ್ಕೆ ಎಂಟೊಂಬತ್ತು ವರ್ಷಗಳಷ್ಟು ದೀರ್ಘಕಾಲವು ಹಿಡಿಯಿತು. ಶುಭಶಕುನಗಳನ್ನು ನೋಡಿಕೊಂಡು ಈ ಅಪಾರವಾದ ಸೇನೆಯು ಆಲಿಸ್ ಎಂಬ ರೇವುಪಟ್ಟಣದಿಂದ ಜಲಪ್ರಯಾಣವನ್ನು ಮೊದಲುಮಾಡಿತು ಆದರೆ ನಾವಿಕರು ಭ್ರಾಂತಿವಶದಿಂದ ಟ್ರೋಡ್‌ರಾಜ್ಯದ ದಿಕ್ಕಿಗೆ ಹೋಗುವುದಕ್ಕೆ ಬದಲು ಮತ್ತೆ

ಯಾವುದೋ ದಿಕ್ಕಿನಲ್ಲಿ ಪ್ರಯಾಣಮಾಡುತ್ತಾ ಹೋದರು. ಸ್ವಲ್ಪದಿನಗಳಲ್ಲಿಯೇ ತಪ್ಪು ಗೊತ್ತಾಗಲು, ಅಷ್ಟು ಸೈನ್ಯವೂ ಗ್ರೀಸಿಗೆ ಹಿಂದಿರುಗಿತು. ಪುನಃ ಪ್ರಯಾಣಹೊರಡುವಷ್ಟರಲ್ಲಿ ಮತ್ತಷ್ಟು ಕಾಲವು ಕಳೆದುಹೋಯಿತು. ಈ ಸಲವೂ ಪ್ರಯಾಣವನ್ನೇನೋ ಪುನಃ ಮೊದಲುಮಾಡಿದುದಾದರೂ, ಸ್ವಲ್ಪದೂರ ಹೋಗುವಷ್ಟರೊಳಗಾಗಿ ಬಿರುಗಾಳಿಯೊಂದೆದ್ದು ಹಡಗುಗಳ ಸಮೂಹವು ಚೆದರಿಹೋಯಿತು. ಆದುದರಿಂದ ಯೋಧರು ಬಹು ಪ್ರಯಾಸಪಟ್ಟು ಪುನಃ ತಾವು ಹೊರಟಿದ್ದ ರೇವುಪಟ್ಟಣವಾದ ಆಲಿಸ್ ಎಂಬಲ್ಲಿಗೆ ಹಿಂದಿರುಗಿದರು. ಬಳಿಕ ಅನೇಕ ತಿಂಗಳುಗಳ ವರೆಗೂ ಅನುಕೂಲಮಾರುತಗಳು ಬೀಸಲೇ ಇಲ್ಲ. ಹುಟ್ಟುಗಳಿಂದಲಾದರೂ ಹಡಗುಗಳನ್ನು ನಡೆಸಿಕೊಂಡು ಹೋಗುವವೆಂದರೆ, ಪ್ರತಿಕೂಲಮಾರುತಗಳು ಆಗಾಗ ಭಯಂಕರವಾಗಿ ಬೀಸುತ್ತಿದ್ದುವು. ಆದುದರಿಂದ ಗ್ರೀಕರೆಲ್ಲರಿಗೂ ಪ್ರಬಲವಾದ ಸಂಶಯವುಂಟಾಗಿ ಯಾವುದಾದರೂ ದೇವತೆಗೆ ಕೋಪವುಂಟಾಗಿರುವುದರಿಂದಲೇ ಹಾಗೆ ಆಗುತ್ತಿರಬಹುದೆಂದು ನಿರ್ಧರಿಸಿ ಡೊಡೋನಾ ಎಂಬಲ್ಲಿಗೆ ಹೇಳಿಕಳುಹಿಸಿ ಅಲ್ಲಿ ಆಗುತ್ತಿದ್ದ ಆಕಾಶವಾಣಿಯ ಮೂಲಕ ಪ್ರಶ್ನೆ ಕೇಳಿಸಿದರು. ಅಗಮೆಮ್ನಾನನು, ಚಂದ್ರಮಂಡಲಾಭಿಮಾನದೇವತೆಯಾದ ಆರ್ಟೆಮಿಸ್ಸಿಗೆ ಕೋಪಬರುವಂತೆ ಮಾಡಿದ್ದುದೇ ಗ್ರೀಕರ ಪ್ರಯತ್ನಭಂಗಕ್ಕೆ ಕಾರಣವೆಂದು ಉತ್ತರ ಹೊರಟಿತು. ಆತನು ಒಂದಾನೊಂದು ದಿನ, ಆರ್ಟೆಮಿಸ್ ದೇವತೆಯ ಗುಡಿಯು ಬಳಿಯಲ್ಲಿ ವಾಸಿಸುತ್ತಿದ್ದ, ಆ ದೇವತೆಯ ಪ್ರೀತಿಗೆ ಪಾತ್ರವಾದ ಒಂದು ಜಿಂಕೆಯನ್ನು ಕೊಂದುಬಿಟ್ಟಿದ್ದನಂತೆ! ಈ ದೋಷ ಪರಿಹಾರಾರ್ಥವಾಗಿ ಅಗಮೆಮ್ನಾನನು ತನ್ನ ಮಗಳಾದ ಇಫಿಜೀನಿಯಳನು ಬಲಿಕೊಟ್ಟರೆ, ಆ ದೇವತೆಗೆ ಕೋಪಶಾಂತಿಯುಂಟಾಗುತ್ತದೇದು ಪ್ರಶ್ನೆಯಿಂದ ತಿಳಿದುಬಂದಿತು. ತನಗೆ ಎಷ್ಟೇ ಮನಸ್ಸಿಲ್ಲದಿದ್ದರೂ, ಅಲ್ಲಿ ಒಟ್ಟುಗೂಡಿದ್ದ ಇತರ ದೊರೆಗಳ ಒತ್ತಾಯದಿಂದ ಅಗಮೆಮ್ನಾನನು ಈ ನಿಷ್ಕರುಣಕಾರ್ಯಕ್ಕೆ ಸಮ್ಮತಿಸಬೇಕಾಯಿತು. ಆದುದರಿಂದ ಇಫಿಜೀನಿಯಳನ್ನು ಏಕಿಲೀಸಿಗೆ ಮದುವೆಮಾಡಿಕೊಡುವುದಕ್ಕೆ ಮುಂಚೆ, ಆತನಿಗೆ ಒಮ್ಮೆ ತೋರಿಸಬೇಕೆಂದು ಅಗಮೆಮ್ನಾನನು ಕ್ಲಿಟಮ್ನೆಸ್ಟ್ರಳಿಗೆ ನೆವವನ್ನು ಹೇಳಿ ಗ್ರೀಕರ ಸೈನ್ಯಕ್ಕೆ ನೈಮಿತ್ತಿಕನೂ ಪುರೋಹಿತನೂ ಆಗಿದ್ದ ಕಾಲ್ಕಾಸ್ ಎಂಬವನ ಕೈಗೆ ಕರೆತಂದು ಒಪ್ಪಿಸಿದನು. ಈ ಹೃದಯದ್ರಾವಕವಾದ ಯಜ್ಞವನ್ನು ನಡೆಯಿಸುವುದಕ್ಕೆ ಕಡೆಗೆಕಡೆ ಗ್ರೀಕರಲ್ಲಿ ಒಬ್ಬರಿಗಾದರೂ ಹರ್ಷವಿರಲಿಲ್ಲ. ಪಶುವಧೆಯು ನಡೆಯುವ

ಹೊತ್ತಿಗೆ ಸರಿಯಾಗಿ, ಆರ್ಟೆಮಿಸ್ ದೇವತೆಗೇ ಕರುಣಹುಟ್ಟಿ ಇಫಿಜೀನಿಯಳನ್ನು ಅದೃಶ್ಯಪಡಿಸಿ ಅವಳಿಗೆ ಪ್ರತಿಯಾಗಿ ಒಂದು ಬಿಳಿಯ ಆಡು ಬಲಿ ಪೀಠದಮೇಲೆ ಕಾಣಿಸಿಕೊಳ್ಳುವಂತೆ ಏರ್ಪಡಿಸಿದಳು. ಅದನ್ನು ಯಥಾವಿಧಿಯಾಗಿ ದೇವತೆಗೆ ಅರ್ಪಿಸಿ ಯಜ್ಞಶೇಷವನ್ನು ರಾಜರುಗಳು ಪರಿಗ್ರಹಿಸುವಷ್ಟರೊಳಗಾಗಿ ಅನುಕೂಲ ಮಾರುತಗಳು ಬೀಸಲಾರಂಭಿಸಿದುವು. ಸಮುದ್ರತೀರದಲ್ಲಿ ಅಲೆಗಳು ಕೆಂಬಣ್ಣವಾಗಿ ಕಾಣಿಸಿಕೊಂಡುವು. ಹೀಗೆ ಕಂಡುಬಂದರೆ ಶುಭವಾಗುವುದೆಂದು ಗ್ರೀಕರಲ್ಲಿ ನಂಬಿಕೆಯಿದ್ದಿತು. ಆದುದರಿಂದ ಅವರು ಆ ಶುಭಸೂಚನೆಯಿಂದ ಹರ್ಷಿತರಾಗಿ ಪಯಣಹೊರಟರು. ಈ ಸಾರಿ ಪ್ರಯಾಣವು ಸುಸೂತ್ರವಾಗಿ ನಡೆಯಿತು. ಕೆಲವುದಿವಸಗಳೊಳಗಾಗಿ ಗ್ರೀಕರ ಹಡಗುಗಳೆಲ್ಲವೂ ಟ್ರೋಡಿಸ ಸಮೀಪದಲ್ಲಿದ್ದ ಟೆನಿಡಾಸ್ ದ್ವೀಪವನ್ನು ಹಾದು ಟ್ರಾಯ್ ಪಟ್ಟಣದ ಸಮುದ್ರತೀರಕ್ಕೆ ಬಂದುವು. ಹೆಲೆನಳನ್ನು ಗ್ರೀಸಿನಿಂದ ಅಪಹರಿಸಿಕೊಂಡು ಬಂದುದಕ್ಕೂ ಗ್ರೀಕರು ಟ್ರಾಯ್ ಪಟ್ಟಣದ ಸಮುದ್ರತೀರಕ್ಕೆ ಬರುವುದಕ್ಕೂ ಮಧ್ಯದಲ್ಲಿ ಒಂಬತ್ತು ವರ್ಷಗಳಷ್ಟು ಕಾಲವು ಕಳೆದುಹೋಗಿ ಹತ್ತನೆಯವರ್ಷವೂ ಮುಗಿಯುವುದರಲ್ಲಿದ್ದಿತು.

---

## III.

೨೦. ಈ ನಡುವೆ ಗ್ರೀಕರ ಸನ್ನಾಹಗಳೆಲ್ಲವೂ ಟ್ರೋಜನರಿಗೆ ತಿಳಿದಿದ್ದುದರಿಂದ, ಅವರೂ ಯುದ್ಧಕ್ಕೆ ತಕ್ಕ ಸನ್ನಾಹಗಳನ್ನು ಮಾಡಿಕೊಳ್ಳುತ್ತಲೇ ಇದ್ದರು. ಅವರಿಗೂ ಸಹಾಯಮಾಡುವುದಕ್ಕಾಗಿ ಅವರ ಮಿತ್ರರಾಜರನೇಕರು ತಮ್ಮತಮ್ಮ ಸೈನ್ಯಗಳನ್ನು ತೆಗೆದುಕೊಂಡು ಬಂದು ಟ್ರಾಯ್‌ಪಟ್ಟಣದ ಒಳಗಡೆ ಬೀಡನ್ನು ಬಿಟ್ಟುಕೊಂಡಿದ್ದರು. ಫ್ರಿಜಿಯಾ, ಲಿಸಿಯಾ, ಕೇರಿಯಾ, ಮಿಸಿಯಾ, ಥ್ರೇಸಿಯಾ ಮುಂತಾದ ಸಂಸ್ಥಾನಗಳಿಂದ ಅನೇಕ ಕುಲಗಳ ಜನರು ಬಂದಿದ್ದುದರಿಂದ, ಟ್ರೋಜನರ ಪಕ್ಷದಲ್ಲಿ ಒಂದೇಬಗೆಯಾದ ಭಾಷೆಯಾಗಲೀ ವೇಷವಾಗಲೀ ಕಂಡುಬರುತ್ತಿರಲಿಲ್ಲ. ಟ್ರೋಜನರ ದಳಪತಿಯು ಹೆಕ್ಟರನೇ. ಅವರ ಪಕ್ಷದಲ್ಲಿ ಪ್ಯಾರಿಸ್, ಡೆಯಿಫೋಬಸ್ ಎಂಬ ರಾಜಪುತ್ರರೂ, ಸಾರ್ಪೀಡನ್, ಗ್ಲಾಕಸ್, ಪ್ಯಾಂಡಾರಸ್ ಮೊದಲಾದ ಸಾಮಂತರಾಜರೂ ಬಹಳ ಪ್ರಸಿದ್ಧರು. ಧನುರ್ವಿದ್ಯೆಯಲ್ಲಿ ಪ್ಯಾರಿಸ್ಸನು ಬಹಳ ಪ್ರವೀಣನು. ಐಡಾಪರ್ವತಪ್ರಾಂತದಲ್ಲಿ ವಾಸಿಸುತ್ತಿದ್ದ ಪ್ಯಾಂಡಾರಸ್ ಎಂಬವನೂ ಪ್ರಸಿದ್ಧನಾದ ಮತ್ತೊಬ್ಬ ಧನ್ವಿಯಾಗಿದ್ದನು. ಟ್ರೋಜನರಕಡೆ ಈನಿಯಾಸ್ ಎಂಬ ಮತ್ತೊಬ್ಬ

ಶೂರನಿದ್ದನು. ಏಕಿಲೀಸಿನಹಾಗೆಯೇ ಈನಿಯಾಸನೂ ಒಬ್ಬ ದೇವತೆಯ ಮಗನು. ಈತನ ತಾಯಿಯು ಆಫ್ರೊಡೈಟಿಯೇ. ಅವನು ಬಹಳ ಶೂರನಾಗಿದ್ದುದೂ ಅಲ್ಲದೆ, ಪಿತೃಭಕ್ತನಾಗಿದ್ದನು. *

೨೧. ಗ್ರೀಕರು ಟ್ರೋಜನ್ ಸಮುದ್ರತೀರವನ್ನು ಕಂಡಕೂಡಲೆ, ಅವರಲ್ಲಿ ಮೊದಲು ಯಾರು ಸಮುದ್ರತೀರದಮೇಲೆ ಕಾಲಿಡಬೇಕೆಂಬವಿಷಯವಾಗಿ, ಅನೇಕರಾಜಪುತ್ರರುಗಳಲ್ಲಿ ಸ್ಪರ್ಧೆಯುಂಟಾಯಿತು. ಟ್ರಾಯ್ ಪಟ್ಟಣದ ಒಳಿಯಲ್ಲಿ ಮೊದಲು ಕಾಲಿಟ್ಟ ಗ್ರೀಕನು ಮೃತ್ಯುವಶನಾಗುವನೆಂದು ಹಿಂದೆಯೇ ಭವಿಷ್ಯದ್ವಾದವು ಹುಟ್ಟಿದ್ದರೂ, ಅಷ್ಟೊಂದು ಸ್ಪರ್ಧೆಯುಂಟಾಗಿದ್ದುದು ಆಶ್ಚರ್ಯವೆಂದು ಕೆಲವರಿಗೆ ತೋರಬಹುದು. ಆದರೆ ಕೀರ್ತಿಕಾಮುರಾದವರಿಗೆ ಹೀಗೆ ಸ್ಪರ್ಧೆಯುಂಟಾಗುವುದು ಸಹಜವೇ! ಹಡಗುಗಳ ಅಷ್ಟು ದೊಡ್ಡ ಸೈನ್ಯವು ಗಮ್ಯಸ್ಥಾನಕ್ಕೆ ಸೇರುವ ಸಮಯದಲ್ಲಿ ಎಷ್ಟೋ ಗದ್ದಲವುಂಟಾಗುವುದು ಸ್ವಾಭಾವಿಕವೇ ಅಲ್ಲವೆ? ಅಂತಹ ಸ್ಪರ್ಧೆಯೊಂದುಂಟಾಗಿದ್ದಾಗ ಮತ್ತೆಷ್ಟು ಗದ್ದಲವುಂಟಾಗಿರಬಹುದು! ಗ್ರೀಕ್ ರಾಜರುಗಳಲ್ಲಿ ಪ್ರೊಟಿಸಿಲಾಸ್ ಎಂಬವನು ಮೊತ್ತಮೊದಲು ಸಮುದ್ರತೀರದಲ್ಲಿ ಕಾಲಿಟ್ಟನು. ಹಿಂದೆ ಹುಟ್ಟಿದ್ದ ಭವಿಷ್ಯಕ್ಕನುಗುಣವಾಗಿ, ಅವನಿಗೆ ಹೆಕ್ಟರನು ಬಿಟ್ಟ ಒಂದು ಬಾಣವು ಬಂದು ತಗುಲಿ ಅವನು ಮೃತ್ಯುವಶನಾದನು † ಇದನ್ನು ನೋಡುತ್ತಿದ್ದ ಟ್ರೋಜನರು, ಮೊತ್ತಮೊದಲು

---

* ಟ್ರಾಯ್ ಯುದ್ಧವು ಮುಗಿದ ಬಳಿಕ ಈನಿಯಾಸನು ರಾಜ್ಯವನ್ನು ಬಿಟ್ಟು ಹೊರಟು ಹೋಗಬೇಕಾಗಿ ಬಂದಾಗ, ತನ್ನ ಮುದುಕತಂದೆಯನ್ನೂ ಹೆಗಲಮೇಲೆ ಕುಳ್ಳಿರಿಸಿಕೊಂಡು ನೂರಾರು ಗಾವುದಗಳ ದೂರ ಭೂಪ್ರಯಾಣವನ್ನೂ ಜಲಪ್ರಯಾಣವನ್ನೂ ಮಾಡಿದ ಬಹು ಸ್ವಾರಸ್ಯವಾದ ವೃತ್ತಾಂತವನ್ನು ರೋಮನರ ಕವಿಗಳಲ್ಲಿ ಪ್ರಸಿದ್ಧನಾದ ವರ್ಜಿಲ್ ಎಂಬವನು ಈನಿಯಡ್ ಎಂಬ ಕಾವ್ಯದಲ್ಲಿ ವರ್ಣಿಸಿರುವನು.

† ಯುದ್ಧಾನಂತರದಲ್ಲಿ, ತನ್ನ ಪತಿಯಾದ ಪ್ರೊಟಿಸಿಲಾಸನು ಕೀರ್ತಿಯುಕ್ತನಾಗಿ ಹಿಂದಿರುಗುವನೆಂದು ಅತ್ಯಂತಕುತೂಹಲದಿಂದ ಇದಿರುನೋಡುತ್ತಿದ್ದ ಲ್ಯಾವೊಡೇಮಿಯಳಿಗೆ ಅವನ ಮರಣದ ಸುದ್ದಿಯು ತಿಳಿದಾಗ ಉಂಟಾದ ದುಃಖವನ್ನು ವರ್ಣಿಸತೀರದು. ಆ ಪತಿವ್ರತೆಯ ಶೋಕವನ್ನು ಕಂಡು ದೇವತೆಗಳಿಗೂ ಸಹ ಬಹಳ ಮರುಕವುಂಟಾಗಿ, ಅವಳ ಪ್ರಾರ್ಥನೆಯಮೇರೆಗೆ ಮೃತ್ಯುದೇವನು ಮೂರುಗಂಟೆಗಳವರೆಗೆ ಮಾತ್ರ ಪ್ರೊಟಿಸಿಲಾಸನನ್ನು ಭೂಲೋಕಕ್ಕೆ ಕಳುಹಿಸಿಕೊಟ್ಟನು. ಕ್ಲುಪ್ತಸಮಯವು ಕಳೆದಬಳಿಕ ಅವನಿಗೆ ಪುನಃ ಮರಣವುಂಟಾಗಲು, ಕೂಡಲೆ ಲ್ಯಾವೊಡೇಮಿಯಳ ಪ್ರಾಣವೂ ಹಾರಿಹೋಯಿತಂತೆ!

ಕಾಲಿಟ್ಟಕೂಡಲೇ ಒಬ್ಬ ಶತ್ರು ಹತನಾದುದು ಬಹಳ ಒಳ್ಳೆಯ ಶಕುನವೆಂದು ಹಿಗ್ಗಿಹೋದರು. ಗ್ರೀಕರ ದೊಡ್ಡಸೈನ್ಯವನ್ನು ಕಂಡರೂ ಅವರು ಟ್ರಾಯ್ ಪಟ್ಟಣದ ಕೋಟೆಯು ದುರ್ಭೇದ್ಯವಾದುದೆಂದು ನಂಬಿಕೊಂಡು ಸ್ವಲ್ಪವಾದರೂ ಹೆದರಲೇ ಇಲ್ಲ. ಗ್ರೀಕರ ಸೈನ್ಯವನ್ನು ತಡೆಯುವುದಕ್ಕೂ ಅವರು ಪ್ರಯತ್ನಿಸಲಿಲ್ಲ. ಆದ.ದರಿಂದ ಗ್ರೀಕರು ಟ್ರಾಯ್ ಪಟ್ಟಣದ ಹೊರವಳಯ.ದಲ್ಲಿ ನಿರಾತಂಕವಾಗಿ ತಮ್ಮ ಪಾಳೆಯವನ್ನು ಬಿಟ್ಟುಕೊಂಡರು.

೨೨. ಹೀಗೆ ಕೆಲವು ವಾರಗಳು ಕಳೆದಬಳಿಕ, ಗ್ರೀಕರು ತಮ್ಮ ಸುತ್ತುಮುತ್ತಲೂ ಇದ್ದ ಕೆಲವು ಪಟ್ಟಣಗಳಮೇಲೆ ಬಿದ್ದು ಕೊಳ್ಳೆಹೊಡೆಯಲಾರಂಭಿಸಿದುದೂ ಅಲ್ಲದೆ ಅಲ್ಲಲ್ಲಿ ಸ್ವಲ್ಪ ಭೂಭಾಗಗಳನ್ನು ಆಕ್ರಮಿಸಿಕೊಂಡು ತಮ್ಮ ಆಹಾರಕ್ಕಾಗಿ ಬೇಕಾಗಿದ್ದ ಧಾನ್ಯಾದಿಗಳನ್ನು ಬೆಳೆದುಕೊಳ್ಳುವುದಕ್ಕೂ ದನಕರುಗಳನ್ನು ಮೇಯಿಸುವುದಕ್ಕೂ ಉಪಯೋಗಿಸಿಕೊಳ್ಳತೊಡಗಿದರು. ಅದೇ ಸಮಯದಲ್ಲೇ, ಅವರು ತಾವು ನೆಲೆಸಿದ್ದಕಡೆಯಿಂದ ಶತ್ರುಗಳು ಮೇಲೆಬೀಳದಂತೆ ಜಾಗರೂಕರಾಗಿ ನೋಡಿಕೊಳ್ಳುತ್ತಿದ್ದರು ಟ್ರೋಜನರೂ ಪಟ್ಟಣಕ್ಕೆ ಪೂರ್ವದಿಕ್ಕಿನಲ್ಲಿದ್ದ ಬಾಗಿಲುಗಳಿಂದ ಹೊರಕ್ಕೆ ಹೋಗಿಬರುತ್ತಲೇ ಇದ್ದರು. ಹೀಗೆ ಅನೇಕ ವರುಷಗಳು ನಡೆದುಕೊಂಡುಬಂದಿತು. ಈ ಮುತ್ತಿಗೆಯ ಕಾಲದಲ್ಲಿ ಗ್ರೀಕರ ವಿಹಾರಾರ್ಥವಾಗಿ ಪಾಲಮೇಡೀಸನು ಚತುರಂಗದ ಆಟವೇ ಮೊದಲಾದ ಕೆಲವು ವಿನೋದಗಳನ್ನು ಕಲ್ಪಿಸಿದನೆಂದು ಹೇಳುವರು. ಒಂದಾನೊಂದು ಸಮಯದಲ್ಲಿ ಪಾಲಮೇಡೀಸನು ಒಡಿಸಿಯಸ್ಸನೇ ಮೊದಲಾದ ಕೆಲವರೊಡನೆ ಟ್ರಾಯ್‌ಪಟ್ಟಣದ ಸಮೀಪದಲ್ಲಿ ಹರಿಯುತ್ತಿದ್ದ ಒಂದು ನದಿಯಲ್ಲಿ ಮೀನು ಹಿಡಿಯುತ್ತಿದ್ದಾಗ ನೀರೊಳಗೆ ಮುಳುಗಿ ಸತ್ತುಹೋದನೆಂದು ಕೆಲವರು ಹೇಳುವರು.

---

## IV.

೨೩. ಗ್ರೀಕರು ತಮ್ಮ ನೆರೆಹೊರೆಯಲ್ಲಿದ್ದ ಪಟ್ಟಣಗಳಮೇಲೆ ಆಗಾಗ ಬಿದ್ದು ತಮ್ಮ ಕೈಗೆ ಸಿಕ್ಕಿಬಿದ್ದ ಬೆಳ್ಳಿಬಂಗಾರಗಳನ್ನೂ ಕಂಚುಮುಟ್ಟುಗಳನ್ನೂ ಸ್ತ್ರೀಬಾಲಕರನ್ನೂ ತಮ್ಮತಮ್ಮಲ್ಲಿ ಹಂಚಿಕೊಳ್ಳುತ್ತಿದ್ದರು. ಹೀಗೆ ಥೀಬ್ಸ್ ಎಂಬ ಒಂದು ಪಟ್ಟಣವನ್ನು ಕೊಳ್ಳೆಹೊಡೆದಾಗ ಸೆರೆಸಿಕ್ಕಿದವರಲ್ಲಿ ಇಬ್ಬರು ಸ್ತ್ರೀಯರಿದ್ದರು. ಅವರುಗಳಲ್ಲಿ ಬ್ರಿಸೇಯಿ.ಸ' ಎಂಬವಳು ಏಕಿಲೀಸಿನ ಪಾಲಿಗೂ, ಕ್ರಿಸೇಯಿಸ' ಎಂಬವಳು ಅಗಮೆಮ್ನಾನಿನ ಪಾಲಿಗೂ ಬಂದಿದ್ದರು. ಕ್ರಿಸೇಯಿಸಳ

ತಂದೆಯು ಅಪೋಲೊದೇವನ ಪೂಜಾರಿಯು. ಈ ಅಪೋಲೊದೇವನು ಬಹಳ ಮಾಹಾತ್ಮ್ಯೆಯುಳ್ಳವನು. ಈ ದೇವನೇ ದನಕರುಗಳ ಏಳಿಗೆಗೆ ಕಾರಣ ಭೂತನೆಂದು ಕೆಲವರೂ, ಭವಿಷ್ಯದ್ವಾದಿಗಳ ಅಭಿಮಾನದೇವನೆಂದು ಇನ್ನು ಕೆಲವರೂ, ಕುಶಲಕಲೆಗಳ ಅಭಿಮಾನದೇವನೆಂದು ಮತ್ತೆ ಕೆಲವರೂ ಭಾವಿಸಿದ್ದರು. ನಗರಪತ್ತನಾದಿಗಳನ್ನು ಸ್ಥಾಪಿಸುವುದರಲ್ಲಿ ಆಸಕ್ತಿಯೂ ಈ ದೇವನಿಗೆ ಇದ್ದಿತೆಂದು ಇನ್ನೂ ಕೆಲವರು ಹೇಳುತ್ತಿದ್ದರು ಮತ್ತೆ ಕೆಲವರಂತೂ ಈ ಅಪೋಲೋವೆ ಸೂರ್ಯಮಂಡಲಾಭಿಮಾನದೇವನೆಂದೂ ರೋಗರುಜಿನಾದಿಗಳಿಗೆ ಆತನೇ ಕಾರಣವೆಂದೂ ತಿಳಿದಿದ್ದರು. ಆರ್ಟೆಮಿಸ್ ಎಂಬ ದೇವತೆಯು ಚಂದ್ರಮಂಡಲಾಭಿಮಾನಿಯೆಂದೂ ಈ ಅಪೋಲೋವಿನ ಸೋದರಿಯೆಂದೂ ಈಕೆಯೂ ಕುಶಲಕಲಾಭಿಮಾನಿಯೆಂದೂ ರೋಗಾದ್ಯುಪದ್ರವಗಳಿಗೆ ಕಾರಣಭೂತಳೆಂದೂ ಗ್ರೀಕರಲ್ಲಿ ನಂಬಿಕೆ ಇದ್ದಿತು. ಕ್ರಿಸೇಯಿಸಳು ಗ್ರೀಕರಿಗೆ ಸೆರೆಸಿಕ್ಕಿದಳೆಂದು ಕೇಳಿದಕೂಡಲೆ ಆಕೆಯ ತಂದೆಯು ಅಮೂಲ್ಯವಾದ ವಸ್ತ್ರಾಭರಣಾದಿಗಳನ್ನು ತೆಗೆದುಕೊಂಡು ಗ್ರೀಕರ ಪಾಳೆಯಕ್ಕೆ ಬಂದು ಅಗಮೆಮ್ನಾನ್, ಮೆನೆಲಾಸ್ ಮುಂತಾದ ರಾಜರುಗಳನ್ನು ಕುರಿತು, ತಾನು ತಂದಿದ್ದ ಪರಿಹಾರದ್ರವ್ಯವನ್ನು ಅಂಗೀಕರಿಸಿ ತನ್ನ ಮಗಳಾದ ಕ್ರಿಸೇಯಿಸಳನ್ನು ಬಿಟ್ಟುಕೊಡಬೇಕೆಂದೂ, ಅದಕ್ಕಾಗಿ ಗ್ರೀಕರಿಗೆ ಅಪೋಲೋದೇವನು ಟ್ರಾಯ್‌ಪಟ್ಟಣವನ್ನು ವಶಪಡಿಸುವನೆಂದೂ ಬಹಳ ವಿನಯದಿಂದ ಪ್ರಾರ್ಥಿಸಿಕೊಂಡನು. ಆದರೆ ಅಗಮೆಮ್ನಾನನು ವೃದ್ಧನಾದ ಆ ಪೂಜಾರಿಯನ್ನು ಗದರಿಸಿಕೊಳ್ಳುತ್ತಾ "ಮುದುಕನೆ! ತೊಲಗಿ ಹೋಗು; ನಾನು ನಿನ್ನ ಮಗಳನ್ನು ಬಿಟ್ಟುಕೊಡುವುದಿಲ್ಲ. ಅವಳು ನನ್ನ ದಾಸಿಯಾಗಿರುವಳು. ನಿನ್ನ ಪ್ರಾಣವನ್ನು ಉಳಿಸಿಕೊಳ್ಳಬೇಕೆಂದಿದ್ದರೆ ಪುನಃ ನಮ್ಮ ಪಾಳೆಯಕ್ಕೆ ಕಾಲುಹಾಕೀಯೆ! ಹೊರಡು!" ಎಂದು ನಿಷ್ಠುರವಾಗಿ ಹೇಳಿ ತರುಬಿಬಿಟ್ಟನು.

೨೪. ತನ್ನ ಮಗಳು ಸೆರೆಸಿಕ್ಕಿದುದರಿಂದ ಅತ್ಯಂತ ವ್ಯಸನಾಕ್ರಾಂತನಾಗಿದ್ದ ಆ ಪೂಜಾರಿಯು, ತನಗೆ ಶತ್ರುಗಳ ಪಾಳೆಯದಲ್ಲಿ ಉಂಟಾದ ಅವಮಾನದಿಂದ ಮತ್ತಷ್ಟು ಶೋಕಿಸುತ್ತಾ ಅಪೋಲೋ ದೇವನ ಗುಡಿಗೆ ಹೋಗಿ ತನ್ನ ಕಷ್ಟಗಳನ್ನು ಕುರಿತು ಆ ದೇವನಿಗೆ ಮೊರೆಯಿಟ್ಟನು. ಅವನ ಪ್ರಾರ್ಥನೆಯನ್ನು ಲಾಲಿಸಿ ಅಪೋಲೋ ದೇವನು ಗ್ರೀಕರ ಪಾಳೆಯದಲ್ಲಿ ರೋಗಗಳನ್ನು ಉಂಟುಮಾಡಿದನು ಮೊದಲು ಪಾಳೆಯದಲ್ಲಿದ್ದ ನಾಯಿಗಳಿಗೂ ಹೇಸರಕತ್ತೆಯೋ

ಮೊದಲಾದ ಪಶುಗಳಿಗೂ ರೋಗವುಂಟಾಗಿ ಅವು ತಂಡತಂಡವಾಗಿ ಸತ್ತು ಹೋಗಲಾರಂಭವಾಯಿತು. ಕೂಡಲೆ ಮನುಷ್ಯರಲ್ಲೂ ಬಗೆಬಗೆಯ ರೋಗಗಳು ಕಾಣಿಸಿಕೊಂಡು, ಹೆಣಗಳು ಉದಿರಿಹೋಗತೊಡಗಿದುವು. ಸತ್ತವರನ್ನು ದಹನ ಮಾಡುವುದಕ್ಕೂ ವ್ಯವಧಾನವಿಲ್ಲದಂತಾಯಿತು. ಒಂಬತ್ತು ದಿನಗಳವರೆಗೂ ಗ್ರೀಕರ ಪಾಳೆಯದಲ್ಲಿ ಎತ್ತನೋಡಿದರೂ ಚಿತಾಗ್ನಿಗಳು ಎಡೆಬಿಡದೆ ಪ್ರಜ್ವಲಿಸು ತ್ತಿದ್ದುವು. ಹೀಗೆ ತಮಗೆ ಉಂಟಾದ ವಿಪತ್ತನ್ನು ಕಂಡು ಆಲೋಚನಾಪರರಾದ ಕೆಲವರು ಗ್ರೀಕ್ ಯೋಧಾಗ್ರೇಸರರುಗಳಿಗೆ, ಅಪೋಲೋದೇವನ ಪ್ರಭಾವ ದಿಂದಲೇ ಹಾಗಾಗಿರಬಹುದೆಂದು ಸಂಶಯ ಉಂಟಾಗಿದ್ದಿತು ಇಂತಹ ಸಂಶಯಾ ವಿಷ್ಟರಲ್ಲಿ ಏಕಿಲೀಸನು ಪ್ರಮುಖನು. ಹತ್ತನೆಯ ದಿನ ಆತನು ಗ್ರೀಕರ ಒಂದು ಮಹಾಸಭೆಯನ್ನು ಸೇರಿಸಿ, ಪಾಳೆಯದ ಭವಿಷ್ಯದ್ವಾದಿಯಾಗಿದ್ದ ಕಾಲ್ಕಾಸನನ್ನು ಕುರಿತು ತಮ್ಮ ಪಾಳೆಯಕ್ಕೆ ಉಂಟಾಗಿದ್ದ ಘೋರಾಪತ್ತಿಗೆ ಕಾರಣವೇನಾಗಿರ ಬಹುದೆಂದು ಕೇಳಿದನು. ಆ ಭವಿಷ್ಯದ್ವಾದಿಯು ಹಿಂದೆಮುಂದೆ ನೋಡುತ್ತಾ ವಾಸ್ತವಾಂಶವನ್ನು ತಿಳಿಸಿದರೆ, ಅಲ್ಲಿದ್ದ ಕೆಲವರಿಗೆ ಕೋಪವು ಬಂದು ತನಗೆ ಏನಾದರೂ ಹಾನಿ ಸಂಭವಿಸುವುದೆಂದು ತಡವರಿಸುತ್ತಾ ತನ್ನ ಭಯವನ್ನು ಏಕಿಲೀಸಿಗೆ ತಿಳಿಸಿದನು. ಆಗ ಆತನು ತಾನು ಬದುಕಿರುವವರೆಗೂ ಯಾರಿಂ ದಲೂ ಭವಿಷ್ಯದ್ವಾದಿಗೆ ಬಾಧೆಯುಂಟಾಗದಂತೆ ತಾನು ನೋಡಿಕೊಳ್ಳು ವುದಾಗಿ ಅಭಯವನ್ನು ಕೊಟ್ಟುದರಿಂದ ಕಾಲ್ಕಾಸನು ಸಭೆಯನ್ನು ಕುರಿತು— "ಅಪೋಲೋದೇವನ ಪೂಜಾರಿಯ ಪ್ರಾರ್ಥನೆಯನ್ನು ಅಗಮೆಮ್ನಾನನು ನಿರಾ ಕರಿಸಿ ಆತನನ್ನು ಅವಮಾನಪಡಿಸಿದುದೇ ನಮ್ಮ ಈ ವಿಪತ್ತಿಗೆ ಕಾರಣ" ವೆಂದು ತಿಳಿಸಿದನು.

೨೫. ಈ ಮಾತುಗಳು ಕಿವಿಗೆ ಬಿದ್ದಕೂಡಲೆ, ಅಗಮೆಮ್ನಾನನಿಗೆ ಕೋಪವು ಪ್ರಜ್ವಲಿಸಿತು. ಅವನು ಭವಿಷ್ಯದ್ವಾದಿಯನ್ನು ದುರದುರನೆ ನೋಡುತ್ತಾ "ಎಲೈ ಅಶುಭವಾದಿಯಾದ ಪ್ರವಾದಿಯೇ! ನೀನು ಒಂದು ಸಲವಾದರೂ ನನ್ನ ವಿಷಯದಲ್ಲಿ ಶುಭವನ್ನು ಹೇಳಿಯೇ ಇರುವದಿಲ್ಲ; ಹಿಂದಿ ನಂತೆಯೇ ನನ್ನ ವಿಷಯದಲ್ಲಿ ಈಗಲೂ ಅಶುಭವನ್ನೇ ಒಗುಳಿರುವೆ. ಕ್ರಿಸೇ ಯಿಸಳನ್ನು ಬಿಟ್ಟುಕೊಡದಿದ್ದುದರಿಂದಲೇ ಹೀಗೆ ಆಗಿರುವುದೆಂದು ನೀನು ಹೇಳಿದರೆ, ನಂಬಿಬಿಡತಕ್ಕವನು ನಾನೇ? ಕ್ರಿಸೇಯಿಸಳು ಸಾಮಾನ್ಯಸ್ತ್ರೀಯೆ? ಅಂತಹವಳನ್ನು ಬಿಟ್ಟುಬಿಡಬೇಕೆಂದು ಈ ಮಹಾಸಭೆಯವರು ಇಷ್ಟಪಡುವು

ದಾದರೆ, ಹಾಗೂ ಆಗಲಿ! ಆದರೆ ದಳಪತಿಯಾದ ನಾನೊಬ್ಬನೇ ನಷ್ಟಮಾಡಿಕೊಳ್ಳಬೇಕೆ? ನನ್ನ ನಷ್ಟಕ್ಕೆ ಪ್ರತಿಫಲವಾಗಿ ಈ ನಮ್ಮ ಪಾಳೆಯದಲ್ಲಿ ಮತ್ತೊಬ್ಬರಿಗೆ ಲಭಿಸಿರುವ ಸ್ತ್ರೀಯನ್ನು ನನಗೆ ಬಿಟ್ಟುಕೊಡಲಿ'' ಎಂದು ಹೇಳಿದನು. ತನ್ನನ್ನೇ ಕುರಿತು ಹೇಳಿದ್ದ ದಳಪತಿಯ ಈ ಮಾತನ್ನು ಕೇಳಿ ಏಕಿಲೀಸನು ಎದ್ದು ನಿಂತು ,, ದಳಪತಿಯೇ, ನೀನು ದುರಾಶಾಪರನಾಗಿರುವೆ! ನಿನ್ನ ಪಾಲಿಗೆ ಬಂದಿರುವುದನ್ನು ದೈವೇಚ್ಛೆಯಿಂದ ನೀನು ಕಳೆದುಕೊಳ್ಳಬೇಕಾಗಿರುವಾಗ, ಇದಕ್ಕಾಗಿ ನಾನೂ ನನ್ನ ಪಾಲನ್ನು ಕಳೆದುಕೊಳ್ಳಬೇಕೆಂಬುದು ಯಾವ ನ್ಯಾಯ? ಈ ಮಹಾಸಭೆಯವರ ಅನುಮತಿಯಿಂದಲೇ ನನಗೆ ಬಂದಿರುವ ಪಾಲನ್ನು ನೀನು ಅಪಹರಿಸಬೇಕೆಂದಿರುವುದು ಬಹಳ ತಪ್ಪಾದ ಮಾರ್ಗವಾಗಿರುವುದು. ದೈವೇಚ್ಛೆಯಂತೆ ನೀನು ನಡೆದುಕೊಂಡ ಪಕ್ಷದಲ್ಲಿ ನಿನ್ನ ನಷ್ಟದ ಎಷ್ಟೋ ಪಾಲು ಪ್ರಯೋಜನವು ನಿನಗೆ ಲಭಿಸುವುದು. ಟ್ರಾಯ್ ಪಟ್ಟಣವೇ ಹಸ್ತಗತವಾಗುವುದು'' ಎಂದು ಏಕಿಲೀಸನು ಹೇಳಿದನು. ಈ ಮಾತುಗಳನ್ನು ಕೇಳಿ ಅಗಮೆಮ್ನಾನನು ತನ್ನ ಪ್ರತ್ಯರ್ಥಿಯನ್ನು ಕುರಿತು—,, ಓಹೋ ಮಹನೀಯನೆ! ಸ್ವಲ್ಪ ತಾಳು. ಓಡುವುದರಲ್ಲಿ ನಮ್ಮೆಲ್ಲರನ್ನೂ ಮೀರಿಸುವ ಶಕ್ತಿಯು ನಿನಗಿರುವುದರಿಂದ ಕುಯುಕ್ತಿಯಲ್ಲೂ ನಮ್ಮನ್ನು ಮೀರಿಸುವೆನೆಂದು ಭಾವಿಸುವೆಯೇನು? ನೀನು ಎಷ್ಟೇ ಹೇಳಿದರೂ, ನಿನ್ನ ಪಾಲನ್ನು ನೀನು ಉಳಿಸಿಕೊಂಡು ನಾನು ಮಾತ್ರ ನನ್ನ ಪಾಲನ್ನು ಕಳೆದುಕೊಂಡುಬಿಡುವಂತೆ ನೀನು ಮಾಡಲಾರೆ. ಈ ಸದಸ್ಯರು ಇಷ್ಟಪಡುವುದರಿಂದ, ನಾನೇನೋ ನನ್ನ ಪಾಲಿನ ಕ್ರಿಸೇಯಿಸಳನ್ನು ಕಳುಹಿಸಿಬಿಡುವೆನು. ನಿನ್ನ ಪಾಲಿನ ಬ್ರಿಸೇಯಿಸಳನ್ನು ನಾನೇ ಬಂದಾದರೂ ವಶಪಡಿಸಿಕೊಂಡುಬಿಡುವೆನು; ಇದು ನಿಜ'' ಎಂದು ಹೇಳಿದನು. ಈಗ ಏಕಿಲೀಸನಿಗೂ ಕೋಪವುಂಟಾಗಿ ,, ಓ ಲಜ್ಜೆಗೆಟ್ಟ ದಳಪತಿಯೇ, ಹೀಗೇಕೆ ದುರಾಶಾಗ್ರಸ್ತನಾಗಿರುವೆ? ನಾನು ಇಲ್ಲಿಗೆ ಬಂದಿರುವುದು ಯಾರ ಲಾಭಕ್ಕಾಗಿ? ಈ ಟ್ರೋಜನರು ನನ್ನ ದೇಶಕ್ಕೆ ಯಾವ ಹಾವಳಿಯನ್ನೂ ಮಾಡಿದವರಲ್ಲವಲ್ಲಾ! ನೀನು ನನ್ನ ಪಾಲಿನ ಲಾಭವನ್ನೂ ಅಪಹರಿಸಬೇಕೆಂದಿರುವುದಲ್ಲದೆ ನನಗೆ ಅವಮಾನವನ್ನೂ ಮಾಡಬೇಕೆಂದಿರುವುದರಿಂದ, ನಾನು ನಿನ್ನ ಈ ಪಾಳೆಯದಲ್ಲಿ ಏಕೆ ಇರಬೇಕು?'' ಎಂದು ಏಕಿಲೀಸನು ಉತ್ತರಕೊಟ್ಟನು. ಅಗಮೆಮ್ನಾನನು ಏಕಿಲೀಸನನ್ನು ಕುರಿತು— , ನಿನಗೆ ಇಷ್ಟವಿಲ್ಲವಾದ್ದರೆ ಇಲ್ಲಿಂದ ಓಡಿಹೋಗಬಹುದು. ಇಲ್ಲಿ ಉಳಿದುಕೊಳ್ಳುವವರೇ

ನನಗೆ ಸಹಾಯಮಾಡುವರು. ಅವರೂ ಒಂದುವೇಳೆ ತಪ್ಪಿದರೂ, ಅಪೋಲೋ ದೇವನೇ ತನ್ನ ವಾಗ್ದಾನಕ್ಕೆ ಅನುಸಾರವಾಗಿ ಟ್ರಾಯ್ ಪಟ್ಟಣವನ್ನು ನಮ್ಮ ವಶಪಡಿಸುವನು. ನಿನ್ನ ಯೋಧಸಮುದಾಯವನ್ನೂ ಕರೆದುಕೊಂಡು ನೀನು ನಿನ್ನ ದೇಶಕ್ಕೆ ಹಿಂದಿರುಗಿ ಅಲ್ಲಿ ನಿನ್ನ ಮನಸ್ಸಿಗೆ ಬಂದಂತೆ ಆಜ್ಞೆಮಾಡುತ್ತಿರ ಬಹುದು. ಇಲ್ಲಿ ನಿನ್ನ ಅಪ್ಪಣೆಗಳನ್ನು ಕೇಳುವರಾರು?" ಎಂದು ಮೂದಲಿಸಿದನು. ಆ ಸಮಯದಲ್ಲಿ ಏಕಿಲೀಸಿಗೆ ಕೋಪವು ಬಹಳ ಹೆಚ್ಚಿ, ಒರೆಯಿಂದ ಕತ್ತಿಯನ್ನು ಎಳೆಯುವುದರಲ್ಲಿದ್ದನು. ಆ ಸಮಯದಲ್ಲಿ ಹೀರಾ ದೇವಿಯು ಅವನ ಕೋಪವನ್ನು ಶಾಂತಿಮಾಡುವುದಕ್ಕಾಗಿ, ಅಥೆನಿ ಎಂಬ ದೇವಿಯನ್ನು ಕಳುಹಿಸಿದಳು. ಆಕೆಯು ಏಕಿಲೀಸಿಗೆ ಗುಟ್ಟಾಗಿ ಕಾಣಿಸಿಕೊಂಡು ಅವನ ಕೋಪವನ್ನು ಹೋಗಲಾಡಿಸಿ ಹೀರಾದೇವಿಯ ಸನ್ನಿಧಿಗೆ ಹಿಂದಿರುಗಿದಳು. ಇನ್ನು ಸ್ವಲ್ಪಹೊತ್ತಿನಲ್ಲಿಯೇ ಪುನಃ ಅವರಿಬ್ಬರಿಗೂ ವಾಗ್ವಾದಕ್ಕೆ ಪ್ರಾರಂಭ ವಾಗಿ, ಏಕಿಲೀಸನು ಕೋಪಾವಿಷ್ಟನಾಗಿ "ಎಲೈ, ನಾಯಿಮೋರೆಯ ಮತ್ತನಾದ ದಳಪತಿಯೇ! ನಿನ್ನ ಮಾತುಗಳು ಬಹಳ ವೀರಾವೇಶಯುಕ್ತವಾಗಿ ದ್ದರೂ ನಿನ್ನ ಹೃದಯವು ಮಾತ್ರ ಜಿಂಕೆಯ ಹೃದಯದಂತೆ ಭಯವಿಹ್ವಲ ವಾಗಿರುವುದು. ಆಗಲಿ! ಟ್ರೋಜನರು ಬಂದು ನಿಮ್ಮ ಸೈನ್ಯವನ್ನು ಕಿರುಗುಟ್ಟಿಸು ತ್ತಿರುವಾಗ ನೀನು ಎಷ್ಟೇ ಪ್ರಾರ್ಥಿಸಿಕೊಂಡರೂ ನನ್ನಿಂದ ಸ್ವಲ್ಪವಾದರೂ ಸಹಾಯವಾದೀತೆಂದು ನೀನು ನಂಬಿಕೊಂಡಿರಬೇಕಾಗಿಲ್ಲ" ಎಂದು ಹೇಳಿ ತನ್ನ ಕೈಯಲ್ಲಿದ್ದ ರಾಜದಂಡವನ್ನು ಕೆಳಗೆ ಎಸೆದು ಕುಳಿತುಕೊಂಡುಬಿಟ್ಟನು.

೨೬. ಆ ಸಮಯದಲ್ಲಿ ನೆಸ್ಟಾರನು ಎದ್ದು ನಿಂತು "ಮಿತ್ರರೇ, ನನಗೆ ಬಹಳ ವಯಸ್ಸಾಗಿರುವುದರಿಂದ ಈ ಕಾಲದ ಶೂರರಿಗಿಂತಲೂ ಎಷ್ಟೋ ಪ್ರಸಿದ್ಧರಾಗಿದ್ದ ಥೀಸಿಯಸ್ಸನೇ ಮೊದಲಾದ ಅನೇಕ ವೀರರುಗಳನ್ನು ನಾನು ಕಂಡಿರುವೆನು. ಅಂತಹವರೂ ಕೂಡ ನನ್ನ ಬುದ್ಧಿವಾದಗಳಿಗೆ ಕಿವಿಗೊಡುತ್ತಿದ್ದರು. ಆದುದರಿಂದ ನೀವೂ ನನ್ನ ಮಾತುಗಳನ್ನು ಲಾಲಿಸಿ. ಏಕಿಲೀಸ್, ನೀನು ಶೂರನೂ ಹೌದು; ದೇವತಾಪುತ್ರನೂ ಹೌದು. ಆದರೂ ನಮ್ಮ ದಳಪತಿಯ ಅಭಿಪ್ರಾಯಕ್ಕೆ ವಿರೋಧವಾಗಿ ನಡೆಯುವುದು ಧರ್ಮವಲ್ಲ. ದಳಪತಿಯಾದ ಅಗಮೆಮ್ನಾನನೆ! ನೀನೂ ಕೋಪವನ್ನು ಬಿಡು" ಎಂದು ಸಮಾಧಾನಪಡಿಸಿದನು. ಆದರೂ ಅವರಿಬ್ಬರಿಗೂ ಪುನಃ ವಾಗ್ವಾದವು ಪ್ರಾರಂಭವಾಗಿ ಏಕಿಲೀಸನು

ಅಗಮೆಮ್ನಾನನನ್ನು ಧಿಕ್ಕರಿಸಿ ತನ್ನ ಪ್ರತಿಜ್ಞೆಯನ್ನು ಮತ್ತೊಮ್ಮೆ ತಿಳಿಸಿ ತನ್ನ ಗುಡಾರದ ಒಳಿಗೆ ತನ್ನ ಸೈನ್ಯದೊಡನೆ ಹಿಂದಿರುಗಿದನು.

೨೭. ಬಳಿಕ ಅಗಮೆಮ್ನಾನನು ಇಪ್ಪತ್ತು ಹಡಗುಗಳನ್ನು ಸಿದ್ಧಪಡಿಸಿ ಕ್ರಿಸೇಯಿಸಳನ್ನು ಕರೆಸಿ, ಆ ಹಡಗಿನಪಡೆಗೆ ಒಡಿಸಿಯಸ್ಸನ್ನು ಅಧಿಕಾರಿಯನ್ನಾಗಿ ನೇಮಿಸಿ ಆಕೆಯ ತಂದೆಯಬಳಿಗೆ ಕಳುಹಿಸಿಕೊಟ್ಟನು. ಹಡಗುಗಳು ಪ್ರಯಾಣ ಹೊರಡುವುದಕ್ಕೆ ಮೊದಲು, ಪದ್ಧತಿಯಂತೆ ಗ್ರೀಕರು ತಮ್ಮ ಪಾಳೆಯದಲ್ಲಿ ಕೆಲವು ಪಶುಗಳನ್ನು ಯಜ್ಞಮಾಡಿದರು. ಯಜ್ಞಧೂಮವು ಆಕಾಶಕ್ಕೆ ಏಳುತ್ತಿದ್ದಿತು. ಒಡಿಸಿಯಸ್ಸನು ಗಮ್ಯಸ್ಥಾನವನ್ನು ಸೇರಿದಬಳಿಕ ಕ್ರಿಸೇಯಿಸಳನ್ನು ಅವಳ ತಂದೆಗೆ ವಿನಯಪೂರ್ವಕವಾಗಿ ಒಪ್ಪಿಸಿ, ಅಪೋಲೋದೇವನ ಕರುಣೆಯು ತಮ್ಮಮೇಲೆ ಪುನಃ ನೆಲೆಗೊಳ್ಳುವಂತೆ ಮಾಡಬೇಕೆಂದು ಅವನನ್ನು ಪ್ರಾರ್ಥಿಸಿಕೊಂಡನು. ಅಪೋಲೋದೇವನ ಪೂಜಾರಿಯು ಹಿಂದಕ್ಕೆ ಬಂದ ತನ್ನ ಮಗಳನ್ನು ಕಂಡು ಸಂತೋಷಭರಿತನಾಗಿ ಒಡಿಸಿಯಸ್ಸನ್ನೂ ಅವನ ಅನುಯಾಯಿಗಳನ್ನೂ ಆದರಿಸಿ, ಅಪೋಲೋದೇವನ ಕರುಣೆಯು ಗ್ರೀಕರಮೇಲೆ ಉಂಟಾಗುವಂತೆ ಪ್ರಾರ್ಥಿಸಿಕೊಂಡನು. ಬಳಿಕ ಒಡಿಸಿಯಸ್ಸನು ತನ್ನ ಕಡೆಯವರನ್ನೂ ಕರೆದುಕೊಂಡು ಗ್ರೀಕರ ಪಾಳೆಯಕ್ಕೆ ಹಿಂದಿರುಗಿದನು. ಅಷ್ಟರಲ್ಲಿ ಗ್ರೀಕರ ಪಾಳೆಯದಲ್ಲಿ ಹಾವಳಿಮಾಡುತ್ತಿದ್ದ ರೋಗವು ಶಾಂತವಾಗಿದ್ದಿತು.

೨೮. ಕ್ರಿಸೇಯಿಸಳನ್ನು ಅವಳ ತಂದೆಯ ಬಳಿಗೆ ಕಳುಹಿಸಿಕೊಟ್ಟ ಮೇಲೆ, ಅಗಮೆಮ್ನಾನನ ಕೋಪವೂ ಲೋಭವೂ ಪುನಃ ಪ್ರವೃದ್ಧವಾಗಿ, ಬ್ರಿಸೇಯಿಸಳನ್ನು ಹಿಡಿದು ತರುವುದಕ್ಕಾಗಿ ಇಬ್ಬರು ದೂತರನ್ನು ಏಕಿಲೀಸಿನ ಗುಡಾರಕ್ಕೆ ಕಳುಹಿಸಿಕೊಟ್ಟನು. ಅವರು ಅರೆಮನಸ್ಸಿನಿಂದ ಗುಡಾರದ ಒಳಿಗೆ ಬಂದು ಕಾಣಿಸಿಕೊಂಡ ಕೂಡಲೆ, ಏಕಿಲೀಸನು ಅವರನ್ನು ಕುರಿತು—“ಹೀಗೇಕೆ ಸಂಶಯಪಡುತ್ತಿರುವಿರಿ? ನಾನೂ ದಳಪತಿಯ ಆಜ್ಞೆಯಂತೆಯೇ ನಡೆದುಕೊಳ್ಳುವೆನು. ನೀವು ಬ್ರಿಸೇಯಿಸಳನ್ನು ಕರೆದುಕೊಂಡುಹೋಗಬಹುದು” ಎಂದು ಹೇಳಲು, ಏಕಿಲೀಸನ ಸ್ನೇಹಿತನಾದ ಪೆಟ್ರೋಕ್ಲಸನು ಬ್ರಿಸೇಯಿಸಳನ್ನು ಕರೆತಂದು ಅವರಿಗೆ ಒಪ್ಪಿಸಿದನು. ದಯಾಳುವೂ ಉದಾತ್ತಹೃದಯನೂ ಆದ ಏಕಿಲೀಸನ್ನು ಬಿಟ್ಟು ಹೊರಡಲು ಬ್ರಿಸೇಯಿಸಳಿಗೆ ಮನಸ್ಸೇ ಇರಲಿಲ್ಲ. ಆದರೂ ಗತ್ಯಂತರವಿಲ್ಲದೆ ಅವಳೂ ಏಕಿಲೀಸಿನ ಸನ್ನಿಧಿಯನ್ನು ಬಿಟ್ಟು, ಅಗಮೆಮ್ನಾನನ ದೂತರೊಡನೆ ಹೊರಟುಹೋದಳು.

೨೯. ಬ್ರಿಸೇಯಿಸಳನ್ನು ಕಳುಹಿಸಿಕೊಟ್ಟ ಕೂಡಲೆ ಏಕಿಲೀಸನಿಗೆ ಕೋಪಶೋಕಗಳು ಏಕಕಾಲದಲ್ಲಿ ಉಲ್ಬಣವಾದುವು. ಆದುದರಿಂದ ಅವನು ಏಕಾಂಗಿಯಾಗಿ ಸಮುದ್ರತೀರಕ್ಕೆ ಹೋಗಿ, “ ಸಮುದ್ರಜೆಯಾದ ತಾಯಿಯೆ, ದೀರ್ಘಾಯುಸ್ಸಿಗಿಂತಲೂ ಗೌರವವೇ ಶ್ರೇಷ್ಠವೆಂದು ತಿಳಿದು, ನಾನು ಅಲ್ಪಾಯುಷ್ಕನಾಗಲು ಹಿಂಜರಿಯಲಿಲ್ಲವೆಂಬುದನ್ನು ನೀನು ಅರಿತೇ ಇರುವೆಯಲ್ಲವೆ? ಹೀಗಿದ್ದರೂ ನನಗೆ ಈಗ ದುಸ್ಸಹವಾದ ಅಗೌರವವು ಸಂಭವಿಸಿರುವುದು. ಇಲ್ಲಿಯ ಗ್ರೀಕರೆಲ್ಲರ ಸಮಕ್ಷದಲ್ಲಿ, ಅವರ ಸಮ್ಮತಿಯಿಂದಲೇ ನನ್ನ ಪಾಲಿಗೆ ಬಂದಿದ್ದ ಬ್ರಿಸೇಯಿಸಳನ್ನು ಅಗಮೆಮ್ನಾನನು ಅಪಹರಿಸಿ, ನನಗೆ ಮಹಾವಮಾನವನ್ನು ಮಾಡಿರುವನು. ಇದನ್ನು ಕಂಡು ನೀನು ಹೇಗೆ ಸುಮ್ಮನಿರುವೆ?” ಎಂದು ಕಣ್ಣೀರು ಹಾಕುತ್ತ ತನ್ನ ತಾಯಿಯಾದ ಥೀಟೀಸಳಿಗೆ ಮೊರೆಯಿಟ್ಟುಕೊಂಡನು. ಬೆಳ್ಳಿಯ ಪಾದಗಳನ್ನು ಹೊಂದಿದ್ದ ಆ ದೇವತೆಯು, ಮಗನ ಮೊರೆಯನ್ನು ಕೇಳಿ ಸಮುದ್ರಮಧ್ಯದಿಂದ ಎದ್ದು ಬಂದು ಅವನ ಶೋಕಕ್ಕೆ ಕಾರಣವೇನೆಂದು ಕೇಳಿದಳು. ಏಕಿಲೀಸನು ತನ್ನ ಶೋಕವೃತ್ತಾಂತವನ್ನು ಆಮೂಲಾಗ್ರವಾಗಿ ಆಕೆಗೆ ತಿಳಿಸಿ ಗ್ರೀಕರ ದೇವದೇವನಾದ ಜ್ಯೂಸಿನ ಬಳಿಗೆ ಹೋಗಿ ಕೆಲವು ಕಾಲದವರೆಗೆ ಗ್ರೀಕರಿಗೆ ಅಪಜಯವಾಗುವಂತೆ ಆತನನ್ನು ಪ್ರಾರ್ಥಿಸಿಕೊಳ್ಳಬೇಕೆಂದು ಆಕೆಯನ್ನು ಕೇಳಿಕೊಂಡನು. ಥೀಟೀಸಳು ತನ್ನ ಮಗನಿಗೆ ಉಂಟಾಗಿದ್ದ ಅವಮರ್ಯಾದೆಗಾಗಿ ಮರುಗುತ್ತಾ ದೇವನಿವಾಸಸ್ಥಾನವಾದ ಒಲಿಂಪಸ್ ಪರ್ವತಶಿಖರಕ್ಕೆ ಹೋಗಿ, ಕಾರ್ಯಾಂತರದಿಂದ ಕೆಲವು ದಿನಗಳಮೇಲೆ ಹಿಂದಿರುಗಿದ ಜ್ಯೂಸಿಗೆ ಗೋಪ್ಯವಾಗಿ ಕಾಣಿಸಿಕೊಂಡು, ತನ್ನ ಕೋರಿಕೆಯನ್ನು ತಿಳಿಸಿ ಅದನ್ನು ನೆರವೇರಿಸಿಕೊಡಬೇಕೆಂದು ಪ್ರಾರ್ಥಿಸಿಕೊಂಡಳು. ಜ್ಯೂಸಿನ ಪತ್ನಿಯಾದ ಹೀರಾದೇವಿಗೆ ಗ್ರೀಕರಲ್ಲಿ ಹೆಚ್ಚಾದ ಅಭಿಮಾನವಿದ್ದಿತು. ಆದುದರಿಂದಲೇ ಆಕೆಗೆ ತಿಳಿಯದಂತೆ ತನ್ನ ಪ್ರಾರ್ಥನೆಯನ್ನು ನೆರವೇರಿಸಿಕೊಡೆಂಬುದಾಗಿ ಥೀಟೀಸಳು ಪ್ರಾರ್ಥಿಸಿಕೊಂಡಿದ್ದುದು. ಆದರೂ, ಸರ್ವಜ್ಞಳಾದ ಹೀರಳಿಗೆ ಆಕೆಯ ಕೋರಿಕೆಯು ತಿಳಿಯದೆ ಹೋಗಲಿಲ್ಲ. ಇದು ಜ್ಯೂಸಿಗೆ ತಿಳಿದಿದ್ದರೂ ಆತನು ಥೀಟೀಸಳ ಪ್ರಾರ್ಥನೆಯನ್ನು ನಿರಾಕರಿಸಲಾರದೆ ಅವಳ ಕೋರಿಕೆಯನ್ನು ನೆರವೇರಿಸುವುದಾಗಿ ಮಾತುಕೊಟ್ಟು ಆಕೆಯನ್ನು ಕಳುಹಿಸಿಕೊಟ್ಟನು.

೩೦. ಥೀಟೀಸಳು ಹೊರಟಕೂಡಲೆ, ಹೀರಾದೇವಿಯು ಜ್ಯೂಸಿನ ಬಳಿಗೆ “ಹೋಗಿ ಥೀಟೀಸಳು ಮಾಡಿಕೊಳ್ಳುತ್ತಿದ್ದ ಪ್ರಾರ್ಥನೆ ಏನು ?” ಎಂದು

ಕೇಳಿದಳು. ಜ್ಯೂಸನು ಅದಕ್ಕೆ ವಿರಸವಾಗಿ ಉತ್ತರ ಕೊಟ್ಟುದರಿಂದ, ಹೀರಳಿಗೆ ಕೋಪವುಂಟಾಗಿ ಆ ದೇವದಂಪತಿಗಳಿಗೆ ವಾಕ್ಕಲಹವು ಪ್ರಬಲವಾಗುತ್ತಿದ್ದಿತು. ಅದನ್ನು ಕಂಡು ಇತರ ದೇವತೆಗಳು ಬಹಳ ಬೆದರಿದರು. ಅವರ ಆ ಕಲಹವನ್ನು ಶಾಂತಪಡಿಸುವುದಕ್ಕೆ ಯಾರಿಗೂ ಧೈರ್ಯವಿರಲಿಲ್ಲ. ಆದರೂ ಆ ದೇವ ದಂಪತಿಗಳ ಪುತ್ರನಾದ ಹೆಫೆಸ್ಟಸ್ಸನು ತಾಯಬಳಿಗೆ ಹೋಗಿ— “ಅಮ್ಮಾ, ನಮ್ಮ ತಂದೆಗೆ ಕೋಪಬಂದಿರುವಾಗ ಆತನ ಇಚ್ಛೆಗೆ ವಿರುದ್ಧವಾಗಿ ನಡೆಯಲು ಯಾರಿಗೆತಾನೆ ಶಕ್ತಿಸಾಹಸಗಳು ಇರುವುವು? ಹಿಂದೊಂದುಸಲ ಆತನ ಇಚ್ಛೆಗೆ ವಿರುದ್ಧವಾಗಿ ನಾನು ನಡೆದುದರಿಂದ, ನನ್ನನ್ನು ಇಲ್ಲಿಂದ ಕೆಳಕ್ಕೆ ತಳ್ಳಿಬಿಡಲು, ನಾನು ಸೂರ್ಯಾಸ್ತಮಾನದವರೆಗೂ ಭೂಮಿಗೆ ಉರುಳುತ್ತಾ ಕಡೆಗೆ ಲೆಮ್ನಾಸ್ ದ್ವೀಪದಮೇಲೆ ಬಿದ್ದು ನನ್ನ ಒಂದು ಕಾಲನ್ನು ಕುಂಟುಮಾಡಿಕೊಂಡುದು ನಿನಗೆ ಗೊತ್ತೇ ಇರುವುದು. ಆದುದರಿಂದ ಆ ದೇವದೇವನ ಇಚ್ಛೆಗೆ ವಿರುದ್ಧವಾಗಿ ನಡೆದುಕೊಳ್ಳಬೇಡವಮ್ಮಾ! ನನ್ನ ಮಾತನ್ನು ಕೇಳು” ಎಂದು ಬಹಳವಾಗಿ ಪ್ರಾರ್ಥಿಸಿಕೊಳ್ಳುತ್ತಾ, ತನ್ನ ತಾಯಿಗೂ ಆ ಸಭೆಯಲ್ಲಿದ್ದ ಇತರದೇವತೆಗಳಿಗೂ ಅಮೃತವನ್ನು ಬಟ್ಟಲುಗಳಲ್ಲಿ ತುಂಬಿತುಂಬಿ ಯಥೇಚ್ಛವಾಗಿ ಅರ್ಪಿಸಿದನು. ಅದನ್ನು ಸೇವಿಸಿ ದೇವತೆಗಳೆಲ್ಲರೂ ಸಂತೋಷಚಿತ್ತರಾಗಿದ್ದರು.

## V.

೩೧. ಜ್ಯೂಸನು ತನ್ನ ಪತ್ನಿಯ ಕೋಪಕ್ಕೆ ತಕ್ಕ ಪ್ರತಿಕ್ರಿಯೆಯನ್ನು ಮಾಡಿದ ಬಳಿಕ, ಗ್ರೀಕರಿಗೆ ಯಾವರೀತಿಯಲ್ಲಿ ಅಪಜಯವನ್ನು ಉಂಟುಮಾಡಬಹುದೆಂದು ಸ್ವಲ್ಪಕಾಲದವರೆಗೆ ಯೋಚಿಸಿ, ಕಡೆಗೆ ಗ್ರೀಕರ ದಳಪತಿಯಾದ ಅಗಮೆಮ್ನಾನನಿಗೆ ಒಂದು ದುಸ್ಸ್ವಪ್ನವುಂಟಾಗುವಂತೆ ಮಾಡಿದನು. ಆ ದಳಪತಿಯು ಗಾಢನಿದ್ರಾವಶನಾಗಿದ್ದಾಗ, ಅವನಿಗೆ ನೆಸ್ಟರನು ಕಾಣಿಸಿಕೊಂಡಂತಾಗಿ “ದಳಪತಿಯೆ, ನಿನ್ನ ಕಡೆಯವರ ಯೋಗಕ್ಷೇಮಗಳಿಗೆ ನೀನೇ ಹೊಣೆಯಾಗಿರುವಾಗ, ಇದೇನು ಹೀಗೆ ಗಾಢನಿದ್ರಾಸಕ್ತನಾಗಿರುವೆ? ನಿಮ್ಮ ಅಭಿಮಾನದೇವತೆಯಾದ ಹೀರಳು ನಿಮ್ಮಮೇಲೆ ದೇವತೆಗಳೆಲ್ಲರ ಅನುಗ್ರಹವುಂಟಾಗುವಂತೆ ಏರ್ಪಡಿಸಿರುವಳು. ಟ್ರಾಯ್ ದೇಶವು ಕೆಲವು ದಿವಸಗಳಲ್ಲಿಯೇ ನಶಿಸಿಹೋಗುವಂತೆ ದೈವಚಿತ್ತಕ್ಕೆ ಬಂದಿರುವುದು. ಇಂತಹ ಸಮಯವನ್ನು ಕಳೆದುಕೊಳ್ಳುವುದು ಸರಿಯಲ್ಲ. ಏಳು” ಎಂದು ಹೇಳಿದಂತೆ ತೋರಿತು.

ಈ ಕನಸು ಉಂಟಾದಕೂಡಲೆ ಅಗಮೆಮ್ನಾನನಿಗೆ ಪುನಃ ನಿದ್ರೆ ಹತ್ತಲಿಲ್ಲ. ಟ್ರಾಯ್‌ನಗರವು ಆಗಲೆ ತನ್ನ ವಶವಾದಹಾಗೆ ಅವನ ಮನಸ್ಸಿನಲ್ಲಿ ಆಲೋಚನೆಗಳು ತಲೆದೋರಿ ನೆಲೆಸುತ್ತಿದ್ದುವು. ಆದರೂ ಆತನು ತನ್ನ ಜೊತೆಗಾರರ ಅಭಿಪ್ರಾಯವು ಹೇಗಿರುವುದೋ ಪರೀಕ್ಷಿಸಿನೋಡಬೇಕೆಂದೂ, ಆ ಪರೀಕ್ಷೆಯನ್ನು ಹೇಗೆ ಮಾಡುವುದು ಒಳ್ಳೆಯದೆಂದೂ, ಯೋಚಿಸುತ್ತಾ ಉಳಿದ ರಾತ್ರಿಯನ್ನು ಕಳೆದನು.

೧೨. ಬೆಳಗಾದ ಕೂಡಲೆ ಒಡಿಸಿಯಸ್, ನೆಸ್ಟರ್, ಮೊದಲಾದ ಪ್ರಮುಖರೆಲ್ಲರನ್ನೂ ಅವರವರ ಸೈನ್ಯಗಳನ್ನೂ ಅಗಮೆಮ್ನಾನನು ಒಂದುಕಡೆ ಸಭೆಸೇರಿಸಿ ರಾಜಯೋಗ್ಯವಾದ ವಸ್ತ್ರಭೂಷಣಗಳನ್ನೂ ದೇವತೆಗಳ ಬಡಗಿಯಾದ ಹೆಫೆಸ್ಟಸನು ಮಾಡಿದ್ದ ರಾಜದಂಡವನ್ನೂ ಧರಿಸಿ ಆ ಸಭೆಗೆ ಹೋಗಿ, ಸದಸ್ಯರನ್ನು ಕುರಿತು—“ ನನಗೆ ನಿನ್ನೆಯರಾತ್ರಿ ಒಂದು ಸ್ವಪ್ನವುಂಟಾಯಿತು. ಅದರಲ್ಲಿ ನೆಸ್ಟರನು ಕಾಣಿಸಿಕೊಂಡು ನನಗೆ—‘ ಇದೇಕೆ, ಹೀಗೆ ಮಲಗಿರುವೆ? ಅನೇಕ ಗೋಪುರಗಳಿಂದಲೂ ವಿಶಾಲವೀಥಿಗಳಿಂದಲೂ ಶೋಭಿಸುತ್ತಿರುವ ಟ್ರಾಯ್ ನಗರವು ನಿಮ್ಮ ವಶವಾಗುವುದು ’ ಎಂದು ಹೇಳಿದಂತೆ ತೋರಿತು ” ಎಂದು ತಿಳಿಸಿದನು. ಸಮೀಪದಲ್ಲಿಯೇ ಇದ್ದ ನೆಸ್ಟರನು ಈ ಮಾತುಗಳನ್ನು ಕೇಳಿ “ ಇದೇ ಮಾತನ್ನು ಮತ್ತೆ ಯಾರಾದರೂ ಹೇಳಿದ್ದರೆ ನಂಬುವುದಕ್ಕೆ ಆಗುತ್ತಿರಲಿಲ್ಲ. ಆದರೆ ನಮ್ಮ ಪ್ರಭುವಾದ ಅಗಮೆಮ್ನಾನನೇ ಹೀಗೆ ಹೇಳುತ್ತಿರುವುದರಿಂದ, ಈತನ ಮಾತಿನಲ್ಲಿ ನಾವು ಸಂಶಯಿಸಲಾಗುವುದಿಲ್ಲ” ಎಂದು ಅಗಮೆಮ್ನಾನನ ಮಾತನ್ನು ಪುಷ್ಟೀಕರಿಸಿದನು. ಈ ಮಾತುಗಳನ್ನು ಕೇಳಿದ ಕೂಡಲೆ ಕ್ಷೋಭೆಗೆ ಈಡಾದ ಜೇನು ಹುಟ್ಟಿನಲ್ಲಿ ಹೇಗೆ ಕೋಲಾಹಲವುಂಟಾಗುವುದೋ ಹಾಗೆಯೇ ಗ್ರೀಕರ ದಳದಲ್ಲೆಲ್ಲಾ ಕಲಕಲವೊಂದು ಎದ್ದು ಪ್ರತಿಯೊಬ್ಬನೂ ಯುದ್ಧಕ್ಕೆ ಸಿದ್ಧಪಡಿಸಿಕೊಳ್ಳಲಾರಂಭಿಸಿದನು. ಈ ಸಮಯದಲ್ಲಿ ಪುನಃ ಅಗಮೆಮ್ನಾನನು ತನ್ನ ಸೈನಿಕರನ್ನು ಕುರಿತು— “ಮಿತ್ರರಾದ ಯೋಧವರ್ಯರೇ, ನನಗೆ ಇಂತಹ ಸ್ವಪ್ನವಾದರೂ ನಮ್ಮ ಮೇಲೆ ದೇವರ ದಯೆಯು ಉಂಟಾಗಿಲ್ಲವೆಂದೇ ಕಾಣುವುದು. ನನಗೆ ಟ್ರಾಯ್ ಪಟ್ಟಣವನ್ನು ಜಯಿಸುವ ಯೋಗವು ಇರುವಂತೆ ತೋರುವುದಿಲ್ಲ. ಇದುವರೆಗೆ ಅನೇಕ ಪಟ್ಟಣಗಳು ನಮ್ಮ ಹಸ್ತಗತವಾಗಿದ್ದರೂ, ಈ ಒಂದು ಪಟ್ಟಣವು ಮಾತ್ರ ಇನ್ನೂ ಕಟ್ಟುಕದಲದಿರುವುದು. ಇಲ್ಲಿಂದ ನಾವು ತಪ್ಪನೆ ಹಿಂದಿರುಗಬೇಕೆಂಬುದೇ ದೈವೇಚ್ಛೆಯಾಗಿರುವಂತೆ ತೋರುವುದು. ಟ್ರಾಯ್

ಪಟ್ಟಣದ ಯೋಧರುಗಳ ಸಂಖ್ಯೆಯನ್ನು ನೋಡಿದರೋ ಅತ್ಯಲ್ಪವಾಗಿರುವುದು; ನಮ್ಮ ಸೈನ್ಯಸಂಪತ್ತಿಯೋ ಅತ್ಯಪಾರವಾಗಿರುವುದು. ಇಂತಹುದರಲ್ಲೂ ನಾವು ಭಗ್ನಮನೋರಥರಾಗಿ ಹಿಂದಿರುಗಬೇಕೆಂಬುದೇ ದೈವೇಚ್ಛೆಯೇನೊ! ಈಗಾಗಲೇ ಒಂಬತ್ತು ವರ್ಷಗಳು ಕಳೆದು ಹೋದುವು; ನಮ್ಮ ಹಡಗುಗಳೆಲ್ಲವೂ ಆಗಲೇ ಲೊಡ್ಡು ಹಿಡಿದಿರುವುವು; ಅವುಗಳ ಹಗ್ಗಗಳೆಲ್ಲವೂ ಮುಗ್ಗಿ ಹೋಗಿರುವುವು. ನಮ್ಮ ನಮ್ಮ ಊರುಗಳಲ್ಲಿ ನಮ್ಮ ಹೆಂಡತಿಮಕ್ಕಳುಗಳು, ವಿಜಯಿಗಳಾಗಿ ಹಿಂದಿರುಗುವ ನಮ್ಮನ್ನು ಸ್ವಾಗತಪೂರ್ವಕವಾಗಿ ಇದಿರುಗೊಳ್ಳಬೇಕೆಂದು ಮನೆಯ ಬಾಗಿಲುಗಳಲ್ಲಿಯೇ ಕಾದುಕೊಂಡು ಕುಳಿತಿರುವರು. ಟ್ರೋಜನರ ಮೇಲೆ ಮುಯ್ಯನ್ನು ತೀರಿಸಿಕೊಳ್ಳುವ ಯೋಗವೇನೋ ನಮಗೆ ಇರುವುದಿಲ್ಲ. ಆದುದರಿಂದ ನನ್ನ ಮಾತನ್ನು ಕೇಳಿ. ನಾವೆಲ್ಲರೂ ನಮ್ಮ ನಮ್ಮ ದೇಶಗಳಿಗೆ ಹಿಂದಿರುಗುವ" ಎಂದು ಹೇಳಿದನು.

೩೩. ಅಷ್ಟು ದೀರ್ಘಕಾಲ ಕಾದಿದ್ದರೂ, ಟ್ರಾಯ್ ಪಟ್ಟಣವು ತಮ್ಮ ಸ್ವಾಧೀನವಾಗದಿದ್ದುದರಿಂದ, ಗ್ರೀಕ್ ಪಾಳೆಯದಲ್ಲಿ ಅನೇಕರಿಗೆ ಬೇಸರವೂ ನಿರಾಶೆಯೂ ತಲೆದೋರಿದ್ದುವು. ತಮ್ಮ ದಳಪತಿಯ ಬಾಯಿಂದಲೇ ಅಂತಹ ಅಭಿಪ್ರಾಯಗಳು ಹೊರಟಕೂಡಲೆ, ಗ್ರೀಕರ ಪಾಳೆಯದಲ್ಲಿ ಬಹಳ ಕೋಲಾಹಲವು ಎದ್ದು, ಹುಲುಸಾಗಿ ಬೆಳೆದು ಕೊಯ್ಲಿಗೆ ಸಿದ್ಧವಾಗಿ ನಿಂತಿರುವ ಬೆಳೆಯುಳ್ಳ ಹೊಲದಮೇಲೆ ಬಿರುಗಾಳಿ ಬೀಸಿದರೆ ಹೇಗೆ ಪೈರೆಲ್ಲವೂ ಒಂದುಕಡೆಗೆ ಬಾಗುವುದೋ ಹಾಗೆ, ಗ್ರೀಕರ ಸಮೂಹವು ಹಡಗುಗಳಕಡೆಗೆ ಹೊರಡಲು ಸಿದ್ಧವಾಯಿತು. ಹೀರಾದೇವಿಯು ಗ್ರೀಕರ ಈ ಅವಮಾನಕೃತ್ಯವನ್ನು ತನ್ನ ದಿವ್ಯದೃಷ್ಟಿಯಿಂದ ಅರಿತು, ಅಥೆನಿಯೆಂಬ ದೇವತೆಯನ್ನು ಒಡಿಸಿಯಸ್ಸಿನ ಬಳಿಗೆ ಕಳುಹಿಸಿ ಆಗಿನ ಪರಿಸ್ಥಿತಿಗೆ ತಕ್ಕ ಕರ್ತವ್ಯಕಾರ್ಯವನ್ನು ಅವನಿಗೆ ಬೋಧಿಸುವಂತೆ ಏರ್ಪಡಿಸಿದಳು. ಆದದರಿಂದ ಒಡಿಸಿಯಸ್ಸನು ಆಕೆಯ ಪ್ರೇರಣೆಗೆ ಅನುಸಾರವಾಗಿ ಅಗಮೆಮ್ನಾನಿನ ಬಳಿಗೆಹೋಗಿ ಅವನ ರಾಜದಂಡವನ್ನು ಕೇಳಿ ತೆಗೆದುಕೊಂಡು, ಹಡಗುಗಳ ಕಡೆಗೆ ಹೊರಟು, ಅಲ್ಲಿ ತನಗೆ ಸಿಕ್ಕಿದ ಪ್ರಮುಖರನ್ನು ಕುರಿತು, "ನಮ್ಮ ದಳಪತಿಯ ಮಾತುಗಳನ್ನೇನೋ ನೀವೆಲ್ಲರೂ ಕೇಳಿದಿರಿ; ಆದರೆ ಆತನ ನಿಜಾಭಿಪ್ರಾಯವು ನಿಮ್ಮೊಬ್ಬರಿಗಾದರೂ ತಿಳಿಯದು. ನಿಮ್ಮೆಲ್ಲರ ಮನಸ್ಸೂ ಹೇಗಿರುವುದೋ ಅದನ್ನು ತಿಳಿಯಬೇಕೆಂದೇ ಆತನು ಹಾಗೆ ಮಾತಾಡಿದನು. ಆದುದರಿಂದ ಹಿಂದಿರುಗಿ" ಎಂದು ನಯವಾಗಿ

ಬೋಧಿಸಿದನು. ಸಾಧಾರಣರಾದ ಇತರ ಗ್ರೀಕರನ್ನು ಕುರಿತು ಗದರಿಸುತ್ತಲೂ, ಅವರಲ್ಲಿ ಕೆಲವರಿಗೆ ರಾಜದಂಡದಿಂದ ಬಡಿದೂ "ನೀಚರೆ, ನಿಲ್ಲಿ. ಇದೇನು? ಇಷ್ಟುಮಂದಿಯೂ ನಾಯಕರಾಗಿಹೋಗಿರುವಿರಿ? ಇಂತಹ ಬಹುನಾಯಕತ್ವವು ಎಂದಿಗೂ ಕ್ಷೇಮಕರವಾಗಲಾರದು; ದೇವಾಂಶಸಂಭೂತನಾದ ರಾಜನ ಆಜ್ಞೆಯನ್ನು ಶಿರಸಾವಹಿಸಿ" ಎಂದು ಹೇಳಿಯೂ ಒಡಿಸಿಯುಸ್ಸನು ಅವರನ್ನು ನಿರೋಧಿಸಿದನು.

೩೪. ಅವರ ನಡುವೆ ಇದ್ದ ಥರ್ಸೈಟೀಸ್ ಎಂಬೊಬ್ಬ ವಿಲಕ್ಷಣ ಪುರುಷನು ಆಗ ಎದ್ದುನಿಂತು ಪ್ರತಿಭಟಿಸಿದನು. ಅವನಿಗೆ ಹರಟೆಯೆಂದರೆ ಬಲುಪ್ರೀತಿ. ಸ್ವಲ್ಪ ನಗೆಯನ್ನು ಹುಟ್ಟಿಸುವಂತಿದ್ದರೆ ಎಂತಹ ಮಾತನ್ನಾದರೂ ಅವನು ಆಡದಿರುತ್ತಿರಲಿಲ್ಲ. ಅವನ ಮಾತುಗಳಿಗೋ ಅಂಕೆಶಂಕೆಗಳಿರಲಿಲ್ಲ; ಗ್ರೀಕರಪಾಳೆಯದಲ್ಲಿದ್ದವರಲ್ಲೆಲ್ಲಾ ಆ ಥರ್ಸೈಟೀಸನೇ ಅತಿಕುರೂಪಿಯು. ಅವನ ಮೆಳ್ಳೆಗಣ್ಣುಗಳೂ, ಕುಂಟಕಾಲುಗಳೂ, ಗೂನುಬೆನ್ನೂ, ಬೋಕ್ಕದಲೆಯೂ, ಅದರ ಮೇಲೆ ಎಲ್ಲೋ ಒಂದೊಂದುಕಡೆ ಬೆಳೆದುಕೊಂಡಿದ್ದ ಕೂದಲೂ ಯಾರಿಗಾದರೂ ನಗೆಯನ್ನುಂಟುಮಾಡುತ್ತಿದ್ದುವು. ಅತ್ಯುತ್ತಮಪುರುಷರಾದ ಒಡಿಸಿಯುಸ್ಸನ್ನೂ ಏಕಿಲೀಸನ್ನೂ ಕಂಡರಂತೂ ಅವನಿಗೆ ಬಹಳ ಅಸೂಯೆ. ಗ್ರೀಕರ ಪ್ರಮುಖವರ್ಯನಾದ ಆಗಮೆಮ್ನಾನನ್ನು ಕಂಡರೂ ಅವನಿಗೆ ಈರ್ಷ್ಯಾಸೂಯೆಗಳು ಬಲವಾಗಿದ್ದುವು. ಆದುದರಿಂದ ಅವನು ಈಗ ಆಗಮೆಮ್ನಾನಿನಮೇಲೆ ತಿರುಗಿಬಿದ್ದು, "ಎಲೈ ಮಹಾತ್ಮನೆ! ನಿನ್ನ ಆಸೆಯು ಇನ್ನೂ ಕೊನೆಮುಟ್ಟಲಿಲ್ಲವೋ? ಏಕಿಲೀಸಿನ ಪಾಲಿಗೆ ಬಂದಿದ್ದ ಬ್ರಿಸೇಯಿಸಳನ್ನು ಅಪಹರಿಸಿದಂತೆಯೇ ಮತ್ತೆ ಯಾರ ಪಾಲಿನ ಸ್ತ್ರೀಯನ್ನು ಈಗ ವಶಪಡಿಸಿಕೊಳ್ಳಬೇಕೆಂದಿರುವೆ? ಇಂತಹ ಕೃತ್ಯವು ದಳಪತಿಗೆ ಸಲ್ಲುವುದೇ? ಸ್ತ್ರೀಸಮಾನರಾದ ಎಲೈ ಗ್ರೀಕರೇ, ನೀವು ಎಂತಹ ಪುರುಷರು? ಇಂತಹವನ ಮಾತಿಗೆ ದಾಸರಾಗಿರುವಿರಲ್ಲಾ! ಬನ್ನಿ! ಈಗಲೇ ನಮ್ಮ ಊರುಗಳಿಗೆ ಹಿಂದಿರುಗುವ. ಇವನಿಗಿಂತಲೂ ಎಷ್ಟೋಪಾಲು ಉತ್ತಮನಾಗಿರುವ ಆ ಏಕಿಲೀಸಿಗೆ ಇವನು ಅನ್ಯಾಯ ಮಾಡಿರುವನು. ಆದರೆ ಏನುಮಾಡುವುದು? ಅವನಿಗೋ ಶಾಂತಗುಣವು ಬಹಳ ಹೆಚ್ಚು! ಅವನು ಶುದ್ಧ ಅಲಸನು; ಹಾಗಲ್ಲದಿದ್ದರೆ ಆಗಮೆಮ್ನಾನಿನ ಪರಿಣಾಮವು ಆಗಲೇ ತಿಳಿದುಹೋಗುತ್ತಿದ್ದಿತು" ಎಂದು ದೂಷಲಾರಂಭಿಸಿದನು.

೩೪. ಈ ಮೇರೆಗೆ ಥರ್ಸೈಟೀಸನು ಬಾಯಿಗೆಬಂದಂತೆ ಅಗಮೆಮ್ನಾನನ್ನು ದೂಷಿಸುತ್ತಿದ್ದುದನ್ನು ಒಡಿಸಿಯುಸನು ಕೇಳಿ, ಥರ್ಸೈಟೀಸನ್ನು ಕುರಿತು—“ಎಲೋ ಹರಟೆಗಾರನೆ, ಬಾಯಿಮುಚ್ಚು. ನಿನ್ನ ಅವಲಕ್ಷಣದ ಬಾಯಲ್ಲಿ ದೊರೆಗಳ ಹೆಸರನ್ನೇನಾದರೂ ಪುನಃ ಎತ್ತಿದರೆ, ನಿನ್ನ ಮೈಮೇಲಿನ ಬಟ್ಟೆಯನ್ನು ತೆಗೆಸಿ ಚೆನ್ನಾಗಿ ಪ್ರಹರಿಸಿ ನಿನ್ನನ್ನು ಹಡಗುಗಳ ಬಳಿಗೆ ಓಡಿಸುವೆನು. ನಮ್ಮಗಳ ಈ ಪ್ರಯತ್ನದಿಂದ ಒಳ್ಳೆಯದೇ ಆಗುವುದೋ ಕೆಟ್ಟುದೇ ಆಗುವುದೋ ನಮ್ಮಂತಹವರಿಗೇ ತಿಳಿಯದು” ಎಂದು ಹೇಳುತ್ತಾ ತನ್ನ ಕೈಯಲ್ಲಿದ್ದ ರಾಜದಂಡದಿಂದಲೇ ಅವನ ಬೆನ್ನಮೇಲೆ ಚೆನ್ನಾಗಿ ಒಡೆದನು. ಆದುದರಿಂದ ಥರ್ಸೈಟೀಸನು ಬೋಲುಮೋರೆಯನ್ನು ಹಾಕಿಕೊಂಡು ಅಳುತ್ತಾ ಕುಳಿತುಕೊಂಡುದನ್ನು ಉಳಿದ ಗ್ರೀಕರು ಕಂಡು ನಗುತ್ತಿದ್ದರು. ಒಡಿಸಿಯಸ್ಸನು ಹಾಗೆ ಸಮಯಸ್ಫೂರ್ತಿಯಿಂದ ನಡೆದುಕೊಂಡುದು ಅತ್ಯಂತ ಪ್ರಯೋಜನಕರವಾಯಿತು: ಅದರಿಂದ ಸ್ವಲ್ಪ ಹೊತ್ತಿನಲ್ಲೇ ಗ್ರೀಕರನೇಕರಲ್ಲಿ ತಾವು ಹಿಂದಕ್ಕೆ ಓಡಿಹೋಗಬೇಕೆಂದು ಇದ್ದುದಕ್ಕಾಗಿ ಪಶ್ಚಾತ್ತಾಪವು ಹುಟ್ಟಿತು. ಆಗ ಅವರುಗಳನ್ನು ಕುರಿತು ಒಡಿಸಿಯಸ್ಸನು—“ದೇಶಬಾಂಧವರೇ! ಇದೇನು ನಮ್ಮ ದಳಪತಿಗೆ ಅವಮಾನವನ್ನು ಮಾಡಬೇಕೆಂದಿರುವಿರಾ? ಟ್ರಾಯನ್ನು ಜಯಿಸುವ ವರೆಗೂ ಮನೆಯ ಕಡೆಗೇ ತಿರುಗುವುದಿಲ್ಲವೆಂದು ನೀವು ಪ್ರತಿಜ್ಞೆ ಮಾಡಿದುದೇನಾಯಿತು? ನಾವು ಹೊರಡುವಾಗಲೇ ಹತ್ತನೆಯ ವರುಷವು ಹುಟ್ಟುವ ವರೆಗೂ ಈ ಮುತ್ತಿಗೆಯು ನಡೆಯುವುದೆಂದು ಕಾಲ್ಚಾಸನು ಹೇಳಿರಲಿಲ್ಲವೆ? ಇದೇನು ನಿಮ್ಮ ಶಿಶುಚಾಪಲ್ಯ? ನಾವು ಹೊರಡುವ ಸಮಯದಲ್ಲಿ ಬಲಿಪೀಠದ ಕೆಳಗಿನಿಂದ ಒಂದು ಮಹಾಸರ್ಪವು ಹೊರಟು ಒಂದು ಗುಬ್ಬಚ್ಚಿಯ ಎಂಟುಮರಿಗಳನ್ನು ತಿಂದು ಹಾಕಿ, ಬಳಿಕ ಒಂಬತ್ತನೆಯದಾದ ತಾಯಿಹಕ್ಕಿಯನ್ನು ನುಂಗಿಬಿಟ್ಟುದರಿಂದ ಕಾಲ್ಚಾಸನು ನಮ್ಮನ್ನು ಕುರಿತು—‘ನಾವು ಒಂಬತ್ತುವರ್ಷಗಳು ಪೂರ್ತಿಯಾಗಿ ಟ್ರಾಯ್‌ಪಟ್ಟಣವನ್ನು ಮುತ್ತಿದ್ದರೆ, ಬಳಿಕ ಅದು ನಮಗೆ ವಶವಾಗುವುದು’ ಎಂದು ಆ ಶಕುನಕ್ಕೆ ಫಲವನ್ನು ಹೇಳಿಯೇ ಇದ್ದನಲ್ಲವೆ? ಆದುದರಿಂದ ನಾವು ಇಷ್ಟುದಿವಸವೂ ಕಾದಿದ್ದು ಈಗ ಓಡಿಹೋಗುವುದು ಬಹಳ ಹೇಡಿತನ. ವಿಶಾಲವೀಥಿಗಳುಳ್ಳ ಈ ಪಟ್ಟಣವನ್ನು ನಾವು ವಶಪಡಿಸಿಕೊಂಡರೆ, ನಮಗೆ ಕೀರ್ತಿಯುಂಟಾಗುವುದು” ಎಂದು

ಬುದ್ಧಿವಾದವನ್ನು ಹೇಳಲು, ಅದನ್ನು ಗ್ರೀಕರೆಲ್ಲರೂ ಕೇಳಿ ಬಹಳ ಸಂತೋಷದಿಂದ ಸಿಂಹಗರ್ಜನೆಯನ್ನು ಮಾಡಿದರು.

೩೬. ಆಗ ನೆಸ್ಟಾರನು ಎದ್ದುನಿಂತು ಗ್ರೀಕರ ದಳವನ್ನು ಕುರಿತು— "ಇದೇನು ನಾಚಿಕೆಗೇಡು ? ನೀವೆಲ್ಲರೂ ಯುದ್ಧವನ್ನರಿಯದ ಮಕ್ಕಳಂತಾದಿರಲ್ಲ! ನಿಮ್ಮ ಆಣೆಪ್ರಮಾಣಗಳು ಎಲ್ಲಿ ಹೋದುವು ? ದಳಪತಿಯೇ, ಮೊದಲಿನಂತೆ ದೃಢಚಿತ್ತನಾಗು. ನಾವು ಮಾಡಬೇಕಾದ ಕೆಲಸಗಳನ್ನು ನಮ್ಮೆಲ್ಲರಿಗೂ ಆಜ್ಞಾಪಿಸು. ನಾವು ಪ್ರಯಾಣಹೊರಟಾಗ ಜ್ಯೂಸನು ಬಲಗಡೆ ಸಿಡಿಲುಗುಡುಗುಗಳನ್ನು ಉಂಟುಮಾಡಿ ನಮಗೆ ಶುಭಶಕುನಗಳನ್ನು ದಯೆಪಾಲಿಸಿದುದು ಮರೆತು ಹೋಯಿತೆ ? ಆದಕಾರಣ ಹಿಂದಕ್ಕೆ ಓಡಿಹೋಗುವ ಸುದ್ದಿಯನ್ನು ಯಾರೇ ಆಗಲಿ ಎತ್ತದಿರಲಿ. ಯಾರು ಇದನ್ನು ಲಕ್ಷ್ಯಮಾಡದೆ ಜೀವಗಳ್ಳರಾಗಿ ತಪ್ಪಿಸಿಕೊಂಡು ತಮ್ಮ ಹಡಗುಗಳಿಗೆ ಓಡಿಹೋಗುವರೋ, ಅವರ ಹಿಂದೆಯೇ ಘೋರಮೃತ್ಯುವೂ ದುಷ್ಕೀರ್ತಿಯೂ ಬರುತ್ತಿರುವುವೆಂಬುದನ್ನು ಅಂತಹವರು ತಿಳಿದಿರಲಿ. ದಳಪತಿಯೇ ! ನಮ್ಮ ಈ ಸೈನ್ಯವನ್ನು ಆಯಾ ಸಂಸ್ಥಾನಗಳಿಗೆ ಅನುಸಾರವಾಗಿ ಬೇರೆಬೇರೆ ತುಕ್ಕಡಿಗಳಾಗುವಂತೆ ವಿಂಗಡಿಸು. ಹೀಗೆ ತುಕ್ಕಡಿಗಳಾಗಿ ನಿಂತು ಯುದ್ಧಮಾಡುತ್ತಿರುವಾಗ ಯಾವ ಗ್ರೀಕನಾದರೂ ಅಪಾರಶಕ್ತಿಸಾಹಸಗಳನ್ನು ತೋರ್ಪಡಿಸಿದರೆ ಅಂತಹವನಿಗೆ ಪುರಸ್ಕಾರವನ್ನೂ, ಮತ್ತೆಯಾವನಾದರೂ ಅಂಜುಬುರುಕುತನದಿಂದ ಯುದ್ಧಕ್ಕೆ ಹಿಂಜರಿದರೆ ಅಂತಹವನಿಗೆ ತಿರಸ್ಕಾರವನ್ನೂ ಉಂಟುಮಾಡಲು ಸುಲಭವಾಗುವುದು. ನಮ್ಮ ಕಾಲದಲ್ಲಿ ಯುದ್ಧ ಮಾಡುತ್ತಿದ್ದುದು ಈ ಕ್ರಮದಲ್ಲಿಯೇ. ನೀನೂ ಹೀಗೆಯೇ ಮಾಡಿದರೆ, ಟ್ರಾಯ್ ಪಟ್ಟಣವು ಹಸ್ತಗತವಾಗುವುದೋ ಇಲ್ಲವೋ ನಿನಗೇ ಗೊತ್ತಾಗುವುದು" ಎಂದು ಹೇಳಿದನು.

೩೭. ಬಳಿಕ ಅಗಮೆಮ್ನಾನನು ತನ್ನ ಅನುಯಾಯಿಗಳನ್ನು ಕುರಿತು— "ನೆಸ್ಟಾರನು ಹೇಳಿದಮಾತು ಸತ್ಯವು; ನಾನೂ ಏಕಿಲೀಸನೂ ಹೋರಾಡಿದುದೂ ಅವಿವೇಕವು. ಈಗಲೂ ನೀವೆಲ್ಲರೂ ನನ್ನ ಮಾತನ್ನು ಕೇಳಿ. ನಿಮ್ಮಲ್ಲಿ ಪ್ರತಿಯೊಬ್ಬನೂ ತನ್ನತನ್ನ ಕುದುರೆಗೆ ಮೇವನ್ನು ಹಾಕಿ, ಯುದ್ಧಕ್ಕೆ ಹೊರಡಲು ಸಿದ್ಧಮಾಡಿಕೊಳ್ಳಬೇಕು; ತನ್ನತನ್ನ ರಥವನ್ನು ಭದ್ರಪಡಿಸಿಕೊಳ್ಳಬೇಕು; ನಿಮ್ಮಲ್ಲಿ ಪ್ರತಿಯೊಬ್ಬನಿಗೂ ಬೆವರುಕಿತ್ತುಕೊಳ್ಳುವವರೆಗೂ, ಈಟಿಯನ್ನು ಹಿಡಿಯಲು ಕೈಸೋತುಹೋಗುವವರೆಗೂ, ಪ್ರತಿಕುದುರೆಯೂ ತನ್ನ ಮೈಯಬೆವರಿನಲ್ಲಿ ಮುಳು

ಗಿಹೋಗುವವರೆಗೂ, ಈ ದಿನ ಯುದ್ಧವು ನಡೆಯಲಿ. ಶತ್ರುವಿಗೆ ಬೆನ್ನುತೋರಿಸಿ ಯುದ್ಧಭೂಮಿಯಿಂದ ಯಾರು ಓಡಿಹೋಗುವರೋ ಅಂತಹ ಗ್ರೀಕರನ್ನು, ಈ ಪ್ರಪಂಚವನ್ನೇ ಕೊಡುವುದಾಗಿ ಹೇಳಿದರೂ, ನಾನು ಕ್ಷಮಿಸಲಾರೆನು. ಅಂತಹವರು ನಾಯಿಹದ್ದುಗಳ ಬಾಯಿಗೆ ತುತ್ತಾಗುವರೆಂಬುದು ಜ್ಞಾಪಕವಿರಲಿ” ಎಂದು ಹೇಳಿದನು. ಈ ಮಾತುಗಳನ್ನು ಕೇಳಿದಕೂಡಲೆ ಗ್ರೀಕರ ದಳಕ್ಕೆ ಉತ್ಸಾಹವು ಹುಟ್ಟಿ ಅವರು ಗರ್ಜಿಸುತ್ತ ತಮ್ಮ ಸಮ್ಮತಿಯನ್ನು ಸೂಚಿಸಿದರು. ಇದನ್ನು ಕಂಡು ಸಂತೋಷಪಟ್ಟು, ಅಗಮೆಮ್ನಾನನು ಐದು ವರುಷ ವಯಸ್ಸಿನ ಒಂದು ಗೂಳಿಯನ್ನು ಪಾಳೆಯದಿಂದ ತರಿಸಿ, ನೆಸ್ಟರ್ ಮುಂತಾದ ಪ್ರಮುಖರೊಡಗೂಡಿ ಅದನ್ನು ಜ್ಯೂಸಿಗೆ ಯಜ್ಞವಾಗಿ ಸಮರ್ಪಿಸಿದನು. ಈ ಸಮಯಕ್ಕೆ ಸರಿಯಾಗಿ ಮೆನೆಲಾಸನು ತನ್ನ ಅಣ್ಣನ ಸಹಾಯಕ್ಕಾಗಿ ಬಂದನು. ಯಜ್ಞಾನಂತರದಲ್ಲಿ ಯಜ್ಞಶೇಷವನ್ನು ಗ್ರೀಕರ ಪ್ರಮುಖರೂ ಇತರರೂ ಸೇವಿಸಿದರು. ಉಳಿದ ಗ್ರೀಕರುಗಳು ಸಮೃದ್ಧಿಯಾಗಿ ಭೋಜನವನ್ನು ಮಾಡಿ ಯುದ್ಧಕ್ಕೆ ಅಣಿಯಾದರು. ಆಗ ಅವರುಗಳಲ್ಲಿ ಪ್ರತಿಯೊಬ್ಬನಿಗೂ ಗಮನವು ಶತ್ರುವಿಜಯದಮೇಲೆ ಇದ್ದಿತೇ ಹೊರತು, ತನ್ನ ಹೆಂಡತಿಮಕ್ಕಳು ಮನೆಹೊಲಗಳ ಮೇಲೆ ಇರಲಿಲ್ಲ. ಪ್ರತಿಯೊಬ್ಬನ ಮುಖದಲ್ಲಿಯೂ ದೃಢಪ್ರತಿಜ್ಞೆಯ ಲಕ್ಷಣಗಳು ಕಂಡುಬರುತ್ತಿದ್ದುವು. ಇಷ್ಟಾದರೂ ಏಕಿಲೀಸನು ಮಾತ್ರ ತನ್ನ ಹಡಗುಗಳ ಬಳಿಯಲ್ಲಿಯೇ ನಿಶ್ಚಿಂತೆಯಿಂದ ಇದ್ದುಬಿಟ್ಟನು.

೩೮ ಅತ್ತ ಟ್ರೋಜನರ ಪಾಳೆಯದಲ್ಲಿ ಹೆಕ್ಟರನೇ ಮೊದಲಾದವರೂ ಸುಮ್ಮನಿರಲಿಲ್ಲ. ಅವರು ತಮ್ಮತಮ್ಮ ಸೈನ್ಯಗಳನ್ನು ಬೇರೆಬೇರೆಯಾಗಿ ವಿಂಗಡಿಸಿಕೊಂಡು, ಅಲ್ಲಲ್ಲಿ ದಿಬ್ಬಗಳಮೇಲೆ ಕೆಲವರು ಸೈನಿಕರು ಬೀಡುಬಿಟ್ಟುಕೊಂಡಿದ್ದರು. ಗ್ರೀಕರ ಪಾಳೆಯದಲ್ಲಿ ಎಲ್ಲೆಲ್ಲಿಯೂ ಶಾಂತಿಮಯವಾಗಿದ್ದಿತು. ಬಿಳಿಯ ಕೊಕ್ಕರೆಗಳ ಗುಂಪುಗಳು ವರ್ಷಕ್ಕೊಮ್ಮೆ ಬೇರೆ ಪ್ರದೇಶಗಳಿಗೆ ಹೊರಟು ಹೋಗುವಾಗಲೂ, ಅಲ್ಲಿಂದ ಸ್ವಸ್ಥಾನಕ್ಕೆ ಹಿಂದಿರುಗುವಾಗಲೂ ಹೇಗೆ ಅರಚಿಕೊಳ್ಳುತ್ತಿರುತ್ತವೋಹಾಗೆಯೇ ಟ್ರೋಜನರ ಪಾಳೆಯದಲ್ಲಿ ಬೇರೆಬೇರೆ ಭಾಷೆಗಳ*

* ಸಂಸ್ಕೃತಾಭಿಮಾನಿಗಳಾದ ಹಿಂದೂ ಆರ್ಯರು ಇತರ ಭಾಷೆಗಳನ್ನು ಮಾತನಾಡುವವರನ್ನು ಮ್ಲೇಚ್ಛರೆಂದು ನಿಕೃಷ್ಟವಾಗಿ ಭಾವಿಸುತ್ತಿದ್ದಂತೆ, ಗ್ರೀಕ್ ವಂಶದ ಆರ್ಯರೂ ಇತರ ಭಾಷೆಗಳನ್ನು ಆಡುತ್ತಿದ್ದ ತಮ್ಮ ನೆರೆಹೊರೆಯವರನ್ನು “ಬಾರ್ಬೇರಿಯನ್ಸ್” ಎಂದು ತುಚ್ಛವಾಗಿ ಕಾಣುತ್ತಿದ್ದರು.

ಸೈನಿಕರು ಕೂಗಿಕೊಳ್ಳುತ್ತಿದ್ದರು. ಅಲ್ಲಿ ಮನುಷ್ಯರೂ ಕುದುರೆಗಳೂ ದಡದಡನೆ ಓಡಾಡುತ್ತಿದ್ದ ಶಬ್ದವು ಕೇಳಿಬರುತ್ತಿದ್ದಿತು. ಎರಡು ಪಾಳೆಯಗಳಲ್ಲೂ ಯುದ್ಧ ಪ್ರಾರಂಭಕ್ಕೆ ಯಾವಾಗ ಸೂಚನೆಬಂದೀತೆಂದು ಯೋಧರು ಕಾದುಕೊಂಡಿದ್ದರು.

---

## VI.

೩೯. ಉಭಯಸೈನ್ಯಗಳವರೂ ಕುತೂಹಲಾವಿಷ್ಟರಾಗಿ ಹೀಗೆ ಕಾದು ಕೊಂಡಿದ್ದಾಗ, ಟ್ರೋಜನರ ಪಾಳೆಯದಿಂದ ಪ್ಯಾರಿಸ್ಸನು ಏಕಾಂಗಿಯಾಗಿ ಹೊರಬಿದ್ದನು. ಅವನು ಚಿರತೆಯ ಚರ್ಮವನ್ನು ಹೊದೆದಿದ್ದನು. ಅವನ ಕೈಯಲ್ಲಿ ಕತ್ತಿಯೂ ಬಿಲ್ಲೂ ಕಂಚಿನ ಅಲಗಿನ ಎರಡು ಈಟಿಗಳೂ ಇದ್ದುವು. ಪ್ಯಾರಿಸನು ಗ್ರೀಕರ ಪಾಳೆಯದ ಕಡೆಗೇ ಬರುತ್ತಿದ್ದುದನ್ನು ಮೆನೆಲಾಸನು ಕಂಡು, ವೇಗಶಾಲಿಯಾದ ಒಂದು ಜಿಂಕೆಯೋ ಅಥವಾ ಒಂದು ಕಾಡಾಡೋ ತನ್ನ ಬಳಿಗೇ ಬರುತ್ತಿರುವುದನ್ನು ಕಂಡರೆ ಕ್ಷುಧಾರ್ತವಾದ ಸಿಂಹವು ಹೇಗೆ ಸಂತೋಷಿಸುವುದೋ, ಹಾಗೆಯೇ ಹಿಗ್ಗುತ್ತಾ ಗ್ರೀಕರ ಪಾಳೆಯದಿಂದ ಹೊರಬಿದ್ದು ಅವನೊಡನೆ ಯುದ್ಧಕ್ಕೆ ಸಿದ್ಧನಾದನು. ಇಕ್ಕಟ್ಟಾದ ಕಣಿವೆಯ ದಾರಿಯಲ್ಲಿ ಹೆಬ್ಬಾವನ್ನು ನೋಡಿದ ಮನುಷ್ಯನು ಹೇಗೆ ಹೆದರಿ ದಿಗ್ಭ್ರಾಂತ ನಾಗುವನೋ, ಹಾಗೆಯೇ ಪ್ಯಾರಿಸನು ಮೆನೆಲಾಸನ್ನು ಕಂಡು ದಿಗ್ಭ್ರಾಂತ ನಾದನು. ಹೆಕ್ಟರನು ಪ್ಯಾರಿಸ್ಸಿನ ಈ ಪುಕ್ಕಲುತನವನ್ನು ಕಂಡು, ಅವನನ್ನು ಕುರಿತು "ಪ್ಯಾರಿಸ್! ಇದೇನು ಈ ನಾಚಿಕೆಗೇಡು? ಈ ನಿನ್ನ ಪುಕ್ಕಲು ತನವನ್ನು ಕಂಡು ಗ್ರೀಕರು ಎಷ್ಟು ಗಟ್ಟಿಯಾಗಿ ನಗುತ್ತಿರುವರು ನೋಡು! ಇಂತಹವನು ಆ ಕಾರ್ಯವನ್ನಾದರೂ ಹೇಗೆ ಮಾಡಿದೆ? ಬಂದುದೆಲ್ಲಾ ಬರಲಿ ಎಂದು ನಾವುಗಳೆಲ್ಲರೂ ನಿನಗಾಗಿ ಯುದ್ಧಕ್ಕೆ ನಿಂತುದು ಅನ್ಯಾಯವಾಯಿ ತಲ್ಲಾ!" ಎಂದು ಚೆನ್ನಾಗಿ ಹಂಗಿಸಿದನು. ಈ ನಿಂದಾವಚನಗಳನ್ನು ಕೇಳಿದ ಕೂಡಲೆ ಪ್ಯಾರಿಸ್ಸಿಗೆ ಜ್ಞಾನೋದಯವಾಯಿತು. ಆದುದರಿಂದ ಅವನು ಹೆಕ್ಟರನ್ನು ಕುರಿತು "ಅಣ್ಣಾ, ನಿನ್ನ ನಿಂದೆಯು ನ್ಯಾಯವಾದುದು. ಆದರೆ ನನಗೆ ಯುದ್ಧಕ್ಕಿಂತಲೂ ಶಾಂತಿಯ ಮೇಲೆಯೇ ಪ್ರೀತಿ ಹೆಚ್ಚು. ಆದುದರಿಂದ ಹಿಂದೆಗೆಯುತ್ತಿದ್ದೆನೇ ಹೊರತು, ಶೌರ್ಯರಾಹಿತ್ಯದಿಂದಲ್ಲ. ಈಗ ಮೆನೆಲಾಸಿ ನೊಡನೆ ಕಾದಾಡುವೆನು. ನಮ್ಮಿಬ್ಬರಲ್ಲಿ ಯಾರು ಜಯಶೀಲರಾಗುವರೋ

ಅವರಿಗೆ ಹೆಲೆನಳೂ ಅವಳು ತಂದಿರುವ ಅಪಾರವಾದ ಐಶ್ವರ್ಯವೂ ಲಭ್ಯವಾಗುವಂತೆ ಸಂಕೇತವನ್ನು ಏರ್ಪಡಿಸಿ ದ್ವಂದ್ವಯುದ್ಧಕ್ಕೆ ಸಿದ್ಧಪಡಿಸು" ಎಂದು ಹೇಳಿದನು.

೪೦. ಹೆಕ್ಟರನು ಈ ಮಾತುಗಳನ್ನು ಕೇಳಿ ಸಂತೋಷಪಟ್ಟು ಒಂದು ಈಟಿಯನ್ನು ಮಧ್ಯಭಾಗದಲ್ಲಿ ಹಿಡಿದುಕೊಂಡು ಗ್ರೀಕರ ಪಾಳೆಯದ ಹತ್ತಿರಕ್ಕೆ ಬಂದನು. ಹಾಗೆ ಹಿಡಿದಿದ್ದ ಈಟಿಯ ಸಂಕೇತವನ್ನು ಗ್ರೀಕರು ತಿಳಿಯದೆ, ತಮ್ಮ ಬಿಲ್ಲುಗಳಿಗೆ ಬಾಣಗಳನ್ನು ಹೂಡಲುದ್ಯುಕ್ತರಾದರು. ಅದನ್ನು ಅಗಮೆಮ್ನಾನನು ಕಂಡು "ಇದೇನು ಅನ್ಯಾಯ? ಹೆಕ್ಟರನು ನಮ್ಮೊಡನೆ ಮಾತನಾಡಿಕೊಂಡು ಹೋಗುವುದಕ್ಕಾಗಿ ಬರುತ್ತಿರುವನು. ನಮ್ಮಲ್ಲಿ ಯಾರಾದರೂ ಅವನ ಮೇಲೆ ಬಾಣವನ್ನು ಬಿಟ್ಟೀರಿ!" ಎಂದು ಗ್ರೀಕರನ್ನು ತಡೆದನು. ಹೆಕ್ಟರನು ಗ್ರೀಕರನ್ನು ಕುರಿತು—"ಎಲೈ ಯೋಧರುಗಳಿರಾ, ಪ್ಯಾರಿಸ್ಸನಿಂದ ಮಾತ್ರವೇ ಉಂಟಾಗಿರುವ ಅಪರಾಧಕ್ಕಾಗಿ, ಇಷ್ಟೊಂದು ಹಾನಿ ಏಕಾಗಬೇಕು? ಅವನಿಗೂ ಮೆನೆಲಾಸಿಗೂ ದ್ವಂದ್ವಯುದ್ಧವೊಂದು ನಡೆಯಲಿ. ಅವರಲ್ಲಿ ಯಾರು ಗೆದ್ದರೆ ಅವರಿಗೇ ಹೆಲೆನಳೂ ಅವಳ ಆಭರಣಗಳೂ ಸೇರಲಿ. ಆಮೇಲೆ ನಾವುನಾವು ಶಾಂತರಾಗುವ" ಎಂದು ಸೂಚಿಸಿದನು. ಅಗಮೆಮ್ನಾನನೂ ಇತರ ಗ್ರೀಕರೂ ಇದಕ್ಕೆ ಒಪ್ಪಿದರು. ಈ ದ್ವಂದ್ವಯುದ್ಧವು ನಡೆಯುವಾಗ ಉಭಯಪಕ್ಷದ ಯೋಧರುಗಳೂ ಶಾಂತರಾಗಿಯೇ ಇರುವಂತೆ ಪ್ರಮಾಣಮಾಡಬೇಕೆಂದು ನಿಬಂಧನೆಯಾಯಿತು. ಇದಕ್ಕಾಗಿ ಟ್ರೋಜನರ ವೃದ್ಧರಾಜನಾದ ಪ್ರಯಾಮನು, ಭೂಮಿಯನ್ನೂ ಸೂರ್ಯನನ್ನೂ ಸಾಕ್ಷಿಗಳನ್ನಾಗಿ ಮಾಡಿಕೊಂಡು, ಎರಡು ಕುರಿಯ ಮರಿಗಳನ್ನೂ ಅಗಮೆಮ್ನಾನನು ತನ್ನ ಕಡೆಯವರ ಪರವಾಗಿ ಒಂದು ಕುರಿಯಮರಿಯನ್ನೂ ಯಜ್ಞಮಾಡುವಂತೆ ಒಪ್ಪಿಗೆಯಾಯಿತು. ಈ ದ್ವಂದ್ವಯುದ್ಧವನ್ನು ನೋಡುವುದಕ್ಕೆ ಗ್ರೀಕರೆಲ್ಲರೂ ಕುತೂಹಲಿತರಾಗಿದ್ದರು; ಟ್ರೋಜನರಲ್ಲಿಯೂ ಉತ್ಸಾಹವು ತುಂಬಿತುಳುಕುತ್ತಿದ್ದಿತು. ಸ್ಕೀಯಾನ್ ಎಂಬ ಹೆಸರಿನ ಪುರದ್ವಾರದಬಳಿ ಇದ್ದ ಕೊತ್ತಲದ ಮೇಲೆ, ಪ್ರಯಾಮನು ಕುಳಿತಿದ್ದ ಸ್ಥಳಕ್ಕೆ ಹೆಲೆನಳು ಹತ್ತಿಬಂದಳು. ಪ್ರಯಾಮಿನ ಸುತ್ತಲೂ ವಯೋವೃದ್ಧರೂ ಜ್ಞಾನವೃದ್ಧರೂ ಆದ ಮಂತ್ರಿಗಳು ಕುಳಿತುಕೊಂಡು ಆ ದ್ವಂದ್ವಯುದ್ಧದ ಶುಭಾಶುಭಪರಿಣಾಮಗಳನ್ನು ಕುರಿತು ಮಾತನಾಡಿಕೊಳ್ಳುತ್ತಿದ್ದರು. ಎತ್ತರವಾದ ಪೊದೆಗಳಲ್ಲಿ ಹಸುರು ಚಿಟ್ಟೆಗಳು ಕುಳಿತು

ಶಬ್ದ ಮಾಡುತ್ತಿರುವುದು ದೂರದಲ್ಲಿರುವವರಿಗೆ ಹೇಗೆ ಅವ್ಯಕ್ತವಾಗಿ ಕೇಳಿಸುವುದೋ ಹಾಗೆಯೇ. ಆ ವೃದ್ಧರ ಸಂಭಾಷಣೆಯೂ ಆ ಕೊತ್ತಲಕ್ಕೆ ಸ್ವಲ್ಪ ದೂರದಲ್ಲಿ ನಿಂತಿದ್ದ ಟ್ರೋಜನರಿಗೆ ಕೇಳಿಸುತ್ತಿದ್ದಿತು.

೪೧. ಪ್ರಯಾಮಿನ ಬಳಿಯಲ್ಲಿ ಬಂದು ನಿಂತಿದ್ದ ಹೆಲೆನಳನ್ನು ನೋಡಿ ಆ ವೃದ್ಧರುಗಳು—"ಇಂತಹ ಸುಂದರಿಗಾಗಿ ಇಷ್ಟು ದೀರ್ಘಕಾಲ ಯುದ್ಧವು ನಡೆದು ಎಷ್ಟೋ ಪ್ರಾಣಹಾನಿಯುಂಟಾದುದರಲ್ಲಿ ವಿಶೇಷವೇನು? ಇವಳು ದೇವಕನ್ಯೆಯಂತಿರುವಳು. ಆದರೂ, ಪ್ಯಾರಿಸ್ಸನು ಈಕೆಯನ್ನು ಅಪಹರಿಸಿಕೊಂಡು ಬಂದುದು ನ್ಯಾಯವಲ್ಲ. ಈಗಲೂ ಇವಳನ್ನು ಗ್ರೀಕರಲ್ಲಿಗೆ ಕಳುಹಿಸಿಬಿಟ್ಟರೆ ರಾಜ್ಯಕ್ಕೆ ಕ್ಷೇಮವಾಗಬಹುದು" ಎಂದು ಹೇಳಿಕೊಂಡರು. ಪ್ರಯಾಮನು ಹೆಲೆನಳನ್ನು ತನ್ನ ಸಮೀಪಕ್ಕೆ ಕರೆದು. "ಮಗು, ಈ ಯುದ್ಧಗಳಿಗೆಲ್ಲಾ ನೀನೇ ಕಾರಣವೆಂದು ನಾನು ನಿನ್ನನ್ನು ದೂಷಿಸುವುದಿಲ್ಲ. ಬಾ! ಇಲ್ಲಿ ಕುಳಿತುಕೊ. ಈ ಯುದ್ಧಕ್ಕೆ ದೇವತೆಗಳೇ ಕಾರಣಭೂತರು. ಪ್ಯಾರಿಸ್ಸಿಗೂ ನಿನ್ನ ಪ್ರಥಮಪತಿಗೂ ನಡೆಯುವ ಈ ದ್ವಂದ್ವಯುದ್ಧವನ್ನು ನೋಡು" ಎಂದು ಪ್ರೀತಿಪೂರ್ವಕವಾಗಿ ಹೇಳಿ, ಇದಿರು ಸೈನ್ಯದಲ್ಲಿದ್ದ ಪ್ರಮುಖರ ಹೆಸರುಗಳನ್ನು ತಿಳಿಸುವಂತೆ ಅವಳನ್ನು ಕೇಳಿಕೊಂಡನು. ಇದಕ್ಕೆ ಅನುಸಾರವಾಗಿ ಆಕೆಯು ಇದಿರುಪಕ್ಷದ ಯೋಧಾಗ್ರಣಿಗಳಾಗಿದ್ದ ಅಗಮೆಮ್ನಾನ್, ಒಡಿಸಿಯುಸ್, ಇಬ್ಬರು ಏಯಾಸರು, ಐಡೊಮಿನಿಯುಸ್ ಮುಂತಾದವರನ್ನು ತೋರಿಸುತ್ತಾ ಅವರವರ ಚರಿತ್ರೆಗಳನ್ನು ವಿವರಿಸಿದಳು. ಹೆಲೆನಳು ಗ್ರೀಕರ ದಳದಲ್ಲೆಲ್ಲಾ ಹುಡುಕಿನೋಡಿದರೂ ತನ್ನ ಸಹೋದರರಾದ ಕ್ಯಾಸ್ಟರ್ ಪಾಲಿಡ್ಯೂಸಸ್ ಎಂಬವರನ್ನು ಮಾತ್ರ ಕಾಣದೆ, ಬಹಳ ಹಂಬಲಿಸುತ್ತಾ, ತನ್ನ ಅವಮಾನದಿಂದ ಅವರುಗಳು ಹಿಂದೆಗೆದು ಗ್ರೀಕರ ಪಾಳೆಯದಲ್ಲಿ ಎಲ್ಲಿಯೋ ನಿಂತಿರಬಹುದೆಂದೋ, ಅಥವಾ ಗ್ರೀಸಿನಲ್ಲಿಯೇ ನಿಂತುಬಿಟ್ಟಿರಬಹುದೆಂದೋ ಊಹಿಸಿಕೊಂಡಳು.

೪೨. ಈ ನಡುವೆ ಟ್ರಾಯ್ ಪಟ್ಟಣದಿಂದ ಎರಡು ಕುರಿಯಮರಿಗಳನ್ನೂ ದ್ರಾಕ್ಷಾರಸದಿಂದ ತುಂಬಿದ್ದ ಆಡಿನ ಚರ್ಮದ ಚೀಲವನ್ನೂ, ಚಿನ್ನದ ದೊಡ್ಡ ಪಾತ್ರೆಯೊಂದನ್ನೂ ಸಣ್ಣ ಬಟ್ಟಲುಗಳನ್ನೂ ಪ್ರಯಾಮನಿಗೆ ತಂದುಕೊಟ್ಟರು. ಆತನು ಆ ವಸ್ತುಗಳನ್ನು ತನ್ನ ರಥದಲ್ಲಿ ಇರಿಸುವಂತೆ ಆಜ್ಞಾಪಿಸಿ, ತಾನೂ

ರಥವನ್ನು ಹತ್ತಿ ಗ್ರೀಕರ ಪಾಳೆಯದ ಸಮೀಪಕ್ಕೆ ಬಂದನು. ಅದೇ ಸಮಯದಲ್ಲಿಯೇ ಗ್ರೀಕರ ಪ್ರಮುಖರೂ ತಮ್ಮ ಯಜ್ಞಸಾಮಗ್ರಿಗಳನ್ನು ತೆಗೆದುಕೊಂಡು ಬಂದರು. ಅನಂತರ ಎರಡು ಪಕ್ಷದವರೂ ತಂದಿದ್ದ ದ್ರಾಕ್ಷಾರಸವನ್ನು ಒಂದು ಬಟ್ಟಲಿಗೆ ತುಂಬಿಟ್ಟರು. ಅಗಮೆಮ್ನಾನಿನ ಕೈಗೂ ಪ್ರಯಾಮಿನ ಕೈಗೂ ಸ್ವಲ್ಪ ನೀರನ್ನು ಸುರಿದಾದಮೇಲೆ, ಅಗಮೆಮ್ನಾನನು ಮುಂದೆ ಬಂದು, ಕುರಿಯಮರಿಗಳ ಸ್ವಲ್ಪ ತುಪ್ಪಟವನ್ನು ಕತ್ತರಿಸಿ ಹಾಕಿದನು. ಕೂಡಲೆ ಎರಡು ಪಕ್ಷಗಳ ಘೋಷಕರೂ (Heralds) ಸಂಧಿಗೆ ವಿಘ್ನಮಾಡಿದವರಿಗೆ ಬಹಳ ಕೇಡುಂಟಾಗುವುದೆಂದು ಗಟ್ಟಿಯಾಗಿ ಕೂಗಿಹೇಳಿದರು. ಅನಂತರ ಅಗಮೆಮ್ನಾನನು ದೇವರನ್ನು ಕುರಿತು—"ಜಗತ್ಪಿತೃವಾದ ದೇವದೇವನೆ, ಸರ್ವಸಾಕ್ಷಿಯಾದ ಸೂರ್ಯನೆ, ಭೂದೇವತೆಯೆ, ಆಣೆಗಳಿಗೆ ತಪ್ಪುವವರನ್ನು ಇಹಲೋಕದಲ್ಲಿಯೂ ಪರಲೋಕದಲ್ಲಿಯೂ ಶಿಕ್ಷಿಸುವ ದೇವತೆಗಳೆ, ನಾವು ಈಗ ಮಾಡಿಕೊಳ್ಳುವ ನಿಬಂಧನೆಗಳಿಗೆ ನೀವುಗಳೆಲ್ಲರೂ ಸಾಕ್ಷಿಗಳಾಗಿರಿ. ಮೆನೆಲಾಸನ್ನು ಪ್ಯಾರಿಸ್ಸನು ಜಯಿಸಿದ ಪಕ್ಷದಲ್ಲಿ, ಹೆಲೆನಳನ್ನೂ ಅವಳು ತನ್ನೊಡನೆ ತೆಗೆದುಕೊಂಡುಬಂದಿರುವ ಎಲ್ಲಾ ಐಶ್ವರ್ಯವನ್ನೂ ಪ್ಯಾರಿಸ್ಸನೇ ಅನುಭವಿಸಬಹುದು. ಮೆನೆಲಾಸನೇ ಜಯಶೀಲನಾದಲ್ಲಿ, ಹೆಲೆನಳನ್ನೂ ಅವಳು ತಂದ ಐಶ್ವರ್ಯವನ್ನೂ ಮೆನೆಲಾಸನಿಗೇ ಒಪ್ಪಿಸಿಬಿಡಬೇಕಲ್ಲದೆ, ಯಥೋಚಿತವಾದ ಪರಿಹಾರದ್ರವ್ಯವನ್ನೂ ಟ್ರೋಜನರು ನಮಗೆ ಒಪ್ಪಿಸಬೇಕು ಪ್ಯಾರಿಸ್ಸನ್ನು ಜಯಿಸಿದ ಬಳಿಕಲೂ ಟ್ರೋಜನರು ಹೆಲೆನಳನ್ನೂ ಅವಳ ಆಭರಣಾದಿಗಳನ್ನೂ ದಂಡದ್ರವ್ಯವನ್ನೂ ಒಪ್ಪಿಸದಿದ್ದ ಪಕ್ಷದಲ್ಲಿ, ನಾವುಗಳು ಇಲ್ಲಿಯೇ ಕಾದಿ ಟ್ರೋಜನರನ್ನು ಧ್ವಂಸಮಾಡಿ ನಮಗೆ ಸಲ್ಲಬೇಕಾದುದನ್ನು ವಶಪಡಿಸಿಕೊಳ್ಳುವೆವು. ಈ ಪ್ರತಿಜ್ಞೆಗೆ ನೀವುಗಳೆಲ್ಲರೂ ಸಾಕ್ಷಿಗಳಾಗಿರಿ" ಎಂದು ಪ್ರಾರ್ಥಿಸಿ, ಕುರಿಯ ಮರಿಗಳ ಕತ್ತುಗಳನ್ನು ಕೊಯ್ದು ಅವನ್ನು ನೆಲದಮೇಲೆ ಹಾಕಿದನು. ಬಳಿಕ ಗ್ರೀಕರ ಪ್ರಮುಖರು ಪಣ್ಣಬಟ್ಟಲುಗಳಲ್ಲಿ ದ್ರಾಕ್ಷಾರಸವನ್ನು ತುಂಬಿಕೊಂಡು "ಮಹಾಮಹಿಮನಾದ ಜ್ಯೂಸನೆ, ಅಮರ್ತ್ಯರಾದ ದೇವತೆಗಳೆ, ಸದ್ಯದಲ್ಲಿ ನಾವುಗಳು ಮಾಡಿಕೊಂಡಿರುವ ಸಂಧಿಗೆ ಯಾರು ಭಂಗವನ್ನು ತರುವರೋ ಅವರುಗಳ ಮತ್ತು ಅವರ ಮಕ್ಕಳ ರಕ್ತವು ಈ ಕುರಿಮರಿಗಳ ರಕ್ತದಂತೆಯೇ ಪ್ರವಹಿಸಲಿ. ಅವರ ಹೆಂಡತಿಯರಿಗೆ ದಾಸೀತ್ವವುಂಟಾಗಲಿ" ಎಂದು ಪ್ರಾರ್ಥಿಸಿದರು. ಆದರೆ ಈ ಪ್ರಾರ್ಥನೆಯಾದ ಬಳಿಕ ಯಾವ ಶುಭಶಕುನವೂ ಕಂಡುಬಾರದಿದ್ದುದರಿಂದ, ಪ್ರಯಾಮಿಗೆ

ದಿಗಿಲುಂಟಾಯಿತು. ತನ್ನ ಕಣ್ಣೆದುರಿಗೆ ಪ್ಯಾರಿಸ್ಸನು ಹತನಾಗುವನೆಂದು ಹೆದರಿ, ಅಲ್ಲಿಯೇ ನಿಂತು ದ್ವಂದ್ವಯುದ್ಧವನ್ನು ನೋಡಲು ಇಷ್ಟವಿಲ್ಲದೆ, ಉಭಯ ಪಕ್ಷದವರ ಅನುಮತಿಯನ್ನು ಪಡೆದು ಇಲಿಯಮ್‌ದುರ್ಗಕ್ಕೆ ಹಿಂದಿರುಗಿದನು. ಅನಂತರ ಹೆಕ್ಟರನು ಮುಂದಕ್ಕೆ ಬಂದು ಇಬ್ಬರು ಯೋಧರುಗಳಲ್ಲಿ ಯಾರು ಮುಂಚೆ ಶಸ್ತ್ರಪ್ರಯೋಗವನ್ನು ಮಾಡತಕ್ಕದೆಂದು ನಿರ್ಧರಿಸುವುದಕ್ಕಾಗಿ ಚೀಟನ್ನು ಹಾಕಿದನು ಮೊದಲ ಸರದಿಯು ಪ್ಯಾರಿಸ್ಸಿಗೇ ಬಂದಿತು.

೪೩. ಉಭಯಪಕ್ಷದವರೂ ಬೇರೆಬೇರೆ ಪಾರ್ಶ್ವಗಳಲ್ಲಿ ಒರಸೆಯಾಗಿ ಕುಳಿತುಕೊಂಡು ತಮ್ಮ ಆಯುಧಗಳನ್ನು ತಮ್ಮ ಬಳಿಯಲ್ಲಿಯೇ ಇಟ್ಟುಕೊಂಡಿದ್ದರು ಅವರವರ ಕುದುರೆಗಳು ಅವರವರ ಸಮೀಪದಲ್ಲಿಯೇ ನಡೆದಿದ್ದುವು ಪ್ಯಾರಿಸ್ಸನು ತನ್ನ ಕಾಲುಗಳಿಗೆ ಏಟು ತಗುಲದಂತೆ ಕಬ್ಬಿಣದ ಕಾಲುಚೀಲಗಳನ್ನು ಹಾಕಿಕೊಂಡು ಅವುಗಳು ಸರಿಯಾಗಿ ನಿಲ್ಲುವಂತೆ ಬೆಳ್ಳಿಯಿಂದ ಮಾಡಿದ ಹಿಡಿಕೆಗಳನ್ನು (clasps) ಹಾಕಿಕೊಂಡನು ಆ ಬಳಿಕ, ತನ್ನ ಸಹೋದರನ ಕವಚವನ್ನು ತೊಟ್ಟು, ಒರೆಸಹಿತವಾದ ಕತ್ತಿಯನ್ನು ತನ್ನ ಸೊಂಟಕ್ಕೆ ಕಟ್ಟಿಕೊಂಡನು. ಅವನ ತೋಳಿನಮೇಲೆ ಗುರಾಣಿಯೊಂದಿದ್ದಿತು. ಅವನು ತಲೆಯಮೇಲೆ ಧರಿಸಿದ್ದ ಶಿರಸ್ತ್ರಾಣದ ಮೇಲ್ಗಡೆಯಲ್ಲಿ ಕುದುರೆಯ ಜವಿಯಿಂದ ಮಾಡಿದ್ದ ಒಂದು ಕುಚ್ಚು ಗಾಳಿಯಲ್ಲಿ ರಭಸದಿಂದ ಅತ್ತಿತ್ತ ಅಲ್ಲಾಡುತ್ತಿದ್ದಿತು. ಅವನು ತನ್ನ ಕೈಯಲ್ಲಿ ಭಾರವಾಗಿಯೂ ಉದ್ದವಾಗಿಯೂ ಇದ್ದ ಒಂದು ಈಟಿಯನ್ನು ಹಿಡಿದಿದ್ದನು. ಮೆನೆಲಾಸನೂ ಸ್ವಲ್ಪ ಹೆಚ್ಚುಕಡಿಮೆ ಹೀಗೆಯೇ ಸನ್ನದ್ಧನಾಗಿ ಮಲ್ಲಭೂಮಿಗೆ (ಅಖಾಡಕ್ಕೆ) ಬಂದಿಳಿದನು. ಕೂಡಲೆ ಪ್ಯಾರಿಸ್ಸನು ತನ್ನ ಈಟಿಯನ್ನು ಬಲವಾಗಿ ಮೆನೆಲಾಸಿನಮೇಲೆ ಪ್ರಯೋಗಿಸಿದನು. ಆದರೆ ಅವನ ಕಂಚಿನ ಕವಚಗುರಾಣಿಗಳಮೇಲೆ ಅದರ ಪ್ರಭಾವವೇನೂ ನಡೆಯಲಿಲ್ಲ. ಬಳಿಕ ಮೆನೆಲಾಸಿನ ಸರದಿಯು ಬಂದಿತು. ಅವನು ತನ್ನ ಈಟಿಯನ್ನು ಎಸೆಯುವುದಕ್ಕೆ ಮುಂಚೆ ತನ್ನ ಮನಸ್ಸಿನಲ್ಲಿ "ಭಗವಂತನೆ, ದುರಾತ್ಮನಾದವನಿಗೆ ತಕ್ಕ ಶಿಕ್ಷೆಯನ್ನು ಮಾಡುವುದಕ್ಕಾಗಿಯೇ ನಾನು ಈಗ ಯತ್ನಿಸುತ್ತಿರುವೆನು. ಈ ನನ್ನ ಶತ್ರುವಿಗೆ ಈಗ ಶಿಕ್ಷೆಯಾದ ಪಕ್ಷದಲ್ಲಿ, ಮುಂದೆ ಜನರು ತಮ್ಮ ಆಶ್ರಯದಾತರ ವಿಷಯದಲ್ಲಿಯೇ ಇಂತಹ ಹೀನಕೃತ್ಯವನ್ನು ಆಚರಿಸಲು ಹೆದರುವರು. ಆದುದರಿಂದ ನೀನು ನನ್ನ ಈ ಯತ್ನವನ್ನು ಸಫಲಗೊಳಿಸು" ಎಂದು ಪ್ರಾರ್ಥಿಸಿ

ತನ್ನ ಈಟಿಯನ್ನು ಪ್ರಯೋಗಿಸಿದನು. ಪ್ಯಾರಿಸ್ಸಿನ ಉಕ್ಕಿನ ಕವಚವು ಅದರ ರಭಸವನ್ನು ತಡೆಯಲಾರದೆ ಹೋಯಿತು. ಆದರೂ ಪ್ಯಾರಿಸ್ಸನು ಆ ಏಟನ್ನು ಬಹುಪ್ರಯಾಸದಿಂದ ಸಹಿಸಿಕೊಳ್ಳುವಷ್ಟರೊಳಗಾಗಿ, ಮೆನೆಲಾಸನು ಬೆಳ್ಳಿಯ ಒರೆಯಿಂದ ತನ್ನ ಕತ್ತಿಯನ್ನು ಹಿರಿದು ಪ್ಯಾರಿಸ್ಸಿನಮೇಲೆ ನುಗ್ಗಿ ಬಲವಾಗಿ ಬೀಸಿದನು. ಆದರೆ ಮೆನೆಲಾಸಿನ ಕತ್ತಿಯು ಚೂರುಚೂರಾಗಿಹೋಯಿತು. ತನ್ನ ಪ್ರಾರ್ಥನೆಯೆಲ್ಲ ವ್ಯರ್ಥವಾಯಿತಲ್ಲಾ! ಎಂದು ಮನಸ್ಸಿನಲ್ಲಿಯೇ ಮರುಗುತ್ತಾ, ಮೆನೆಲಾಸನು ನಿರಾಯುಧನಾಗಿಯೇ ಪ್ಯಾರಿಸ್ಸಿನಮೇಲೆ ನುಗ್ಗಿ ಅವನ ಶಿರಸ್ತ್ರಾಣದ ಕುದುರೆಯ ಜವಿಯ ಕುಚ್ಚನ್ನು ಹಿಡಿದು ಪ್ಯಾರಿಸ್ಸನ್ನು ತನ್ನ ಕಡೆಗೆ ಎಳೆಯುತ್ತಿದ್ದನು. ಈ ಸಮಯದಲ್ಲಿ ಹೊಂಬಣ್ಣದ ಒಂದು ಮೇಘವು ಮೆನೆಲಾಸಿನ ಕಣ್ಣಮುಂದೆ ಕಾಣಿಸಿಕೊಂಡು, ಪ್ಯಾರಿಸ್ಸನ್ನು ಮರೆಮಾಡಿಬಿಟ್ಟಿತು ಮೆನೆಲಾಸಿನ ಕೈಯಲ್ಲಿ ಪ್ಯಾರಿಸಿನ ಶಿರಸ್ತ್ರಾಣವಿದ್ದಿತೇಹೊರತು ಪ್ಯಾರಿಸ್ಸನು ಬೇರೆ ಕಾಣಿಸಲಿಲ್ಲ. ಅವನ ಅಭಿಮಾನದೇವತೆಯಾದ ಅಫ್ರೊಡೈಟಿಯು ಒಳ್ಳೆಯ ಸಮಯಕ್ಕೆ ಬಂದು ಮೆನೆಲಾಸಿನ ಕೈಯಿಂದ ಅವನನ್ನು ರಕ್ಷಿಸಿ, ಅವನನ್ನು ಹೆಲೆನಳ ಬಳಿಗೆ ಕರೆತಂದುಬಿಟ್ಟಿದ್ದಳು.

೪೪. ಯುದ್ಧಭೂಮಿಯಿಂದ ಓಡಿಬಂದಿದ್ದ ಪ್ಯಾರಿಸ್ಸನ್ನು ಕಂಡಕೂಡಲೆ, ಹೆಲೆನಳು ಅವನನ್ನು ಹಂಗಿಸಿ, ತನ್ನಲ್ಲಿ ದುಷ್ಟವೃತ್ತಿಯನ್ನು ಉಂಟುಮಾಡಿದ್ದುದಕ್ಕಾಗಿ ಅವನನ್ನು ಬಹಳವಾಗಿ ನಿಂದಿಸಿದಳು. ಆದರೆ ಪ್ಯಾರಿಸ್ಸಿನ ಮೃದುಮಧುರವಚನಗಳಿಂದ ಆಕೆಯ ಕೋಪತಾಪಗಳು ಸ್ವಲ್ಪಹೊತ್ತಿನಲ್ಲಿಯೇ ಶಾಂತವಾದುವು. ಇತ್ತ ಗ್ರೀಕರು ಯುದ್ಧಕ್ಷೇತ್ರದಿಂದ ಪ್ಯಾರಿಸ್ಸನು ತಪ್ಪಿಸಿಕೊಂಡು ಹೋದುದನ್ನು ಸ್ವಲ್ಪ ಹೊತ್ತಾದ ಬಳಿಕ ಕಂಡುಕೊಂಡು, ಅವರು ಟ್ರೋಜನರನ್ನು ಆ ಮೋಸಕ್ಕಾಗಿ ಬಹಳವಾಗಿ ದೂಷಿಸಿದರು. ಅಗಮೆಮ್ನಾನನು ಟ್ರೋಜನರನ್ನು ಕುರಿತು “ ನಮ್ಮನಮ್ಮ ನಿಬಂಧನೆಗಳಿಗನುಸಾರವಾಗಿ ದ್ವಂದ್ವಯುದ್ಧವು ನಡೆದು ನಿಮ್ಮ ಕಡೆಯ ಪ್ಯಾರಿಸ್ಸನು ಇಲ್ಲಿಂದ ತಲೆ ತಪ್ಪಿಸಿಕೊಂಡು ಹೊರಟುಹೋಗಿರುವನು. ಆದುದರಿಂದ ಜಯವು ನಮ್ಮದೇ ಆಗಿರುವುದು. ಹೆಲೆನಳನ್ನೂ ಅವಳಿಗಾಗಿ ಸಲ್ಲಬೇಕಾಗಿರುವ ದ್ರವ್ಯವನ್ನೂ ಈಗಲೇ ನಮಗೆ ತಂದೊಪ್ಪಿಸಿ. ನೀವು ಹೀಗೆ ಮಾಡಿದ ಪಕ್ಷದಲ್ಲಿ ನಮನಿಮಗೆ ಶಾಂತಿಯುಂಟಾದೀತೇಹೊರತು, ಇಲ್ಲದಿದ್ದರೆ ಯುದ್ಧವು ತಪ್ಪಲಾರದು ” ಎಂದು ಹೇಳಿದನು.

## VII

೪೫. ದೈವೇಚ್ಛೆಯು ಇದ್ದ ಪಕ್ಷದಲ್ಲಿ, ಒಂಬತ್ತು ವರ್ಷಗಳಿಂದಲೂ ನಡೆಯುತ್ತಿದ್ದ ಯುದ್ಧವು ಈಗ ಕೊನೆಗಾಣಬಹುದಾಗಿದ್ದಿತು. ಆದರೆ ಉಭಯ ಪಕ್ಷಗಳಿಗೂ ಸಮಾಧಾನವಾಗುವುದು ಹೀರಾದೇವಿಗೆ ಸಮ್ಮತವಾಗಿರಲಿಲ್ಲ. ಆದುದರಿಂದ ಆಕೆಯು ಅಥೆನಿಯನ್ನು ಟ್ರೋಜನರ ಪಾಳೆಯದಲ್ಲಿದ್ದ ಪ್ಯಾಂಡಾರಸ್ ಎಂಬವನ ಬಳಿಗೆ ಕಳುಹಿಸಿಕೊಟ್ಟಳು. ಈ ಪ್ಯಾಂಡಾರಸ್ಸನು ಶೂರನೇನೋ ಹೌದು. ಆದರೆ ಅವನ ವಂಶದವರಲ್ಲಿ ವಿಶ್ವಾಸದ್ರೋಹವು ಪರಂಪರೆಯಾಗಿ ಬಂದಿದ್ದಿತು. ಅಥೆನಿಯು ಟ್ರೋಜನರ ಕಡೆಯ ಒಬ್ಬ ವೀರನ ರೂಪದಲ್ಲಿ ಪ್ಯಾಂಡಾರಸ್ಸಿಗೆ ಕಾಣಿಸಿಕೊಂಡು, ಅಂತಹವನ ಮೂಲಕವೇ ದುಷ್ಕಾರ್ಯವು ನಡೆಯುವುದು ತಕ್ಕದೆಂದು ಭಾವಿಸಿ ಆಕೆಯು ಅವನಲ್ಲಿ ದುಷ್ಪ್ರವೃತ್ತಿಯನ್ನು ಉಂಟುಮಾಡಿದಳು. ಪ್ಯಾಂಡಾರಸ್ಸನು ತನ್ನ ದುರ್ಬುದ್ಧಿಗೆ ಅತಿಸುಲಭವಾಗಿ ವಶವಾಗಿಹೋಗಿ, ಕೊಂಬಿನಿಂದ ಮಾಡಿದ್ದ ತನ್ನ ಬಿಲ್ಲಿಗೆ ನರದಿಂದ ಹೊಸೆದು ಮಾಡಿದ್ದ ಹೆದೆಯನ್ನು ಏರಿಸಿ ಚೆನ್ನಾಗಿ ಗರಿಗಳನ್ನು ಕಟ್ಟಿದ್ದ ಒಂದು ಬಾಣವನ್ನು ತೆಗೆದುಕೊಂಡು ಮೆನೆಲಾಸನಮೇಲೆ ಪ್ರಯೋಗಿಸಲು ಸಿದ್ಧನಾಗಿದ್ದನು. ಹೀಗೆ ಮಾಡಿದರೆ ಟ್ರೋಜನರೆಲ್ಲರೂ ಬಹಳವಾಗಿ ಹೊಗಳುವರೆಂದೇ ಅವನು ತಿಳಿದುಕೊಂಡನು. ಆದುದರಿಂದ ಅವನು ತನ್ನ ಕಾರ್ಯವು ಅತ್ಯುತ್ತಮವಾದುದೆಂದು ಭಾವಿಸಿ ತನಗೆ ಜಯವುಂಟಾದ ಪಕ್ಷದಲ್ಲಿ ಧನುರ್ವಿದ್ಯಾಭಿಮಾನಿಯಾದ ಅಪೋಲೋದೇವನಿಗೆ ಒಂದುನೂರು ಕುರಿಯ ಮರಿಗಳನ್ನು ಯಜ್ಞವಾಗಿ ಅರ್ಪಿಸುವುದಾಗಿ ಹರಕೆಯನ್ನು ಕಟ್ಟಿಕೊಂಡು, ಚೆನ್ನಾಗಿ ಗುರಿನೋಡಿ ಮೆನೆಲಾಸಿನ ಮೇಲೆ ಒಂದು ಬಾಣವನ್ನು ಪ್ರಯೋಗಿಸಿದನು.

೪೬. ಆದರೆ, ತನ್ನ ಮಗುವಿನಮೇಲೆ ಕುಳಿತು ಬಾಧೆಯನ್ನುಂಟು ಮಾಡಲು ಯತ್ನಿಸುತ್ತಿರುವ ನೊಣಗಳನ್ನು, ಒಬ್ಬ ತಾಯಿಯು ಹೇಗೆ ತನ್ನ ಕೈಯಿಂದ ಬೀಸುತ್ತಾ ನಿವಾರಿಸುವಳೋ ಹಾಗೆಯೇ ಅಥೆನಿಯು ತನ್ನ ಆಶ್ರಿತನಾದ ಮೆನೆಲಾಸಿನ ಕಡೆಗೆ ವೇಗದಿಂದ ಬರುತ್ತಿದ್ದ ಆ ಬಾಣದ ರಭಸವು ಬಹಳ ಮಟ್ಟಿಗೆ ಕಡಿಮೆಯಾಗಿಹೋಗುವಂತೆ ಏರ್ಪಡಿಸಿದಳು. ಆದರೂ ಪ್ಯಾಂಡಾರಸ್ಸನು ಟ್ರೋಜನರಕಡೆ ಬಹಳ ಪ್ರಸಿದ್ಧನಾದ ಧನ್ವಿಯಾಗಿದ್ದನಾದುದರಿಂದ ಅವನ ಬಾಣವು ಮೆನೆಲಾಸನಿಗೆ ತಗುಲಿ ಅವನ ಪಟ್ಟಿಯಲ್ಲಿ ನಾಟಿಕೊಂಡಿತು.

ಅವನ ತೊಡೆ ಹಿಂಗಾಲು ಕಣಕಾಲುಗಳಮೇಲೆ ರಕ್ತವು ಕೋಡಿಹರಿಯ ತೊಡಗಿತು. ಇದನ್ನು ಅಗಮೆಮ್ನಾನನು ಕಂಡು, ನಡುಗುತ್ತಾ ಭ್ರಾತೃ ವಾತ್ಸಲ್ಯದಿಂದ ಮೆನೆಲಾಸಿನ ಬಳಿಗೆ ಓಡಿಬಂದನು. ಇಷ್ಟು ಹೊತ್ತಿಗೆ ಮೆನೆಲಾಸಿಗೆ ಮೂರ್ಛೆಯುಂಟಾಗಿದ್ದಿತು. ಅಗಮೆಮ್ನಾನನು "ಅಯ್ಯೋ ಸಹೋದರನೆ! ದ್ವಂದ್ವಯುದ್ಧಕ್ಕಾಗಿ ನಾವು ಸಂಧಿಮಾಡಿಕೊಂಡುದು ನಿನ್ನನ್ನು ಹೀಗೆ ಬಲಿಕೊಡುವುದಕ್ಕೇ ಆಯಿತಲ್ಲಾ! ಟ್ರೋಜನರು ತಮ್ಮ ಪ್ರಮಾಣವನ್ನು ಮೀರಿದರಲ್ಲಾ! ಇರಲಿ! ಇಂತಹ ವಿಶ್ವಾಸದ್ರೋಹವನ್ನು ದೇವತೆಗಳು ಎಂದಿಗೂ ಮೆಚ್ಚರು. ಪ್ರಿಯಾಮಿನ ಸುಖಸಂಪತ್ತುಗಳೆಲ್ಲವೂ ಇಂತಹ ವಿಶ್ವಾಸ ಭಂಗದಿಂದ ನಾಶವಾಗುವುದರಲ್ಲಿ ಸಂಶಯವಿಲ್ಲ. ಅಯ್ಯೋ, ಸಹೋದರ! ನೀನು ಇಲ್ಲಿ ಕಾಲವಾದರೆ, ನಾನು ಈ ಸೈನಿಕರೊಡನೆ ನಾಚಿಕೆಯಿಲ್ಲದೆ ಗ್ರೀಸಿಗೆ ಹೇಗೆ ಹಿಂದಿರುಗಲಿ?" ಎಂದು ಹಾಬಲಿಸುತ್ತಿದ್ದನು. ಇಷ್ಟುಹೊತ್ತಿಗೆ ಮೆನೆಲಾಸನು ಚೇತರಿಸಿಕೊಂಡು ತನಗೆ ಆಗಿದ್ದ ಗಾಯವು ಅಷ್ಟೊಂದು ಅಪಾಯ ಕರವಾದುದಲ್ಲವೆಂದೂ, ಆದುದರಿಂದ ಅಷ್ಟು ಚಿಂತಿಸಬೇಕಾಗಿಲ್ಲವೆಂದೂ ತನ್ನ ಅಣ್ಣನನ್ನು ಸಮಾಧಾನಪಡಿಸಿದನು.

೪೭. ಮೆನೆಲಾಸನು ಚೇತರಿಸಿಕೊಂಡು ಮಾತನಾಡಿದುದನ್ನು ಕಂಡು, ಅಗಮೆಮ್ನಾನನಿಗೆ ಅತ್ಯಂತಸಂತೋಷವಾಯಿತು. ಆತನು ಕೂಡಲೆ (ನಮ್ಮ ಧನ್ವಂತರಿಯೋಪಾದಿಯಲ್ಲಿದ್ದ) ಎಸ್ಕ್ಯುಲೇಪಿಯಸ್ಸಿನ ಮಗನಾದ ಮೆಕಾವನ್ ಎಂಬ ವೈದ್ಯನನ್ನು ತಮ್ಮಲ್ಲಿಗೆ ಬರಮಾಡಿಕೊಂಡು, ಚಿಕಿತ್ಸೆಯನ್ನು ಮಾಡಿ ಸಿದನು. ಆತನು ಬಂದು ಗಾಯವನ್ನು ಪರೀಕ್ಷಿಸಿ ಮೈಯಲ್ಲಿ ನಾಟಿ ಕೊಂಡಿದ್ದ ಬಾಣದ ಅಲಗನ್ನು ಉಪಾಯದಿಂದ ತನ್ನ ಬೆರಳುಗಳಿಂದಲೇ ತೆಗೆದು ಹಾಕಿ, ಮೆನೆಲಾಸನು ಧರಿಸಿದ್ದ ಉಡುಪುಗಳನ್ನು ಸಡಿಲಿಸಿ, ಗಾಯದ ಸುತ್ತಲೂ ಹೆಪ್ಪುಕಟ್ಟಿಕೊಂಡಿದ್ದ ರಕ್ತವನ್ನು ತೊಳೆದು, ಷೈರನ್ನಿನ ಮೂಲಕ ತನ್ನ ತಂದೆಯು ತಿಳಿದುಕೊಂಡು ತನಗೆ ಉಪದೇಶಿಸಿದ್ದ ಉತ್ತಮವಾದ ಔಷಧಗಳನ್ನು ಗಾಯಕ್ಕೆ ಹಾಕಿ ಕಟ್ಟಿ ವಾಸಿಮಾಡಿದನು.

೪೮. ಗ್ರೀಕರು ಹೀಗೆ ಬೇರೆ ವಿಷಯದಲ್ಲಿ ಮಗ್ನರಾಗಿದ್ದಾಗ, ಟ್ರೋಜನರು ಅವರಮೇಲೆ ಬೀಳಲಾಗಿ, ಕೂಡಲೆ ಗ್ರೀಕರೂ ಅವರಮೇಲೆ ಕಾದಾಡಿಸಿದರು. ಅಗಮೆಮ್ನಾನನು ಟ್ರೋಜನರ ದೌರಾತ್ಮ್ಯದಿಂದ ರೇಗಿ

ಹೋಗಿದ್ದ ಕಾರಣ, ಅವನು ಕಾಲನಡಿಗೆಯಿಂದಲೇ ಗ್ರೀಕರ ಪ್ರಮುಖರನೇಕರ ಬಳಿಗೆ ಹೋಗಿ ಅವರಿಗೆ ಮುಯ್ಯಿತೀರಿಸಿಕೊಳ್ಳುವುದರಲ್ಲಿ ಉತ್ಸಾಹವನ್ನು ಹೆಚ್ಚಿಸುತ್ತ ಬಂದನು. ಅಲ್ಲಲ್ಲಿ ಕೆಲವರು ಯುದ್ಧಕಾರ್ಯದಲ್ಲಿ ಅಷ್ಟೊಂದು ಉತ್ಸಾಹಯುಕ್ತರಾಗಿರಲಿಲ್ಲವಾದುದರಿಂದ, ಅವರನ್ನು ಬಲವಾಗಿ ಹಂಗಿಸಿ ಅವರಲ್ಲಿ ಯುದ್ಧಾಸಕ್ತಿಯನ್ನು ವೃದ್ಧಿಪಡಿಸಿದನು. ಐಡೋಮಿನಿಯಸ್, ಒಡಿಸಿಯಸ್ ಮುಂತಾದ ಇನ್ನೂ ಕೆಲವರು ಯುದ್ಧದಲ್ಲಿ ಆಸಕ್ತರಾಗಿದ್ದರೂ, ಅತ್ಯಂತೋತ್ಸಾಹಪೂರಿತನಾಗಿದ್ದ ಅಗಮೆಮ್ನಾನಿಗೆ, ತೃಪ್ತಿಯಿಲ್ಲದೆ ಅವರನ್ನು ಮತ್ತಷ್ಟು ಹುರಿದುಂಬಿಸಲು ಯತ್ನಿಸಿದನು. ಒಡಿಸಿಯಸ್, ಡೈಯೊಮಿಡೀಸ್ ಮುಂತಾದ ಕೆಲವರು ಗ್ರೀಕ್ ಪ್ರಮುಖರಿಗೆ ಇದು ಸರಿಬೀಳಲಿಲ್ಲ. ಆದರೂ ಅವರು ಅಗಮೆಮ್ನಾನಿನ ಮೇಲೆ ಪ್ರತಿಭಟಿಸಲಾರದೆ, ತಮ್ಮತಮ್ಮ ಕೆಲಸದಲ್ಲಿ ಮತ್ತಷ್ಟು ನಿರತರಾಗಿದ್ದರು.

೪೯. ನೆಸ್ಟಾರನು ತನ್ನ ಸೈನ್ಯವನ್ನು ಓರಣವಾಗಿ ನಿಲ್ಲಿಸಿಕೊಂಡಿದ್ದನು. ಮುಂದಿನ ಸಾಲಿನಲ್ಲಿ ಸಾದಿಗಳ ಮತ್ತು ರಥಿಕರ ಶ್ರೇಣಿಯಿದ್ದಿತು. ಅವರ ಹಿಂದೆ ಪದಾತಿಸೇನೆಯು ಸಾಂದ್ರವಾಗಿಯೂ ಒರಸೆಯಾಗಿಯೂ ನಿಂತಿದ್ದಿತು. ಈ ಎರಡುಬಗೆಯ ಸೈನ್ಯಗಳ ನಡುವೆ ಯುದ್ಧವಿಷಯದಲ್ಲಿ ಅಷ್ಟೊಂದು ಆಸಕ್ತಿಯಿಲ್ಲದವರ ಗುಂಪನ್ನು ಆತನು ನಿಲ್ಲಿಸಿದ್ದನು. ಆತನು ತನ್ನ ಕಡೆಯವರನ್ನು ಕುರಿತು, “ನಿಮ್ಮ ಕುದುರೆಗಳನ್ನು ಎಚ್ಚರಿಕೆಯಿಂದ ನಡೆಸಿ. ಅವುಗಳನ್ನು ವೃಥಾ ದಣಿಸಬೇಡಿ. ನಿಮ್ಮ ಶ್ರೇಣಿಯು ಒಡೆದುಹೋಗದಂತೆ ನೋಡಿಕೊಳ್ಳಿ, ಗದ್ದಲ ಮಾಡಿಕೊಳ್ಳಬೇಡಿ. ದುಡುಕಿ ಕೆಲಕೆಲವರೇ ಮುಂದೆ ನುಗ್ಗಿಬಿಡಬೇಡಿ. ನಿಮ್ಮ ನಿಮ್ಮ ಇದಿರಾಳುಗಳನ್ನು ಅವರವರ ಕುದುರೆಗಳಿಂದ ಕೆಳಕ್ಕೆ ಬೀಳುವಂತೆ ನಿಮ್ಮ ಈಟಿಗಳಿಂದ ತಿವಿಯಿರಿ. ಅವರು ಕುದುರೆಗಳಿಂದ ಕೆಳಗೆ ಬಿದ್ದರೆಂದರೆ, ಅವರನ್ನು ಜಯಿಸುವುದು ಬಹಳ ಸುಲಭ. ನಮ್ಮ ಹಿರಿಯರು ಇಂತಹ ಕ್ರಮಗಳನ್ನು ಅನುಸರಿಸಿಯೇ ಎಷ್ಟೊ ಶತ್ರುಗಳ ದುರ್ಗಗಳನ್ನೂ ನೆಲಸಮಮಾಡಿ ದೂಳುಗೂಡಿಸಿಬಿಟ್ಟಿರುವರು” ಎಂದು ಬೋಧಿಸುತ್ತಿದ್ದನು, ಇದನ್ನು ಕೇಳಿ ಅಗಮೆಮ್ನಾನನು ಸೈನ್ಯದಲ್ಲೆಲ್ಲಾ ವೃದ್ಧಪಿತಾಮಹನಂತಿದ್ದ ನೆಸ್ಟಾರನ್ನು ಬಹಳವಾಗಿ ಶ್ಲಾಘಿಸುತ್ತ ಮುಂದುಮುಂದಕ್ಕೆ ಹೋಗಿ, ಕಣ್ಣಿಗೆ ಕಂಡುಬಂದ ಗ್ರೀಕರ ಪ್ರಮುಖರಿಗೆಲ್ಲಾ ಉತ್ಸಾಹದಿಂದ ಹುರಿದುಂಬಿಸುತ್ತ ಬಂದನು.

೫೦. ಈ ಸಮಯದಲ್ಲಿ ಟ್ರೋಜನರ ದಳದಲ್ಲಿ ಎಲ್ಲಿ ನೋಡಿದರೂ ಬಹಳ ಗದ್ದಲವಾಗುತ್ತಿದ್ದಿತು. ಆ ಶಬ್ದವನ್ನ ಕೇಳಿದರೆ ಒಬ್ಬ ಧನಿಕನ ಕುರಿಯ ಮಂದೆಯಲ್ಲಿ ಹಾಲುಕರೆಯುವಾಗ, ಅನೇಕ ತಾಯಿಕುರಿಗಳು ತಮ್ಮತಮ್ಮ ಮರಿಗಳ ಕೂಗಿಗೆ ಪ್ರತಿಯಾಗಿ 'ಬ್ಯಾ !' 'ಬ್ಯಾ !' ಎಂದು ಅರಿಚಿಕೊಳ್ಳುವ ಶಬ್ದದಂತೆ ತೋರುತ್ತಿದ್ದಿತು. ನಾನಾಕುಲಗಳ ಜನರು ಟ್ರೋಜನರ ದಳದಲ್ಲಿ ಸೇರಿದ್ದುದರಿಂದ, ಅವರ ಭಾಷೆಗಳು ಬಗೆಬಗೆಯಾಗಿದ್ದುವು. ಟ್ರೋಜನರ ಪಾಳೆಯದಲ್ಲಿ ಗದ್ದಲವು ಕ್ಷಣಕ್ಷಣಕ್ಕೂ ಹೆಚ್ಚುತ್ತಿದ್ದಿತು. ಸ್ವಲ್ಪಹೊತ್ತಿನಲ್ಲೇ ಉಭಯಪಕ್ಷದವರೂ ಕತ್ತಿ, ಗುರಾಣಿ, ಬಿಲ್ಲು, ಬಾಣ, ಈಟಿ, ಇವುಗಳನ್ನು ಹಿಡಿದು ಒಬ್ಬರಮೇಲೊಬ್ಬರು ನುಗ್ಗಿ ಬಂದು ಕಾದತೊಡಗಿದರು. ಆ ಉಭಯ ಸೇನೆಗಳೂ ಒಬ್ಬರಮೇಲೊಬ್ಬರು ನುಗ್ಗಿ ಬರುತ್ತಿದ್ದುದನ್ನು ನೋಡಿದರೆ, ಬೆಟ್ಟಗಳಿಂದ ದಡದಡನೆ ಹರಿದುಬರುವ ಝರಿಗಳು ಒಂದರೊಡನೆ ಒಂದು ಸಂಧಿಸುವಾಗ ಉಂಟಾಗುವ ಶಬ್ದವು ದೂರದಲ್ಲಿರುವ ಕುರುಬರಿಗೆ ಹೇಗೆ ಭಯಂಕರವಾಗಿ ಕೇಳಿಸುವುದೋ, ಹಾಗೆಯೇ ಪ್ರೇಕ್ಷಕರಿಗೆ ಕೇಳಬರುತ್ತಿದ್ದಿತು. ನೆಸ್ಟರನ ಮಗನಾದ ಆಂಟಿಲೋಕಸನು ಟ್ರೋಜನರ ಕಡೆಯ ಥ್ಯಾಲಿಸ್ ಎಂಬೊಬ್ಬ ವೀರನನ್ನು ಒಂದು ಬಾಣದಿಂದ ಛೇದಿಸಿ, ಅವನನ್ನು ಕೊಂದು ಮಲಗಿಸಿಬಿಟ್ಟನು. ಅವನ ಆಯುಧಕವಚಗಳನ್ನು ವಶಪಡಿಸಿಕೊಳ್ಳಬೇಕೆಂದು ಉಭಯ ಪಕ್ಷದವರೂ ಬಹಳವಾಗಿ ಕಾದಿದರು. ಏಯಾಸನೂ ಮತ್ತೊಬ್ಬ ಟ್ರೋಜನ್ ಪ್ರಮುಖನ ಎದೆಯನ್ನು ಸೀಳಿಕೆಡಹಿದನು. ಟ್ರೋಜನರೂ ಗ್ರೀಕರ ಕಡೆಯವರಲ್ಲಿ ಅನೇಕರನ್ನು ಕೊಂದರು. ಪ್ರಯಾಮಿನ ಮಗನಾದ ಆಂಟಿಫಸ್ ಎಂಬವನು ಏಯಾಸಿನಮೇಲೆ ಪ್ರಯೋಗಿಸಿದ ಬಾಣವು ಒಡಿಸಿಯಸ್ಸಿನ ಮಿತ್ರನೊಬ್ಬನನ್ನು ಕೊಂದುಬಿಟ್ಟಿತು. ಇದರಿಂದ ಕ್ಷುಭಿತನಾದ ಒಡಿಸಿಯಸ್ಸನು ತನ್ನ ಈಟಿಯನ್ನು ತೂಗುತ್ತಾ ಯಾವ ಶತ್ರುವಿನಮೇಲೆ ಪ್ರಯೋಗಿಸಬಹುದೆಂದು ಗುರಿನೋಡುತ್ತಿದ್ದನು. ಅವನು ಪ್ರಯಾಮಿನ ಮಕ್ಕಳುಗಳಲ್ಲಿ ಒಬ್ಬನಮೇಲೆ ಆ ಈಟಿಯನ್ನು ಪ್ರಯೋಗಿಸಲು, ಅದು ಅವನ ಎರಡು ಕಪೋಲಗಳನ್ನೂ ಭೇದಿಸಿ ಅವನ ಪ್ರಾಣವನ್ನು ಹಾರಿಸಿಬಿಟ್ಟಿತು.

೫೧. ಆ ದಿನದ ಯುದ್ಧದಲ್ಲಿ ಹೆಕ್ಟರನೂ ಹಿಮ್ಮೆಟ್ಟಬೇಕಾಯಿತು. ಇದಿರುಪಕ್ಷದವರಲ್ಲಿ ಯಾರಾದರೂ ತಮ್ಮ ದಳದಲ್ಲಿ ಕಾದಾಡಿ ಸತ್ತರೆ ಕೂಡಲೆ

ಅವರ ಶಸ್ತ್ರಕವಚಾದಿಗಳನ್ನು ತಮ್ಮ ವಶಪಡಿಸಿಕೊಳ್ಳುತ್ತಿದ್ದುದು ಆ ಕಾಲದಲ್ಲಿ ವಾಡಿಕೆಯಾಗಿದ್ದಿತು. ಟ್ರೋಜನರು ಹಿಮ್ಮೆಟ್ಟುತ್ತಿದ್ದುದನ್ನು ಅವರ ಅಭಿಮಾನ ದೇವತೆಯಾದ ಅಪೋಲೋದೇವನು ಕಂಡು, ಅವರನ್ನು ಕುರಿತು—"ಟ್ರೋಜನರೇ, ಇದೇಕೆ ಹೀಗೆ ಹೆದರುವಿರಿ? ಏಕಿಲೀಸನು ಇದಿರುಪಕ್ಷದಲ್ಲಿ ಯುದ್ಧ ಮಾಡುತ್ತಿಲ್ಲ. ಆದುದರಿಂದ ನೀವು ಹೆದರಬೇಕಾಗಿಲ್ಲ" ಎಂದು ಅವರನ್ನು ಉತ್ತೇಜನಗೊಳಿಸುತ್ತಿದ್ದನು. ಗ್ರೀಕರನ್ನು ಅಥೀನಿದೇವಿಯು ಪ್ರೋತ್ಸಾಹಿಸುತ್ತಿದ್ದಳು.

---

## VIII

೫೨. ಗ್ರೀಕರ ಕಡೆಯ ಪ್ರಮುಖರಲ್ಲಿ ಒಬ್ಬನಾದ ಡೈಯೊಮಿಡೀಸನು ಬಹಳ ಶಕ್ತಿಸಾಹಸಗಳನ್ನು ತೋರಿಸುತ್ತ ಕಾದಾಡುತ್ತಿದ್ದನು. ಅವನು ತನ್ನ ಅಭಿಮಾನದೇವತೆಯಾದ ಅಥೀನಿಯನ್ನು ಬಹುಭಕ್ತಿಯಿಂದ ಪ್ರಾರ್ಥಿಸಿಕೊಳ್ಳಲು ಆಕೆಯು ಅವನಿಗೆ ಪ್ರತ್ಯಕ್ಷಳಾಗಿ, ಅವನ ಸುತ್ತಲೂ ಒಂದು ಪ್ರಭಾವಳಿಯು ಕಾಣಿಸಿಕೊಳ್ಳುವಂತೆಯೂ, ಅವನ ಮನಸ್ಸಿನಲ್ಲಿ ಧೈರ್ಯೋತ್ಸಾಹಗಳು ತುಂಬಿ ತುಳುಕುವಂತೆಯೂ ಅನುಗ್ರಹಿಸಿದಳು. ಈ ಸಮಯದಲ್ಲಿ ಟ್ರೋಜನರ ಕಡೆಯ ಅನೇಕಶೂರರು ಡೈಯೋಮಿಡೀಸಿನ ಮೇಲೆ ಕಾಣಿಸಿಕೊಂಡರೂ, ಅವರ ಮೇಲೆಲ್ಲಾ ಅವನು ಧೈರ್ಯದಿಂದ ಕಾದುತ್ತಿದ್ದನು. ಅಗಮೆಮ್ನಾನನೂ ಐಡೊಮಿನಿಯಸ್ಸನೂ ತಮ್ಮನ್ನು ಇದಿರಿಸಿದ ಅನೇಕ ಟ್ರೋಜನ್ ವೀರರನ್ನು ಕೊಲ್ಲುತ್ತಿದ್ದರು. ಕ್ರೀಟ್‌ದ್ವೀಪದಿಂದ ಐಡೊಮಿನಿಯಸ್ಸಿನ ಹಿಂದೆಯೇ ಬಂದಿದ್ದ ಮೆರಿಯೋನಸ್ ಎಂಬ ಒಬ್ಬ ಗ್ರೀಕ್ ವೀರನು ಫೆರೆಕ್ಲಸ್ ಎಂಬ ಟ್ರೋಜನ್ ವೀರನನ್ನು ಕೊಂದುಹಾಕಿದನು. ಈ ಫೆರೆಕ್ಲಸ್ಸಿನ ತಂದೆಯಾದ ಹರ್ಮನ್ ಎಂಬವನೇ ಪ್ಯಾರಿಸನು ಗ್ರೀಸಿಗೆ ಹೋಗಿ ಹೆಲೆನಳನ್ನು ಹೊತ್ತುಕೊಂಡು ಬರಲು ಸಹಾಯವಾಗುವಂತೆ ಅವನಿಗೆ ಹಡಗುಗಳನ್ನು ಕಟ್ಟಿಕೊಟ್ಟಿದ್ದನು. ಪ್ಯಾಂಡಾರಸ್ಸನು ತನ್ನ ರಥದಲ್ಲಿ ಕುಳಿತು ಬಿಲ್ಲುಬಾಣಗಳನ್ನು ಹಿಡಿದು ಡೈಯೋಮಿಡೀಸಿನಮೇಲೆ ಕಾಣಿಸಿಕೊಂಡನು. ಡೈಯೋಮಿಡೀಸನು ನೆಲದ ಮೇಲೆಯೇ ನಿಂತು ಯುದ್ಧಮಾಡುತ್ತಿದ್ದನು ಪ್ಯಾಂಡಾರಸ್ಸನು ತನ್ನ ಬಿಲ್ಲನ್ನು ಆಕರ್ಣಾಂತವಾಗಿ ಎಳೆದು ಒಂದು ಬಾಣವನ್ನು ಚೆನ್ನಾಗಿ ಗುರಿಕಟ್ಟಿ ಡೈಯೊಮಿಡೀಸಿನಮೇಲೆ ಪ್ರಯೋಗಿಸಲು ಅದು ಅವನ ಭುಜಪ್ರದೇಶದಲ್ಲಿ ನಾಟಿಕೊಂ

ಡಿತು. ಇದನ್ನು ಕಂಡು ಡೈಯೊಮಿಾಡಿಯು ಹಿಗ್ಗುತ್ತಾ “ ಶತ್ರುಶೂರನ ಪಾಡು ಮುಗಿಯಿತು! ಬನ್ನಿ ” ಎಂದು ತನ್ನ ಕಡೆಯವರನ್ನು ಕರೆದನು. ಡೈಯೊಮಿಾಡೀಸನು ಸ್ವಲ್ಪದೂರದಲ್ಲಿದ್ದ ತನ್ನ ರಥದ ಬಳಿಗೆ ಹೋಗಿ, ತನ್ನ ಸಾರಥಿಯಾದ ಸ್ಥೆನೆಲಸ್ ಎಂಬಾತನನ್ನು ಕರೆದು, ತನ್ನ ಭುಜದಲ್ಲಿ ನಾಟಿಕೊಂಡಿದ್ದ ಬಾಣವನ್ನು ತೆಗಿಸಿ, ತನ್ನ ಇಷ್ಟದೈವವಾದ ಅಥೆನಿಯನ್ನು ಪ್ರಾರ್ಥಿಸಿದನು. ಆ ದೇವಿಯು ಅವನ ಪ್ರಾರ್ಥನೆಯನ್ನು ಲಾಲಿಸಿ, ಅವನಿಗೆ ಪುನಃ ಕಾಣಿಸಿಕೊಂಡು. ಒಂದು ದಿವ್ಯೌಷಧದ ಮಾಹಾತ್ಮ್ಯದಿಂದ ಅವನ ಗಾಯವನ್ನು ಕ್ಷಣಮಾತ್ರದಲ್ಲಿ ವಾಸಿಮಾಡಿದುದೂ ಅಲ್ಲದೆ ಡೈಯೊಮಿಾಡೀಸಿನ ಮನಸ್ಸಿನಲ್ಲಿ ಅವನ ತಂದೆಯ ಧೈರ್ಯೋತ್ಸಾಹಗಳು ಉಂಟಾಗುವಂತೆಯೂ, ಅವನ ದೃಷ್ಟಿಗೆ ಆವರೆಗೂ ಕವಿದುಕೊಂಡಿದ್ದ ಪೊರೆಯು ಹೋಗುವಂತೆಯೂ, ಅದರಿಂದ ಇದಿರುಪಕ್ಷದಲ್ಲಿ ಕಾದಾಡುತ್ತಿದ್ದವರಲ್ಲಿ ದೇವತೆಗಳು ಯಾರು ಮನುಷ್ಯರು ಯಾರು ಎಂಬುದನ್ನು ಸುಲಭವಾಗಿ ಕಂಡುಕೊಳ್ಳುವಂತೆಯೂ ಅವನಿಗೆ ಅನುಗ್ರಹಿಸಿದಳು. ಇದೂ ಅಲ್ಲದೆ ಆಕೆಯು ಆಫ್ರೊಡೈಟಿದೇವಿಯೊಬ್ಬಳಮೇಲೆ ಹೊರತು ಮಿಕ್ಕ ದೇವತೆಗಳಮೇಲೆ ಕೈಮಾಡಕೂಡದೆಂದು ಡೈಯೊಮಿಾಡೀಸಿಗೆ ಬುದ್ಧಿವಾದವನ್ನು ಹೇಳಿ ಅವನನ್ನು ಪುನಃ ಯುದ್ಧಕ್ಕೆ ಕಳುಹಿಸಿಕೊಟ್ಟಳು.

೫೩. ಅನಂತರ, ಅತ್ಯುತ್ಸಾಹದಿಂದ ಯುದ್ಧಮಾಡುತ್ತಾ ಟ್ರೋಜನರ ಅನೇಕ ವೀರರನ್ನು ಕೊಲ್ಲುತ್ತಾ ಬರುತ್ತಿದ್ದ ಡೈಯೊಮಿಾಡೀಸನ್ನು ಟ್ರೋಜನರ ವೀರರಲ್ಲಿ ಪ್ರಸಿದ್ಧನಾದ ಈನಿಯಾಸನು ಕಂಡು ತನ್ನ ಸ್ನೇಹಿತನಾದ ಪ್ಯಾಂಡಾರಸ್ಸಿನ ಬಳಿಗೆ ಹೋಗಿ—‘ ಅಗೋ! ಅಲ್ಲಿ ನೋಡು! ಆ ಗ್ರೀಕ್ ವೀರನ ಮೇಲೆ ನಿನ್ನ ಧನುರ್ವಿದ್ಯಾಕೌಶಲವನ್ನು ಪ್ರಯೋಗಿಸಿದರೆ, ಯುಕ್ತಕಾರ್ಯವನ್ನು ಮಾಡಿದಂತಾಗುವುದು ” ಎಂದು ಹೇಳಲು, ತಾನು ಅವನಮೇಲೆ ಹಿಂದೆಯೇ ಒಂದುಸಾರಿ ಪ್ರಯೋಗಿಸಿದ್ದ ಬಾಣವು ವ್ಯರ್ಥವಾಯಿತೆಂದು ಪ್ಯಾಂಡಾರಸ್ಸನು ತಿಳಿಸಿ, ಡೈಯೊಮಿಾಡೀಸಿಗೆ ದೈವಾನುಗ್ರಹವು ಬಲವಾಗಿರುವುದೆಂದೂ, ತಾನು ಯುದ್ಧಕ್ಕೆ ಬಂದಾಗ ತನ್ನ ಅರಮನೆಯ ಲಾಯದಲ್ಲಿದ್ದ ಉತ್ತಮಾಶ್ವಗಳನ್ನು ತಾರದೆ ಹೋದುದು ಅನ್ಯಾಯವಾಯಿತೆಂದೂ, ವ್ಯಥೆಯಿಂದ ಹೇಳಿಕೊಂಡನು. ಆಗ ಈನಿಯಾಸನು ಪ್ಯಾಂಡಾರಸ್ಸನ್ನು ತನ್ನ ರಥದಲ್ಲಿ ಕುಳ್ಳಿರಿಸಿಕೊಳ್ಳಲು, ಅವರಿಬ್ಬರೂ ಸ್ವಲ್ಪಹೊತ್ತು ಡೈಯೊಮಿಾಡೀಸನ್ನು ಇದಿರಿಸಿದರು. ಬಳಿಕ ಪ್ಯಾಂಡಾ

ರಸ್ಸನು ಕೆಳಕ್ಕೆ ಇಳಿದು ತನ್ನ ಕೈಯಲ್ಲಿ ಈಟಿಗುರಾಣಿಗಳನ್ನು ಹಿಡಿದು ಡೈಯೊಮಿಾಡೀಸಿನಮೇಲೆ ಯುದ್ಧಕ್ಕೆ ನಿಂತನು. ಈನಿಯಾಸನು ತನ್ನ ರಥವನ್ನು ನಡೆಸಿಕೊಂಡು, ಪಾದಚಾರಿಯಾಗಿಯೇ ಯುದ್ಧಮಾಡುತ್ತಿದ್ದ ಡೈಯೊಮಿಾಡೀಸಿನ ಬಳಿಗೆ ಬಂದನು. ಆ ಇಬ್ಬರು ಯೋಧರನ್ನೂ ಕಂಡು ಸ್ಥೆನೆಲಸ್ಸನು ರಥವನ್ನು ಹತ್ತಬೇಕೆಂದು ಡೈಯೊಮಿಾಡೀಸನ್ನು ಕರೆದನು. ಆದರೆ ಡೈಯೊಮಿಾಡೀಸನು ದೈವಸಹಾಯದಿಂದ ಅವರಿಬ್ಬರನ್ನೂ ಅಣಗಿಸಿಬಿಡುವುದಾಗಿ ಅವನಿಗೆ ತಿಳಿಸಿ, ತನ್ನ ಪ್ರತಿದ್ವಂದ್ವಿಗಳು ಧ್ವಂಸವಾದಾಗ ಈನಿಯಾಸಿನ ಪ್ರಖ್ಯಾತವಾದ ದಿವ್ಯಾಶ್ವಗಳನ್ನು ವಶಪಡಿಸಿಕೊಳ್ಳಬೇಕೆಂದು ಸ್ಥೆನೆಲಾಸಿಗೆ ಬೋಧಿಸಿದನು. ಪ್ಯಾಂಡಾರಸ್ಸನು ಚೆನ್ನಾಗಿ ಗುರಿಕಟ್ಟಿ ಪ್ರಯೋಗಿಸಿದ ಈಟಿಯು ಡೈಯಾಮಿಾಡೀಸಿನ ಗುರಾಣಿಯನ್ನು ಭೇದಿಸಿಕೊಂಡು ಅವನ ಉಕ್ಕಿನ ಕವಚದಲ್ಲಿ ನಾಟಿಕೊಂಡಿತು. ಇದನ್ನು ಕಂಡು ತನ್ನ ಶತ್ರುವು ಹತನಾದನೆಂದು ಪ್ಯಾಂಡಾರಸ್ಸನು ಹಿಗ್ಗಿ ಕುಣಿಯುತ್ತಿದ್ದನು. ಆದರೆ ಡೈಯೊಮಿಾಡೀಸನು ಕ್ಷಣಮಾತ್ರದಲ್ಲಿ ಚೇತರಿಸಿಕೊಂಡು, ಚೆನ್ನಾಗಿ ಗುರಿಕಟ್ಟಿ ಒಂದು ಈಟಿಯನ್ನು ಬಹುರಭಸದಿಂದ ಪ್ಯಾಂಡಾರಸ್ಸಿನ ಮೇಲೆ ಪ್ರಯೋಗಿಸಲು, ಅದು ಅವನ ಕಣ್ಣಿನ ಗುಡ್ಡೆಯೊಳಗಿನಿಂದ ಹಾದು, ಗಡ್ಡದ ಕೆಳಗಡೆ ಮೊನೆಗಾಣುವಂತೆ ನಾಟಿಕೊಂಡಿತು. ಈ ಮರಣಕಾರಕವಾದ ಏಟುತಗುಲಿದ ಕೂಡಲೆ, ಪ್ಯಾಂಡಾರಸ್ಸನು ಕೆಳಗೆ ಸತ್ತು ಬಿದ್ದುಬಿಟ್ಟನು. ಅವನ ಶಸ್ತ್ರಕವಚಾದಿಗಳನ್ನು ವಶಪಡಿಸಿಕೊಳ್ಳುವುದಕ್ಕಾಗಿ ಗ್ರೀಕರು ಮುಂದಕ್ಕೆ ನುಗ್ಗಿದರು. ಅವುಗಳನ್ನೂ ಪ್ಯಾಂಡಾರಸ್ಸಿನ ಮೃತದೇಹವನ್ನೂ ರಕ್ಷಿಸಿಕೊಳ್ಳುವುದಕ್ಕಾಗಿ ಈನಿಯಾಸನೂ ಅವನ ಅನುಯಾಯಿಗಳೂ ಬಹಳ ಹೆಣಗಾಡಿದರು. ಆಗ ಡೈಯೊಮಿಾಡೀಸನು, ತನ್ನ ಸಮಿಾಪದಲ್ಲಿ ಬಿದ್ದಿದ್ದ ಒಂದು ದೊಡ್ಡ ಬಂಡೆಯನ್ನು ಮೇಲಕ್ಕೆ ಎತ್ತಿ ಈನಿಯಾಸಿನಮೇಲೆ ಎಸೆದನು. ಆದರಿಂದ ಈನಿಯಾಸಿನ ನಡುಮುರಿದು ಅವನು ಕುಕ್ಕರಿಸಬೇಕಾಯಿತು. ಆದರೆ ಈ ಸಮಯದಲ್ಲಿ, ಅವನ ತಾಯಿಯಾದ ಆಫ್ರೊಡೈಟಿಯು ಕಾಣಿಸಿಕೊಂಡು, ಅವನ ಸುತ್ತಲೂ ಒಂದು ಮೋಡವುಂಟಾಗುವಂತೆ ಮಾಡಿ ಯುದ್ಧಕ್ಷೇತ್ರದಿಂದ ಅವನನ್ನು ಮರೆಮಾಡಿಬಿಟ್ಟಳು

೫೪. ಅಥೆನಿಯು ಡೈಯೊಮಿಾಡೀಸಿಗೆ ದಿವ್ಯದೃಷ್ಟಿಯನ್ನು ಅನುಗ್ರಹಿಸಿದ್ದುದರಿಂದ, ಆಫ್ರೊಡೈಟಿಯ ಆ ತಂತ್ರವು ಅವನಿಗೆ ತಿಳಿದುಹೋಯಿತು. ಆದುದರಿಂದ ಅಥೆನಿಯು ಹಿಂದೆ ಬೋಧಿಸಿದ್ದಂತೆ, ಡೈಯೊಮಿಾಡೀಸನು ಆಫ್ರೊಡೈಟಿ

ಯನ್ನು ಅಟ್ಟಿಕೊಂಡು ಹೋಗಿ ತನ್ನ ಈಟಿಯನ್ನು ಎಸೆದು ಆಕೆಯ ಕೈಯಮೇಲೆ ಗಾಯಗಾಣಿಸಿದನು. ಅದರಿಂದ ಆಕೆಯು ತನ್ನ ಮಗನನ್ನು ಬಿಟ್ಟು ಬಿಡಬೇಕಾಯಿತು. ಆದರೆ ಈ ಸಮಯದಲ್ಲಿ ಆಫ್ರೊಡೈಟಿಯ ಹಿತಚಿಂತಕನಾದ ಅಪೋಲೋದೇವನು ತಟ್ಟನೆ ಕಾಣಿಸಿಕೊಂಡು ಈನಿಯಾಸನ್ನು ಯುದ್ಧಭೂಮಿಯಿಂದ ಕರೆದುಕೊಂಡು ಹೊರಟುಹೋದನು. ಆಫ್ರೊಡೈಟಿಯು ಮತ್ತೊಂದು ಕಡೆಗೆ ಪಲಾಯನ ಮಾಡಿದಳು. ಡೈಯೊಮಿಡೀಸನು ಬೆನ್ನಟ್ಟಿಕೊಂಡು ಹೋಗಿ, ಆಕೆಯನ್ನು ಕುರಿತು "ಆಫ್ರೊಡೈಟಿದೇವಿಯೇ, ನಿನಗೆ ಯುದ್ಧರಂಗವು ಯೋಗ್ಯವಾದ ಸ್ಥಳವಲ್ಲ. ತರುಣರ ಹೃದಯವೇ ಸರಿಯಾದ ಸ್ಥಾನವು. ಇನ್ನು ಮೇಲೆ ಎಂದಾದರೂ ಯುದ್ಧಕ್ಷೇತ್ರದ ಕಡೆಗೆ ಬಂದೀಯೆ!" ಎಂದು ಹಾಸ್ಯಮಾಡಿದನು. ಈ ಸಮಯದಲ್ಲಿ, ಸ್ಥೆನೆಲಾಸನು ಹಿಂದೆಯೇ ಆಜ್ಞಪ್ತನಾಗಿದ್ದಂತೆ, ಈನಿಯಾಸಿನ ಕುದುರೆಗಳನ್ನು ಸ್ವಾಧೀನಪಡಿಸಿಕೊಂಡು ಗ್ರೀಕರ ಪಾಳೆಯಕ್ಕೆ ಅಟ್ಟಿಕೊಂಡು ಬಂದು ಒಂದುಕಡೆ ಕಟ್ಟಿಹಾಕಿದನು.

೫೫. ಅತ್ತ ಆಫ್ರೊಡೈಟಿಯು ದೇವನಿವಾಸವಾದ ಒಲಿಂಪಸ್ ಪರ್ವತಕ್ಕೆ ಹೋಗಿ ತನ್ನ ತಾಯಾದ ಡೈಯೋನಿಯ ಮುಂದೆ ತನಗೆ ಮನುಷ್ಯಮಾತ್ರನಾದ ಡೈಯೊಮಿಡೀಸಿನಿಂದ ಉಂಟಾಗಿದ್ದಭಂಗವನ್ನು ಕುರಿತು ದೂರುಹೇಳಿಕೊಂಡಳು. ಡೈಯೋನಿಯು ಹಿಂದೆ ಎಷ್ಟೋಸಾರಿ ಮನುಷ್ಯರಿಂದ ದೇವತೆಗಳಿಗೆ ಗಾಯವಾಗಿದ್ದುದನ್ನು ತಿಳಿಸಿ, ಆ ದುಷ್ಟನಾದ ಡೈಯೊಮಿಡೀಸಿಗೆ ಶೀಘ್ರದಲ್ಲಿಯೇ ದುರ್ಮರಣವುಂಟಾಗುವುದೆಂದು ಹೇಳಿ ತನ್ನ ಮಗಳಿಗೆ ಸಮಾಧಾನಮಾಡಿ ಸ್ವಲ್ಪಕಾಲದಲ್ಲಿಯೇ ತನ್ನ ಮಗಳ ಗಾಯವನ್ನು ಗುಣಪಡಿಸಿದಳು. ತನ್ನ ಪ್ರತಿದ್ವಂದ್ವಿಯಾದ ಆಫ್ರೊಡೈಟಿಗೆ ರಣಕ್ಷೇತ್ರದಲ್ಲಿ ಉಂಟಾಗಿದ್ದ ಗಾಯವನ್ನು ಕಂಡು ಅಥೆನಿಯು ಬಹಳ ಸಂತೋಷಪಟ್ಟುದೂ ಅಲ್ಲದೆ, ಆಕೆಯನ್ನು ಚೆನ್ನಾಗಿ ಹಂಗಿಸಿದಳು, ದೇವದೇವನಾದ ಜ್ಯೂಸನು, ಇನ್ನು ಮುಂದಕ್ಕೆ ಯುದ್ಧಕಾರ್ಯಗಳ ಗೋಜಿಗೆ ಹೋಗಬಾರದೆಂದು ತನ್ನ ಮಗಳಾದ ಆಫ್ರೊಡೈಟಿಗೆ ಬುದ್ಧಿವಾದಹೇಳಿದನು.

೫೬. ಈ ನಡುವೆ ಡೈಯೊಮಿಡೀಸನು ಈನಿಯಸ್ಸನ್ನು ಹುಡುಕಿಕೊಂಡು ಹೊರಟು, ಅಪೋಲೋದೇವನನ್ನು ಬೆನ್ನಟ್ಟುತ್ತಿದ್ದನು. ಆದುದರಿಂದ ಅಪೋಲೋದೇವನು ಅವನ ಇದಿರಿಗೆ ನಿಂತು ಸ್ವಲ್ಪಹೊತ್ತು ಕಾದಾಡಬೇಕಾ

ಯಿತು. ನಾಲ್ಕನೆಯಸಾರಿ, ಡೈಯೊಮಿಡೀಸನು ಅಪೋಲೋವಿನಮೇಲೆ ಉರವಣಿಸಿದಾಗ, ಆ ದೇವನು ಅವನನ್ನು ಕುರಿತು—"ನೀನು ಮನುಷ್ಯಮಾತ್ರನೆಂಬುದನ್ನು ಮರೆತುಬಿಟ್ಟೆಯೋ? ಈಗಲಾದರೂ ವಿವೇಕವನ್ನು ತಂದುಕೊಂಡು ನನ್ನೊಡನೆ ಯುದ್ಧವನ್ನು ಬಿಟ್ಟು ಹೊರಟುಹೋಗುವುದು ಕ್ಷೇಮವು" ಎಂದು ಗರ್ಜಿಸಿದನು. ಆದಕಾರಣ, ಡೈಯೊಮಿಡೀಸನು ಇನ್ನು ಮುಂದೆ ಅಪೋಲೋದೇವನನ್ನು ಕೆಣಕುವುದು ಕ್ಷೇಮಕರವಲ್ಲವೆಂದು ತಿಳಿದು, ಸ್ವಲ್ಪ ಕಾಲ ಸುಮ್ಮನಾದನು. ಅಪೋಲೋದೇವನು ಈನಿಯಸ್ಸನ್ನು ದುರ್ಗದೊಳಗಿದ್ದ ತನ್ನ ದೇವಸ್ಥಾನಕ್ಕೆ ಕರೆದುಕೊಂಡು ಹೋಗಿ, ಅವನ ಗಾಯವನ್ನು ವಾಸಿಮಾಡಿದುದೂ ಅಲ್ಲದೆ, ಅವನಿಗೆ ಪ್ರತಿಯಾಗಿ ಈನಿಯಸ್ಸಿನ ಮಾಯಾಕೃತಿಯೊಂದನ್ನು ಯುದ್ಧಕ್ಷೇತ್ರಕ್ಕೆ ಕಳುಹಿಸಿಕೊಟ್ಟನು. ಪುನಃ ಗ್ರೀಕರಿಗೂ ಟ್ರೋಜನರಿಗೂ ಕಾಳಗವು ಬಲವಾಗಿ ಪ್ರಾರಂಭವಾಯಿತು. ಅಪೋಲೋವಿನ ಪ್ರೇರಣೆಗೆ ಅನುಸಾರವಾಗಿ, ಯುದ್ಧಾಭಿಮಾನದೇವತೆಯಾದ ಏರೀಸನು ಟ್ರೋಜನರ ಕಡೆಯ ಒಬ್ಬ ದಳಪತಿಯಾದ ಅಕಮಾಸಿನ ಆಕೃತಿಯಲ್ಲಿ ಹೆಕ್ಟರನಿಗೆ ಕಾಣಿಸಿಕೊಂಡು, ಆದಿನ ವೀರಾವೇಶದಿಂದ ಯುದ್ಧಮಾಡುತ್ತಿದ್ದ ಗ್ರೀಕರಮೇಲೆ ನುಗ್ಗಿ ಕಾದುವಂತೆ ಅವನನ್ನು ಪ್ರೋತ್ಸಾಹಿಸಿದನು. ಅದನ್ನು ಕೇಳಿ ಸಂತುಷ್ಟನಾದ ಹೆಕ್ಟರನು ಸಿಂಹಗರ್ಜನೆಯನ್ನು ಮಾಡಲು, ಟ್ರೋಜನರೆಲ್ಲರಿಗೂ ಪರಮೋತ್ಸಾಹವುಂಟಾಯಿತು.

೫೭. ಇಷ್ಟು ಹೊತ್ತಿಗೆ ಸರಿಯಾಗಿ ಈನಿಯಾಸನು ತನ್ನ ಗಾಯವನ್ನು ವಾಸಿಮಾಡಿಕೊಂಡು ಯುದ್ಧಕ್ಷೇತ್ರಕ್ಕೆ ಹಿಂದಿರುಗಿ ಬಂದನು. ಗ್ರೀಕರಕಡೆ ಅಗಮೆಮ್ನಾನ್, ಮೆನೆಲಾಸ್, ಒಡಿಸಿಯಸ್, ಇಬ್ಬರು ಏಯಾಸರು-ಇವರುಗಳು ಟ್ರೋಜನರುಗಳ ಮೇಲೆ ಬಿದ್ದು ಅನೇಕರನ್ನು ಕೊಲ್ಲುತ್ತಿದ್ದರು. ನೆಸ್ಟಾರಿನ ಮಗನಾದ ಆಂಟಿಲೋಕಸ್ಸನು ತನ್ನ ಸುತ್ತಲೂ ಇದ್ದ ಗ್ರೀಕರನ್ನು ಪ್ರೋತ್ಸಾಹಿಸುತ್ತಾ, ಮುಂದಮುಂದಕ್ಕೆ ನುಗ್ಗಿ ಬಹಳ ಶೌರ್ಯದಿಂದ ಕಾದಾಡಿದನು. ಡೈಯೊಮಿಡೀಸನು ಇದಿರುದಳದಲ್ಲಿ ಮಾನವಾಕೃತಿಯಿಂದ ಕಾದುತ್ತಿದ್ದ ಯುದ್ಧಾಭಿಮಾನದೇವತೆಯಾದ ಏರೀಸನ್ನು ಕಂಡು, ಮನಸ್ಸಿನಲ್ಲಿಯೇ ಭಯಪಟ್ಟುಕೊಂಡನು. ತನ್ನ ಕಡೆಯವರಿಗೂ ಆ ವಿಷಯವನ್ನು ಸೂಕ್ಷ್ಮವಾಗಿ ತಿಳಿಸಲು, ಗ್ರೀಕರ ದಳವು ಸ್ವಲ್ಪ ಹಿಮ್ಮೆಟ್ಟಿತು. ಗ್ರೀಕರ ವಿಷಯದಲ್ಲಿ ಬಹಳ

ಅಭಿಮಾನಶಾಲಿಯಾಗಿದ್ದ ಹೀರಾದೇವಿಯು ಇದನ್ನು ಕಂಡು, ಏರೀಸಿನಮೇಲೆ ಯುದ್ಧಮಾಡುವುದಕ್ಕಾಗಿ, ತನ್ನ ಮಗಳಾದ ಅಥೆನಿಯನ್ನು ಕಳುಹಿಸಿಕೊಟ್ಟುದೂ ಅಲ್ಲದೆ ತಾನೂ ಮಾನವಾಕಾರದಿಂದ ಗ್ರೀಕರಿಗೆ ಕಾಣಿಸಿಕೊಂಡು ಐವತ್ತು ಮಂದಿ ಏಕಕಾಲದಲ್ಲಿ ಗರ್ಜಿಸಿದರೆ ಎಷ್ಟು ಶಬ್ದವಾಗುವುದೋ ಅಷ್ಟು ಗಟ್ಟಿಯಾಗಿ—"ಓ ಗ್ರೀಕರೇ, ಇದೇನು ಹೀಗೆ ಹೇಡಿಗಳಾಗುತ್ತಿರುವಿರಿ! ನಿಮ್ಮ ಕಡೆಯ ಏಕಿಲೀಸಿನ ಮುಂದೆ ಟ್ರೋಜನರು ಕಾಣಿಸಿಕೊಳ್ಳಲಾರದೆ, ದುರ್ಗದೊಳಗೆ ಸೇರಿಕೊಂಡಿದ್ದುದನ್ನು ನೀವು ಕಾಣಿರಾ? ಧೈರ್ಯದಿಂದ ಯುದ್ಧಮಾಡಿ" ಎಂದು ಉತ್ತೇಜನಗೊಳಿಸಿದಳು. ಟ್ರೋಜನರ ಕಡೆಯ ವೀರರಾದ ಸಾರ್ಪೀಡನ್, ಹೆಕ್ಟರ್ ಮೊದಲಾದವರು ಈ ಕಾಲದಲ್ಲಿ ಗ್ರೀಕರ ದಳದಮೇಲೆ ಉರವಣಿಸಿದರೂ ಅಷ್ಟು ಪ್ರಯೋಜನವಾಗಲಿಲ್ಲ. ಈ ನಡುವೆ ಅಥೆನಿಯು ಡೈಯೊಮಿಡೀಸಿನ ಬಳಿಗೆ ಹೋಗಿ ಅವನನ್ನು ಪ್ರೋತ್ಸಾಹಿಸುತ್ತಾ ಏರೀಸಿನ ಮೇಲೆ ಯುದ್ಧಮಾಡಬಹುದೆಂದು ಅವನಿಗೆ ಅನುಮತಿಯನ್ನು ಕೊಟ್ಟುದಲ್ಲದೆ, ಅವನ ಸಹಾಯಾರ್ಥವಾಗಿ ತಾನೂ, ಅದೃಶ್ಯಳಾಗಿ ಡೈಯೋಮಿಡೀಸಿನ ಸಮೀಪದಲ್ಲಿಯೇ ರಥದಲ್ಲಿ ಕುಳಿತುಕೊಂಡಳು.

೫೮. ಏರೀಸನು ತನ್ನನ್ನು ಇದಿರಿಸಿದ ಡೈಯೊಮಿಡೀಸಿನಮೇಲೆ ಬಹಳ ಕೋಪದಿಂದ ತನ್ನ ಈಟಿಯನ್ನು ಎಸೆದನು. ಆದರೆ ಅಥೆನಿಯ ಅನುಗ್ರಹದಿಂದ ಆ ಆಯುಧಕ್ಕೆ ಗುರಿತಪ್ಪಿಹೋಯಿತು. ಡೈಯೊಮಿಡೀಸನು ಪ್ರಯೋಗಿಸಿದ್ದ ಈಟಿಯಾದರೋ, ನೆಟ್ಟಗೆ ಏರೀಸಿನ ಪಕ್ಕಕ್ಕೆ ಹೋಗಿ ನಾಟಿಕೊಂಡಿತು. ಆಗ ಒಂಬತ್ತುಹತ್ತುಸಾವಿರ ಯೋಧರು ಏಕಕಾಲದಲ್ಲಿ ಗರ್ಜಿಸಿದರೆ ಎಷ್ಟು ಶಬ್ದವಾಗುವುದೋ ಅಂತಹ ಗರ್ಜನೆಯೊಂದನ್ನು ಏರೀಸನು ಮಾಡಿ, ಒಲಿಂಪಸ್ ಪರ್ವತಕ್ಕೆ ಹೋಗಿ ತನ್ನ ತಂದೆಯಾದ ಜ್ಯೂಸಿನ ಮುಂದೆ ಡೈಯೊಮಿಡೀಸಿನ ದೌರಾತ್ಮ್ಯವನ್ನೂ ಅಥೆನಿಯ ಪಕ್ಷಪಾತವನ್ನೂ ಕುರಿತು ದೂರಿದನು. ಇದರಿಂದ ಏರೀಸಿಗೆ ಮುಖಭಂಗವಾಯಿತೇ ಹೊರತು, ಅಥೆನಿಗೆ ಏನೂ ನಷ್ಟವಾಗಲಿಲ್ಲ. ಆದರೂ ಜ್ಯೂಸನು ದೇವವೈದ್ಯನಾದ ಪೀಯಾನ್ ಎಂಬಾತನಿಗೆ ಆಜ್ಞಾಪಿಸಿ ಏರೀಸಿನ ಗಾಯವನ್ನು ವಾಸಿಮಾಡಿಸಿದನು. ಏರೀಸನು ಯುದ್ಧಕ್ಷೇತ್ರವನ್ನು ಬಿಟ್ಟಕೂಡಲೆ ಹೀರಾದೇವಿಯೂ, ಅಥೆನಿಯೂ ತಮ್ಮ ಸದ್ಯದ ಕೆಲಸವು ಮುಗಿಯಿತೆಂದು ರಣರಂಗವನ್ನು ಬಿಟ್ಟು ಒಲಿಂಪಸ್ ಪರ್ವತಕ್ಕೆ ತೆರಳಿದರು.

IX

೫೯ ಡೈಯೊಮೀಡೀಸನು ಟ್ರೋಜನರ ಮೇಲೆ ಹಿಂದಿನಂತೆಯೇ ಬಹುರಭಸದಿಂದ ಕಾದಾಡುತ್ತಾ ಅನೇಕರನ್ನು ಕೊಲ್ಲುತ್ತಿದ್ದನು. ಇತರ ಗ್ರೀಕ್ ಯೋಧರೂ ಹಾಗೆಯೇ ರಭಸದಿಂದ ಕಾದಾಡುತ್ತಿದ್ದರು. ಮೆನೆಲಾಸನು ತನ್ನ ಪ್ರತ್ಯರ್ಥಿಯಾದ ಅಡ್ರೆಸ್ಟಾಸ್ ಎಂಬೊಬ್ಬನೊಡನೆ ಯುದ್ಧ ಮಾಡುತ್ತಿದ್ದಾಗ ಆ ಪ್ರತ್ಯರ್ಥಿಯು ರಥದಿಂದ ಕೆಳಕ್ಕೆ ಬಿದ್ದುಬಿಟ್ಟನು. ಅವನನ್ನು ಕೊಲ್ಲಬೇಕೆಂದು ಮೆನೆಲಾಸನು ತನ್ನ ಈಟಿಯನ್ನು ಮೇಲಕ್ಕೆ ಎತ್ತಲು, ಅವನು ಮೆನೆಲಾಸಿನ ಪಾದಗಳನ್ನು ಹಿಡಿದುಕೊಂಡು ತನ್ನ ಪ್ರಾಣವನ್ನುಳಿಸಬೇಕೆಂದು ಬಹಳವಾಗಿ ಪ್ರಾರ್ಥಿಸಿಕೊಂಡನು. ಕ್ಷಮಾಶೀಲನಾದ ಮೆನೆಲಾಸನಿಗೆ, ಅಷ್ಟೊಂದು ಕೇಳಿಕೊಳ್ಳುತ್ತಿದ್ದ ತನ್ನ ಶತ್ರುವನ್ನು ಉಳಿಸಬೇಕೆಂದು ಮನಸ್ಸಿದ್ದಿತು. ಆದರೆ ಅಷ್ಟುಹೊತ್ತಿಗೆ ಸರಿಯಾಗಿ ಅಗಮೆಮ್ನಾನನು ಆ ಸ್ಥಳಕ್ಕೆ ಬಂದು “ಸಹೋದರನೆ, ಶತ್ರುಗಳಿಗೆ ಕರುಣೆತೋರಿಸುವುದುಂಟೇ ? ಟ್ರೋಜನರು ನಮಗೆ ದಯೆಯನ್ನು ತೋರಿಸುವರೇನು ? ಅವರಲ್ಲಿ ಒಬ್ಬರನ್ನಾದರೂ ಉಳಿಸಕೂಡದು. ಕಡೆಗೆ ಗರ್ಭದಲ್ಲಿರುವ ಗಂಡುಮಗುವನ್ನೂ ಕೂಡ ನಾವು ಉಳಿಸಬಾರದು” ಎಂದು ಹೇಳುತ್ತಾ, ಅಷ್ಟೊಂದು ಬೇಡಿಕೊಳ್ಳುತ್ತಿದ್ದ ಅಡ್ರೆಸ್ಟಾಸನ್ನು ತನ್ನ ಈಟಿಯಿಂದ ತಿವಿದು ಒಂದೇ ಸಲಕ್ಕೆ ಕೊಂದುಬಿಟ್ಟನು.

೬೦ ಈ ನಡುವೆ ನೆಸ್ಟಾರನು ತನ್ನ ಕಡೆಯವರನ್ನು ಕುರಿತು—“ನಿಮ್ಮಲ್ಲಿ ಯಾರೂ ಹತಶತ್ರುಗಳ ಆಯುಧಾದಿಗಳಮೇಲೆ ಆಸೆಬಿದ್ದು ಅವನ್ನು ಕೂಡಲೇ ಸುಲಿದುಕೊಳ್ಳಲು ಯತ್ನಿಸಬೇಡಿ. ಮೊದಲು ಶತ್ರುಗಳನ್ನು ಕೊಲ್ಲುವ ಪ್ರಯತ್ನ ಮಾಡಿ. ಇದಾದನಂತರ ಕೊಳ್ಳೆಹೊಡೆಯಲು ಬೇಕಾದಷ್ಟು ಅವಕಾಶವಿರುವುದು” ಎಂದು ಬುದ್ಧಿವಾದವನ್ನು ಹೇಳುತ್ತಾ ಯುದ್ಧಕ್ಕೆ ಪ್ರೋತ್ಸಾಹಿಸುತ್ತಿದ್ದನು. ಟ್ರೋಜನರಕಡೆ ಪ್ರಯಾಮನ ಪುತ್ರನಾದ ಹೆಲೆನಸ್ಸನು ಹೆಕ್ಟರನ್ನೂ ಈನಿಯಸ್ಸನ್ನೂ ಕುರಿತು—“ನಮ್ಮ ಕಡೆಯವರು ನಿರುತ್ಸಾಹಿಗಳಾಗಿ ಹಿಮ್ಮೆಟ್ಟುತ್ತಿರುವರು. ಈ ಸಮಯದಲ್ಲಿ ನೀವಿಬ್ಬರೂ ಅವರನ್ನು ಪ್ರೋತ್ಸಾಹಿಸದಿದ್ದರೆ ಕೆಲಸಕೆಡುವುದು. ಅಣ್ಣಾ, ಹೆಕ್ಟರ್, ನೀನು ನಮ್ಮವರಿಗೆ ಪ್ರೋತ್ಸಾಹಿಸಿದಕೂಡಲೆ ತಡಮಾಡದೆ ಟ್ರಾಯ್‌ನಗರಗೆ ಹೋಗಿ ನಿನ್ನ ತಾಯಿಗೂ ನಮ್ಮ ತಾಯಿಗೂ, ಈಗಿನ ಸ್ಥಿತಿಯನ್ನು ತಿಳಿಸು. ಪಟ್ಟಣದ ವೃದ್ಧಸ್ತ್ರೀಯರೆ

ಲ್ಲರೂ ಅಥೆನಿದೇವಿಯ ಗುಡಿಗೆ ಹೋಗಿ, ನಮ್ಮ ಬಳಿಯಲ್ಲಿರುವ ಅತ್ಯುತ್ತಮವಾದ ವಸ್ತ್ರವನ್ನು ಆಕೆಗೆ ಸಮರ್ಪಿಸಿ, ನಮ್ಮನ್ನು ಡೈಯೊಮಿಡೀಸಿನ ಬಾಧೆಯಿಂದ ತಪ್ಪಿಸಿ ಕಾಪಾಡಿದರೆ, ಇನ್ನೂ ನೇಗಲಿಗೆ ಕಟ್ಟದಿರುವ ಹನ್ನೆರಡು ಗೂಳಿಗಳನ್ನು ಯಜ್ಞಮಾಡುವುದಾಗಿ ಹರಕೆಯನ್ನು ಕಟ್ಟಿಕೊಂಡಪಕ್ಷದಲ್ಲಿ ನಮಗೆ ಪ್ರಯೋಜನವಾಗುವುದೆಂದು ಹೇಳು. ಈ ಡೈಯೊಮಿಡೀಸನು ದೇವತಾಪುತ್ರನಾದ ಏಕಿಲೀಸಿಗಿಂತಲೂ ಬಹಳ ಪ್ರಬಲನಾಗಿರುವನು" ಎಂದು ಬೋಧಿಸಿದನು.

೭೧. ಇದಕ್ಕೆ ಅನುಸಾರವಾಗಿಯೇ, ಈನಿಯಾಸನು ಒಂದುಕಡೆಯೂ ಹೆಕ್ಟರನು ಮತ್ತೊಂದು ಕಡೆಯೂ ಟ್ರೋಜನರ ನಡುವೆ ಸುತ್ತಾಡಿ, ಅವರನ್ನು ಪ್ರೋತ್ಸಾಹಗೊಳಿಸಿದರು. ಹೆಕ್ಟರನು ತನ್ನ ಕಡೆಯವರನ್ನು ಕುರಿತು "ಶೂರರಾದ ಟ್ರೋಜನರೇ, ಮಹಾಪ್ರಖ್ಯಾತರಾದ ಮಿತ್ರಸೈನಿಕರೇ, ನೀವು ಈಗ ನಿಮ್ಮ ಶಕ್ತಿಸಾಹಸಗಳೆಲ್ಲವನ್ನೂ ಪ್ರಯೋಗಿಸಿ. ನಾನು ನಗರಿಗೆ ಹೋಗಿ ದೇವತೆಗಳಿಗೆ ಹರಕೆಕಟ್ಟಿಕೊಳ್ಳುವಂತೆ ನಮ್ಮ ಸ್ತ್ರೀಜನರಿಗೆ ತಿಳಿಸಿ ಬಂದುಬಿಡುವೆನು" ಎಂದು ಹೇಳಿ ನಗರಾಭಿಮುಖನಾದನು.

೭೨. ಈನಡುವೆ ಟ್ರೋಜನರ ಕಡೆಯವನಾದ ಗ್ಲಾಕಸ್ಸನು ಡೈಯೊಮಿಡೀಸಿನೊಡನೆ ಕಾದುವುದಕ್ಕಾಗಿ ಬಂದು ಸಿದ್ಧನಾದನು. ಇವನನ್ನು ಕಂಡಕೂಡಲೆ "ಅಯ್ಯಾ ವೀರನೆ, ನೀನು ಯಾರು? ಈವರೆಗೂ ನಾನು ನಿನ್ನನ್ನು ನೋಡಿರಲಿಲ್ಲ. ನನ್ನ ಇದಿರಿಗೆ ಕಾಣಿಸಿಕೊಳ್ಳುವ ಯೋಧರ ಜನಕರು ನಿರ್ಭಾಗ್ಯರೆಂದೇ ಹೇಳಬಹುದು. ನೀನು ಯಾರೆಂಬುದನ್ನು ತಿಳಿಸುವೆಯಾ?" ಎಂದು ಕೇಳಿದನು. ಇದಕ್ಕೆ ಗ್ಲಾಕಸ್ಸನು—"ನನ್ನ ಪೂರ್ವೋತ್ತರವನ್ನು ಕೇಳಿದುದರಿಂದ ನಿನಗೆ ಪ್ರಯೋಜನವೇನು? ಗಿಡಗಳಲ್ಲಿ ವರ್ಷವರ್ಷವೂ ಹೇಗೆ ಎಲೆಗಳು ಉದುರಿ ಹೊಸಹೊಸ ಎಲೆಗಳು ಹುಟ್ಟುವುವೋ ಹಾಗೆಯೇ ಮಾನವವರ್ಗದಲ್ಲಿಯೂ ಒಂದು ತಲೆಮಾರು ನಶಿಸಿದಮೇಲೆ ಮತ್ತೊಂದು ತಲೆಮಾರು ಪ್ರವೃದ್ಧಿಗೆ ಬರುತ್ತಿರುವರು. ಕುದುರೆಗಳಿಗೆ ಪ್ರಖ್ಯಾತವಾದ ಆರ್ಗಾಸ್ ಸಂಸ್ಥಾನವೇ ನನ್ನ ಜನ್ಮಭೂಮಿ. ಸಿಸಿಫಸ್ ಬೆಲೆರೊಫನ್ ಎಂಬ ಪ್ರಸಿದ್ಧಪುರುಷರು ನನ್ನ ಹಿರಿಯರು. ನನ್ನ ತಂದೆಯ ಹೆಸರು ಹಿಪ್ಪೋಲೋಕಸ್. ನನ್ನನ್ನು ಈ ಯುದ್ಧಕ್ಕೆ ನಮ್ಮ ತಂದೆಯೇ ಕಳುಹಿಸಿಕೊಟ್ಟು "ನಮ್ಮ ವಂಶಕ್ಕೆ ಅಪಕೀರ್ತಿ

ಬಾರದಂತೆ ನೀನು ಶತ್ರುಗಳೊಡನೆ ಕಾದು " ಎಂದು ಬುದ್ಧಿವಾದವನ್ನು ಹೇಳಿರುವನು ಎಂಬುದಾಗಿ ಉತ್ತರಕೊಟ್ಟನು.

೬೩ ಈ ಮಾತುಗಳನ್ನು ಕೇಳಿದಕೂಡಲೆ, ಡೈಯೊಮೀಡೀಸಿಗೆ, ತನ್ನ ತಂದೆಯಾದ ಟೈಡಿಯುಸ್ಸನೂ ಹಿಪೋಲೋಕಸ್ಸನೂ ಹಿಂದೆ ಬಂದಾನೊಂದು ಸಮಯದಲ್ಲಿ ಸ್ನೇಹಿತರಾಗಿದ್ದುದೂ ಒಬ್ಬರಿಗೊಬ್ಬರು ಭೋಜನಾದಿಗಳಿಂದ ಉಪಚರಿಸಿದ್ದುದೂ ಜ್ಞಾಪಕಕ್ಕೆ ಬಂದಿತು. ಈ ಸಂಗತಿಗಳು ನಡೆದಾಗ ಗ್ಲಾಕಸ್ಸನು ಇನ್ನೂ ಸಣ್ಣಹುಡುಗನಾಗಿದ್ದನು. ತಮ್ಮ ತಮ್ಮ ತಂದೆಗಳಿಗೆ ಇದ್ದ ಮೈತ್ರಿಯನ್ನು ಡೈಯೊಮೀಡೀಸನು ಗ್ಲಾಕಸ್ಸನಿಗೆ ತಿಳಿಯಪಡಿಸಿ ಅಂತಹ ಮಿತ್ರರುಗಳ ಮಕ್ಕಳು ಒಬ್ಬರೊಡನೊಬ್ಬರು ಕಾದುವುದು ಯುಕ್ತವಲ್ಲವೆಂದು ಹೇಳಿದನು. ಈ ಇಬ್ಬರು ಯೋಧರೂ, ಶೂರಾಗ್ರಣಿಗಳಾಗಿದ್ದರು. ಆದದರಿಂದ ಒಬ್ಬನು ಮತ್ತೊಬ್ಬನನ್ನು ರಣಭೀರುವೆಂದು ಭಾವಿಸಿ, ಪರಸ್ಪರ ಸ್ನೇಹಿತರಾಗುವ ವಿಷಯದಲ್ಲಿ ಹಿಂದೆಗೆಯಲು ಅವಕಾಶವಿರಲಿಲ್ಲ. ಕೂಡಲೆ ಅವರಿಬ್ಬರೂ ತಮ್ಮ ರಥಗಳಿಂದ ದುಮಿಕಿ ಒಬ್ಬರನ್ನೊಬ್ಬರು ಆಲಿಂಗಿಸಿಕೊಂಡುದೂ ಅಲ್ಲದೆ, ತಮ್ಮ ತಮ್ಮ ಕವಚಗಳನ್ನು ವಿನಿಮಯಮಾಡಿಕೊಂಡರು. ಗ್ಲಾಕಸ್ಸಿನ ಚಿನ್ನದ ಕವಚವು ನೂರು ಎತ್ತುಗಳ ಬೆಲೆ ಬಾಳುವಂತಹುದು ; ಡೈಯೊಮೀಡೀಸಿನ ಕಂಚಿನ ಕವಚವಾದರೋ ಒಂಬತ್ತು ಎತ್ತುಗಳ ಬೆಲೆಯುದು. ಆದರೂ ಗ್ಲಾಕಸನು ತನ್ನ ಕವಚವನ್ನು ಡೈಯೊಮೀಡಿಸಿಗೆ ಮನಃಪೂರ್ವಕವಾಗಿ ಕೊಟ್ಟುಬಿಟ್ಟನು.

೬೪ ಅತ್ತ ಹೆಕ್ಟರನು ಟ್ರಾಯ್ ನಗರಿಯ ಬಾಗಿಲಿಗೆ ಬಂದಕೂಡಲೆ ಅನೇಕಸ್ತ್ರೀಯರು ಬಂದು ತಮ್ಮ ಪತಿಪಿತೃಭ್ರಾತೃಗಳ ಸಮಾಚಾರವೇನೆಂದು ಹೆಕ್ಟರನ್ನು ಅತಿಕುತೂಹಲದಿಂದ ಕೇಳಿದರು. ಅವನು ಅವರೆಲ್ಲರಿಗೂ ದೇವರಿಗೆ ಹರಕೆಕಟ್ಟಿಕೊಳ್ಳುವಂತೆ ಬೋಧಿಸಿ ಅರಮನೆಯ ಕಡೆಗೆ ಬಂದನು. ಅರಮನೆಯ ಆವರಣದಲ್ಲಿ ನಯಮಾಡಿದ ಕಲ್ಲುಗಳಿಂದ ಕಟ್ಟಿದ ಅರುವತ್ತೆರಡು ಸಣ್ಣ ಉಪ್ಪರಿಗೆಗಳು ಇದ್ದುವು, ಪ್ರಯಾಮಿನ ಐವತ್ತುಮಂದಿ ಮಕ್ಕಳಲ್ಲಿ ಪ್ರತಿಯೊಬ್ಬನಿಗೂ ಒಂದೊಂದು ಉಪ್ಪರಿಗೆಯು ಸೇರಿದ್ದಿತು. ಉಳಿದ ಹನ್ನೆರಡು ಉಪ್ಪರಿಗೆಗಳಲ್ಲಿ ಆತನ ಹನ್ನೆರಡು ಮಂದಿ ಹೆಣ್ಣುಮಕ್ಕಳು ತಮ್ಮತಮ್ಮ ಪತಿಪುತ್ರರುಗಳೊಡನೆ ವಾಸಿಸುತ್ತಿದ್ದರು. ಹೆಕ್ಟರನ್ನು ಕಂಡಕೂಡಲೆ ಅವನ ತಾಯಿಯಾದ ಹೆಕ್ಯೂಬಳು ತನ್ನ ಪ್ರೀತಿಪಾತ್ರಳಾದ ಲಾಡೊಡೈಸಿಯೆಂಬ ಪುತ್ರಿಯನ್ನು ಕರೆದುಕೊಂಡು ಅವನ

ಬಳಿಗೆ ಬಂದು “ ಮಗು, ಏಕೆ ಯುದ್ಧಕ್ಷೇತ್ರದಿಂದ ಹೊರಟುಬಂದೆ ? ಆ ದುರಾತ್ಮರಾದ ಗ್ರೀಕರು ಬಹಳ ಹಾವಳಿಯನ್ನು ಮಾಡುತ್ತಿರುವಂತೆ ತೋರುವುದು. ಜ್ಯೂಸಿಗೆ ಹರಕೆಕಟ್ಟಿಕೊಳ್ಳಬೇಕೆಂದು ಇಲ್ಲಿಗೆ ಬಂದಿರುವೆಯೋ ? ಮಧುರವಾದ ದ್ರಾಕ್ಷಾರಸವನ್ನು ತಂದುಕೊಡುವೆನು. ಅದನ್ನು ಜ್ಯೂಸಿಗೆ ಮೊದಲು ಸಮರ್ಪಿಸಿ ಬಳಿಕ ನಿನ್ನ ಬಾಯಾರಿಕೆಯನ್ನು ತೀರಿಸಿಕೊ. ಈ ಪಾನದಿಂದ ನಿನಗೆ ದಣಿವು ಕಡಿಮೆಯಾಗಿ ಶಕ್ತಿಯು ಹೆಚ್ಚುವುದು ” ಎಂದು ಹೇಳಲು, ಹೆಕ್ಟರನು ಆಕೆಯನ್ನು ಕುರಿತು “ ಅಮ್ಮಾ, ದ್ರಾಕ್ಷಾರಸವನ್ನು ಕುಡಿಯುವುದರಿಂದ ನನಗೆ ಸ್ಮೃತಿ ತಪ್ಪಬಹುದು ; ಅದರಿಂದ ನಾನು ನನ್ನ ಶಕ್ತಿಸಾಹಸಗಳನ್ನು ಮರೆತು ಬಿಡಬಹುದು. ಇದೂ ಅಲ್ಲದೆ ನನ್ನ ಕೈಗಳನ್ನು ತೊಳೆದುಕೊಳ್ಳದೆ ಜ್ಯೂಸಿಗೆ ದ್ರಾಕ್ಷಾರಸವನ್ನು ಸಮರ್ಪಿಸುವುದು ಯುಕ್ತವಲ್ಲ. ನನ್ನ ಶತ್ರುಗಳನ್ನು ಕೊಲ್ಲುವಾಗ ನನ್ನ ಮೈಕೈಯೆಲ್ಲಾ ರಕ್ತಮಾಂಸದಿಂದ ಕಲುಷಿತವಾಗಿ ಹೋಗಿರುವ ಕಾರಣ ಈ ಸ್ಥಿತಿಯಲ್ಲಿ ನಾನು ಜ್ಯೂಸನ್ನು ಆರಾಧಿಸುವುದು ಸರಿಯಲ್ಲ. ಆದುದರಿಂದ ನೀನು ಈಗ ಇತರ ವೃದ್ಧಸ್ತ್ರೀಯರೊಡನೆ ಅಥೆನಿದೇವಿಯ ಗುಡಿಗೆ ಹೋಗಿ, ನಮ್ಮ ನಗರಿಯಲ್ಲಿರುವ ಶ್ರೇಷ್ಠತಮವಾದ ವಸ್ತ್ರವನ್ನು ಆ ದೇವಿಗೆ ಸಮರ್ಪಿಸಿ, ನಮಗೆ ಉಂಟಾಗಿರುವ ಶತ್ರುಬಾಧೆಯನ್ನು ತಪ್ಪಿಸಿದರೆ ಹನ್ನೆರಡು ಗೂಳಿಗಳನ್ನು ಯಜ್ಞಮಾಡುವುದಾಗಿ ಹರಕೆಕಟ್ಟಿಕೊಳ್ಳಬೇಕು ” ಎಂದು ಕೇಳಿಕೊಂಡನು. ಆಕೆಯು ಅದೇಮೇರೆಗೆ ಅಥೆನಿಯ ದೇವಸ್ಥಾನಕ್ಕೆ ಹೋಗಿ ಪ್ಯಾರಿಸ್ಸನು ಹೆಲೆನಳೊಡನೆ ಹೊತ್ತುಕೊಂಡು ಬಂದಿದ್ದ ಒಂದು ಶ್ರೇಷ್ಠವಸ್ತ್ರವನ್ನು ಆ ದೇವಿಗೆ ಸಮರ್ಪಿಸಿ ಹರಕೆಯನ್ನು ಕಟ್ಟಿಕೊಂಡಳು. ಆದರೂ ಅಥೆನಿದೇವಿಯು ಪ್ರಸನ್ನಳಾದಂತೆ ಕಾಣಿಸದಿದ್ದುದರಿಂದ, ಆ ಸ್ತ್ರೀಯರು ಆ ದೇವತೆಯನ್ನು ಮತ್ತೆಮತ್ತೆ ಸ್ತೋತ್ರಮಾಡುತ್ತಾ ಬಹಳ ಹೊತ್ತು ನಿಂತಿದ್ದರು.

೬೫. ಹೆಕ್ಟರನು ಹನ್ನೊಂದು ಮೊಳ ಉದ್ದವಾಗಿದ್ದ ತನ್ನ ಈಟಿಯನ್ನು ಹಿಡಿದುಕೊಂಡು ಪ್ಯಾರಿಸ್ಸಿನ ಮಂದಿರಕ್ಕೆ ಹೋದನು. ಆಗ ಪ್ಯಾರಿಸ್ಸನು ತನ್ನ ಆಯುಧಗಳನ್ನು ಉಜ್ಜಿ ಸಿದ್ಧಪಡಿಸಿಕೊಳ್ಳುತ್ತಿದ್ದನು. ಅವನನ್ನು ಕಂಡಕೂಡಲೆ ಹೆಕ್ಟರನಿಗೆ ಕೋಪವುಂಟಾಯಿತು. “ ನಿನಗಾಗಿಯೋ ಈ ಘೋರಯುದ್ಧವು ಅಷ್ಟು ವರ್ಷಗಳಿಂದಲೂ ನಡೆಯುತ್ತಾ ಇರುವುದು. ಅದರಲ್ಲಿ ಸಾವಿರಾರು ಮಂದಿ ಯೋಧರು ತಮ್ಮ ಪ್ರಾಣಗಳನ್ನು ಒಪ್ಪಿಸುತ್ತಿರುವಾಗ ನೀನು ಹೀಗೆ ಕುಳಿತುಕೊಂಡಿರುವೆ ! ಯುದ್ಧಕ್ಕೆ ಹೊರಡು. ಶತ್ರುಗಳು

ಪಟ್ಟಣವನ್ನು ಧ್ವಂಸಮಾಡಬೇಕೆಂದಿರುವರು. ನಡೆ!" ಎಂದು ಗದರಿಸಲು, ಪ್ಯಾರಿಸ್ಸನು ಹೆಕ್ಟರನ್ನು ಕುರಿತು "ಅಣ್ಣಾ, ಈಗ ತಾನೇ ಯುದ್ಧಕ್ಕೆ ಹೊರಡಲೇಬೇಕೆಂದು ಈ ಹೆಲೆನಳು ಬಲಾತ್ಕರಿಸುತ್ತಿದ್ದಳು. ಇಗೋ, ಆಯುಧಗಳನ್ನು ಧರಿಸಿ ನಿನ್ನ ಹಿಂದೆಯೇ ಹೊರಟುಬರುವೆನು." ಎಂದು ಉತ್ತರಕೊಟ್ಟನು. ಸಮೀಪದಲ್ಲಿಯೇ ಇದ್ದ ಹೆಲೆನಳು ಹೆಕ್ಟರನ್ನು ಕುರಿತು—"ಭಾವ, ನಿರ್ಭಾಗ್ಯಳಾದ ನಾನು ಹುಟ್ಟಿದ ಸಮಯದಲ್ಲಿಯೇ ಘೋರವಾದ ಬಿರುಗಾಳಿಯಾದರೂ ಎದ್ದು ನನ್ನನ್ನು ಹೊತ್ತುಕೊಂಡು ಹೋಗಿ ಉಲ್ಲೋಲಕಲ್ಲೋಲವಾಗಿದ್ದ ಸಮುದ್ರದೊಳಕ್ಕೆ ಹಾಕಿಬಿಟ್ಟಿದ್ದರೆ ಎಷ್ಟೋ ಚೆನ್ನಾಗಿರುತ್ತಿದ್ದಿತು! ದುಷ್ಟಳಾದ ನನ್ನಿಂದಲೇ ಇಷ್ಟೊಂದು ಮಂದಿಯೂ ಹತರಾಗಬೇಕಾಗಿರುವುದು" ಎಂದು ಗೋಳಾಡಿದಳು. ಆಗ ಹೆಕ್ಟರನು ಆಕೆಯನ್ನು ಸಮಾಧಾನಪಡಿಸಿ, "ಯುದ್ಧರಂಗದಿಂದ ನಾನು ಜೀವಸಹಿತವಾಗಿ ಹಿಂದಿರುಗುವೆನೋ ಇಲ್ಲವೋ ತಿಳಿಯದು. ಆದುದರಿಂದ ನಾನು ನನ್ನ ಹೆಂಡಿತಿಯನ್ನೂ ಸಣ್ಣ ಮಗುವನ್ನೂ ಒಂದುಸಲ ನೋಡಿಕೊಂಡು ಹೋಗಲು ನನ್ನ ಮನೆಗೆ ಹೋಗಿಬರುವೆನು. ಅಲ್ಲಿಂದ ನಾನು ಯುದ್ಧರಂಗಕ್ಕೆ ಹೊರಡುವುದರೊಳಗಾಗಿ ಈ ದುಷ್ಟನಾದ ಪ್ಯಾರಿಸ್ಸನ್ನು ಯುದ್ಧಕ್ಕೆ ಹೊರಡಿಸು" ಎಂದು ಆಕೆಗೆ ತಿಳಿಸಿ ತನ್ನ ಮಂದಿರದ ಕಡೆಗೆ ಹೊರಟನು. ಆ ಸಮಯದಲ್ಲಿ, ಹೆಕ್ಟರಿನ ಹೆಂಡಿತಿಯಾದ ಆಂಡ್ರೋಮೇಕಿಯು ಆತನ ಮಂದಿರದಲ್ಲಿರಲಿಲ್ಲ. ಆಕೆಯು ಎಲ್ಲಿಗೆ ಹೋಗಿದ್ದಳೆಂದು ವಿಚಾರಿಸಲಾಗಿ, ದುರ್ಗದ ಹೊರಗಡೆ ನಡೆಯುತ್ತಿದ್ದ ಕೋಲಾಹಲವನ್ನು ಕೇಳಿ, ಯುದ್ಧವನ್ನು ನೋಡುವುದಕ್ಕಾಗಿ ದುರ್ಗಕ್ಕೆ ಹೋಗಿದ್ದಳೆಂದು ಒಬ್ಬ ದಾಸಿಯು ತಿಳಿಸಿದಳು. ಪಟ್ಟಣದಲ್ಲಿ ಬಹಳ ಹೊತ್ತು ನಿಲ್ಲಲು ಮನಸ್ಸಿಲ್ಲದೆ, ಯುದ್ಧರಂಗಕ್ಕೆ ಹೊರಡಬೇಕೆಂದು ಹೆಕ್ಟರನು ಪಟ್ಟಣದ ಬಾಗಿಲ ಸಮೀಪಕ್ಕೆ ಬಂದಾಗ, ಆಂಡ್ರೋಮೇಕಿಯು ಅವನ ಬಳಿಗೆ ವೇಗವಾಗಿ ಓಡಿಬಂದಳು. ಅವಳ ಸಮೀಪದಲ್ಲಿಯೇ ಒಬ್ಬ ಸೇವಕಿಯು ಹೆಕ್ಟರಿನ ಗಂಡು ಮಗುವನ್ನು ಎತ್ತಿಕೊಂಡು ಬರುತ್ತಿದ್ದಳು. ಆಂಡ್ರೋಮೇಕಿಯು ತನ್ನ ಪತಿಯನ್ನು ಕುರಿತು, "ನಾಥನೆ, ನೀನು ಶೌರ್ಯೋದ್ರೇಕಪೂರಿತನಾಗಿರುವಾಗ ನನ್ನ ಯೋಗಕ್ಷೇಮವನ್ನಾಗಲೀ ಈ ನಿರ್ಭಾಗ್ಯಶಿಶುವಿನ ಕ್ಷೇಮಚಿಂತನೆಯನ್ನಾಗಲಿ ಯೋಚಿಸುವುದಿಲ್ಲ. ಗ್ರೀಕರಾದರೋ ಅತಿಸಾಹಸದಿಂದ ಕಾದಾಡುತ್ತಿರುವರು. ಅವರ ರಭಸವನ್ನು ನೋಡಿದರೆ ನಿನ್ನನ್ನು ಕೊಂದುಬಿಡುವರೆಂದು ತೋರುವುದು. ಹಾಗಾದಪಕ್ಷದಲ್ಲಿ ನಾನು

ಬದುಕಿರುವುದರಿಂದೇನು ಪ್ರಯೋಜನ? ನನ್ನ ತಂದೆಯೂ ನನ್ನ ಏಳು ಮಂದಿ ಸಹೋದರರೂ ಕೆಲವು ವರ್ಷಗಳಿಗೆ ಹಿಂದೆ ನಡೆದ ಯುದ್ಧದಲ್ಲಿ ಏಕಿಲೀಸಿನ ಕೈಯಿಂದ ಹತರಾದರು. ನನ್ನ ತಾಯಿಯು ಆರ್ಟೆಮಿಸ್ ದೇವತೆಯ ಕೋಪದಿಂದ ಹತಳಾದಳು. ಆದುದರಿಂದ ನೀನೇ ನನಗೆ ತಂದೆ, ತಾಯಿ, ಭ್ರಾತೃ, ಪತಿ ನೀನೇ ನನಗೆ ಸರ್ವಸ್ವವೂ ಆಗಿರುವುದರಿಂದ ನನ್ನ ಮೇಲೂ ಈ ಮಗುವಿನ ಮೇಲೂ ದಯೆಯಿಟ್ಟು ನೀನು ಈ ದುರ್ಗದಲ್ಲಿಯೇ ನಿಂತುಬಿಡು. ಪಟ್ಟಣವು ದುರ್ಬಲವಾಗಿರತಕ್ಕ ಅತ್ತಿಯಮರದ ಬಳಿಯಲ್ಲಿಯೇ ನೀನು ಕಾದುಕೊಂಡಿರಬಹುದು. ಶತ್ರುಗಳು ಆ ಸ್ಥಳದಲ್ಲಿ ಹಿಂದೆ ಮೂರುಸಲ ಯತ್ನಿಸಿದ್ದಾರೆ. ಲಗ್ಗೆ ಹತ್ತಬೇಕೆಂದು ಪುನಃ ಪ್ರಯತ್ನಿಸಿದರೆ ನೀನು ಅದನ್ನು ತಪ್ಪಿಸಬಹುದು. ಆದುದರಿಂದ ನನ್ನ ಪ್ರಾರ್ಥನೆಯನ್ನು ನೆರವೇರಿಸು" ಎಂದು ಗೋಳಾಡುತ್ತಾ ಬೇಡಿಕೊಂಡಳು.

೬೬ ಹೆಕ್ಟರನು ಆಕೆಯನ್ನು ಕುರಿತು, "ಪ್ರಿಯಳೇ ನೀನು ಹೇಳುವುದೆಲ್ಲಾ ಸರಿಯೆ! ಈಗಾಗಲೆ ಟ್ರೋಜನರಿಗೆ ಕೈಯಿಂದಾಗದವರೆಂಬ ಅಪಖ್ಯಾತಿಯು ಒದಗಿರುವುದು. ಹೇಡಿಯಂತೆ ಯುದ್ಧಕ್ಕೆ ಹಿಂಜರಿಯುವುದು ನನ್ನಿಂದಾಗುವುದಿಲ್ಲ. ಇಲಿಯಂ ದುರ್ಗವು ನೆಲಸಮವಾಗುವುದೆಂಬುದನ್ನೇನೋ ನಾನು ಬಲ್ಲೆನು. ಪ್ರಿಯಾಮನೂ ಆತನ ಬಂಧುಮಿತ್ರರೂ ನಾಶವಾಗುವರೆಂಬುದನ್ನೂ ನಾನು ಬಲ್ಲೆನು. ಆದರೆ ಅದಕ್ಕಾಗಿ ನನ್ನ ಮನಸ್ಸಿಗೆ ಉಂಟಾಗುವ ವ್ಯಥೆಗಿಂತಲೂ, ನೀನು ಯಾರೋ ಒಬ್ಬ ಗ್ರೀಕ್ ಯೋಧನ ಕೈಗೆ ಸೆರೆ ಸಿಕ್ಕಿ ಅವನ ಮನೆಯ ಪರಿಚಾರಿಕೆಯಾಗುವ ಸಂಭವವನ್ನು ನೆನೆದುಕೊಂಡರೆ, ನನಗೆ ಅಪಾರವಾದ ಶೋಕವುಂಟಾಗುವುದು. ಶತ್ರುಗಳ ಕೈಗೆ ನೀನು ಸಿಕ್ಕಿಬಿದ್ದು ಮೊರೆಯಿಡುವ ಆ ವಿಷಗಳಿಗೆಯು ಬರುವುದಕ್ಕಿಂತ ಮುಂಚೆಯೇ, ನನಗೆ ಈ ಲೋಕದಿಂದ ಬಿಡುಗಡೆಯಾಗಲಿ" ಎಂದು ಬಹಳ ವ್ಯಥೆಯಿಂದ ಹೇಳಿ, ತನ್ನ ಮಗುವನ್ನು ಎತ್ತಿಕೊಳ್ಳಲು ಕೈನೀಡಿದನು. ಹೆಕ್ಟರಿನ ಶಸ್ತ್ರಕವಚಗಳನ್ನೂ ಅವನ ಟೊಪ್ಪಿಗೆಯಮೇಲೆ ಅಲುಗಾಡುತ್ತಿದ್ದ ಕುದುರೆಯ ಜವಿಯ ಕುಚ್ಚನ್ನೂ ನೋಡಿ ಆ ಮಗು ಹೆದರಿಕೊಂಡು, ಹೆಕ್ಟರಿನ ಬಳಿಗೆ ಹೋಗದಿದ್ದುದರಿಂದ, ಆತನು ತನ್ನ ಶಿರಸ್ತ್ರಾಣವನ್ನು ಒಂದುಕಡೆ ತೆಗೆದಿಟ್ಟು, ಆ ಮಗುವನ್ನು ಎತ್ತಿಕೊಂಡನು. ಹೆಕ್ಟರನು ತನ್ನ ಮನಸ್ಸಿನಲ್ಲಿಯೇ ಜ್ಯೂಸನ್ನು ಕುರಿತು, "ದೇವರೇ, ಈ ಮಗುವನ್ನು ಕಾಪಾಡಿ ನನಗಿಂತಲೂ ಶೂರನೆನಿಸಿಕೊಂಡು ಒಬ್ಬ ದೊಡ್ಡ

ದೊರೆಯಾಗುವಂತೆ ಅನುಗ್ರಹಿಸು " ಎಂದು ಪ್ರಾರ್ಥಿಸಿ ಕಣ್ಣೀರನ್ನು ಸುರಿಸುತ್ತಿದ್ದ ಆಂಡ್ರೊಮೇಕಿಯ ಕೈಗೆ ಆ ಮಗುವನ್ನು ಕೊಟ್ಟು " ಪ್ರಿಯೆ, ಕಾತರಿಸಬೇಡ ; ನನ್ನ ಅದೃಷ್ಟವು ಗಟ್ಟಿಯಾಗಿದ್ದರೆ ನನ್ನನ್ನು ಕೊಲ್ಲಲು ಯಾರಿಗೆತಾನೆ ಸಾಧ್ಯವಾಗುವುದು ? ಪ್ರತಿಯೊಬ್ಬನ ಅದೃಷ್ಟಕ್ಕೆ ಅನುಸಾರವಾಗಿಯೇ ಅವನು ಶೂರನಾಗಿಯೋ ಹೇಡಿಯಾಗಿಯೋ ಪರಿಣಮಿಸುವನು. ನೀನು ಮನೆಗೆಹೋಗಿ ಮನೆಗೆಲಸಗಳನ್ನು ನೋಡಿಕೊ; ಯುದ್ಧದ ಚಿಂತೆಯನ್ನು ಮನಸ್ಸಿಗೆ ಹಚ್ಚಿಕೊಳ್ಳಬೇಡ " ಎಂದು ಹೇಳಿ ಆಕೆಯನ್ನು ಕಳುಹಿಸಿಕೊಟ್ಟನು.

೬೭. ಆಂಡ್ರೋಮೇಕಿಯು ಅರಮನಸ್ಸಿನಿಂದ ತನ್ನ ಮಂದಿರಕ್ಕೆ ಹೊರಟು ದಾರಿಯುದ್ದಕ್ಕೂ ಕಣ್ಣೀರನ್ನು ಸುರಿಸುತ್ತಾ, ಎಷ್ಟೋಸಾರಿ ಹಿಂದ ಹಿಂದಕ್ಕೆ ತಿರುಗಿ ನೋಡುತ್ತಾ, ತನ್ನ ಮಂದಿರಕ್ಕೆ ಒಂದುಸೇರಿದಳು. ತಮ್ಮ ಯಜಮಾನಿಯು ಗೋಳಾಡುತ್ತಿದ್ದುದನ್ನು ನೋಡಿದ ಕೂಡಲೆ, ಆಕೆಯ ಸೇವಕಿಯರೆಲ್ಲರೂ ಗೋಳಾಡಲು ಮೊದಲುಮಾಡಿದರು. ಅವರಲ್ಲಿ ಪ್ರತಿಯೊಬ್ಬರೂ ಪುನಃ ಹೆಕ್ಟರನು ಆ ಮಂದಿರಕ್ಕೆ ಹಿಂದಿರುಗಲಾರನೆಂದು ಭಾವಿಸಿಕೊಂಡರು. ಪ್ಯಾರಿಸ್ಸನು ಯುದ್ಧರಂಗಕ್ಕೆ ಹೊರಟು ನಡುದಾರಿಯಲ್ಲಿಯೇ ಹೆಕ್ಟರನ್ನು ಸಂಧಿಸಿ " ಅಣ್ಣಾ ಇಗೋ ! ಬಂದುಬಿಟ್ಟೆನು " ಎಂದು ಹೇಳಿದನು. ಹೆಕ್ಟರನು ಪ್ಯಾರಿಸ್ಸನ್ನು ಕುರಿತು " ನೋಡಿದರ, ನಾನು ನಿನ್ನ ವಿಷಯವಾಗಿ ಟ್ರೋಜನರಲ್ಲಿ ಅನೇಕರು ದೂರುತ್ತಿದ್ದುದನ್ನು ಕೇಳಿ ಸಹಿಸಲಾರದೆ ನಿನ್ನೊಡನೆ ಕ್ರೂರವಾಗಿ ಮಾತನಾಡಿದೆನು. ನಮ್ಮ ಈ ಶತ್ರುಗಳನ್ನು ನಮ್ಮ ರಾಜ್ಯದಿಂದ ಓಡಿಸಿದ ಬಳಿಕ, ಈ ವಿಷಯವನ್ನು ಕುರಿತು ಮಾತನಾಡುವ. ಈಗ, ಬಾ ! ಯುದ್ಧಕ್ಕೆ ಹೊರಡುವ " ಎಂದು ಹೇಳುತ್ತಾ ಯುದ್ಧರಂಗಕ್ಕೆ ಹೊರಟನು.

---

## X

೬೮. ತೊರೆಗೆ ಇದಿರಾಗಿ ದೋಣಿಯನ್ನು ನಡಿಸಿ ಕೈಗಳು ಸೋತು ಹೋಗುತ್ತಿರುವ ಅಂಬಿಗರಿಗೆ, ಅನುಕೂಲಮಾರುತವು ಬೀಸತೊಡಗಿದ ಕೂಡಲೆ ಬಹುಸಂತೋಷವಾಗುವಂತೆ, ಹೆಕ್ಟರನೂ ಪ್ಯಾರಿಸ್ಸನೂ ಯುದ್ಧರಂಗಕ್ಕೆ ಬರುತ್ತಿರುವುದನ್ನು ಕಂಡು ಟ್ರೋಜನ್ ಯೋಧರಿಗೆ ಬಹುಸಂತೋಷವಾಗಿ ಉತ್ಸಾಹದಿಂದ ಕಾದತೊಡಗಿದರು. ಗ್ರೀಕರ ಅಭಿಮಾನದೇವತೆಯಾದ ಅಥೆನಿಯು ತನ್ನ ಆಶ್ರಿತರಿಗೆ ಉಂಟಾಗುತ್ತಿದ್ದ ಸೋಲಿಗಾಗಿ ವ್ಯಸನಪಟ್ಟು

ರಣರಂಗಕ್ಕೆ ಬಂದಳು. ಟ್ರೋಜನರ ಅಭಿಮಾನದೇವತೆಯಾದ ಅಪೋಲೋ ದೇವನು ತನ್ನ ಆಶ್ರಿತರನ್ನು ಪ್ರೋತ್ಸಾಹಗೊಳಿಸುವುದಕ್ಕಾಗಿ ಯುದ್ಧರಂಗಕ್ಕೆ ಬರುತ್ತಾ ಅಥೆನಿಯನ್ನು ದಾರಿಯಲ್ಲಿ ಸಂಧಿಸಿ ಎರಡು ಸೇನೆಗಳಿಗೂ ತುಮುಲ ಯುದ್ಧವು ನಡೆಯುವುದಕ್ಕೆ ಬದಲು ಒಂದೊಂದು ಪಕ್ಷದವರಕಡೆ ಒಬ್ಬೊಬ್ಬ ವೀರನು ನಿಂತು ಕಾದಾಡುವುದು ಒಳ್ಳೆಯದೆಂದೂ ಹಾಗೆ ದ್ವಂದ್ವಯುದ್ಧವು ನಡೆಯುತ್ತಿರುವಾಗ ತಾವು ಹದ್ದುಗಳ ರೂಪವಾಗಿ ಒಂದು ಮರದಮೇಲೆ ಕುಳಿತು ನೋಡುತ್ತಿರಬೇಕೆಂದೂ ನಿಷ್ಕರ್ಷೆಮಾಡಿಕೊಂಡರು. ಈ ದೇವತೆಗಳ ತೀರ್ಮಾನವನ್ನು ಹೆಲೆನಸನು ತನ್ನ ಜ್ಞಾನದೃಷ್ಟಿಯಿಂದ ತಿಳಿದುಕೊಂಡು, ಹೆಕ್ಟರನ್ನು ಕುರಿತು “ನೀನು ಗ್ರೀಕರ ಕಡೆಯ ಪ್ರತಿನಿಧಿಯಾದ ಯಾವನಾದರೂ ಒಬ್ಬ ಯೋಧನನ್ನು ಕರೆದು ಅವನೊಡನೆ ದ್ವಂದ್ವಯುದ್ಧ ಮಾಡು; ಹೀಗೆ ಮಾಡಬೇಕೆಂಬುದೇ ದೈವೇಚ್ಛೆಯು” ಎಂದು ತಿಳಿಸಿದನು.

೭೯. ಅದೇ ಮೇರೆಗೆ ಹೆಕ್ಟರನು ತನ್ನ ಈಟಿಯನ್ನು ಮಧ್ಯಭಾಗದಲ್ಲಿ ಹಿಡಿದುಕೊಂಡು ಒಂಟಿಯಾಗಿ ಗ್ರೀಕರ ಶ್ರೇಣಿಯ ಬಳಿಗೆ ಬಂದು “ಗ್ರೀಕ ವೀರರುಗಳಿರಾ, ಇಷ್ಟುಕಾಲವೂ ನಾವು ಕಾದಾಡುತ್ತಿದ್ದರೂ ಯುದ್ಧವು ಬೇರೆ ಕೊನೆಗಾಣಲಿಲ್ಲ. ನನ್ನೊಡನೆ ಕಾದಬಲ್ಲವೀರನು ನಿಮ್ಮಲ್ಲಿ ಯಾರಾದರೂ ಇದ್ದರೆ ಬಂದು ಯುದ್ಧಮಾಡಬಹುದು. ಈ ಯುದ್ಧದಲ್ಲಿ ನಿಮ್ಮ ಕಡೆಯವನು ಜಯಶೀಲನಾದ ಪಕ್ಷದಲ್ಲಿ, ಆತನು ನನ್ನ ಆಯುಧಕವಚಾದಿಗಳನ್ನು ತೆಗೆದುಕೊಂಡು ನನ್ನ ಶರೀರವನ್ನು ಮಾತ್ರ ಸಂಸ್ಕಾರಕ್ಕಾಗಿ ನನ್ನ ಕಡೆಯವರಿಗೆ ಒಪ್ಪಿಸಿ ಬಿಡಬೇಕು; ಒಂದುವೇಳೆ ನಾನೇ ನಿಮ್ಮ ಕಡೆಯ ಯೋಧನನ್ನು ಕೊಂದರೆ, ಅವನ ಕವಚವಸ್ತ್ರಾದಿಗಳನ್ನು ನಾನು ವಶಮಾಡಿಕೊಂಡು, ಅವನ ಶರೀರವನ್ನು ದಹನಕ್ಕಾಗಿ ನಿಮ್ಮ ಕಡೆಯವರಿಗೆ ಒಪ್ಪಿಸಿಬಿಡುವೆನು. ನಿಮ್ಮ ಕಡೆಯವನು ಜಯಶೀಲನಾದರೆ ಹೆಲೆನಳನ್ನೂ ಅವಳ ದ್ರವ್ಯವನ್ನೂ ನಿಮಗೆ ಒಪ್ಪಿಸಿ ಬಿಡುವೆವು. ಆದುದರಿಂದ ನಿಮ್ಮಲ್ಲಿ ಯಾರಾದರೂ ಯುದ್ಧಕ್ಕೆ ನಿಲ್ಲಿ” ಎಂದು ಗಟ್ಟಿಯಾಗಿ ಹೇಳಿದನು. ಅದಕ್ಕೆ ಪ್ರತ್ಯುತ್ತರಕೊಡಲು ಗ್ರೀಕರಲ್ಲಿ ಮೊತ್ತಮೊದಲು ಯಾರಿಗೂ ಧೈರ್ಯವಿರಲಿಲ್ಲ. ಆಗಮೆನೆಲಾಸನು ಮನಸ್ಸಿನಲ್ಲಿಯೇ ವ್ಯಥೆಪಡುತ್ತಾ ತನ್ನ ಪಕ್ಷದವರನ್ನು ಹಂಗಿಸುತ್ತಾ, “ಈ ಮಹಾವೀರನೊಡನೆ ನಾನೇ ಕಾದುವೆನು” ಎಂದು ಹೇಳಿಕೊಂಡು ಮುಂದೆ ನುಗ್ಗಿದನು. ಅದನ್ನು ಕಂಡು ಅಗಮೆಮ್ನಾನನು ಹೆಕ್ಟರನ ಮುಂದೆ ಮೆನೆಲಾಸನು ನಿಲ್ಲಲಾರನೆಂದು ಹೆದರಿ, ಅವನನ್ನು ನಿಷೇಧಿಸಿ

ದನು. ಅಣ್ಣನಮಾತನ್ನು ವಿಾರಲಾರದೆ ಮೆನೆಲಾಸನು ಹಿಂದಿರುಗಬೇಕಾಯಿತು. ಆಗ ನೆಸ್ಟಾರನು ಮುಂದೆಬಂದು "ಗ್ರೀಕರೇ, ಇದೇನು? ನಿಮ್ಮ ಶೌರ್ಯವು ಎಲ್ಲಿ ಅಡಗಿಹೋಯಿತು. ನನಗೆ ಈ ಹಾಳುಮುಪ್ಪು ಇಲ್ಲದಿದ್ದರೆ ಗ್ರೀಕರಿಗೆ ಇಂತಹ ದುಃಅವಸ್ಥೆಯುಂಟಾಗುತ್ತಿದ್ದಿತೆ? ಹಿಂದಿನ ಅದ್ಭುತಶಕ್ತಿಯು ಈಗ ನನಗೆ ಇದ್ದಿದ್ದರೆ, ಹೆಕ್ಟರಿಗೆ ನನ್ನ ಶಕ್ತಿಯ ರುಚಿಯನ್ನು ತೋರಿಸುತ್ತಿದ್ದೆನಲ್ಲಾ! ಇಷ್ಟುಮಂದಿಗಳಲ್ಲಿ ವೀರರೊಬ್ಬರೂ ಇಲ್ಲವೆ?" ಎಂದು ಹೇಳಿದನು.

೭೦. ನೆಸ್ಟಾರಿನ ಈ ಮಾತುಗಳನ್ನು ಕೇಳಿದಕೂಡಲೆ ಅಗಮೆಮ್ನಾನನೂ ಡೈಯೊಮಿಾಡೀಸನೂ ಹಿರಿಯ ಏಯಾಸನೂ ಮತ್ತೆ ಆರುಮಂದಿ ಶೂರರೂ ಎದ್ದುನಿಂತು ಹೆಕ್ಟರಿನೊಡನೆ ಕಾದುವುದಕ್ಕೆ ಸಿದ್ಧರಾಗಿರುವುದಾಗಿ ತಿಳಿಸಿದರು. ಅಷ್ಟುಮಂದಿಯಲ್ಲಿ ಒಬ್ಬನನ್ನು ಆರಿಸಿಕೊಳ್ಳುವುದಕ್ಕಾಗಿ ಚೀಟುಹಾಕಬೇಕೆಂದು ನಿಷ್ಕರ್ಷೆಯಾಯಿತು. ಅಗಮೆಮ್ನಾನನು ತನ್ನ ಉಕ್ಕಿನ ಟೊಪ್ಪಿಗೆಯನ್ನು ತೆಗೆದು ಅದರಲ್ಲಿ ಚೀಟಿಗಳನ್ನು ಹಾಕಿ ಕುಲುಕುತ್ತಿದ್ದಾಗ, ಪ್ರತಿಯೊಬ್ಬ ಗ್ರೀಕನ ಮನಸ್ಸಿನಲ್ಲಿಯೂ ಆ ಚೀಟಿಯು—ಅಗಮೆಮ್ನಾನ್, ಹಿರಿಯ ಏಯಾಸ್ ಡೈಯೊಮಿಾಡೀಸ್—ಈ ಮೂವರಲ್ಲಿ ಯಾರೊಬ್ಬರ ಹೆಸರಿಗಾದರೂ ಬರಬೇಕೆಂದು ಹಾರೈಕೆಯುಂಟಾಗುತ್ತಿದ್ದಿತು. ಕಡೆಗೆ ಹಿರಿಯ ಏಯಾಸಿನ ಹೆಸರಿಗೆ ಚೀಟಿಯು ಬಂದಿದ್ದುದರಿಂದ, ಅವನು ಯುದ್ಧಕ್ಕೆ ಸಿದ್ಧವಾದನು ದ್ವಂದ್ವಯುದ್ಧಕ್ಕೆ ಮೊದಲಾಗುವುದಕ್ಕಿಂತ ಮುಂಚೆ ತಮ್ಮ ಕಡೆಯವನಿಗೇ ಜಯವನ್ನುಂಟುಮಾಡಬೇಕೆಂದೂ, ಒಂದುವೇಳೆ ಟ್ರೋಜನರಮೇಲೂ ಜ್ಯೂಸಿಗೆ ಪ್ರೀತಿಯಿದ್ದ ಪಕ್ಷದಲ್ಲಿ ಏಯಾಸಿಗೂ ಹೆಕ್ಟರಿಗೂ ಸರಿಸರಿ ಯುದ್ಧವಾಗಬೇಕೆಂದೂ ಗ್ರೀಕರು ಜ್ಯೂಸನ್ನು ಪ್ರಾರ್ಥಿಸಿಕೊಂಡರು.

೭೧. ಏಯಾಸನು ಅದ್ಭುತಾಕಾರಿಯಾದ ಪುರುಷನು. ಗ್ರೀಕರ ಪಾಳೆಯದಲ್ಲೆಲ್ಲಾ ಅವನಷ್ಟು ಎತ್ತರವಾಗಿದ್ದ ಆಳು ಮತ್ತೊಬ್ಬನಿರಲಿಲ್ಲ. ಆಕಾರಕ್ಕೆ ತಕ್ಕ ಶಕ್ತಿಯೂ ಅವನಲ್ಲಿದ್ದಿತು. ಟ್ರೋಜನರ ಕಡೆಯ ಶೂರರುಗಳಲ್ಲೆಲ್ಲಾ ಬಹು ಮುಖ್ಯನಾದ ಹೆಕ್ಟರನೊಡನೆ ಕಾದುವುದಕ್ಕಾಗಿ ಏಯಾಸನು ನಿಂತುದರಿಂದ, ಗ್ರೀಕರಲ್ಲೆಲ್ಲಾ ಬಹಳ ಸಂತೋಷವುಂಟಾಗಿದ್ದಿತು. ಏಯಾಸಿನ ಗುರಾಣಿಯು ಬಹಳ ವಿಸ್ತಾರವಾಗಿದ್ದಿತು. ಅದಕ್ಕೆ ಎತ್ತಿನ ಚರ್ಮಗಳನ್ನು ಏಳು ಪದರಗಳಾಗಿ ಬಹಳ ದೃಢವಾಗಿ ಹೊಲೆದು, ಅವುಗಳಮೇಲೆ ಕಂಚಿನ

ತಗಡನ್ನು ಮೆಟ್ಟಿಸಿದ್ದರು. ಏಯಾಸನು ತನ್ನ ಆಯುಧಗಳನ್ನು ಹಿಡಿದುಕೊಂಡು, ಹೆಕ್ಟರಿನ ಮುಂದಕ್ಕೆ ಬಂದು—“ ಹೆಕ್ಟರ್, ಗ್ರೀಕರಲ್ಲೆಲ್ಲಾ ಏಕಿಲೀಸನೊಬ್ಬನೇ ಬಹಳ ಶೂರನೆಂದು ತಿಳಿದಿದ್ದೆಯೇನೊ? ನಮ್ಮ ದಳದಲ್ಲಿ ಇನ್ನೂ ಎಷ್ಟೋ ಜನರು ಶೂರರಿರುವೆವು. ಎಲ್ಲಿ, ನನ್ನೊಡನೆ ಬಂದು ಕಾದುವುದಕ್ಕೆ ಸಿದ್ಧನಾಗು” ಎಂದು ಕರೆದಾಗ, ಹೆಕ್ಟರನು “ಯುದ್ಧವೆಂದರೆ ನನಗೆ ಹೊಸ ಉದ್ಯೋಗವೇನೂ ಅಲ್ಲ; ಸರಳಮಾರ್ಗದಿಂದ ಮಾತ್ರವಲ್ಲದೆ ಕಪಟರೀತಿಯಿಂದಲೂ ಯುದ್ಧಮಾಡುವುದಕ್ಕೆ ನನಗೆ ಬರುವುದು. ಆದರೆ ನಿನ್ನೊಡನೆ ಮುಚ್ಚುಮರೆಯಿಲ್ಲದೆಯೇ ಕಾದುವೆನು. ಇಗೋ! ಈ ಏಟನ್ನು ತಡೆದುಕೊ” ಎಂದು ತನ್ನ ಈಟಿಯನ್ನು ಗುರಿಕಟ್ಟಿ ಬಹುರಭಸದಿಂದ ಏಯಾಸಿನಮೇಲೆ ಪ್ರಯೋಗಿಸಿದನು. ಆ ಈಟಿಯು ಏಯಾಸಿನ ಗುರಾಣಿಯ ಕಂಚಿನ ತಗಡನ್ನೂ ಭೇದಿಸಿಕೊಂಡು ಚರ್ಮದ ಆರು ಪದರಗಳನ್ನೂ ಹಾದುಹೋಯಿತು ಏಯಾಸನು ಅದನ್ನು ಲಕ್ಷಿಸದೆ, ತನ್ನ ಈಟಿಯನ್ನು ಪ್ರಯೋಗಿಸಿದನು. ಅದು ಹೆಕ್ಟರಿನ ಗುರಾಣಿಯನ್ನೂ ಕವಚವನ್ನೂ ಭೇದಿಸುವಷ್ಟರಲ್ಲಿ ಹೆಕ್ಟರನು ಒಂದುಕಡೆಗೆ ಬಾಗಿಬಿಟ್ಟುದರಿಂದ, ಗಾಯವಿಲ್ಲದೆ ತಪ್ಪಿಸಿಕೊಂಡನು. ಆ ಯೋಧರಿಬ್ಬರೂ ಪುನಃ ತಮ್ಮತಮ್ಮ ಈಟಿಗಳನ್ನು ತೆಗೆದುಕೊಂಡು ಕ್ಷುಧಾರ್ತವಾದ ಸಿಂಹಗಳಂತೆ ಗರ್ಜಿಸುತ್ತಾ ಮತ್ತೊಮ್ಮೆ ಅವುಗಳನ್ನು ಪ್ರಯೋಗಿಸಿದರು. ಹೆಕ್ಟರಿನ ಪ್ರಯೋಗವು ಪುನಃ ವ್ಯರ್ಥವಾಯಿತು. ಏಯಾಸಿನ ಈಟಿಯು ಹೆಕ್ಟರಿನ ಕತ್ತಿನ ಬಳಿಯಲ್ಲಿ ಸ್ವಲ್ಪ ಗಾಯವನ್ನುಂಟುಮಾಡಿತು. ಆದರೂ ಅದನ್ನು ಲಕ್ಷಿಸದೆ ಹೆಕ್ಟರನು ತನ್ನ ಬಳಿಯಲ್ಲಿ ಬಿದ್ದಿದ್ದ ಒಂದು ದೊಡ್ಡ ಕಲ್ಲುಗುಂಡನ್ನು ಎತ್ತಿಕೊಂಡು, ಏಯಾಸಿನ ಮೇಲೆ ಎಸೆದನು. ಆದರೆ ಅವನು ಅದನ್ನು ತನ್ನ ಗುರಾಣಿಯಿಂದ ತಡೆದು ತಾನೂ ಒಂದು ದೊಡ್ಡ ಬಂಡೆಯನ್ನೆತ್ತಿ ಹೆಕ್ಟರನ್ನು ಹೊಡೆದನು. ಅದರ ರಭಸದಿಂದ ಹೆಕ್ಟರನು ಅಂಗತ್ತನಾಗಿ ಬಿದ್ದುಬಿಡಲು ಅಪೋಲೋದೇವನು ಅವನಿಗೆ ಚೈತನ್ಯವನ್ನುಂಟುಮಾಡಿ, ಸ್ವಲ್ಪಹೊತ್ತಿನಲ್ಲೇ ಎಬ್ಬಿಸಿದನು ಕೂಡಲೆ ಅವರವರಿಗೆ ಕತ್ತಿಯಯುದ್ಧಕ್ಕೆ ಮೊದಲಾಯಿತು. ಆದರೆ ಇಷ್ಟರಲ್ಲಿ ಕತ್ತಲೆಯಾದುದರಿಂದ ಎರಡುಪಕ್ಷಗಳ ಮಧ್ಯಸ್ಥಗಾರರೂ ಆ ಯೋಧರುಗಳ ನಡುವೆ ನುಗ್ಗಿ, ಅವರನ್ನು ತಡೆದು ಯುದ್ಧವು ಅಲ್ಲಿಗೆ ನಿಲ್ಲಬಹುದೆಂದು ನಿಲ್ಲಿಸಿದರು ಆದರೆ ಏಯಾಸನು, ದ್ವಂದ್ವಯುದ್ಧಕ್ಕೆ ಪ್ರಾರಂಭಮಾಡಿದ್ದ ಹೆಕ್ಟರನೇ ಕತ್ತಲೆಗಾಗಿ ಯುದ್ಧವನ್ನು ನಿಲ್ಲಿಸಬೇಕೆಂದು ಕೇಳಿಕೊಂಡರೆ ಮಾತ್ರ, ತಾನು

ಯುದ್ಧವನ್ನು ನಿಲ್ಲಿಸುವುದಾಗಿ ಹಠಹಿಡಿದುದರಿಂದ, ಹೆಕ್ಟರನು ದ್ವಂದ್ವಯುದ್ಧವನ್ನು ನಿಲ್ಲಿಸಬೇಕೆಂದು ತನ್ನ ಪ್ರತ್ಯರ್ಥಿಯನ್ನು ಕೇಳಿಕೊಂಡನು. ಕೂಡಲೆ ಯುದ್ಧವು ನಿಂತಿತು.

೭೨. ಆ ಇಬ್ಬರು ಯೋಧರೂ ಅಖಾಡವನ್ನು ಬಿಟ್ಟು ಹೊರಡುವುದಕ್ಕೆ ಮುಂಚೆ, ಹೆಕ್ಟರನು ಏಯಾಸನ್ನು ಕುರಿತು, "ವೀರಾಗ್ರಣಿಯೇ, ಈವರೆಗೂ ನಾವು ಬದ್ಧಶತ್ರುತ್ವದಿಂದ ಕಾದಿರುವೆವು. ಕತ್ತಲಾದುದರಿಂದ ಈಗ ಯುದ್ಧವನ್ನು ನಿಲ್ಲಿಸಿ ಶಾಂತರಾಗಿರುವೆವು. ಈಗ ನಮಮಗೆ ಉಂಟಾಗಿರುವ ಶಾಂತಿಯ ನಿದರ್ಶನಾರ್ಥವಾಗಿ, ಒಬ್ಬರಿಗೊಬ್ಬರು ಬಹುಮಾನಮಾಡಿಕೊಳ್ಳುವ" ಎಂದು ಹೇಳಿ ಬೆಳ್ಳಿಯ ಹಿಡಿಯೂ, ಸೊಗಸಾದ ಒರೆಯೂ ಇದ್ದ ಒಂದು ಕತ್ತಿಯನ್ನೂ ಅದನ್ನು ತಗುಲಹಾಕಿಕೊಳ್ಳುವ ಒಂದು ಸೊಗಸಾದ ನಡುವಿನಪಟ್ಟಿಯನ್ನೂ ಬಹುಮಾನಮಾಡಿದನು. ಏಯಾಸನೂ ತನ್ನ ನಡುವಿನಪಟ್ಟಿಯನ್ನು ಬಹುಮಾನವಾಗಿ ಕೊಟ್ಟನು. ಬಳಿಕ ಉಭಯಪಕ್ಷದ ಯೋಧರುಗಳೂ ತಮ್ಮ ತಮ್ಮ ಪಾಳೆಯಗಳಿಗೆ ಹೋಗಿ ಊಟಮಾಡಿ ವಿಶ್ರಮಿಸಿಕೊಳ್ಳುತ್ತಿದ್ದರು.

೭೩. ಬಳಿಕ ನೆಸ್ಟಾರನು ಅಗಮೆಮ್ನಾನನನ್ನೂ ಇತರ ಗ್ರೀಕ್ ಯೋಧರುಗಳನ್ನೂ ಕುರಿತು, ಆ ದಿನ ಸತ್ತುಬಿದ್ದಿದ್ದ ತಮ್ಮಕಡೆಯವರ ಹೆಣಗಳನ್ನು ಗಾಡಿಗಳಲ್ಲಿ ಹೇರಿಕೊಂಡು ಬಂದು, ಒಂದುಕಡೆ ರಾಶಿಹಾಕಿ ಸುಟ್ಟುಬಿಡುವ ಏರ್ಪಾಡನ್ನು ಮಾಡಬೇಕೆಂದು ಸೂಚಿಸಿದುದಲ್ಲದೆ, ಶತ್ರುಗಳು ತಮ್ಮಮೇಲೆ ನುಗ್ಗಿ ಬಾರದಂತೆ ತಡೆಯುವುದಕ್ಕಾಗಿ ಬಲವಾದ ಗೋಡೆಯೊಂದನ್ನು ಹಾಕಬೇಕೆಂದೂ ಅದರ ಸುತ್ತಲೂ ಕಂದಕವನ್ನು ಅಗೆಯಬೇಕೆಂದೂ ಬೋಧಿಸಿದನು.

೭೪. ಅತ್ತ ಟ್ರೋಜನರ ಒಂದು ಸಭೆಯಲ್ಲಿ ವಯೋವೃದ್ಧನೂ ವಿವೇಕಶಾಲಿಯೂ ಆಗಿದ್ದ ಆಂಟೆನರ್ ಎಂಬವನು "ಇನ್ನಾದರೂ ಹೆಲೆನಳನ್ನೂ ಆಕೆಯ ದ್ರವ್ಯವನ್ನೂ ಗ್ರೀಕರಿಗೆ ಒಪ್ಪಿಸಿಬಿಡುವುದು ಕ್ಷೇಮ" ವೆಂದು ಟ್ರೋಜನರಿಗೆ ಬುದ್ಧಿವಾದಹೇಳಿದನು. ಅದಕ್ಕೆ ಪ್ರತಿಯಾಗಿ, ಪ್ಯಾರಿಸ್ಸನು ಹೆಲೆನಳ ದ್ರವ್ಯವನ್ನಾದರೂ ಹಿಂದಕ್ಕೆ ಕೊಟ್ಟುಬಿಡಬಹುದೇಹೊರತು, ಹೆಲೆನಳನ್ನು ಬಿಟ್ಟುಕೊಡಲಾಗದೆಂದು ಅಡ್ಡಿಮಾಡಿದನು. ಪ್ರಿಯಾಮನೂ ಅದೇ ಅಭಿಪ್ರಾಯವನ್ನು ಅನುಮೋದಿಸಿದುದರಿಂದ, ಇನ್ನೂ ಕತ್ತಲಾಗಿದ್ದಾಗಲೇ ಒಬ್ಬ ಚಾರನನ್ನು ಟ್ರೋಜನರು ಗ್ರೀಕರ ಪಾಳೆಯಕ್ಕೆ ಕಳುಹಿಸಿ ಪ್ಯಾರಿಸ್ಸಿನ ಅಭಿಪ್ರಾಯವನ್ನು

ಗ್ರೀಕರಿಗೆ ತಿಳಿಯಪಡಿಸಿ ತಮ್ಮ ತಮ್ಮ ಕಡೆಯಲ್ಲಿ ಸತ್ತವರನ್ನು ಸಂಸ್ಕರಿಸಲು ಎರಡುಪಕ್ಷದವರೂ ಅನುಮತಿಸಬೇಕೆಂದು ಹೇಳಿಕಳುಹಿಸಿದರು. ಆದರೆ ಡೈಯೊಮಿಡೀಸನು ಮುಂದೆಬಂದು, ಟ್ರೋಜನರಿಗೆ ವಿನಾಶಕಾಲವು ಸನ್ನಿಹಿತವಾಗಿದ್ದುದರಿಂದಲೇ ಅವರಿಗೆ ಅಂತಹ ವಿಪರೀತಬುದ್ಧಿಯುಂಟಾಗಿದ್ದಿತೆಂದೂ, ಶವಸಂಸ್ಕಾರಕ್ಕಾಗಿ ಅವಕಾಶವನ್ನು ಉಭಯಪಕ್ಷದವರಿಗೂ ಉಂಟುಮಾಡಿಕೊಳ್ಳಬಹುದೆಂದೂ ಪ್ರತ್ಯುತ್ತರಕೊಟ್ಟನು. ಬೆಳಕುಹರಿಯುವಹೊತ್ತಿಗೆ ದಹನಕಾರ್ಯಗಳು ಎರಡುಪಕ್ಷಗಳಲ್ಲಿಯೂ ನಡೆದಿದ್ದುವು. ಗ್ರೀಕರು ಬಲವಾದ ಒಂದು ಕೋಟೆಯನ್ನೂ ಕಟ್ಟಿಯೂ ಮುಗಿಸಿದ್ದರು.

೭೫. ಈ ಸಮಯದಲ್ಲಿ ಲೆಮ್ನಾಸ್ ದ್ವೀಪದಿಂದ ಕೆಲವು ಹಡಗುಗಳು ದ್ರಾಕ್ಷಾರಸವನ್ನು ತುಂಬಿಕೊಂಡು ಗ್ರೀಕರ ಪಾಳೆಯದಬಳಿಗೆ ಬಂದುವು. ಹಿಂದೆ ಆ ದ್ವೀಪಕ್ಕೆ ಜೇಸನ್ನನು ಹೋಗಿದ್ದಾಗ ಆತನು ಅಲ್ಲಿಯ ರಾಣಿಯಾದ ಹಿಪ್ಸಿಪೈಲಿಯನ್ನು ಮದುವೆಯಾಗಿದ್ದನು. ಆಕೆಯಲ್ಲಿ ಯೂನಿಯಸ್ ಎಂಬೊಬ್ಬ ಮಗನು ಹುಟ್ಟಿದ್ದನು. ಈ ಹಡಗುಗಳನ್ನು ಕಳುಹಿಸಿದ್ದಾತನು ಜೇಸನ್ನನ ಆ ಪುತ್ರನೇ. ಅನಿರೀಕ್ಷಿತವಾಗಿ ತಮಗೆ ದೊರೆತಿದ್ದ ದ್ರಾಕ್ಷಾರಸವನ್ನು ಕಂಡು ಗ್ರೀಕರು ಬಹಳವಾಗಿ ಸಂತೋಷಿಸಿದರು. ಆ ರಸಕ್ಕೆ ವಿನಿಮಯವಾಗಿ ಆಗಂತುಕರಿಗೆ ಕಂಚನ್ನೂ ಉಕ್ಕನ್ನೂ ಕೆಲವು ಚರ್ಮಗಳನ್ನೂ ದನಕರುಗಳನ್ನೂ ಕೆಲವರು ಗುಲಾಮರನ್ನೂ ಕೊಟ್ಟು ಆ ದ್ರಾಕ್ಷಾರಸವನ್ನು ತೆಗೆದುಕೊಂಡು ಜ್ಯೂಸಿಗೂ ಸ್ವಲ್ಪ ಸಮರ್ಪಿಸಿ ತಾವೂ ಪಾನಮಾಡುತ್ತಾ ವಿಶ್ರಮಿಸಿಕೊಳ್ಳುತ್ತಿದ್ದರು.

---

## XI

೭೬. ಒಲಿಂಪಸ್ ಪರ್ವತದಲ್ಲಿ ನಡೆದ ಒಂದು ದೇವಸಭೆಯೊಳಗೆ ಜ್ಯೂಸನು ಇತರದೇವತೆಗಳನ್ನು ಕುರಿತು—ಅವರಲ್ಲಿ ಯಾರೇ ಆದರೂ ಮಾನವಯೋಧರಪಕ್ಷಕ್ಕೆ ಸೇರಿ ಯುದ್ಧಮಾಡಿದರೆ ಅವರಿಗೆ ನರಕವನ್ನು ಉಂಟುಮಾಡುವುದಾಗಿ ಹೆದರಿಸಿದನು. ತನ್ನ ಶಕ್ತಿಸಾಮರ್ಥ್ಯಗಳನ್ನು ಪರೀಕ್ಷಿಸಬೇಕಾದರೆ ಉಳಿದ ದೇವತೆಗಳೆಲ್ಲರೂ ಒಟ್ಟಾಗಿ, ಚಿನ್ನದ ಒಂದು ಹಗ್ಗದಕೊನೆಯನ್ನು ಹಿಡಿದು ಭೂಮಿಯಕಡೆಯಿಂದಲೂ ತಾನು ಮತ್ತೊಂದು ಕಡೆಯನ್ನು ಹಿಡಿದು ಸ್ವರ್ಗದಿಂದಲೂ ತುಯ್ಯಾಡಿದರೆ, ಆ ದೇವತೆಗಳನ್ನು ಮಾತ್ರವಲ್ಲದೆ ಸಮುದ್ರಗಳನ್ನೂ, ನದಿಗಳನ್ನೂ, ಪರ್ವತಗಳನ್ನೂ ತನ್ನ ಕಡೆಗೆ ಎಳೆದುಕೊಂಡುಬಿಡುವುದಾಗಿ

ಹೇಳಿದನು. ಇದನ್ನು ಕೇಳಿ ಹೀರಳೇ ಮೊದಲಾದ ಉಳಿದ ದೇವತೆಗಳಿಗೆಲ್ಲಾ ಭಯವುಂಟಾಗಿ ಅವರೂ ಸುಮ್ಮನೆ ಇದ್ದರು. ಬಳಿಕ ಜ್ಯೂಸನು ರಥವನ್ನು ಹತ್ತಿ ಟ್ರಾಯ್ ಪಟ್ಟಣದ ಬಳಿಯಲ್ಲಿದ್ದ ಐಡಾ ಪರ್ವತದಮೇಲೆ ಬಂದುಕುಳಿತು, ಯುದ್ಧವನ್ನು ನೋಡುತ್ತ ಗ್ರೀಕರ ಪಾಳೆಯದಮೇಲೆ ಸಿಡಿಲುಗುಡುಗುಗಳುಂಟಾಗು ವಂತೆ ಮಾಡಿದನು.

೭೭. ಆ ಅಪಶಕುನಗಳನ್ನು ನೋಡಿ ಅಗಮೆಮ್ನಾನನೇ ಮೊದಲಾದವರು ಹೆದರಿದರು. ನೆಸ್ಟಾರನು ಕುಳಿತಿದ್ದ ರಥದ ಕುದುರೆಯ ನೆತ್ತಿಯ ಸುಳಿಗೆ ಗುರಿಕಟ್ಟಿ ಪ್ಯಾರಿಸ್ಸನು ಒಂದು ಬಾಣವನ್ನು ಬಿಟ್ಟುದರಿಂದ, ಆ ಕುದುರೆಯು ತತ್‌ಕ್ಷಣವೇ ಸತ್ತುಬಿದ್ದಿತು. ನೆಸ್ಟಾರನು ಆ ಕುದುರೆಯನ್ನು ರಥದಿಂದ ಪ್ರತ್ಯೇಕಿಸುವುದಕ್ಕಾಗಿ ಕತ್ತಿಯನ್ನು ಹಿಡಿದು ಅದಕ್ಕೆ ಕಟ್ಟಿದ್ದ ಚರ್ಮದಪಟ್ಟಿಯನ್ನು ಕತ್ತರಿಸುತ್ತಿದ್ದಾಗ ಅವನಮೇಲೆ ಹೆಕ್ಟರನು ಬಂದುಬಿದ್ದನು. ಸಿಂಹಗರ್ಜನೆಯನ್ನು ಮಾಡುವವನೆಂದು ಪ್ರಖ್ಯಾತನಾಗಿದ್ದ ಡೈಯೊಮಿಡೀಸನು ಅದನ್ನು ಕಂಡಕೂಡಲೆ ಒಡಿಸಿಯಸ್ಸನ್ನೂ ತನ್ನ ಸಹಾಯಕ್ಕೆ ಕರೆಯುತ್ತಾ, ನೆಸ್ಟಾರಿನ ರಕ್ಷಣೆಗಾಗಿ ಮುಂದಕ್ಕೆ ನುಗ್ಗಿ ಅವನನ್ನು ಕುರಿತು "ವೃದ್ಧಮಹಾಶಯನೆ, ತರುಣರಾದ ಅನೇಕ ಶತ್ರುಗಳು ನಿನ್ನನ್ನು ಬಳಿಸಿಕೊಂಡಿರುವರು; ನಿನ್ನ ಸಾರಥಿಗೆ ಇನ್ನೂ ಅನುಭವವು ಸಾಲದು; ನಿನ್ನ ಕುದುರೆಗಳೂ ಮಂಕಾಗಿಹೋಗಿವೆ. ಬಾ, ನನ್ನ ರಥವನ್ನು ಹತ್ತು. ಇದಕ್ಕೆ ಕಟ್ಟಿರುವ ಕುದುರೆಗಳನ್ನು ಈನಿಯಾಸಿನಿಂದ ನಾನು ನಿನ್ನೆ ಜಯಿಸಿ ವಶಪಡಿಸಿಕೊಂಡೆನು" ಎಂದು ಹೇಳಿದನು. ನೆಸ್ಟಾರನು ಅದಕ್ಕೆ ಒಪ್ಪಲಾಗಿ, ಅವರಿಬ್ಬರೂ ತಮ್ಮ ರಥವನ್ನು ಹೆಕ್ಟರಿನ ಮುಂದಕ್ಕೆ ಬಿಟ್ಟರು. ಬಳಿಕ ಡೈಯೊಮಿಡೀಸನು ಹೆಕ್ಟರಿನಮೇಲೆ ಈಟಿಯನ್ನು ಎಸೆಯಲು ಅದು ಅವನಿಗೆ ತಗುಲುವುದಕ್ಕೆ ಬದಲಾಗಿ ಅವನ ಸಾರಥಿಯನ್ನು ಕೊಂದುಬಿಟ್ಟಿತು. ಹೆಕ್ಟರನು ಮತ್ತೊಬ್ಬ ಸಾರಥಿಯನ್ನು ತನ್ನ ರಥದಮೇಲೆ ಕುಳ್ಳಿರಿಸಿಕೊಂಡು ಯುದ್ಧಕ್ಕೆ ನಿಂತನು. ಥೀಟೀಸಿಗೆ ಕೊಟ್ಟಿದ್ದ ವಾಗ್ದಾನವನ್ನು ಉಳಿಸಿಕೊಳ್ಳಬೇಕೆಂದು ಜ್ಯೂಸಿಗೆ ಇಚ್ಛೆಯಿದ್ದುದರಿಂದ, ಡೈಯೊಮಿಡೀಸ್ ನೆಸ್ಟಾರ್-ಇವರು ಕುಳಿತಿದ್ದ ರಥದ ಮುಂದುಗಡೆಯೇ ಮತ್ತೆ ಬಲವಾದ ಸಿಡಿಲನ್ನು ಬೀಳಿಸಿ ರಥಿಕರಿಗೂ ಕುದುರೆಗಳಿಗೂ ದಿಗ್ಭ್ರಾಂತಿಯನ್ನು ಕಲ್ಪಿಸಿದನು. ಕುದುರೆಗಳ ಲಗಾಮುಗಳು ನೆಸ್ಟಾರಿನ ಕೈಯಿಂದ ಜಾರಿ ಬಿದ್ದುಹೋದುವು. ನೆಸ್ಟಾರನು ಡೈಯೊಮಿಡೀಸನ್ನು ಕುರಿತು, "ನಮಗೆ ಜಯವನ್ನುಂಟುಮಾಡುವುದಕ್ಕೆ ಜ್ಯೂಸಿಗೆ ಮನಸ್ಸಿಲ್ಲ

ವೆಂದು ಕಾಣುವುದು. ಹಿಂದಕ್ಕೆ ಹೋಗುವ, ಬಾ ” ಎಂದು ಬೋಧಿಸಿದನು ಹಿಂದಿರುಗಲು ಡೈಯೊಮೀಡೀಸಿಗೆ ಮನಸ್ಸಿರಲಿಲ್ಲ. ಆದರೂ ನೆಸ್ಟಾರಿನ ಮಾತಿಗೆ ಪ್ರತಿಹೇಳದೆ ಸ್ವಲ್ಪ ಹಿಂದಕ್ಕೆ ಸರಿದನು.

೭೮. ಅದನ್ನು ಕಂಡು ಹೆಕ್ಟರನು ಡೈಯೊಮೀಡೀಸನ್ನು ಹೀಯಾಳಿಸುತ್ತಾ ತನ್ನ ಕಡೆಯವರನ್ನು ಪ್ರೋತ್ಸಾಹಿಸುತ್ತಾ ಮುಂದೆಮುಂದೆ ನುಗ್ಗುತ್ತಿದ್ದನು. ರಥವನ್ನು ಹಿಂದಕ್ಕೆ ತಿರುಗಿಸಿ ಯುದ್ಧಕ್ಕೆ ನಿಲ್ಲಬೇಕೆಂದು ಡೈಯೊಮೀಡೀಸನು ಮೂರು ಸಾರಿ ಪ್ರಯತ್ನಿಸಲು, ಜ್ಯೂಸನು ಆ ಮೂರುಸಾರಿಯೂ ಸಿಡಿಲು ಗುಡುಗುಗಳನ್ನುಂಟುಮಾಡಿದುದರಿಂದ ಅವನು ಸುಮ್ಮನಾಗಬೇಕಾಯಿತು ಜ್ಯೂಸಿನ ಅಭಿಮಾನವು ತಮ್ಮಮೇಲೆ ಇರುವುದೆಂದು ತಿಳಿದು, ಹೆಕ್ಟರನು ತನ್ನ ಕಡೆಯುವರನ್ನು ಪ್ರೋತ್ಸಾಹಿಸಿ ತನ್ನ ರಥಕ್ಕೆ ಕಟ್ಟಿದ್ದ ನಾಲ್ಕು ಕುದುರೆಗಳನ್ನೂ ಹೆಸರುಹಿಡಿದು ಕರೆದು ಅವುಗಳ ಯಜಮಾನಿಯಾದ ಆಂಡ್ರೋಮೇಕಿಯು ಬಹು ಪ್ರೀತಿಯಿಂದ ಕಾಪಾಡಿದ್ದುದಕ್ಕೆ ಪ್ರತಿಯಾಗಿ, ಆ ದಿವಸ ತನಗೆ ಅವು ಡೈಯೊಮೀಡೀಸಿನ ದಿವ್ಯವಾದ ಉರಸ್ತ್ರಾಣವನ್ನೂ ನೆಸ್ಟಾರಿನ ಪ್ರಸಿದ್ಧವಾದ ಚಿನ್ನದ ಗುರಾಣಿಯನ್ನೂ ವಶಪಡಿಸಿಕೊಳ್ಳುವುದರಲ್ಲಿ ಸಹಾಯಮಾಡಬೇಕೆಂದು ಅವುಗಳ ಬೆನ್ನನ್ನು ತಟ್ಟುತ್ತಾ ಹೇಳಿದನು. ಹೆಕ್ಟರನ ಈ ಮಾತುಗಳನ್ನು ಹೀರಳು ಕೇಳಿ ಸಹಿಸಲಾರದೆ, ಸಮುದ್ರಾಧಿಪತಿಯಾದ ಪೊಸೈಡನ್ನಿನೊಡನೆ ಟ್ರೋಜನರ ಔದ್ಧತ್ಯವನ್ನು ಕುರಿತು ದೂಷಿಸಿದಳು. ಆದರೆ ಜ್ಯೂಸಿಗೆ ಪ್ರತಿಯಾಗಿ ಏನು ಮಾಡುವುದೂ ಸಾಧ್ಯವಲ್ಲವೆಂದು ಆತನು ಹೀರಳಿಗೆ ಹೇಳಿದುದರಿಂದ ಆಕೆಯು ಅಗಮೆಮ್ನಾನಿನಲ್ಲಿ ವೀರರಸವುಂಟಾಗುವಂತೆಯೂ ಆತನು ಗ್ರೀಕರೆಲ್ಲರಿಗೂ ಪ್ರೋತ್ಸಾಹವನ್ನುಂಟುಮಾಡುವಂತೆಯೂ ಪ್ರೇರಿಸಿದಳು.

೭೯. ಆಗ ಅಗಮೆಮ್ನಾನನು ಏಕಾಂಗಶೂರರಾದ ಏಕಿಲೀಸಿನ ಗುಡಾರಕ್ಕೂ ಏಯಾಸಿನ ಗುಡಾರಕ್ಕೂ ನಡುವೆ ಇದ್ದ ಸಕಲ ಗ್ರೀಕರಿಗೂ ಕೇಳಿಸುವಂತೆ “ ಎಲೈ ಗ್ರೀಕರೇ, ನೀವುಗಳು ಲೆಮ್ನಾಸ್ ದ್ವೀಪದಲ್ಲಿ ತಂಗಿದ್ದಾಗ ನಿಮ್ಮಲ್ಲಿ ಒಬ್ಬೊಬ್ಬರೇ ನೂರು ಇನ್ನೂರು ಮಂದಿ ಟ್ರೋಜನರೊಡನೆ ಕಾದುವುದಾಗಿ ಹೆಮ್ಮೆಪಟ್ಟುಕೊಂಡುದು ಜ್ಞಾಪಕವಿದೆಯೆ? ಈಗ ನೋಡಿ, ನಾವೆಲ್ಲರೂ ಸೇರಿ ಹೆಕ್ಟರೊಬ್ಬನ ಇದಿರಿಗೆ ನಿಲ್ಲಲು ಆಗದಿರುವುದು. ನಾವುಗಳು ಜ್ಯೂಸಿನ ವಿಷಯದಲ್ಲಿ ಎಷ್ಟೋ ಭಕ್ತಿಯಿಂದ ನಡೆದುಕೊಳ್ಳುತ್ತಿದ್ದರೂ ಆತನಿಗೆ ನಮ್ಮಮೇಲೆ ಕರುಣವುಂಟಾಗದಿರುವುದು ” ಎಂದು ಅವರಿಗೆ ಗಟ್ಟಿಯಾಗಿ

ಹೇಳುತ್ತಿದ್ದಾಗ ಜ್ಯೂಸಿಗೆ ಮರುಕಹುಟ್ಟಿ, ಹೆಕ್ಟರಿಗೆ ಸ್ವಲ್ಪಕಾಲಮಾತ್ರವೂ ಕಡೆಗೆ ಗ್ರೀಕರಿಗೆ ಸಂಪೂರ್ಣವಾಗಿಯೂ ಜಯವುಂಟಾಗುವುದೆಂಬುದನ್ನು ಸೂಚಿಸುವುದಕ್ಕಾಗಿ ಒಂದು ಶುಭಶಕುನವನ್ನುಂಟುಮಾಡಿದನು. ಕೂಡಲೆ ಎಲ್ಲಿಂದಲೋ ಒಂದು ಹದ್ದು ಜಿಂಕೆಯ ಮರಿಯೊಂದನ್ನು ಎತ್ತಿಕೊಂಡು ಬಂದು ಗ್ರೀಕರ ಪಾಳೆಯದಲ್ಲಿದ್ದ ಜ್ಯೂಸಿನ ಬಲಿಪೀಠದ ಬಳಿಯಲ್ಲಿ ತಂದು ಹಾಕಿತು. ಅದನ್ನು ಗ್ರೀಕರು ಜ್ಯೂಸಿಗೆ ಯಜ್ಞಮಾಡಿ ಉತ್ಸಾಹದಿಂದ ಯುದ್ಧಕ್ಕೆ ನಿಂತರು

೮೦. ಅನಂತರ ಎರಡುಕಡೆಗಳ ಯೋಧರುಗಳೂ ಒಬ್ಬರಮೇಲೊಬ್ಬರು ಬಿದ್ದು ಬಹುರಭಸದಿಂದ ಕಾದಾಡಿದರು. ಈ ಸಮಯದಲ್ಲಿ, ಹಿರಿಯ ಏಯಾಸಿನ ಬಲತಮ್ಮನಾದ ಟ್ಯೂಸರ್ ಎಂಬೊಬ್ಬ ಪ್ರಸಿದ್ಧಧನ್ವಿಯು, ತನ್ನ ಕೈಚಳಕದಿಂದ ಯೋಧರುಗಳನ್ನು ಬೆರಗುಮಾಡುತ್ತಿದ್ದನು. ಅವನು ತನ್ನ ಅಣ್ಣನಾದ ಏಯಾಸಿನ ವಿಸ್ತಾರವಾದ ಗುರಾಣಿಯ ಮರೆಯಲ್ಲಿ ನಿಂತು ಬಾಣಗಳನ್ನು ಗುರಿತಪ್ಪದೆ ಟ್ರೋಜನರಮೇಲೆ ಬಿಡುತ್ತಿದ್ದನು. ಒಂದೊಂದು ಬಾಣಕ್ಕೆ ಒಬ್ಬೊಬ್ಬ ಶತ್ರು ವೀರನು ಸತ್ತುಬೀಳುತ್ತಿದ್ದನು. ಅವನು ತನ್ನ ಒಂಬತ್ತನೆಯ ಬಾಣವನ್ನು ಹೆಕ್ಟರಿನಮೇಲೆ ಬಿಡಬೇಕೆಂದು ಯತ್ನಿಸಿದಾಗ, ಪ್ರಯಾಮಿನ ಮತ್ತೊಬ್ಬ ಮಗನು ಅವನ ದೃಷ್ಟಿಗೆ ಬೀಳಲು ಅವನಮೇಲೆಯೇ ಟ್ಯೂಸರನು ಆ ಬಾಣವನ್ನು ಬಿಟ್ಟನು. ಆ ಟ್ರೋಜನ್ ವೀರನ ಹೆಸರು ಗಾರ್ಗಿಥಿಯನ್. ಆ ಬಾಣವು ನಟ್ಟ ಕೂಡಲೆ ಕಾಯಿಯಭಾರದಿಂದ ಒಂದುಕಡೆಗೆ ಬಾಗಿಕೊಳ್ಳುವ ಕಸೆಕಸೆಯ ಗಿಡದಂತೆ ಗಾರ್ಗಿಥಿಯನಿನ ತಲೆಯು ಬಾಗಿಕೊಂಡಿತು. ಬಳಿಕ ಸ್ವಲ್ಪಹೊತ್ತಿನಲ್ಲಿಯೇ ಅವನು ಮೃತ್ಯುವಶನಾದನು. ಟ್ಯೂಸರನು ಹೆಕ್ಟರಿನಮೇಲೆ ಮತ್ತೊಂದು ಬಾಣವನ್ನು ಪ್ರಯೋಗಿಸಿದಾಗ, ಅದೂ ಗುರಿತಪ್ಪಿ ಹೆಕ್ಟರಿನ ಸಾರಥಿಯನ್ನು ಕೊಂದುಬಿಟ್ಟಿತು. ಅವನ ಸ್ಥಾನಕ್ಕೆ ಬಂದ ಮತ್ತೊಬ್ಬ ಸಾರಥಿಗೂ ಸ್ವಲ್ಪ ಹೊತ್ತಿನಲ್ಲಿಯೇ ಅದೇ ಗತಿಯಾಯಿತು. ಹೆಕ್ಟರಿಗೆ ಅದರಿಂದ ಕೋಪೋದ್ರೇಕವಾಗಿ ಆರ್ಭಟಿಸುತ್ತಾ ರಥದಿಂದ ದುಮಿಕಿ ಒಂದು ದಪ್ಪ ಬಂಡೆಯನ್ನು ಎತ್ತಿಕೊಂಡು ಟ್ಯೂಸರನ್ನು ಹೊಡೆದನು. ಅದರಿಂದ ಟ್ಯೂಸರಿನ ಜತ್ರುವಿನ ಮೂಳೆಯು ಮುರಿದುಹೋದುದಲ್ಲದೆ, ಅವನ ಬಿಲ್ಲಿನ ಹೆದೆಯು ಕಿತ್ತುಹೋಗಿ ಅವನು ನಿಶ್ಚೇತನನಾಗಿ ಕೆಳಕ್ಕೆ ಬಿದ್ದುಬಿಟ್ಟನು. ಸಮೀಪದಲ್ಲಿಯೇ ಇದ್ದ ಹಿರಿಯ ಏಯಾಸನು ಅವನ ಬಳಿಗೆ ಓಡಿಬಂದು ಅವನು ಶತ್ರುಗಳಕೈಗೆ ಸಿಕ್ಕಿ

ಬೀಳದಂತೆ ಕಾಪಾಡಿದನು. ಇನ್ನು ಸ್ವಲ್ಪ ಹೊತ್ತಿನವರೆಗೂ ಟ್ರೋಜನರ ಕೈಯೇ ಬಲವಾಯಿತು. ಹೆಕ್ಟರನು ತನ್ನ ಇದಿರಿಗೆ ಬಂದ ಅನೇಕ ಗ್ರೀಕರನ್ನು ಹೊಡೆದು ಮಲಗಿಸುತ್ತಾ ಉಳಿದ ಗ್ರೀಕರನ್ನು ಅವರ ಹಡಗುಗಳವರೆಗೂ ಅಟ್ಟಿಕೊಂಡು ಬಂದನು.

೬೧. ಗ್ರೀಕರ ದುರವಸ್ಥೆಯನ್ನು ಕಂಡು ಹೀರಾದೇವಿಯೂ ಅಥೆನಿಯೂ ಅವರಿಗೆ ಸಹಾಯಮಾಡಬೇಕೆಂದು ಎಷ್ಟೋಸಾರಿ ಮನಸ್ಸುಮಾಡಿದರು. ಆದರೂ ಜ್ಯೂಸಿನ ಭಯದಿಂದ ಅವರು ಆ ಕಾರ್ಯಕ್ಕೆ ಯತ್ನಿಸಲಿಲ್ಲ. ತನ್ನ ಹೆಂಡತಿಮಕ್ಕಳ ಅಭಿಪ್ರಾಯವನ್ನು ಅರಿತುಕೊಂಡು ಮಳೆಯ ಬಿಲ್ಲಿನ ಅಭಿಮಾನ ದೇವತೆಯಾದ ಐರಿಸ್ ಎಂಬಾಕೆಯ ಮೂಲಕ ಜ್ಯೂಸನು ಅವರನ್ನು ಹೆದರಿಸಿ ಬಿಟ್ಟುದರಿಂದ, ಅವರು ಹಾಗೆ ತಾಟಸ್ಥ್ಯವನ್ನು ವಹಿಸಬೇಕಾಯಿತು. ಆ ದಿವಸದ ಯುದ್ಧವು ಕತ್ತಲೆಯಾಗುವವರೆಗೂ ನಡೆದು, ಒಟ್ಟಿನಲ್ಲಿ ಟ್ರೋಜನರಿಗೇ ಜಯ ವುಂಟಾಯಿತು. ಕತ್ತಲೆಯಾದುದರಿಂದ ಟ್ರೋಜನರು ಕೋಟೆಯಹೊರಗೇ ನಿಂತು ಪಾಳೆಯವನ್ನು ಹೂಡಿದರು. ರಾತ್ರಿಯಲ್ಲಿ ಸಾವಿರಾರುಕಡೆ ಯೋಧರ ಪಂಗಡಗಳು ಬೀಡುಬಿಟ್ಟುಕೊಂಡು ಬೆಂಕಿಗಳನ್ನು ಕಾಸಿಕೊಳ್ಳುತ್ತಾ ರಾತ್ರಿಯನ್ನು ಕಳೆಯುತ್ತಿದ್ದರು. ಮಧ್ಯರಾತ್ರಿಯಲ್ಲಿ ಶತ್ರುಗಳು ಬಂದು ಮೇಲೆ ಬೀಳಬಹುದೆಂದು ಹೆದರಿ, ಹೆಕ್ಟರನು ತನ್ನ ಕಡೆಯವರಿಗೆ ಬೆಳಕು ಹರಿಯುವುದಕ್ಕೆ ಮುಂಚೆಯೇ ಗ್ರೀಕರಮೇಲೆ ಬೀಳಬೇಕೆಂದು ತಿಳಿಸಿದ್ದುದರಿಂದ ಟ್ರೋಜನ್ ಯೋಧರುಗಳು ತಮ್ಮ ರಥವನ್ನೂ ಕುದುರೆಗಳನ್ನೂ ಆಯುಧಗಳನ್ನೂ ತಮ್ಮ ತಮ್ಮ ಸಮೀಪದಲ್ಲಿಯೇ ಇರಿಸಿಕೊಂಡಿದ್ದರು. ಯುದ್ಧೋತ್ಸಾಹದಿಂದ ಮತ್ತರಾಗಿದ್ದ ಅನೇಕ ಟ್ರೋಜನ್ ಯೋಧರಿಗೆ ಆ ರಾತ್ರಿ ಒಂದು ಕ್ಷಣವಾದರೂ ನಿದ್ರೆಹಿಡಿಯಲಿಲ್ಲ. ಗ್ರೀಕರ ಪಾಳೆಯದಲ್ಲಿಯೂ ಅನೇಕರಿಗೆ ಭಯವುಂಟಾಗಿದ್ದುದರಿಂದ ಅವರೂ ಎಚ್ಚರವಾಗಿಯೇ ಇದ್ದರು.

---

## XII

೬೨. ಎರಡು ದಿಕ್ಕುಗಳಿಂದ ಬಿರುಗಾಳಿಗಳು ಬೀಸುವಾಗ ಸಮುದ್ರವು ಉಲ್ಲೋಲಕಲ್ಲೋಲವಾಗುವಂತೆ, ಅಗಮೆಮ್ನಾನಿನ ಮನಸ್ಸು ಬಹುಕ್ಷುಭಿತವಾಗಿದ್ದಿತು. ಆದುದರಿಂದ ಅವನು ತನ್ನ ಕಡೆಯ ನಿಯೋಗಿಗಳನ್ನು ಕರೆದು, ಗ್ರೀಕ್ ಪ್ರಮುಖರೆಲ್ಲರಿಗೂ ಪಿಸುಮಾತಿನಿಂದ ತಿಳಿಸಿ ಸಭೆಗೂಡಿಸುವಂತೆ ಆಜ್ಞಾ

ಹಿಸಿದನು. ಸ್ವಲ್ಪ ಹೊತ್ತಿನಲ್ಲಿಯೇ ಸಭೆಯು ಕೂಡಲು ಅಗಮೆಮ್ನಾನನು "ಮಿತ್ರರೇ, ಯೋಧಾಗ್ರೇಸರರೇ, ಬಲವಾದ ಕೋಟೆಯುಳ್ಳ ಟ್ರಾಯ್ ಪಟ್ಟಣವನ್ನು ಜ್ಯೂಸನು ನಮ್ಮ ವಶಪಡಿಸುವನೆಂದು ನಮ್ಮೆಲ್ಲರಿಗೂ ಹಿಂದೆಯೇ ಶುಭ ಶಕುನಗಳಾಗಿದ್ದರೂ, ಇನ್ನೂ ಆತನು ನಮ್ಮ ವಿಷಯದಲ್ಲಿ ನಿಷ್ಕರುಣಿಯಾಗಿರುವನು. ಅವನಿಗೆ ಮನಸ್ಸಿಲ್ಲದಿರುವಾಗ ನಾವು ಎಷ್ಟು ಪ್ರಯತ್ನಿಸಿದರೂ ಫಲವಿಲ್ಲ. ಆದುದರಿಂದ ಎಲ್ಲರೂ ಹೊರಡಿ. ನಮ್ಮ ದೇಶಗಳಿಗೆ ಹಿಂದಿರುಗುವ" ಎಂದು ತಿಳಿಸಿದನು. ಈ ಮಾತನ್ನು ಕೇಳಿ ಡೈಯೊಮಿಡೀಸನು ಅಗಮೆಮ್ನಾನನ್ನು ಕುರಿತು "ಎಲೈ ದೊರೆಯೇ, ನೀನು ಹೀಗೆ ವಿವೇಕವಿಲ್ಲದೆ ಮಾತನಾಡುತ್ತಿರುವೆಯಾದುದರಿಂದ ನಾನು ನಿನಗೆ ಇದಿರು ಹೇಳಬೇಕಾಗಿದೆ. ಆದುದರಿಂದ ಕೋಪಿಸಿಕೊಳ್ಳಬೇಡ. ನಿನಗೆ ದೇವರು ದೊರೆತನವನ್ನು ಕೊಟ್ಟನೇ ಹೊರತು, ಶೌರ್ಯವನ್ನು ಕೊಡಲಿಲ್ಲ. ಹೊರಡುವಹಾಗಿದ್ದರೆ ನೀನು ಹೊರಡಬಹುದು ಉಳಿದ ಗ್ರೀಕರು ಅಂಜಿ ಓಡಿಹೋಗುವುದಾದರೆ ಅವರನ್ನೂ ಕರೆದುಕೊಂಡು ಹೊರಟು ಹೋಗು. ನಾನೂ ನನ್ನ ಸಾರಥಿಯಾದ ಸ್ಥೆನೆಲಸ್ಸನೂ ಟ್ರಾಯ್ ಕೋಟೆಯನ್ನು ಜಯಿಸುವವರೆಗೂ ಇಲ್ಲಿಂದ ಹೊರಡುವುದಿಲ್ಲ" ಎಂದು ಹೇಳಿದುದನ್ನು ಅಗಮೆಮ್ನಾನನು ಒಬ್ಬನುವಿನಾ ಉಳಿದ ಗ್ರೀಕರೆಲ್ಲರೂ ಅನುಮೋದಿಸಿ ಸಿಂಹಗರ್ಜನೆಯನ್ನು ಮಾಡಿದರು.

೮೩. ನೆಸ್ಟರನು ಡೈಯೊಮಿಡೀಸಿನ ವಿವೇಕಪೂರ್ವಕವಾದ ಮಾತುಗಳನ್ನು ಬಹಳವಾಗಿ ಶ್ಲಾಘಿಸಿ, ತನ್ನ ಮಗನಾದ ಸ್ಥ್ರಾಸಿಮಿಡಿಯಸ್ಸನ್ನೂ ಅವನ ಸಹಾಯಕ್ಕೆ ಇನ್ನೂ ಆರುಮಂದಿ ಶೂರಾಗ್ರಣಿಗಳನ್ನೂ, ಒಬ್ಬೊಬ್ಬರ ವಶಕ್ಕೆ ನೂರುನೂರು ಮಂದಿಯಂತೆ ಅನುಯಾಯಿಗಳನ್ನು ಕೊಟ್ಟು ಕಾವಲಿಗಾಗಿ ನೇಮಿಸಬೇಕೆಂದು ಸೂಚಿಸಿದುದೂ ಅಲ್ಲದೆ, ಅಗಮೆಮ್ನಾನನ್ನು ಕುರಿತು, ಆತನು "ನರಪತಿಯೇ, ನಮ್ಮ ಅನುಮತಿಯಿಲ್ಲದೆ ನೀನು ಬ್ರಿಸೇಯಿಸಳನ್ನು ನಿನ್ನ ಸ್ವಾಧೀನಪಡಿಸಿಕೊಂಡುದೇ ತಪ್ಪು; ಹಾಗೆ ಮಾಡಕೂಡದೆಂದು ನಾನು ನಿನಗೆ ಹಿಂದೆ ಹೇಳಿದರೂ, ಲಕ್ಷಿಸದೆ ಹೋದೆ. ಏಕಿಲೀಸನು ಸಾಮಾನ್ಯ ಪುರುಷನಲ್ಲ; ಅವನನ್ನು ದೇವತೆಗಳೂ ಸಹ ಗೌರವಿಸುವರು. ಈಗಲಾದರೂ ನೀನು ಬ್ರಿಸೇಯಿಸಳನ್ನು ಆತನಿಗೆ ಒಪ್ಪಿಸಿಬಿಡುವುದು ಒಳ್ಳೆಯದು" ಎಂದು ಹೇಳಿದನು. ಈ ಮಾತುಗಳನ್ನು ಕೇಳಿ ಅಗಮೆಮ್ನಾನನಿಗೆ ಪಶ್ಚಾತ್ತಾಪವು ಮತ್ತಷ್ಟು ವೃದ್ಧಿಯಾಯಿತು. ಆದುದರಿಂದ ಅವನು ನೆಸ್ಟರನ್ನು ಕುರಿತು

" ಅಯ್ಯಾ ! ನೀನು ಹೇಳುವುದು ನ್ಯಾಯವು. ಒಬ್ಬ ಏಕಿಲೀಸಿನ ಮುಂದೆ ಒಂದು ದೊಡ್ಡಸೈನ್ಯವಾದರೂ ನಿಂತು ಕಾದಲಾರದು. ಈಗ ನಾನು ಬ್ರಿಸೇಯಿಸಳನ್ನು ಆತನಿಗೆ ಒಪ್ಪಿಸಿಬಿಡುವೆನು. ಅಷ್ಟುಮಾತ್ರವೇ ಅಲ್ಲದೆ ಹತ್ತು ಟ್ಯಾಲೆಂಟುಗಳನ್ನೂ * ಇಪ್ಪತ್ತು ಕಡಾಯಿಗಳನ್ನೂ, ಹನ್ನೆರಡು ಅಶ್ವರತ್ನಗಳನ್ನೂ ಲೆಸ್ಬಾಸ್ ದ್ವೀಪದ ಬಹುಸುಂದರಿಯರಾದ ಏಳುಮಂದಿ ದಾಸಿಯರನ್ನೂ ಕೊಡುವೆನು. ಟ್ರಾಯ್ ವಶವಾದಮೇಲೆ ನಮಗೆ ಸಿಕ್ಕುವ ಕೊಳ್ಳೆಯಲ್ಲಿ ಬೇಕಾದಷ್ಟು ಚಿನ್ನವನ್ನೂ ಕಂಚನ್ನೂ ಏಕಿಲೀಸನು ತೆಗೆದುಕೊಳ್ಳಲಿ. ಟ್ರಾಯ್ ಪಟ್ಟಣದ ಸ್ತ್ರೀಯರಲ್ಲಿ ಇಪ್ಪತ್ತುಮಂದಿಯನ್ನೂ ಆತನಿಗೆ ಒಪ್ಪಿಸುವೆನು. ನಾನು ಕೊಡತಕ್ಕ ಹನ್ನೆರಡು ಅಶ್ವರತ್ನಗಳು ಹಿಂದೆ ನಡೆದ ಕುದುರೆಯಜೂಜುಗಳಲ್ಲಿ ಎಷ್ಟೋಸಾರಿ ವಿಜಯಗಳನ್ನು ಪಡೆದು ಅಗಣಿತವಾದ ಹಣವನ್ನು ನನಗೆ ಗಳಿಸಿಕೊಟ್ಟಿರುವುವು. ಅವು ಮುಂದೆಯೂ ಎಷ್ಟೋ ಹಣವನ್ನು ಸಂಪಾದಿಸು ವುದರಲ್ಲಿ ಸಂಶಯವಿಲ್ಲ. ಇಷ್ಟೇ ಅಲ್ಲ. ನನ್ನ ರಾಜ್ಯದಲ್ಲಿ ಸಮುದ್ರತೀರದಲ್ಲಿರುವ ಐಶ್ವರ್ಯಭರಿತವಾದ ಏಳುಪಟ್ಟಣಗಳನ್ನು ಏಕಿಲೀಸಿಗೆ ಒಪ್ಪಿಸುವುದಲ್ಲದೆ, ನನಗಿರುವ ಮೂವರು ಪುತ್ರಿಯರಲ್ಲಿ ಯಾರನ್ನೇ ಅವನು ಒಪ್ಪಿದರೂ ಅವಳನ್ನು ಮದುವೆ ಮಾಡಿಕೊಡುವೆನು. ಇದುವರೆಗೆ ಯಾರೂ ಕೊಡದಿರುವಷ್ಟು ಹೆಚ್ಚಾದ ಬಳಿವಳಿಯನ್ನೂ ನಾನು ನನ್ನ ಮಗಳಿಗೆ ಕೊಡುವೆನು. ವಯೋವೃದ್ಧನಾದ ನನ್ನ ಮಾತನ್ನು ಏಕಿಲೀಸನು ತೆಗೆದುಹಾಕದಿರಲಿ " ಎಂದು ತಿಳಿಸಿದನು ನೆಸ್ಟಾರನು ಅಗಮೆಮ್ನಾನಿನ ಔದಾರ್ಯಕ್ಕೆ ಮೆಚ್ಚಿ, ಏಕಿಲೀಸಿನ ತಂದೆಯು. ತನ್ನ ಮಗನನ್ನು ಯುದ್ಧಕ್ಕೆ ಕಳುಹಿದಾಗ ಅವನಿಗೆ ಸಮಯೋಚಿತವಾದ ಬುದ್ಧಿವಾದವನ್ನು ಹೇಳುವುದಕ್ಕಾಗಿ ಕಳುಹಿಸಿಕೊಟ್ಟಿದ್ದ ಫೀನಿಕ್ಸನ್ನೂ, ಹಿರಿಯ ಏಯಾಸನ್ನೂ, ಬಹುತಂತ್ರಿಯಾದ ಒಡಿಸಿಯಸ್ಸನ್ನೂ ಏಕಿಲೀಸಿನಬಳಿಗೆ ಕಳುಹಿಸಿ ಅಗಮೆಮ್ನಾನಿನ ಪ್ರಾರ್ಥನೆಯನ್ನು ತಿಳಿಸುವಂತೆ ಬೋಧಿಸಿದನು. ಅದೇಮೇರೆಗೆ ಸರ್ವಾನುಮತದಿಂದ ನಿಷ್ಕರ್ಷೆಯಾಯಿತು. ಗ್ರೀಕರೆಲ್ಲರೂ ತಮ್ಮ ಕೈಕಾಲು ಗಳನ್ನು ತೊಳೆದುಕೊಂಡು ಜ್ಯೂಸಿಗೆ ಪ್ರಾರ್ಥನೆಯನ್ನು ಮಾಡಿ, ಭೋಜನಾ ನಂತರದಲ್ಲಿ ಫೀನಿಕ್ಸ್ ಮೊದಲಾದವರನ್ನು ಏಕಿಲೀಸಿನ ಬಳಿಗೆ ಕಳುಹಿಸಿ ಕೊಟ್ಟರು.

---

* ಎಂದರೆ ೩೬,೬೦೦ ರೂಪಾಯಿಗಳಷ್ಟು ಬಾಳುವ ದ್ರವ್ಯ.

೬೪. ಆ ಮೂವರೂ ಸಮುದ್ರತೀರದಲ್ಲಿಯೇ ಹೊರಟು ಗ್ರೀಕರ ಪಾಳೆಯದ ಒಂದು ಕೊನೆಯಲ್ಲಿ ತನ್ನ ಕಡೆಯ ಭಟರೊಡನೆ ಬೀಡುಬಿಟ್ಟುಕೊಂಡಿದ್ದ ಏಕಿಲೀಸಿನ ಗುಡಾರದ ಬಳಿಗೆ ಬರುತ್ತಾ, ತಮ್ಮ ಕಾರ್ಯದಲ್ಲಿ ಜಯವನ್ನುಂಟು ಮಾಡುವಂತೆ ಸಮುದ್ರಾಧಿಪತಿಯಾದ ಪೊಸೈಡನ್ನನ್ನು ಪ್ರಾರ್ಥಿಸುತ್ತಾ ಏಕಿಲೀಸಿನ ಗುಡಾರವನ್ನು ಪ್ರವೇಶಿಸಿದರು. ಆ ಸಮಯದಲ್ಲಿ ಏಕಿಲೀಸನು ಒಂದುಕಡೆ ಕುಳಿತು ಆಂಡ್ರೊಮೇಕಿಯ ತೌರೂರನ್ನು ಕೊಳ್ಳೆಹೊಡೆದಾಗ ಸಿಕ್ಕಿದ್ದ ಒಂದು ವೀಣೆಯನ್ನು ನುಡಿಸುತ್ತಾ ಪೂರ್ವಕಾಲದ ಯೋಧಾಗ್ರಣಿಗಳ ಸ್ತೋತ್ರಗಳನ್ನು ಗಾನಮಾಡುತ್ತಾ ಇದ್ದನು. ಅವನ ಸಮೀಪದಲ್ಲಿಯೇ ಏಕಿಲೀಸಿನ ಪರಮಮಿತ್ರನಾದ ಪೆಟ್ರೋಕ್ಲಸ್ಸನೂ ನಿಂತುಕೊಂಡು ಆ ಸಂಗೀತವನ್ನು ಕೇಳುತ್ತಿದ್ದನು. ಫೀನಿಕ್ಸನೇ ಮೊದಲಾದ ಮೂವರು ತನ್ನ ಗುಡಾರವನ್ನು ಪ್ರವೇಶಿಸಿದಕೂಡಲೆ ಏಕಿಲೀಸನು ತನ್ನ ಸಂಗೀತವನ್ನು ನಿಲ್ಲಿಸಿ ಆಗಂತುಕರನ್ನು ಆದರದಿಂದ ಬರಮಾಡಿಕೊಂಡು ಅವರನ್ನು ಒಂದು ಜಮಖಾನದಮೇಲೆ ಕುಳ್ಳಿರಿಸಿ, ತನ್ನ ಮಿತ್ರನ ಸಹಾಯದಿಂದ ಕೂಡಲೇ ಔತಣಕ್ಕೆ ಸಿದ್ಧಪಡಿಸಿದನು. ಪೆಟ್ರೋಕ್ಲಸನು ದ್ರಾಕ್ಷಾರಸವನ್ನು ಬಟ್ಟಲುಗಳಲ್ಲಿ ತಂದಿಟ್ಟನು. ಏಕಿಲೀಸನು ಪುಷ್ಟಿಯಾಗಿದ್ದ ಒಂದು ಆಡನ್ನೂ ಒಂದು ಹಂದಿಯನ್ನೂ ಕೊಂದು ಅವುಗಳ ಮಾಂಸವನ್ನು ಸಮೀಪದಲ್ಲಿಯೇ ಇದ್ದ ಬೆಂಕಿಯಲ್ಲಿ ಸುಟ್ಟು ಅವರಮುಂದೆ ತಂದಿಟ್ಟನು. ಬಳಿಕ ಅವರೆಲ್ಲರೂ ಆ ಆಹಾರಸಾಮಗ್ರಿಗಳಲ್ಲಿ ಮೊದಲು ಸ್ವಲ್ಪ ಭಾಗವನ್ನು ಪ್ರಾರ್ಥನಾಪೂರ್ವಕವಾಗಿ ಜ್ಯೂಸಿಗೆ ಸಮರ್ಪಿಸಿ ತಾವೂ ಸಮೃದ್ಧಿಯಾಗಿ ಪರಿಗ್ರಹಿಸಿದರು. ಅನಂತರದಲ್ಲಿ ಒಡಿಸಿಯಸ್ಸನು ಏಕಿಲೀಸನ್ನು ಕುರಿತು ,, ಮಿತ್ರನೆ! ನಿನ್ನ ಔತಣದಿಂದ ನಮಗೆ ಸಂತುಷ್ಟಿಯಾಯಿತು. ದೇವರ ದಯೆಯಿಂದ ನಮ್ಮ ಪಾಳೆಯದಲ್ಲಿಯೂ ಇಂತಹ ಔತಣಗಳಿಗಾಗಿ ಪದಾರ್ಥಗಳು ಸಮೃದ್ಧಿಯಾಗಿ ಸಿಕ್ಕುವುವು. ಆದರೂ ನಮಗೆ ಈಗ ಒಂದು ದೊಡ್ಡ ಆಪತ್ತು ಸಂಭವಿಸಿರುವುದು. ಹೆಕ್ಟರನು ತನ್ನ ಸೈನಿಕರೊಡನೆ ಗ್ರೀಕರ ಪಾಳೆಯದವರೆಗೂ ನುಗ್ಗಿಬಂದಿರುವನು. ನಾಳೆಯದಿನ ಬೆಳಗ್ಗೆ ನಮ್ಮ ಹಡಗುಗಳಿಗೆ ಬೆಂಕಿ ಹೊತ್ತಿಸಿ ನಮ್ಮನ್ನು ಧ್ವಂಸಮಾಡಿಬಿಡುವುದಾಗಿ ಪ್ರತಿಜ್ಞೆಮಾಡಿರುವನಂತೆ! ನಮ್ಮನ್ನು ನೀನೇ ಕಾಪಾಡಬೇಕು. ನಿನ್ನ ತಂದೆಯು ನಿನ್ನನ್ನು ಯುದ್ಧಕ್ಕೆ ಕಳುಹಿಸಿಕೊಡುವಾಗ ನಿನಗೆ ಹೇಳಿದ ಬುದ್ಧಿವಾದವನ್ನು ನೆನೆದುಕೊಂಡು ಶಾಂತಚಿತ್ತನಾಗಿ ನಮ್ಮನ್ನು ಕ್ಷಮಿಸು. ಮದಾಂಧನಾದ ಹೆಕ್ಟರನು ಪಾಳೆಯದ

ನಮ್ಮ ಹಡಗುಗಳವರೆಗೂ ನುಗ್ಗಿಬರುವನು. ಆ ಸಮಯದಲ್ಲಿ ಅವನನ್ನು ಕೊಂದು ಗ್ರೀಕರ ಮಾನವನ್ನು ಉಳಿಸು" ಎಂದು ವಿನಯದಿಂದ ಹೇಳಿ, ಅಗಮೆಮ್ನಾನನು ಏಕಿಲೀಸಿಗೆ ಒಪ್ಪಿಸುವುದಾಗಿ ತಿಳಿಸಿದ್ದ ಎಲ್ಲಾ ವಸ್ತುಗಳನ್ನೂ ವರ್ಣಿಸಿ ಹೇಳಿದನು.

೮೫ ಈ ಮಾತುಗಳನ್ನು ಕೇಳಿ ಏಕಿಲೀಸಿನ ಉಕ್ಕಿನಂತಹ ಮನಸ್ಸು ಸ್ವಲ್ಪವಾದರೂ ಕರಗಲಿಲ್ಲ. ಆದುದರಿಂದ ಅವನು ಒಡಿಸಿಯಸ್ಸನ್ನು ಕುರಿತು, "ಬಹುಯುಕ್ತಿಪರನಾದ ಮಿತ್ರನೇ! ಕಪಟಿಯನ್ನು ಕಂಡರೆ ನನಗೆ ಉಂಟಾಗುವಷ್ಟು ಅಸಹ್ಯವು ನರಕದ ವಿಷಯದಲ್ಲಿಯೂ ಆಗುವುದಿಲ್ಲ. ಅಗಮೆಮ್ನಾನನು ಹೇಳಿಕಳುಹಿಸಿರುವ ಈ ಮಾತುಗಳು ಮನಃಪೂರ್ವಕವಾದುವಲ್ಲ. ನಾನು ಈ ಯುದ್ಧಕ್ಕೆ ಬಂದಾಗಲೇ, ನನಗೆ ಇದರಿಂದ ಮರಣವುಂಟಾಗುವುದೆಂದು ತಿಳಿದಿದ್ದರೂ ದೃಢಚಿತ್ತನಾಗಿ ಈ ಯುದ್ಧಕ್ಕೆ ಕೈಹಾಕಿದ ಏತಕ್ಕಾಗಿ ಗೊತ್ತಿದೆಯೋ? ಗೌರವಕ್ಕಾಗಿಯೇ ಅಲ್ಲವೆ? ತಾಯಿ ಹಕ್ಕಿಯು ಎಷ್ಟೋ ಕಷ್ಟಪಟ್ಟು ಗುಟುಕನ್ನು ಸಂಪಾದಿಸಿಕೊಂಡು ಬಂದು ಎಲ್ಲವನ್ನೂ ತನ್ನ ಮರಿಗಳಿಗೇ ಕೊಟ್ಟುಬಿಟ್ಟು ತನಗೇನೂ ಉಳಿಯದಿದ್ದರೂ ಸಂತುಷ್ಟವಾಗಿರುವಂತೆ, ನಾನು ರಾತ್ರಿ ಹಗಲೆನ್ನದೆ, ಶತ್ರುಗಳನ್ನು ಧ್ವಂಸಮಾಡಿ ಅನ್ಯಾರ್ಥತೆಯಿಂದ ಗ್ರೀಕರೆಲ್ಲರಿಗೂ ಕೀರ್ತಿಯನ್ನೂ ಅಪಾರವಾದ ಕೊಳ್ಳೆಯನ್ನೂ ಸಂಪಾದಿಸಿ ಕೊಟ್ಟಿಲ್ಲವೆ? ನಾವುಗಳೆಲ್ಲರೂ ಅನೇಕವರ್ಷಗಳಿಗೆ ಹಿಂದೆ ಇಲ್ಲಿಗೆ ಬಂದು ಇಷ್ಟೊಂದು ದೀರ್ಘಕಾಲ ಶತ್ರುರಾಜ್ಯದಲ್ಲಿ ಕಾದಾಡುತ್ತಿರುವುದು ಒಬ್ಬ ಸ್ತ್ರೀಗಾಗಿಯೇ ಅಲ್ಲವೆ? ಇಂತಹುದರಲ್ಲಿ ನನ್ನ ಪಾಲಿಗೆ ಬಂದಿದ್ದ ಒಬ್ಬ ಸ್ತ್ರೀಯನ್ನೂ ದುರಾಶಾಪರನಾದ ಅಗಮೆಮ್ನಾನನು ತನ್ನ ವಶಪಡಿಸಿಕೊಂಡು ನನಗೆ ಬಹಳ ಅಗೌರವವನ್ನುಂಟುಮಾಡಿರುವನು. ಅಗಮೆಮ್ನಾನನು ಕೊಡುವುದಾಗಿ ಹೇಳಿರುವ ವಸ್ತುಗಳೆಲ್ಲವೂ ಅವನಿಗೇ ಇರಲಿ. ಅಷ್ಟೇಕೆ? ಆರ್ಕೊಮಿನಸ್ ನಗರಿಯ ಸಂಪತ್ತೆಲ್ಲವನ್ನೂ ಈಜಿಪ್ಟಿನ ಶತದ್ವಾರನಗರಿಯಾದ ಥೀಬ್ಸಿನ ಬೊಕ್ಕಸಗಳೆಲ್ಲವನ್ನೂ ಅವನು ನನಗೆ ಕೊಟ್ಟರೂ ನಾನೊಲ್ಲೆನು. ಅವನ ಮಗಳು ಆಫ್ರೊಡೈಟಿಗಿಂತ ಸುಂದರಿಯಾಗಿದ್ದರೂ ಅವಳು ನನಗೆ ಬೇಕಾಗಿಲ್ಲ. ಈಚೆಗೆ ಅವನು ಒಂದು ಗೋಡೆಯನ್ನು ಹಾಕಿಸಿ ಕಂದಕವನ್ನೂ ತೆಗೆಸಿರುವನಂತೆ! ಅವನೂ ನೀವೂ ಬೇಕಾದುದನ್ನು ಮಾಡಿಕೊಳ್ಳಿ. ನಾಳೆಯದಿನವೇ ನಾನು ಜ್ಯೂಸಿಗೆ ಪ್ರಾರ್ಥನೆಯನ್ನೂ ಯಜ್ಞವನ್ನೂ ಸಮರ್ಪಿಸಿ ನನ್ನ ಸೈನಿಕ

ರೊಡನೆ ನನ್ನ ದೇಶಕ್ಕೆ ಹಿಂದಿರುಗುವೆನು ' ಎಂದು ಏಕಿಲೀಸನು ದೃಢಮನಸ್ಸಿನಿಂದ ತಿಳಿಸಿದನು.

೮೬. ಹೀಗೆಂದ ಮಾತುಗಳನ್ನು ಕೇಳಿ ಫೀನಿಕ್ಸನು ಬಹಳ ವ್ಯಸನಾಕ್ರಾಂತನಾಗಿ " ನೀನು ಹೊರಟುಹೋಗಬೇಕೆಂದು ಸ್ಥಿರಮನಸ್ಸನ್ನು ಮಾಡಿದ್ದರೆ, ನನ್ನನ್ನು ಇಲ್ಲಿಯೇ ಬಿಟ್ಟು ಹೋಗುವುದು ನ್ಯಾಯವೇ ? ನನ್ನನ್ನೂ ನಿನ್ನೊಡನೆಯೇ ಕರೆದುಕೊಂಡು ಹೋಗು " ಎಂದು ಕೇಳಿಕೊಳ್ಳಲು, ಅವನನ್ನು ತನ್ನೊಡನೆ ಕರೆದುಕೊಂಡು ಹೋಗುವುದಾಗಿ ಏಕಿಲೀಸನು ನಂಬಿಸಿ, ತನ್ನ ಸ್ನೇಹಿತನಾದ ಪೇಟ್ರೋಕ್ಲಸ್ಸಿನ ಕೈಯಿಂದ ಅವನಿಗೊಂದು ಹಾಸಿಗೆಯನ್ನು ಹಾಸಿಸಿ ಆ ರಾತ್ರಿ ಅಲ್ಲಿಯೇ ಮಲಗುವಂತೆ ಅವನಿಗೆ ಹೇಳಿದನು. ಅನಂತರ ಏಯಾಸನು ಒಡಿಸಿಯಸ್ಸನ್ನು ಕುರಿತು—" ನಾವು ಬಂದ ಕೆಲಸವು ಮುಗಿಯಿತು; ಆದುದರಿಂದ ನಾವು ನಮ್ಮ ಪಾಳೆಯಕ್ಕೆ ಹಿಂದಿರುಗಬಹುದು. ಈ ಏಕಿಲೀಸನು ಬಹಳ ನಿಷ್ಕರುಣಿಯಾಗಿರುವನು ಒಬ್ಬ ಸ್ತ್ರೀಗಾಗಿ ಇಷ್ಟು ಬದ್ಧದ್ವೇಷಿಯಾಗಿರುವನು ! ಬೇಕಾದರೆ, ಒಬ್ಬಳಿಗೆ ಬದಲು ನಾನು ಏಳುಮಂದಿ ಸುಂದರಿಯರನ್ನು ಕೊಡುವೆನು " ಎಂದು ಹೇಳಿದನು ಆದರೆ ಏಕಿಲೀಸನು ಅವನ ಮಾತುಗಳಿಗೆ ಗಮನಕೊಡಲಿಲ್ಲ. ಅಷ್ಟೊಂದು ಜನ ಗ್ರೀಕರ ಮುಂದೆ ಅಗಮೆಮ್ನಾನನು ಅವಮಾನಕರವಾಗಿ ಬ್ರೈಸೀಯಸ್ಸಳನ್ನು ತಂದೊಪ್ಪಿಸಬೇಕೆಂದು ಆಜ್ಞಾಪಿಸಿದನೆಂದೂ ಆ ಅವಮಾನವನ್ನು ಮರೆಯುವುದಕ್ಕಾಗುವುದಿಲ್ಲವೆಂದೂ ಹೆಕ್ಟರನು ಗ್ರೀಕರ ಮೇಲೆ ಬಿದ್ದು ಅವರ ಹಡಗುಗಳವರೆಗೂ ಓಡಿಸಿಕೊಂಡು ಬಂದು ಹಡಗುಗಳಿಗೆ ಬೆಂಕಿಹೊತ್ತಿಸಿದ ಹೊರತು ಆ ಅವಮಾನವು ಹೋಗಲಾರದೆಂದೂ ಹೇಳಿಬಿಟ್ಟನು.

೮೭. ಏಯಾಸನೂ ಒಡಿಸಿಯಸ್ಸನೂ ತಮ್ಮ ಮಿತ್ರರ ಬಳಿಗೆ ಹಿಂದಿರುಗಿ ಬಂದು ತಾವು ಹೋಗಿದ್ದ ಕೆಲಸವು ನಿಷ್ಫಲವಾಯಿತೆಂದು ಹೇಳಿ, ಮಾರನೆಯದಿನ ಪ್ರಾತಃಕಾಲ ಏಕಿಲೀಸನೂ ಅವನ ಕಡೆಯವರೂ ಗ್ರೀಸಿಗೆ ಹಿಂದಿರುಗುವ ವಿಷಯವನ್ನೂ ಫೀನಿಕ್ಸನ್ನು ತನ್ನೊಡನೆ ಕರೆದುಕೊಂಡು ಹೋಗುವ ವಿಷಯವನ್ನೂ ತಿಳಿಸಿದನು. ಗ್ರೀಕರು ಈ ಸುದ್ದಿಯನ್ನು ಕೇಳಿ ಬಹಳ ವ್ಯಸನಪಟ್ಟರು. ಆದರೆ ಡೈಯೊಮಿಡೀಸನು ಅಗಮೆಮ್ನಾನನ್ನು ಕುರಿತು, " ಸ್ವಾಭಾವಿಕವಾಗಿಯೇ ಏಕಿಲೀಸನು ಗರ್ವಿಯು. ಅಂತಹವನ ಬಳಿಗೆ ನೀನು ರಾಯಭಾರಿಗಳನ್ನು ಕಳುಹಿಸಿದುದರಿಂದ ಅವನ ಗರ್ವವು

ಮತ್ತಷ್ಟು ಹೆಚ್ಚಿರುವುದು. ಇನ್ನು ಅವನ ಪಾಡು ಅವನದು ; ನಮ್ಮ ಪಾಡು ನಮ್ಮದು. ಈಗ ನಾವುಗಳು ಚೆನ್ನಾಗಿ ಊಟಮಾಡಿ ವಿಶ್ರಮಿಸಿಕೊಂಡು ನಾಳೆಯ ಬೆಳಗ್ಗೆ ಯುದ್ಧಕ್ಕೆ ಸಿದ್ಧರಾಗುವ" ಎಂದು ಸೂಚಿಸಲು ಆ ಮಾತನ್ನು ಅಗಮೆಮ್ನಾನನೂ ಇತರ ಪ್ರಮುಖರೂ ಅನುಮೋದಿಸಿದರು.

---

## XIII.

೮೮. ಆ ರಾತ್ರೆ ಗ್ರೀಕರು ತಮ್ಮತಮ್ಮ ಸ್ಥಾನಗಳಲ್ಲಿ ವಿಶ್ರಮಿಸಿಕೊಳ್ಳುತ್ತಿದ್ದರೂ ಅಗಮೆಮ್ನಾನನಿಗೆ ಮಾತ್ರ ನಿದ್ದೆ ಹಿಡಿಯಲಿಲ್ಲ. ಟ್ರಾಯ್ ಪಟ್ಟಣದ ದಿಕ್ಕಿನಕಡೆ ಬೆಳಗುತ್ತಿದ್ದ ಸಾವಿರಾರು ಬೆಳಕುಗಳನ್ನು ನೋಡಿದುದರಿಂದಲೂ, ಆ ದಿಕ್ಕಿನಿಂದ ಬರುತ್ತಿದ್ದ ಕೊಳಲು ಮುಂತಾದುವುಗಳ ಧ್ವನಿಯನ್ನೂ ಮನುಷ್ಯರ ಕಲಕಲವನ್ನೂ ಕೇಳಿದುದರಿಂದಲೂ, ಅವನಿಗೆ ಮನಸ್ಸಿನಲ್ಲಿ ಬಹಳ ಕಳವಳವುಂಟಾಗಿದ್ದಿತು. ಆದುದರಿಂದ ಅವನು ತನ್ನ ಹಾಸಿಗೆಯಿಂದೆದ್ದು ಮೆಟ್ಟುಗಳನ್ನು ಹಾಕಿಕೊಂಡು ಒಂದು ಸಿಂಹದ ತೊಗಲನ್ನು ಹೊದೆದು ಕೈಯಲ್ಲಿ ಒಂದು ಈಟಿಯನ್ನು ತೆಗೆದುಕೊಂಡು ನೆಸ್ಟ್ಯಾರಿನ ಗುಡಿಸಿಲಿಗೆ ಹೊರಟನು. ಅಷ್ಟುಹೊತ್ತಿಗೆಸರಿಯಾಗಿ, ನಿದ್ದೆ ಹಿಡಿಯದೆ ಕಳವಳಪಡುತ್ತಾ ಇದ್ದ ಮೆನೆಲಾಸನೂ ಅಗಮೆಮ್ನಾನಿನ ಗುಡಿಸಿಲ ಬಳಿಗೆ ಬಂದನು. ಅಗಮೆಮ್ನಾನನು ಅವನನ್ನು ಕುರಿತು ಏಯಾಸನನ್ನೂ ಐಡೋಮಿನಿಯಸ್ಸನ್ನೂ ಎಬ್ಬಿಸಿ ಕರೆತರುವಂತೆಯೂ, ಗುಡಿಸಿಲಿನ ಬಳಿಗೆ ಹೋಗುತ್ತಿರುವಾಗ ಕಂಡವರನ್ನೆಲ್ಲಾ ಜಾಗರೂಕರಾಗಿರುವಂತೆ ಎಚ್ಚರಿಸುವಂತೆಯೂ ತಿಳಿಸಿ ಅವನನ್ನು ಕಳುಹಿಸಿ ಕೊಟ್ಟನು.

೮೯. ಬಳಿಕ ಅಗಮೆಮ್ನಾನನು ನೆಸ್ಟ್ಯಾರಿನ ಗುಡಿಸಿಲಿಗೆ ಹೋಗಿ, ಎಚ್ಚರವಾಗಿಯೇ ಇದ್ದ ಅವನನ್ನು ಕುರಿತು ತನಗೆ ಉಂಟಾಗಿದ್ದ ಕಳವಳದ ವಿಷಯವಾಗಿ ತಿಳಿಸಿ ಅವನನ್ನೂ ಕರೆದುಕೊಂಡು ಕಾವಲುಗಾರರು ಎಚ್ಚರದಿಂದಿದ್ದರೋ ಇಲ್ಲವೋ ಎಂಬುದನ್ನು ನೋಡುವುದಕ್ಕಾಗಿ ಅವರ ಠಾಣೆಯುಗಳ ಕಡೆಗೆ ಹೋಗಿ ಅವರನ್ನು ಎಚ್ಚರಿಸಿ ಒಡಿಸಿಯುಸ್ಸಿನ ಗುಡಿಸಿಲ ಬಳಿಗೆ ಹೋದನು. ಅಷ್ಟುಹೊತ್ತಿಗೆ ಒಡಿಸಿಯುಸ್ಸಿಗೂ ಎಚ್ಚರವಾಗಿದ್ದಿತು. ಅಗಮೆಮ್ನಾನನು ಅವನನ್ನೂ ನೆಸ್ಟ್ಯಾರನ್ನೂ ಕರೆದುಕೊಂಡು ಡೈಯೊಮಿಡೀಸಿನ ಗುಡಿಸಿಲಿಗೆ ಹೋಗಿ, ನಿದ್ರಿಸುತ್ತಿದ್ದ ಡೈಯೋಮಿಡೀಸನ್ನು ಎಬ್ಬಿಸಿ

ದರು. ಇಷ್ಟುಹೊತ್ತಿಗೆ ಅವರಿದ್ದಲ್ಲಿಗೆ ಮೆನೆಲಾಸನೂ, ಏಯಾಸನೂ ಐಡೊಮಿನಿಯಸ್ಸನೂ ಬಂದರು.

೯೦. ಅವರನ್ನು ಕುರಿತು ನೆಸ್ಟಾರನು ಶತ್ರುಗಳ ಪಾಳೆಯಕ್ಕೆ ಹೋಗಿ ಅವರ ಏರ್ಪಾಡುಗಳನ್ನು ತಿಳಿದುಕೊಳ್ಳುವುದು ಆವಶ್ಯಕವೆಂದು ಸೂಚಿಸಿದನು. ಅದನ್ನು ಕೇಳಿದಕೂಡಲೆ ಡೈಯೊಮಿಡೀಸನು ತಾನು ಆ ಕೆಲಸಕ್ಕೆ ಸಿದ್ಧನಾಗಿರುವುದಾಗಿ ತಿಳಿಸಿದನು. ಇಬ್ಬರು ಏಯಾಸರೂ ನೆಸ್ಟಾರನ ಮಗನೂ ಮೆರಿಯೋನಸ್ಸನೂ, ಮೆನೆಲಾಸನೂ, ಒಡಿಸಿಯಸ್ಸನೂ ಡೈಯೊಮಿಡೀಸನೊಡನೆ ಟ್ರೋಜನರ ಪಾಳೆಯಕ್ಕೆ ಹೋಗಿಬರಲು ಸಮ್ಮತಿಸಿದರು ಆಗ ಅಗಮೆಮ್ನಾನನು ಡೈಯೊಮಿಡೀಸನ್ನು ಕುರಿತು, ಅವನೇ ತನಗೆ ಬೇಕಾದ ಸಂಗಡಿಗನೊಬ್ಬನನ್ನು ಆರಿಸಿಕೊಳ್ಳಬಹುದೆಂದು ಹೇಳಲಾಗಿ, ಅವನು ಒಡಿಸಿಯಸ್ಸನ್ನು ತನ್ನೊಡನೆ ಕರೆದುಕೊಂಡು ಹೋಗಲು ಸಮ್ಮತಿಸಿದನು. ಇದಕ್ಕೆ ಒಡಿಸಿಯಸ್ಸನೂ ಸಿದ್ಧನಾಗಿಯೇ ಇದ್ದುದರಿಂದ ಅವರಿಬ್ಬರೂ ವಸ್ತ್ರಾಯುಧಗಳನ್ನು ಧರಿಸಿ ಟ್ರೋಜನರ ಪಾಳೆಯದ ಕಡೆಗೆ ಹೊರಟರು.

೯೧. ಇಷ್ಟುಹೊತ್ತಿಗೆ ಸರಿಯಾಗಿ ಅಥೆನಿಯು ಈ ಗೂಢಚಾರರ ಬಲಗಡೆ ಒಂದು ಕೊಕ್ಕರೆ ಕೂಗುವಂತೆಮಾಡಿ ಆ ಶುಭಶಕುನದಿಂದ ಅವರನ್ನು ಪ್ರೋತ್ಸಾಹಗೊಳಿಸಿದಳು. ಅದನ್ನು ಕೇಳಿ ಒಡಿಸಿಯಸ್ಸನು ತನ್ನ ಅಭಿಮಾನದೇವತೆಯಾದ ಆಕೆಗೆ ಮನಃಪೂರ್ವಕವಾದ ಪ್ರಣಾಮಗಳನ್ನು ಸಮರ್ಪಿಸಿ ತಮಗೆ ಜಯವೂ ಕೀರ್ತಿಯೂ ಉಂಟಾಗುವಂತೆ ಮಾಡಬೇಕೆಂದು ಬೇಡಿಕೊಂಡನು. ಡೈಯೋಮಿಡೀಸನೂ ಹಾಗೆಯೇ ಪ್ರಾರ್ಥಿಸಿದ ಬಳಿಕ ಅವರಿಬ್ಬರೂ ತಮ್ಮ ಪಯಣಬೆಳೆಸಿದರು.

೯೨. ಗ್ರೀಕರ ಪ್ರಮುಖರು ತಮ್ಮೊಳಗೆ ಆಲೋಚಿಸಿ ಗೂಢಚಾರರನ್ನು ಶತ್ರುಗಳ ಪಾಳೆಯಕ್ಕೆ ಕಳುಹಿಸಬೇಕೆಂದು ಹೇಗೆ ನಿರ್ಧರಿಸಿದ್ದರೋ, ಹಾಗೆಯೇ ಟ್ರೋಜನರ ಕಡೆಯ ಪ್ರಮುಖರೂ ತಮ್ಮ ಕಡೆಯ ಗೂಢಚಾರರನ್ನೂ ಕಳುಹಿಸಿ ಗ್ರೀಕರ ಸನ್ನಾಹಗಳ ಏರ್ಪಾಡುಗಳನ್ನು ಶೋಧಿಸಿ ತಿಳಿದುಕೊಳ್ಳಬೇಕೆಂದು ನಿರ್ಧರಿಸಿದ್ದರು. ಆದುದರಿಂದ ಅವರುಗಳೂ ಡೋಲನ್ ಎಂಬ ಹೊಗಳುಭಟನನ್ನು ಗೂಢಚಾರನನ್ನಾಗಿ ಕಳುಹಿಸಿಕೊಟ್ಟಿದ್ದರು. ಡೋಲನ್ನನು ಕುರೂಪಿಯಾಗಿದ್ದರೂ ಬಹಳ ಚುರುಕಾಗಿ ನಡೆಯಬಲ್ಲವನಾಗಿದ್ದನು. ಅವನ

ತಂದೆಗೆ ಐದು ಜನ ಹೆಣ್ಣುಮಕ್ಕಳೂ ಅವನೊಬ್ಬನೇ ಮಗನೂ ಇದ್ದರು. ಡೋಲನ್ನನು ತನ್ನ ಕೆಲಸಕ್ಕಾಗಿ ಹೊರಡುವುದಕ್ಕೆ ಮುಂಚೆ, ಏಕಿಲೀಸನ್ನು ಜಯಿಸಿದಬಳಿಕ ಅವನ ರಥವನ್ನೂ ಕುದುರೆಗಳನ್ನೂ ತನಗೆ ಕೊಡಬೇಕೆಂದು ನಿಬಂಧನೆಮಾಡಿಕೊಂಡಿದ್ದನು. ಡೋಲನ್ನನು ಏಕಿಲೀಸಿನ ಉತ್ಕೃಷ್ಟವಾದ ಕುದುರೆಗಳು ಆಗಲೇ ತನಗೆ ದೊರೆತುಹೋದುವೆಂದು ಹಿಗ್ಗುತ್ತಾ, ಒಂದು ತೋಳದ ಚರ್ಮವನ್ನು ಹೊದೆದು, ತಲೆಗೆ ಒಂದು ಕುಲಾಯಿಯನ್ನು ಹಾಕಿಕೊಂಡು ಕೈಯಲ್ಲಿ ಒಂದು ಈಟಿಯನ್ನು ಹಿಡಿದು ಗ್ರೀಕರ ಪಾಳೆಯದ ಕಡೆಗೆ ಬರುತ್ತಿದ್ದನು. ಹೀಗೆ ಒಂಟಿಯಾಗಿ ಬರುತ್ತಿದ್ದ ಶತ್ರುವನ್ನು ಒಡಿಸಿಯಸ್ಸನು ಕಂಡು ಡೈಯೊಮಿಡೀಸಿಗೆ ಅವನನ್ನು ತೋರಿಸಿ, ಮಹಾಯುದ್ಧಕ್ಕೂ ಸತ್ತು ಬಿದ್ದಿದ್ದ ಹೆಣಗಳ ನಡುವೆ ತಾವೂ ಅವಿತುಕೊಂಡಿರಬೇಕೆಂದು ಸೂಚಿಸಿದನು. ಅವರಿಬ್ಬರೂ ಒರಗುತ್ತಿದ್ದುದನ್ನು ಡೋಲನ್ನನು ನೋಡಲಿಲ್ಲವಾದುದರಿಂದ, ಅವನು ನಿಶ್ಶಂಕೆಯಿಂದ ಅವರು ಅವಿತುಕೊಂಡಿದ್ದ ಸ್ಥಳವನ್ನೂ ದಾಟಿ ಗ್ರೀಕರ ಪಾಳೆಯದ ಕಡೆಗೆ ಹೋಗುತ್ತಿದ್ದನು. ಕೂಡಲೆ ಒಡಿಸಿಯಸ್ಸನೂ ಡೈಯೊಮಿಡೀಸನೂ ಎದ್ದು ಡೋಲನ್ನಿನ ಹಿಂದೆಯೇ ಹೋಗಲಾಗಿ, ಆ ಸುಳಿವನ್ನು ತಿಳಿದು ಸಂಶಯದಿಂದ ಬೇಗಬೇಗ ಓಡಲಾರಂಭಿಸಿದ ಆ ಟ್ರೋಜನರ ಗೂಢಚಾರನನ್ನು ಹಿಡಿದರು. ಆ ಸಮಯದಲ್ಲಿ ಡೋಲನ್ನಿಗೆ ಮಹಾಭಯವಾಗಲು ಅವನು ನಡುಗುತ್ತಾ ನಿಂತನು; ಅವನ ಮುಖವೆಲ್ಲಾ ಬಿಳುಪೇರಿದ್ದಿತು; ಅವನ ದವಡೆಗಳು ಗಡಗಡನೆ ನಡುಗುತ್ತಿದ್ದುವು; ಕಣ್ಣಿಂದ ನೀರು ಧಾರಾಳವಾಗಿ ಹರಿಯುತ್ತಿದ್ದಿತು. ಅವನು ತನ್ನ ಶತ್ರುಗಳನ್ನು ಕುರಿತು ಬಹುಪ್ರಯಾಸದಿಂದ ಮಾತನಾಡುತ್ತಾ ತನ್ನ ತಂದೆಯಿಂದ ಬೇಕಾದಷ್ಟು ಪರಿಹಾರದ್ರವ್ಯವನ್ನು ಅಂಗೀಕರಿಸಿ ತನ್ನ ಪ್ರಾಣವನ್ನು ಉಳಿಸಬೇಕೆಂದು ಪ್ರಾರ್ಥಿಸಿಕೊಂಡನು.

೯೩. ಒಡಿಸಿಯಸ್ಸನು ಆ ಪುಕ್ಕಲನನ್ನು ಮತ್ತಷ್ಟು ಹೆದರಿಸಿ, ಟ್ರೋಜನರ ಏರ್ಪಾಡುಗಳೆಲ್ಲವನ್ನೂ ವಿಚಾರಿಸಿ ತಿಳಿದುಕೊಂಡನು. ಅವನು ಹೇಳಿದ ವೃತ್ತಾಂತದಿಂದ ಹೆಕ್ಟರನೂ, ಇತರ ಟ್ರೋಜನ್ ಪ್ರಮುಖರೂ ಐಲಾಸಿನ ಸಮಾಧಿಯ ಬಳಿಯಲ್ಲಿ ಮಂತ್ರಾಲೋಚನೆಮಾಡುತ್ತಿದ್ದರೆಂದೂ, ಟ್ರೋಜನರ ಪಾಳೆಯದಲ್ಲಿ ಪ್ರತ್ಯೇಕವಾಗಿ ಕಾವಲುಗಾರರಿರಲಿಲ್ಲವೆಂದೂ, ಅವರ ಸಹಾಯಾರ್ಥವಾಗಿ ಒಂದಿದ್ದ ಮಿತ್ರರಾಜರುಗಳು ಸುಖವಾಗಿ ನಿದ್ರಿಸುತ್ತಿದ್ದರೆಂದೂ, ಟ್ರೋಜನರಲ್ಲಿ ಕೆಲವರು ಮಾತ್ರ ಅಲ್ಲಲ್ಲಿ ಬೆಂಕಿಗಳನ್ನು ಕಾಸಿಕೊಳ್ಳುತ್ತಾ ಎಚ್ಚರ

ವಾಗಿದ್ದರೆಂದೂ ತಿಳಿಸಿದನು. ಇನ್ನೂ ವಿವರವಾಗಿ ವಿಚಾರಮಾಡಿದಾಗ ಈಚೆಗೆ ಟ್ರೋಜನರ ಸಹಾಯಾರ್ಥವಾಗಿ ಬಂದಿದ್ದ ಥ್ರೇಸ್ ದೇಶದ ದೊರೆಯಾಗಿದ್ದ ರ್ಹೀಯಾಸ್ ಎಂಬವನು ತನ್ನ ಸುಂದರವಾದ ಬಿಳಿಯ ಕುದುರೆಗಳೊಡನೆ ಉಳಿದ ಮಿತ್ರರಾಜರಿಳಿದಿದ್ದ ಸ್ಥಳಕ್ಕಿಂತಲೂ ದೂರದಲ್ಲಿಳಿದುಕೊಂಡಿದ್ದನೆಂದು ತಿಳಿದುಬಂದಿತು.

೯೪. ಡೋಲನ್ನನು ಹೀಗೆ ತನ್ನ ಪಾಳೆಯದ ಸುದ್ದಿಯನ್ನು ತಿಳಿಸಿದ ಕೂಡಲೆ, ಡೈಯೋಮಿಡೀಸನು ಡೋಲನ್ನಿನ ಸಮೀಪಕ್ಕೆ ಹೋಗಿ—" ನೀಚನೇ ನೀನು ಬದುಕಿರುವುದಕ್ಕೆ ಅರ್ಹನಲ್ಲ. ನಿನ್ನನ್ನು ಈಗ ಜೀವಸಹಿತ ಬಿಟ್ಟರೆ ಮತ್ತೊಮ್ಮೆ ಗೂಢಚಾರನಾಗಿ ಬಾರದಿರುವುದಿಲ್ಲ " ಎಂದು ಹೇಳಿ ಅವನು ಎಷ್ಟೇ ಪ್ರಾರ್ಥಿಸುತ್ತಿದ್ದರೂ ಲಕ್ಷ್ಯಮಾಡದೆ ಅವನ ತಲೆಯನ್ನು ಕತ್ತರಿಸಿಹಾಕಿ, ಅವನ ಉಡುಪನ್ನೂ ಆಯುಧಗಳನ್ನೂ ತೆಗೆದುಕೊಂಡು, ಅವುಗಳನ್ನು ಅಥೆನಿದೇವಿಗೆ ಪ್ರಾರ್ಥನಾಪೂರ್ವಕವಾಗಿ ಸಮರ್ಪಿಸಿದನು

೯೫ ಅನಂತರ ಡೈಯೊಮಿಡೀಸನೂ ಒಡಿಸಿಯಸ್ಸನೂ ಸೇರಿ ರ್ಹೀಯಾಸನು ಇಳಿದುಕೊಂಡಿದ್ದ ಸ್ಥಳಕ್ಕೆ ಹೋಗಿ, ಅಲ್ಲಿ ಸುಖವಾಗಿ ನಿದ್ರಿಸುತ್ತಿದ್ದ ಹನ್ನೆರಡುಮಂದಿಯನ್ನು ಸದ್ದಿಲ್ಲದೆ ಕೊಂದು ಮುಂದಕ್ಕೆ ಹೊರಟರು ಬಳಿಕ ಅವರ ಕತ್ತಿಗೆ ಬಲಿಯಾದವನು ರ್ಹೀಯಾಸನು. ಸ್ವಲ್ಪಹೊತ್ತಿನಲ್ಲೇ ಅವರು ಅವನ ಉತ್ತಮವಾದ ಕುದುರೆಗಳನ್ನು ತೆಗೆದುಕೊಂಡು ತಮ್ಮ ಪಾಳೆಯಕ್ಕೆ ಹಿಂದಿರುಗಿದರು. ಗ್ರೀಕ್ ಗೂಢಚಾರರು ರ್ಹೀಯಾಸಿನ ಪಾಳೆಯದಿಂದ ಹೊರಟ ಸ್ವಲ್ಪಕಾಲದೊಳಗಾಗಿ ಥ್ರೇಸಿನಕಡೆಯವರಿಗೆ ಎಚ್ಚರವಾಯಿತು. ಆದರೆ ಇಷ್ಟರಲ್ಲಿ, ಡೈಯೊಮಿಡೀಸನೂ ಒಡಿಸಿಯಸ್ಸನೂ ಡೋಲನ್ನಿನ ವಸ್ತ್ರಾಯುಧಗಳೊಡನೆ ತಮ್ಮ ಪಾಳೆಯಕ್ಕೆ ಹಿಂದಿರುಗಿ ತಮಗಾಗಿ ಕಾದಿದ್ದ ಗ್ರೀಕ್ ಪ್ರಮುಖರಿಗೆ ವೃತ್ತಾಂತವನ್ನು ತಿಳಿಸಿ ಬಹಳ ಸಂತೋಷವನ್ನುಂಟುಮಾಡಿದರು ಅವರೊಡನೆ ಸ್ವಲ್ಪಹೊತ್ತು ಮಾತಾಡುತ್ತಿದ್ದ ಬಳಿಕ ಡೈಯೋಮಿಡೀಸನೂ ಒಡಿಸಿಯಸ್ಸನೂ ಸಮುದ್ರದ ಬಳಿಗೆ ಹೋಗಿ ಕೈಕಾಲುಗಳನ್ನು ತೊಳೆದುಕೊಂಡು ತಮ್ಮ ಗುಡಿಸಲುಗಳಿಗೆ ಹಿಂದಿರುಗಿ ಸ್ನಾನಮಾಡಿ ದೇವತೆಗಳಿಗೆ ಆಹಾರಪಾನೀಯಗಳನ್ನು ನೈವೇದ್ಯಮಾಡಿ ಪ್ರಸಾದವನ್ನು ತಾವು ಸ್ವೀಕರಿಸಿದರು.

---

## XIV

೯೬. ಇಷ್ಟುಹೊತ್ತಿಗೆ ಉಷಃಕಾಲವಾಯಿತು. ಆಗ ಜ್ಯೂಸನು ಗ್ರೀಕರ ಮನಸ್ಸಿನಲ್ಲಿ ಯುದ್ಧಾಸಕ್ತಿಯನ್ನು ಬಲಪಡಿಸಿದ್ದಕಾರಣ ಗ್ರೀಕರು ಬಹಳ ಸಡಗರದಿಂದ ತಮ್ಮತಮ್ಮ ಆಯುಧಗಳನ್ನೂ ಉಡುಪುಗಳನ್ನೂ ಅಣಿ ಮಾಡಿಕೊಂಡು ಯುದ್ಧಕ್ಕೆ ಸಿದ್ಧರಾದರು. ಆಗಮೆಮ್ನಾನನು ಉಕ್ಕಿನ ಕಾಲುಚೀಲಗಳನ್ನು ಹಾಕಿಕೊಂಡು, ಅವನ್ನು ಬೆಳ್ಳಿಯಕಟ್ಟುಗಳಿಂದ ಬಿಗಿಪಡಿಸಿಕೊಂಡನು. ಬಳಿಕ ಅವನು ತನಗೆ ಸೈಪ್ರಸ್‌ದ್ವೀಪದ ಒಬ್ಬ ಮಿತ್ರನು ಬಹುಮಾನವಮಾಡಿದ್ದ ಉರಸ್ತ್ರಾಣವನ್ನು ಧರಿಸಿಕೊಂಡನು. ಅದರಮೇಲೆ ಬಹುಸುಂದರವಾದ ಕೆತ್ತನೆಯ ಕೆಲಸವನ್ನು ಮಾಡಿದ್ದರು. ಅವನು ಧರಿಸಿದ ಕತ್ತಿಯಹಿಡಿಯ ಪ್ರದೇಶದಲ್ಲಿ ಚಿನ್ನದ ಗುಂಡುಗಳಿದ್ದುವು. ಅದರ ಒರೆಯನ್ನು ಬೆಳ್ಳಿಯಿಂದ ಮಾಡಿದ್ದರು ಅವನ ಗುರಾಣಿಯಮೇಲೆ ಕಂಚಿನ ಹತ್ತು ವರ್ತುಳಗಳು ಹೊಳೆಯುತ್ತಿದ್ದುವು. ಅವುಗಳ ನಡುವೆ, ಹಿಂದೆ ಪರ್ಸಿಯಸ್ಸೆಂಬ ಶೂರನು ಕೊಂದುಹಾಕಿದ್ದ ಗಾರ್ಗನ್ ಎಂಬ ಅದ್ಭುತಸ್ತ್ರೀಯ ತಲೆಯ ಚಿತ್ರವಿದ್ದಿತು. ಅವನ ಶಿರಸ್ತ್ರಾಣವನ್ನು ಲೋಹದ ನಾಲ್ಕು ಪದರಗಳಿಂದ ಮಾಡಿದ್ದರು. ಅದರಮೇಲೆ ಕುದುರೆಯ ಜವಿಯಿಂದ ಮಾಡಿದ್ದ ಒಂದು ಕುಚ್ಚು ಗಾಳಿಯ ರಭಸದಿಂದ ಅಳ್ಳಾಡುತ್ತಿದ್ದಿತು. ಈ ಪರಿಕರಗಳ ಜೊತೆಗೆ ಆಗಮೆಮ್ನಾನನು ಉದ್ದವಾದ ಎರಡು ಈಟಿಗಳನ್ನು ಧರಿಸಿದ್ದನು. ಇವುಗಳ ಕಂಚಿನ ಅಲಗುಗಳು ಬಹಳ ಹರಿತವಾಗಿದ್ದುವು. ಉಳಿದ ಗ್ರೀಕ್ ಯೋಧರೂ ಅವರವರು ಉಪಪತ್ತಿಗನುಸಾರವಾಗಿ ಉಡುಪು ಆಯುಧಗಳನ್ನು ಧರಿಸಿ ಅತ್ಯುತ್ಸಾಹದಿಂದ ಟ್ರೋಜನರಮೇಲೆ ಬಿದ್ದರು

೯೭. ಇದಿರಾಳುಗಳಲ್ಲಿಯೂ ಇದೇ ಬಗೆಯ ಉತ್ಸಾಹವು ಕಂಡು ಬರುತ್ತಿದ್ದಿತು. ಹಾನಿಸೂಚಕವಾದ ಧೂಮಕೇತುವು ಮೇಘಗಳ ನಡುವೆ ಕೆಲವುದಿನಗಳವರೆಗೆ ಕಾಣಿಸಿಕೊಂಡು ಅದೃಶ್ಯವಾಗುವಂತೆಯೇ, ಹೆಕ್ಟರನೂ ಆಗಾಗ ಟ್ರೋಜನರ ಸೈನ್ಯದ ಮುಂದುಗಡೆಯಲ್ಲಿ ಕಾಣಿಸಿಕೊಂಡು ಗ್ರೀಕರ ದಳವನ್ನು ಧ್ವಂಸಮಾಡಿ ತನ್ನಕಡೆಯ ಸೈನ್ಯದ ಹಿಂದುಗಡೆಯಲ್ಲಿದ್ದವರನ್ನು ಪ್ರೋತ್ಸಾಹಗೊಳಿಸುವುದಕ್ಕಾಗಿ ಅದೃಶ್ಯನಾಗುತ್ತಿದ್ದನು. ಮಧ್ಯಾಹ್ನದ ವರೆಗೂ ಉಭಯಪಕ್ಷಗಳವರೂ ಬಹಳ ಹಠದಿಂದ ಕಾದಾಡಿದರು. ಆಗಮೆಮ್ನಾನನು

ಆ ಸಮಯದಲ್ಲಿ ಬಹುಸಾಹಸದಿಂದ ಕಾದಾಡಿ ಅನೇಕ ಶತ್ರುವೀರರನ್ನು ಕೊಂದು, ಅವರ ಕವಚವಸ್ತ್ರಾದಿಗಳನ್ನು ವಶಪಡಿಸಿಕೊಳ್ಳುತ್ತಬಂದನು. ಅವನ ಕೈಯಿಂದ ಹತರಾದವರಲ್ಲಿ ಪ್ರಿಯಾಮಿನ ಒಬ್ಬ ಔರಸಪುತ್ರನೂ ಒಬ್ಬ ದಾಸೀಪುತ್ರನೂ ಇದ್ದರು. ಸಿಂಹವು ಜಿಂಕೆಯಮರಿಗಳನ್ನು ಬಾಯಲ್ಲಿ ಕಚ್ಚಿಕೊಂಡು ಹೊರಟುಹೋಗುವಾಗ ಅವುಗಳ ತಾಯಿಯು ಹೇಗೆ ನಿರುಪಾಯವಾಗಿ ನೋಡುವುದಕ್ಕೆ ಕೂಡ ಧೈರ್ಯವಿಲ್ಲದೆ ತಲೆತಪ್ಪಿಸಿಕೊಂಡು ಓಡಿಹೋಗುವುದೋ, ಹಾಗೆಯೇ ಶತ್ರುವಿನ ಕೈಗೆ ಸಿಕ್ಕಿಬಿದ್ದಿದ್ದ ಪ್ರಿಯಾಮಿನ ಆ ಇಬ್ಬರು ಮಕ್ಕಳ ಶರೀರಗಳನ್ನೂ ಬಿಡಿಸಿಕೊಳ್ಳಲು ಟ್ರೋಜನರಲ್ಲಿ ಯಾರೊಬ್ಬರಿಗೂ ಧೈರ್ಯವಿರಲಿಲ್ಲ. ಹಿಂದೆ ಒಡಿಸಿಯಸ್ಸನೊಡನೆ ಮೆನೆಲಾಸನು ಪ್ರಿಯಾಮಿನ ಆಸ್ಥಾನಕ್ಕೆ ರಾಯಭಾರಿಯಾಗಿ ಬಂದಿದ್ದಾಗ ಮೆನೆಲಾಸನ್ನು ಕೊಂದುಬಿಡಬೇಕೆಂದು ದುರ್ಬೋಧನೆಯನ್ನು ಮಾಡಿದ್ದ 'ಆಂಟಿಮೇಕಸ್' ಎಂಬೊಬ್ಬ ಶ್ರೀಮಂತನ ಇಬ್ಬರು ಮಕ್ಕಳುಗಳು ಈ ಸಮಯದಲ್ಲಿ ಅಗಮೆಮ್ನಾನಿನ ದೃಷ್ಟಿಗೆ ಗೋಚರವಾದರು. ಅಗಮೆಮ್ನಾನನು ಆಂಟಿಮೇಕಸ್ಸಿನ ಘಾತುಕತನಕ್ಕೆ ಪ್ರತೀಕಾರಮಾಡಬೇಕೆಂದು ದೃಢಮನಸ್ಕನಾಗಿದ್ದುದರಿಂದ, ಆ ಇಬ್ಬರು ಪ್ರತಿದ್ವಂದ್ವಿಗಳೂ ತಮ್ಮ ಪ್ರಾಣವನ್ನು ಉಳಿಸಬೇಕೆಂದೂ ತಮ್ಮನ್ನು ಬಿಡಿಸಿಕೊಳ್ಳುವುದಕ್ಕಾಗಿ ಆಂಟಿಮೇಕಸ್ಸನು ಬೇಕಾದಷ್ಟು ದ್ರವ್ಯವನ್ನು ಕೊಡುವನೆಂದೂ ಮೊರೆಯಿಡುತ್ತಾ ಬಹಳವಾಗಿ ಪ್ರಾರ್ಥಿಸಿಕೊಳ್ಳುತ್ತಿದ್ದರೂ ಕೇಳದೆ ಅವರಿಬ್ಬರಲ್ಲಿ ಒಬ್ಬನನ್ನು ಈಟಿಯಿಂದ ತಿವಿದು ಮತ್ತೊಬ್ಬನನ್ನು ಕತ್ತಿಯಿಂದ ಕಡಿದು ಕೊಂದುಬಿಟ್ಟನು. ಕಾಡುಗಿಚ್ಚು ಎಲ್ಲಾ ಕಡೆಗೂ ಬೇಗಬೇಗನೆ ಹರಡಿ ದೊಡ್ಡಮರಗಳನ್ನೂ ಕೂಡ ಕೆಡಹುವಂತೆ, ಗ್ರೀಕ್ ಸೈನ್ಯದಲ್ಲಿ ಅನೇಕರು ತಮ್ಮ ಇದಿರಾಳುಗಳನ್ನು ಕೊಂದುಮಲಗಿಸುತ್ತಿದ್ದರು. ಆದಕಾರಣ ಟ್ರೋಜನರು ಇದನ್ನು ಕಂಡು ತೆಪ್ಪನೆ ಹಿಮ್ಮೆಟ್ಟಬೇಕಾಯಿತು.

೯೮. ಹಾಗೆ ಹಿಮ್ಮೆಟ್ಟುತ್ತಿದ್ದಾಗ ಹಿಂದೆಬಿದ್ದ ಅನೇಕ ಟ್ರೋಜನರು ಶತ್ರುಗಳ ಕತ್ತಿಈಟಿಗಳಿಗೆ ತುತ್ತಾಗುತ್ತಲಿದ್ದರು. ಗ್ರೀಕರ ಈ ಹಾವಳಿಯನ್ನು ಕಂಡು ಜ್ಯೂಸನು ಒಬ್ಬ ದೇವತೆಯನ್ನು ಹೆಕ್ಟರನಬಳಿಗೆ ಕಳುಹಿಸಿ, ಅಗಮೆಮ್ನಾನನು ಇದ್ದಕಡೆಯಲ್ಲಿಹೊರತು ಮಿಕ್ಕಸ್ಥಳಗಳಲ್ಲೆಲ್ಲಾ ಯುದ್ಧವನ್ನು ಟ್ರೋಜನರು ಬಹುರಭಸದಿಂದ ನಡೆಸಬೇಕೆಂದೂ, ಅಗಮೆಮ್ನಾನಿಗೆ ಒಂದು ಏಟುಬಿದ್ದು

ಅವನು ರಥವನ್ನು ಹತ್ತಿದಕೂಡಲೆ ಹೆಕ್ಟರನಿಗೆ ಅದ್ಭುತಶಕ್ತಿಯುಂಟಾಗುವುದೆಂದೂ, ಆ ದಿನ ಸೂರ್ಯಾಸ್ತಮಯವಾಗುವುದರೊಳಗಾಗಿ ಗ್ರೀಕರನ್ನು ಅವರ ಹಡಗುಗಳವರೆಗೂ ಹಿಮ್ಮೆಟ್ಟುವಂತೆ ಮಾಡಬಹುದೆಂದೂ ತಿಳಿಸಿದನು. ಹೆಕ್ಟರನು ಅದೇಮೇರೆಗೆ ತನ್ನ ಪಕ್ಷದ ವೀರರೆಲ್ಲರನ್ನೂ ಪ್ರೋತ್ಸಾಹಿಸಿ ಗ್ರೀಕರೊಡನೆ ಕಾದಾಡುವಂತೆ ಏರ್ಪಡಿಸಿದನು. ಈ ನಡುವೆ, ನೂತನವಾಗಿ ಮದುವೆ ಮಾಡಿಕೊಂಡಿದ್ದರೂ ಊರಲ್ಲಿ ನಿಲ್ಲದೆ, ಟ್ರೋಜನರ ಸಹಾಯಾರ್ಥವಾಗಿ ಬಂದುಬಿಟ್ಟಿದ್ದ ಇಫಿಡೇಮಸ್ ಎಂಬವನು ಅಗಮೆಮ್ನಾನನನ್ನು ಇದಿರಿಸಿ ಅವನ ಕೈಯಿಂದ ಹತನಾದನು. ಇಫಿಡೇಮಸ್ಸನು ಸತ್ತುದನ್ನು ನೋಡಿ ಸಹಿಸಲಾರದೆ, ಅವನ ಸಹೋದರನೊಬ್ಬನು ಅಗಮೆಮ್ನಾನನ ಮೇಲೆಬಿದ್ದು ಅವನಿಗೆ ಗಾಯಗೊಳಿಸಿದನು. ಆದರೆ ಅಗಮೆಮ್ನಾನನು ಅದಕ್ಕೆ ಹೆದರದೆ ತನ್ನ ಪ್ರತ್ಯರ್ಥಿಯ ಮೇಲೆ ಉರವಣಿಸಿ ಬಿದ್ದು ಅವನನ್ನು ಹೊಡೆದು ಮಲಗಿಸಿದನು. ಈ ಸಮಯದಲ್ಲಿ, ಅಗಮೆಮ್ನಾನನಿಗೆ ಬಿದ್ದಿದ್ದ ಏಟಿನಿಂದ ಬಾಧೆಯು ಬಹಳ ಹೆಚ್ಚಾಗಲು ಅವನು ತನ್ನ ಕಡೆಯವರಿಗೆ ಹಡಗುಗಳನ್ನು ಕಾಪಾಡಿಕೊಳ್ಳಬೇಕೆಂದು ಎಚ್ಚರಿಸಿ ತನ್ನ ರಥದಮೇಲೆ ಹತ್ತಿ ಹಿಂದಕ್ಕೆ ಹೋದನು.

೯೯. ಅಗಮೆಮ್ನಾನನು ಹಿಂದಕ್ಕೆ ಹೋಗುವುದನ್ನೇ ಕಾದುಕೊಂಡಿದ್ದ ಹೆಕ್ಟರನು ತನ್ನ ಕಡೆಯವರೆಲ್ಲರನ್ನೂ ಕುರಿತು, ತನಗೆ ಜ್ಯೂಸನು ಹೇಳಿಕಳುಹಿಸಿದ್ದ ಸಂದೇಶವನ್ನು ತಿಳಿಸಿ ಶತ್ರುಗಳೊಡನೆ ಇನ್ನು ನಿರ್ಭಯದಿಂದ ಯುದ್ಧಮಾಡಬಹುದೆಂದು ಪ್ರೋತ್ಸಾಹಿಸಿದನು. ಸ್ವಲ್ಪಹೊತ್ತಿನಲ್ಲೇ ಗ್ರೀಕರಕಡೆಯ ಅನೇಕ ವೀರರು ಟ್ರೋಜನರ ಏಟುಗಳಿಗೆ ತುತ್ತಾಗಿ ರಣಭೂಮಿಯಲ್ಲಿ ಸತ್ತುಬಿದ್ದರು. ಹೆಕ್ಟರನು ಬಹಳರಭಸದಿಂದ ಇದಿರಾಳುಗಳಲ್ಲಿ ಅನೇಕರನ್ನು ಕೊಂದು ಗ್ರೀಕರಿಗೆ ಬಹುಭಯವನ್ನು ಉಂಟುಮಾಡಿದನು. ಇನ್ನು ಸ್ವಲ್ಪಹೊತ್ತು ಸುಮ್ಮನಿದ್ದರೆ ಗ್ರೀಕರು ಹಿಂದಕ್ಕೆ ಓಡಿಹೋಗುವರೆಂಬುದನ್ನು ಒಡಿಸಿಯಸ್ಸನು ತಿಳಿದು ಡೈಯೊಮಿಡೀಸನನ್ನೂ ತನ್ನ ಸಹಾಯಕ್ಕೆ ಕರೆದುಕೊಂಡು ಶತ್ರುಗಳ ಉರವಣೆಯನ್ನು ತಡೆಯುತ್ತಾ ಬಂದನು. ಎರಡು ಕಾಡಹಂದಿಗಳು ಒಟ್ಟಾಗಿ ನುಗ್ಗಿ ತಮ್ಮಮೇಲೆ ಬೀಳುತ್ತಿರುವ ಬೇಟೆನಾಯಿಗಳನ್ನು ಹೇಗೆ ಧ್ವಂಸಮಾಡುವುವೋ, ಹಾಗೆಯೇ ಆ ಇಬ್ಬರು ಗ್ರೀಕ್‌ಯೋಧರೂ ಅನೇಕ ಟ್ರೋಜನರನ್ನು ನಾಶಮಾಡಿದರು. ಅದನ್ನು ಕಂಡು ಹೆಕ್ಟರನು ತನ್ನ ಕಡೆಯವರನ್ನು ಪ್ರೋತ್ಸಾಹಿಸುತ್ತಾ

ತಾನೇ ಅವರಿಬ್ಬರಮೇಲೆ ಕಾಣಿಸಿಕೊಂಡನು. ಡೈಯೊಮಿಡೀಸನು ಹೆಕ್ಟರಿನ ಮೇಲೆ ಪ್ರಯೋಗಿಸಿದ ಈಟಿಯಿಂದ ಅವನಿಗೆ ಒಂದು ಕ್ಷಣಮಾತ್ರ ಮೂರ್ಛೆಯುಂಟಾಯಿತು. ಆದರೆ ಅವನು ಸ್ವಲ್ಪಹೊತ್ತಿನಲ್ಲಿಯೇ ಚೇತರಿಸಿಕೊಂಡು ಡೈಯೊಮಿಡೀಸಿನಮೇಲೆ ನುಗ್ಗಿದನು. ಈ ನಡುವೆ ಪ್ಯಾರಿಸ್ಸನು ಐಲಾಸ್ ಎಂಬವನ ಸಮಾಧಿಯಬಳಿಯಲ್ಲಿದ್ದ ಒಂದು ಕಂಬದಹತ್ತಿರ ನಿಂತು ಬಾಣಗಳನ್ನು ಪ್ರಯೋಗಿಸುತ್ತಿದ್ದನು. ಅವನು ಬಿಟ್ಟ ಒಂದು ಬಾಣವು ಡೈಯೊಮಿಡೀಸಿನ ಬಲಗಾಲನ್ನು ಭೇದಿಸಿಕೊಂಡ ಭೂಮಿಯಲ್ಲಿ ನಾಟಿಕೊಂಡಿತು. ಇದನ್ನು ಕಂಡಕೂಡಲೆ ಪ್ಯಾರಿಸ್ಸನು ಬಹಳ ಸಂತೋಷದಿಂದ—“ಅಯ್ಯೋ! ಡೈಯೊಮಿಡೀಸ್! ನನ್ನ ಬಾಣವು ನಿನ್ನ ಕಾಲಿಗೆ ತಗುಲುವಬದಲು, ನಿನ್ನ ಕೆಳಹೊಟ್ಟೆಗಾದರೂ ತಗುಲಿದ್ದರೆ, ನಿನ್ನನ್ನು ಕಂಡು, ಸಿಂಹವನ್ನು ನೋಡಿದ ಆಡುಗಳಂತೆ ಅಂಜುತ್ತಿರುವ ಟ್ರೋಜನರೂ ತಮ್ಮ ಭಯದಿಂದ ಪಾರಾಗಬಹುದಾಗಿದ್ದಿತಲ್ಲಾ!” ಎಂದು ಅಬ್ಬರಿಸಿದನು.

೧೦೦. ಆಗ ಡೈಯೊಮಿಡೀಸನು ಪ್ಯಾರಿಸ್ಸನ್ನು ಕುರಿತು, “ಎಲೋ ಸ್ತ್ರೀಚೋರನೆ, ನೀನೀಗ ನನ್ನ ಇದಿರಿಗೆ ನಿಂತು ಯುದ್ಧಮಾಡಿದರೆ, ಆಗ ನಿನ್ನ ಬಿಲ್ಲು-ಬಾಣಗಳ ಶಕ್ತಿಯು ಗೊತ್ತಾಗುವುದು. ನಿನ್ನ ಬಾಣವು ನನ್ನ ಕಾಲನ್ನು ಸೋಕಿತೆಂದು ಹಿಗ್ಗಬೇಡ; ಅದರಿಂದಾಗಿರುವ ಏಟು ಒಂದು ಮಗುವು ನನ್ನನ್ನು ಹೊಡೆಯುವುದರಿಂದಾಗುವಷ್ಟಕ್ಕಿಂತಲೂ ಬಲವಾದುದಲ್ಲ. ನಾನೇ ಯಾರ ಮೇಲಾದರೂ ಬಾಣವನ್ನು ಪ್ರಯೋಗಿಸಿದರೆ ಸ್ವಲ್ಪಹೊತ್ತಿನಲ್ಲಿಯೇ ಅವನ ಸುತ್ತಲೂ ಸ್ತ್ರೀಯರು ಸುಳಿದಾಡುವುದಕ್ಕಿಂತಲೂ ಹದ್ದು ಕಾಗೆಗಳು ಮುತ್ತಿಕೊಳ್ಳುವುದು ಖಂಡಿತ” ಎಂದು ಹೇಳಿದನು. ಆಗ ಒಡಿಸಿಯಸ್ಸನು ಮುಂದಕ್ಕೆ ನುಗ್ಗಿಬಂದು ಅವನ ಕಾಲಿಗೆ ಸಿಕ್ಕಿಕೊಂಡಿದ್ದ ಬಾಣವನ್ನು ತೆಗೆದುಹಾಕಿ, ಅವನನ್ನು ರಥದಲ್ಲಿ ಕುಳ್ಳಿರಿಸಿ ವಿಶ್ರಮಿಸಿಕೊಳ್ಳುವುದಕ್ಕಾಗಿ ಪಾಳೆಯದ ಹಿಂದುಗಡೆಗೆ ಕಳುಹಿಸಿಕೊಟ್ಟನು.

೧೦೧. ಇಷ್ಟುಹೊತ್ತಿಗೆ ಗ್ರೀಕರಿಗೆ ಭಯವು ಹೆಚ್ಚಲಾರಂಭವಾಗಿ ಅವರಲ್ಲನೇಕರು ಹಿಂದಹಿಂದಕ್ಕೆ ಸರಿಯುತ್ತಿದ್ದರು. ಮತ್ತೆ ಕೆಲವರು ತಮ್ಮ ಹಡಗುಗಳ ಬಳಿಗೂ ಓಡಿಹೋಗಿದ್ದರು. ಅದನ್ನು ಕಂಡು ಒಡಿಸಿಯಸ್ಸನು ತನ್ನ ಎದೆಯನ್ನು ಕಲ್ಲುಮಾಡಿಕೊಂಡು, ಹೇಡಿಗಳಲ್ಲದವರೆಲ್ಲರೂ ತನ್ನೊಡನೆ

ನಿಂತು ಕಾದಾಡಬಹುದೆಂದು ಪ್ರೋತ್ಸಾಹಿಸುತ್ತಾ, ಟ್ರೋಜನರನ್ನು ಪ್ರತಿಭಟಿಸಿದನು. ಸ್ವಲ್ಪಹೊತ್ತಿನಲ್ಲಿಯೇ ಒಡಿಸಿಯಸ್ಸನು ತನ್ನ ಈಟಿಯಿಂದ ಅನೇಕ ಶತ್ರುವೀರರುಗಳನ್ನು ತಿವಿದುಕೊಂದನು. ವೀರಾವೇಶದಿಂದ ಯುದ್ಧಮಾಡುತ್ತಿದ್ದಾಗ ಒಡಿಸಿಯಸ್ಸಿಗೂ ಬಲವಾಗಿ ಒಂದು ಏಟುಬಿದ್ದಿತು. ಅವನು ಕೂಗಿಕೊಂಡುದನ್ನು ಮೆನೆಲಾಸನು ಕೇಳಿ, ಹಿರಿಯ ಏಯಾಸನ್ನೂ ತನ್ನ ಜೊತೆಗೆ ಕರೆದುಕೊಂಡು ಟ್ರೋಜನರಮೇಲೆ ನುಗ್ಗಿಬಂದನು. ಏಟುತಿಂದಿದ್ದ ಸಾರಗದ ಸುತ್ತಲೂ ಗುಳ್ಳೆಯನರಿಗಳು ಮುತ್ತಿಕೊಳ್ಳುವಂತೆ ಟ್ರೋಜನರು ಒಡಿಸಿಯಸ್ಸನ್ನು ಆವರಿಸಿಕೊಳ್ಳುತ್ತಿದ್ದರು. ಗಾಯಗೊಂಡಿದ್ದ ಒಡಿಸಿಯಸ್ಸನು ಅವರನ್ನು ಅತ್ಯಂತ ಪ್ರಯಾಸದಿಂದ ಹಿಂದಕ್ಕೆ ಹೊಡೆದು ಓಡಿಸುತ್ತಿದ್ದನು. ಆದರೆ ಇಷ್ಟರಲ್ಲಿ ಏಯಾಸನೂ ಮೆನೆಲಾಸನೂ ಅಲ್ಲಿಗೆ ಬಂದುದರಿಂದ, ಒಡಿಸಿಯಸ್ಸನು ಮೆನೆಲಾಸಿನ ಹಿತವಚನಕ್ಕೆ ಅನುಸಾರವಾಗಿ, ರಥದಲ್ಲಿ ಕುಳಿತು ಪಾಳೆಯದ ಹಿಂಭಾಗಕ್ಕೆ ಹೋದನು.

೧೦೨. ಏಯಾಸನು ರಣರಂಗದ ಬಲಭಾಗದಲ್ಲಿ ಕಾಣಿಸಿಕೊಂಡಿದ್ದನು. ಆ ಸಮಯದಲ್ಲಿ ಹೆಕ್ಟರನು ರಣಭೂಮಿಯ ಎಡಗಡೆಯಲ್ಲಿದ್ದ ಐಡೊಮಿನಿಯಸ್, ನೆಸ್ಟಾರುಗಳಮೇಲೆ ಕಾದಾಡುತ್ತಿದ್ದನು. ಈ ನಡುವೆ ಪ್ಯಾರಿಸ್ಸನು ಬಿಟ್ಟ ಮತ್ತೊಂದುಬಾಣದಿಂದ ಗ್ರೀಕರ ವೈದ್ಯನಾದ ಮೆಕಾವನ್ ಎಂಬವನಿಗೆ ಏಟು ತಗುಲಿದ್ದಕಾರಣ, ಐಡೊಮಿನಿಯಸ್ಸಿನ ಸೂಚನೆಗನುಸಾರವಾಗಿ ನೆಸ್ಟಾರನು ಆ ವೈದ್ಯನನ್ನು ಗ್ರೀಕರ ಹಡಗುಗಳ ಬಳಿಗೆ ಕರೆತಂದುಬಿಟ್ಟನು. ಏಯಾಸಿನ ಹಾವಳಿಯನ್ನು ತಡೆಯಲಾರದೆ ಓಡಿಹೋಗುತ್ತಿದ್ದ ಟ್ರೋಜನರನ್ನು, ಹೆಕ್ಟರಿನ ಸಾರಥಿಯು ಕಂಡು ತನ್ನ ಯಜಮಾನನಿಗೆ ತೋರಿಸಿ, ಅವನ ಅನುಮತಿಯನ್ನು ಪಡೆದು ಏಯಾಸಿನ ಬಳಿಗೆ ತನ್ನ ರಥವನ್ನು ನಡೆಸಿಕೊಂಡು ಬಂದನು. ಕೂಡಲೆ ಏಯಾಸಿನ ರಭಸವು ಕಡಿಮೆಯಾಗುತ್ತ ಬಂದಿತು. ಹೆಕ್ಟರಿನ ಆಗಮನದಿಂದ ಟ್ರೋಜನರಿಗೆ ಧೈರ್ಯೋತ್ಸಾಹಗಳೂ ಹೆಚ್ಚಿ ಅವರು ಏಯಾಸನ್ನು ಸ್ವಲ್ಪಸ್ವಲ್ಪವಾಗಿ ಹಿಮ್ಮೆಟ್ಟಿಸುತ್ತ ಬಂದರು. ಅವನ ಸುತ್ತಲೂ ಟ್ರೋಜನರ ಅನೇಕ ಬಾಣಗಳು ಬಂದುಬೀಳುತ್ತಿದ್ದುವು. ಪ್ಯಾರಿಸ್ಸಿನ ಒಂದು ಬಾಣವು ಒಂದು ಏಯಾಸಿನ ಸಹಾಯಾರ್ಥವಾಗಿ ಬಂದಿದ್ದ ಒಬ್ಬ ಗ್ರೀಕ್ ವೀರನ ಬಲತೊಡೆಯನ್ನು ಭೇದಿಸಿತು.

೧೦೩. ನೆಸ್ಟಾರನು ಮೆಕಾವನ್ನನ್ನು ತನ್ನ ರಥದಲ್ಲಿ ಹಾಕಿಕೊಂಡು ಹಿಂದಿರುಗುತ್ತಿದ್ದುದನ್ನು ಕಂಡು, ಏಕಿಲೀಸನು ತನ್ನ ಮಿತ್ರನಾದ ಪೆಟ್ರೋಕ್ಲಸನ್ನು ಕರೆದು "ನೆಸ್ಟಾರನು ರಥದಮೇಲೆ ಹಾಕಿಕೊಂಡುಬಂದ ವ್ಯಕ್ತಿಯಾರು" ಎಂಬುದನ್ನು ವಿಚಾರಿಸಿಕೊಂಡು ಬರಬೇಕೆಂದು ತಿಳಿಸಿದನು. ಅದೇಮೇರೆಗೆ ಪೆಟ್ರೋಕ್ಲಸ್ಸನು ನೆಸ್ಟಾರಿನ ಗುಡಿಸಿಲಿಗೆ ಬರುವಹೊತ್ತಿಗೆ ಗಾಯಗೊಂಡಿದ್ದ ವನನ್ನು ಉಪಚರಿಸುವ ಪ್ರಯತ್ನಗಳೂ ನಡೆಯುತ್ತಿದ್ದುವು. ಅನಿರೀಕ್ಷಿತವಾಗಿ ಬಂದಿದ್ದ ಪೆಟ್ರೋಕ್ಲಸ್ಸನ್ನು ಕಂಡಕೂಡಲೇ ನೆಸ್ಟಾರನು ಅವನನ್ನು ಆದರದಿಂದ ಬರಮಾಡಿಕೊಂಡು ಕುಳಿತುಕೊಳ್ಳ ಹೇಳಿದನು. ಆದರೆ ಪೆಟ್ರೋಕ್ಲಸ್ಸನು, ಗಾಯಗೊಂಡಿದ್ದವನು ಇಂತಹವನೆಂದು ತಿಳಿದುಕೊಂಡಕೂಡಲೆ, ತನಗಾಗಿ ಏಕಿಲೀಸನು ಕಾದಿರುವನೆಂದೂ ತಡಮಾಡಿದರೆ ಅವನು ಕೋಪಿಸಿಕೊಳ್ಳುವ ನೆಂದೂ ತಿಳಿಸಿ ಹೊರಟುಹೋಗಲು ಯತ್ನಿಸುತ್ತಿದ್ದನು.

೧೦೪. ಆಗ ನೆಸ್ಟಾರನು ಗ್ರೀಕರಲ್ಲಿ ಪ್ರಸಿದ್ಧರಾದವರೆಲ್ಲಾ ಏಟು ತಿಂದಿದ್ದ ವಿಷಯವನ್ನು ಪೆಟ್ರೋಕ್ಲಸ್ಸಿಗೆ ತಿಳಿಸಿ ಅಂತಹ ಕಷ್ಟಕಾಲದಲ್ಲಿಯೂ ಏಕಿಲೀಸಿಗೆ ದಯೆಯಿಲ್ಲವಲ್ಲಾ! ಎಂದೂ, ಗ್ರೀಕರಸೈನ್ಯವೆಲ್ಲವೂ ನಾಶವಾದಮೇಲೆ ಏಕಿಲೀಸಿಗೆ ತೃಪ್ತಿಯಾಗಬಹುದೋ ಏನೋ ಎಂದೂ ಮಾತನಾಡಿದನು. ಏಕಿ ಲೀಸನು ಟ್ರೋಜನ್ ದಂಡಯಾತ್ರೆಗೆ ಹೊರಡುವಾಗ ಅವನ ತಂದೆಯಾದ ಪೀಲಿಯಸ್ಸನು ಏಕಿಲೀಸಿಗೂ ಪೆಟ್ರೋಕ್ಲಸ್ಸಿಗೂ ಹೇಳಿದ್ದ ಬುದ್ಧಿವಾದವನ್ನು ಜ್ಞಾಪಿಸಿದುದಲ್ಲದೆ, ಏಕಿಲೀಸಿಗೆ ಸ್ವತಃ ಸಹಾಯಮಾಡಲು ಇಚ್ಛೆಯಿಲ್ಲದಿದ್ದರೂ, ಅವನ ಸೈನ್ಯವನ್ನೂ ಪೆಟ್ರೋಕ್ಲಸ್ಸನ್ನೂ ತಮ್ಮ ಸಹಾಯಕ್ಕೆ ಕಳುಹಿಸುವಂತೆ ಪ್ರೇರಿಸಬೇಕೆಂದು ಪೆಟ್ರೋಕ್ಲಸ್ಸಿಗೆ ಪ್ರಾರ್ಥಿಸಿಕೊಂಡನು. ಇದರಿಂದ ಪೆಟ್ರೋ ಕ್ಲಸ್ಸಿಗೆ ಮನಸ್ಸು ಕರಗಿತು. ಅವನು ಅಲ್ಲಿಂದ ಏಕಿಲೀಸಿನ ಗುಡಿಸಿಲಿಗೆ ಹಿಂದಿರುಗುತ್ತಿದ್ದಾಗ, ಗಾಯಗೊಂಡು ಪ್ರಯಾಸಪಡುತ್ತಿದ್ದ ಅನೇಕ ಗ್ರೀಕ್ ಯೋಧರುಗಳನ್ನು ನೋಡಿ ಅವನ ಮನಸ್ಸು ಮತ್ತಷ್ಟು ಕರಗಿತು.

---

## XV

೧೦೫. ಮೂರನೆಯದಿನ ಯುದ್ಧವು ಪುನಃ ಮೊದಲಾಗಿ ಬಹುರಭಸ ದಿಂದ ನಡೆಯಿತು. ಹೆಕ್ಟರನು ಬಿರುಗಾಳಿಯಂತೆ ಶತ್ರುಸೈನ್ಯದಲ್ಲಿ ಉಠವಣಿಸು

ತ್ತಿದ್ದನು. ಗ್ರೀಕರು ತಮ್ಮ ಆಯುಧಗಳ ಮಳೆಯನ್ನು ಅವನಮೇಲೆ ಸುರಿಸುತ್ತಿದ್ದರೂ, ಅವನು ಲಕ್ಷ್ಯಮಾಡುತ್ತಿರಲಿಲ್ಲ. ಅವನು ಟ್ರೋಜನರ ಸೈನ್ಯದಲ್ಲಿ ಅನೇಕರನ್ನು ಪ್ರೋತ್ಸಾಹಿಸುತ್ತ ಗ್ರೀಕರ ಪಾಳೆಯದೊಳಕ್ಕೆ ನುಗ್ಗಿಬಿಡಬೇಕೆಂದು ಕಂದಕವನ್ನು ದಾಟಲು ಯತ್ನಿಸಿದನು. ಉದ್ದವಾಗಿಯೂ ಮೊನಚಾಗಿಯೂ ಇದ್ದ ದಸಿಗಳನ್ನು ಆ ಕಂದಕದಲ್ಲಿ ನಟ್ಟಿದ್ದುದರಿಂದ, ಅವರಮೇಲೆ ನೆಗೆಯುವುದಕ್ಕೆ ಕುದುರೆಗಳು ಹೆದರುತ್ತಿದ್ದುವು. ಆದಕಾರಣ ಟ್ರೋಜನ್ ವೀರರೆಲ್ಲರೂ ಕುದುರೆಗಳಮೇಲೆ ಕುಳಿತು ಕಂದಕವನ್ನು ದಾಟುವ ಯತ್ನವನ್ನು ನಿಲ್ಲಿಸಿ, ಪಾದಚಾರಿಗಳಾಗಿಯೇ ಮುಂದಕ್ಕೆ ಐದು ತಂಡಗಳಾಗಿ ನುಗ್ಗಿದರು. ಹೆಕ್ಟರಿಗೆ ಅವನ ತಮ್ಮಂದಿರಾದ ಪ್ಯಾರಿಸ್, ಹೆಲೆನಸ್, ಡೆಯಿಫೋಬಸ್ ಎಂಬವರೂ ಅವನ ಸ್ನೇಹಿತನಾದ ಪಾಲಿಡೇಮಸ್ಸನೂ ಈಸಿಯಾಸನೂ, ಮತ್ತೆ ಕೆಲವರೂ ಈ ಸಮಯದಲ್ಲಿ ಸಹಾಯಮಾಡುತ್ತಿದ್ದರು. ಟ್ರೋಜನರ ಮಿತ್ರಸೈನ್ಯವನ್ನು ಸಾರ್ಪೀಡನ್ ಎಂಬಾತನೂ ಅವನಮಿತ್ರನಾದ ಗ್ಲಾಕಸ್ಸನೂ ನಡೆಸಿಕೊಂಡು ಬರುತ್ತಿದ್ದರು. ಇವರೆಲ್ಲರೂ ಒಟ್ಟಾಗಿ ಶತ್ರುಗಳಮೇಲೆ ನುಗ್ಗಿದರು.

೧೦೬. ಟ್ರೋಜನ್‌ವೀರರಲ್ಲಿ ಅನೇಕರು ಹೆದರದೆ, ಕಂದಕವನ್ನು ದಾಟಿ ಗ್ರೀಕರು ಹಾಕಿಕೊಂಡಿದ್ದ ಕೋಟೆಯ ಗೋಡೆಯನ್ನು ಮುತ್ತಿದರು. ಗೋಡೆಯ ಮೇಲೆ ಕಟ್ಟಿದ್ದ ಬುರುಜುಗಳಿಂದ ಗ್ರೀಕ್ ಯೋಧರುಗಳು ಈಟಿಗಳನ್ನೂ ಬಾಣಗಳನ್ನೂ ಕಲ್ಲುಗಳನ್ನೂ ಶತ್ರುಗಳಮೇಲೆ ಪ್ರಯೋಗಿಸುತ್ತಿದ್ದರು. ಈ ಸಮಯದಲ್ಲಿ ಟ್ರೋಜನ್‌ವೀರರಲ್ಲಿ ಒಬ್ಬನಾದ ಏಸಿಯಸ್ಸನು ಹಠದಿಂದ ರಥದಲ್ಲಿಯೇ ಕುಳಿತು ಬೇಗನೆ ಕಂದಕವನ್ನು ದಾಟಿ ಕೋಟೆಯ ಬಾಗಿಲುಗಳ ಬಳಿಗೆ ಬಂದು ಕೋಟೆಯೊಳಕ್ಕೆ ನುಗ್ಗಬೇಕೆಂದು ಯತ್ನಿಸಿದನು. ಆದರೆ ಏಸಿಯಸ್ಸಿನ ಯತ್ನವೇನೂ ಸಾಗದೆ ಅವನು ಐಡೊಮಿನಿಯಸ್ಸಿನಿಂದ ಹತನಾದನು. ಈ ಸಮಯದಲ್ಲಿ ಟ್ರೋಜನರಿಗೆ ಒಂದು ಅಪಶಕುನವುಂಟಾಯಿತು. ಟ್ರೋಜನರ ಎಡಗಡೆಗೆ ಆಕಾಶದಲ್ಲಿ ಒಂದು ಹಾವನ್ನು ಕಚ್ಚಿಕೊಂಡಿದ್ದ ಹದ್ದೊಂದು ಹಾವಿನ ಕಡಿತಕ್ಕೆ ಸಿಕ್ಕಿ ಅದನ್ನು ಅವರ ದಳದ ಮಧ್ಯದಲ್ಲಿ ಬೀಳಿಸಿಬಿಟ್ಟು, ಅರಚಿಕೊಳ್ಳುತ್ತಾ ಹಾರಿಹೋಯಿತು. ಆ ಅಪಶಕುನವನ್ನು ಪಾಲಿಡೇಮಸ್ಸನು ಕಂಡು ಇನ್ನು ಮುಂದಕ್ಕೆ ನುಗ್ಗುವುದು ಒಳ್ಳೆಯದಲ್ಲವೆಂದು ಹೆಕ್ಟರಿಗೆ ಸೂಚಿಸಿದನು. ಹಾವನ್ನು ಕೊಲ್ಲಬೇಕೆಂದೂ ಅದನ್ನು ತನ್ನ ಗೂಡಿಗೆ ಹೊತ್ತುಕೊಂಡು ಹೋಗಬೇಕೆಂದೂ ಉದ್ದೇಶಿಸಿದ್ದ ಹದ್ದಿಗೆ ಹೇಗೆ ಆಶಾಭಂಗ

ವಾಯಿತೋ ತಮಗೂ ಗ್ರೀಕರನ್ನು ಜಯಿಸಬೇಕೆಂಬ ಆಶೆಯು ಭಂಗವಾಗುವು ದೆಂಬುದನ್ನು ತಿಳಿಸುವುದಕ್ಕಾಗಿಯೇ, ಜ್ಯೂಪಿಸನು ಆ ಅಪಶಕುನವನ್ನುಂಟು ಮಾಡಿದ್ದನೆಂದು ಅವನು ಹೇಳಿದನು. “ ಹಕ್ಕಿಪಕ್ಷಿಗಳು ಎಡಗಡೆಗಾಗಲೀ, ಬಲಗಡೆಗಾಗಲಿ, ಸೂರ್ಯನ ಕಡೆಗಾಗಲಿ ಕತ್ತಲೆ ಕವಿದುಕೊಳ್ಳುತ್ತಿರುವ ದಿಕ್ಕಿಗಾಗಲಿ ಹಾರಿಹೋದರೆ ಅದನ್ನೆಲ್ಲಾ ನಾನು ಲಕ್ಷಿಸುವುದಿಲ್ಲ. ಸಮಸ್ತ ರಾಜ್ಯದ ಕ್ಷೇಮಕ್ಕಾಗಿ ಯುದ್ಧಮಾಡುವುದೊಂದೇ ಶುಭಶಕುನವಾಗಿರು ವುದು. ಈಗ ನೀನು ಬಾಯಿ ಮುಚ್ಚಿಕೊಂಡು ಸುಮ್ಮನಿರು. ಯುದ್ಧ ದಿಂದ ಹಿಂದಿರುಗಬೇಕೆಂದು ಸೇನೆ ಯತ್ನಿಸಿದರೂ ಸರಿಯೆ, ಮತ್ತೆ ಯಾರ ನ್ನಾದರೂ ಪ್ರೇರಿಸಿದರೂ ಸರಿಯೆ, ಈ ನನ್ನ ಈಟಿಯಿಂದ ನಿನ್ನನ್ನು ಇರಿದು ಬಿಡುವೆನು ” ಎಂದು ವೀರಾವೇಶದಿಂದ ಹೇಳಿ ತನ್ನ ಕಡೆಯವರನ್ನು ಪ್ರೋತ್ಸಾ ಹಿಸುತ್ತಾ ಮುಂದಮುಂದಕ್ಕೆ ನುಗ್ಗಿದನು. ಟ್ರೋಜನರ ಉತ್ಸಾಹವು ಬಹಳ ಹೆಚ್ಚಾಗಿದ್ದುದರಿಂದ ಗ್ರೀಕರು ಅವರ ಇದಿರಿಗೆ ನಿಲ್ಲಲಾರದೆ ಅಲ್ಲಲ್ಲಿ ಹೆದರಿ ಹಿಂದೆಗೆಯುತ್ತಿದ್ದರು. ಆದರೂ ಇಬ್ಬರು ಏಯಾಸರೂ ಕೋಟೆಯ ಗೋಡೆಯಮೇಲೆಲ್ಲಾ ಸಂಚರಿಸಿ ಕೆಲವರನ್ನು ನಯದಿಂದಲೂ ಮತ್ತೆ ಕೆಲವರನ್ನು ಭಯದಿಂದಲೂ ಪ್ರೋತ್ಸಾಹಿಸುತ್ತಾ ಇದ್ದರು.

೧೦೭. ಈನಡುವೆ, ಜ್ಯೂಪಿಸನು ತನ್ನ ಅಂಶದಿಂದ ಹುಟ್ಟಿದ್ದ ಸಾರ್ಪೀ ಡನ್ನಿಗೆ ಅತ್ಯಂತ ಉತ್ಸಾಹವು ಹುಟ್ಟುವಂತೆ ಮಾಡಿದ್ದುದರಿಂದ ಅವನು ಕೋಟೆಯ ಗೋಡೆಯಮೇಲೆ ಹತ್ತಿ ತನ್ನ ಕಡೆಯವರನ್ನು ಬರಹೇಳುತ್ತಾ ಅಥೆನ್ಸಿನಿಂದ ಬಂದಿದ್ದ ಮೆನೆಸ್ಥಿಯಸ್ ಎಂಬವನ ವಶದಲ್ಲಿದ್ದ ಕೆಲವು ಕೊತ್ತಲ ಗಳನ್ನು ವಶಪಡಿಸಿಕೊಂಡನು. ಗ್ಲಾಕಸ್ಸನೂ ಅವನಹಿಂದೆಯೇ ನುಗ್ಗಿ ಅನೇಕ ಗ್ರೀಕ್ ಯೋಧರುಗಳನ್ನು ಕೊಂದನು. ಇಷ್ಟುಹೊತ್ತಿಗೆ ಸರಿಯಾಗಿ ಇಬ್ಬರು ಏಯಾಸರೂ, ಹಿರಿಯ ಏಯಾಸಿನ ತಮ್ಮನೂ ಗ್ರೀಕರ ಪ್ರಸಿದ್ಧಧನ್ವಿಯೂ ಆದ ಟ್ಯೂಸರನೂ ಆ ಪ್ರಾಂತ್ಯಕ್ಕೆ ನುಗ್ಗಿಬಂದರು. ಟ್ಯೂಸರನು ಗ್ಲಾಕಸ್ಸಿನ ಹೆಗಲಿಗೆ ಗುರಿಕಟ್ಟಿ ಒಂದು ಬಾಣವನ್ನು ಪ್ರಯೋಗಿಸಿದುದರಿಂದ ಗ್ಲಾಕಸ್ಸನು ಗ್ರೀಕರಿಗೆ ಕಾಣಿಸಿಕೊಳ್ಳದೆ ಯುದ್ಧಕ್ಷೇತ್ರವನ್ನು ಬಿಟ್ಟು ಹೊರಟುಹೋದನು. ತನ್ನ ಜೊತೆಗಾರನಿಗೆ ಗಾಯವಾದುದನ್ನು ಕಂಡು. ಸಾರ್ಪೀಡನ್ನಿಗೆ ಬಹಳ ವ್ಯಸನವಾಯಿತು. ಆದರೂ ಅವನು ಆ ಚಿಂತೆಗೆ ಒಳಗಾಗದೆ ತನ್ನ ಕಡೆಯವನ

ರನ್ನು ಪ್ರೋತ್ಸಾಹಿಸುತ್ತಾ ಮುಂದಮುಂದಕ್ಕೆ ನುಗ್ಗಿ ಅನೇಕ ಗ್ರೀಕ್ ಯೋಧರನ್ನು ಸಂಹರಿಸಿದನು. ಇಷ್ಟರಲ್ಲಿ ಹೆಕ್ಟರನು ಕೋಟೆಯ ಗೋಡೆಯಿಂದ ಒಳಕ್ಕೆ ದುಮಿಕಿದ್ದುದರಿಂದ ಇನ್ನೂ ಅನೇಕ ಟ್ರೋಜನರು ತಮ್ಮ ಜೀವದ ಹಂಗನ್ನು ತೊರೆದು ಅವನ ಹಿಂದೆಯೇ ನುಗ್ಗಿದರು. ಹೆಕ್ಟರನು ತನ್ನ ಸಮೀಪ ದಲ್ಲಿದ್ದ ದೊಡ್ಡ ಕಲ್ಲೊಂದನ್ನು ಎತ್ತಿಕೊಂಡು ತನ್ನ ಇದಿರಿಗಿದ್ದ ಕೋಟೆಯ ಬಾಗಿಲುಗಳಮೇಲೆ ಬೀರಲಾಗಿ, ಆ ಬಾಗಿಲುಗಳು ಒಡೆದುಹೋಗಿ ಹೆಕ್ಟರನೂ ಅವನಕಡೆಯವರೂ ಮುಂದಕ್ಕೆ ನುಗ್ಗಿಬರಲು ಅವಕಾಶವಾಯಿತು. ಇದನ್ನು ಕಂಡು ಅನೇಕ ಗ್ರೀಕ್ ಯೋಧರು ಹೆದರಿ ಹಿಮ್ಮೆಟ್ಟಿದರು.

---

## XVI

೧೦೮. ಇದುವರೆಗೆ ಟ್ರೋಜನರಿಗೆ ಆಗಿದ್ದ ವಿಜಯದಿಂದ ಜ್ಯೂಸನು ತೃಪ್ತನಾಗಿ ಒಲಿಂಪಸ್ ಪರ್ವತಕ್ಕೆ ಹಿಂದಿರುಗಿದನು. ಈ ಸಮಯದಲ್ಲಿ ಸಮುದ್ರಾಧಿದೇವತೆಯಾದ ಪೊಸೈಡನ್ನನು ಗ್ರೀಕರ ಯೋಗಕ್ಷೇಮವು ಹೇಗಿರುವುದೋ ನೋಡಬೇಕೆಂದು, ಎತ್ತರವಾದ ಸ್ಯಾಮೊಥ್ರೇಸ್ ಎಂಬ ದ್ವೀಪದಮೇಲೆ ಹೋಗಿ ಕುಳಿತುಕೊಂಡು ಬಹಳ ಅನುಕಂಪದಿಂದ ಯುದ್ಧ ಕಾರ್ಯಗಳನ್ನು ನಿರೀಕ್ಷಿಸುತ್ತಿದ್ದನು. ಹೀಗೆ ನೋಡುತ್ತ ಸುಮ್ಮನೆ ಕುಳಿತಿರು ವುದಕ್ಕೆ ಇಚ್ಛಿಸದೆ, ಪೊಸೈಡನ್ನನು ಆ ದ್ವೀಪದಿಂದ ಹೊರಟು ಸಮುದ್ರ ಮಧ್ಯದಲ್ಲಿದ್ದ ಏಗಿ ಎಂಬ ಸ್ಥಳಕ್ಕೆ ಮೂರುದಾಪುಗಳಲ್ಲಿಯೇ ಹೋದನು. ಪೊಸೈಡನ್ನಿನ ಸ್ವರ್ಣಮಯವಾದ ಅರಮನೆಯು ಇದ್ದುದು ಈ ಸ್ಥಳದಲ್ಲಿಯೇ. ಇದರ ಲಾಯದಲ್ಲಿ ಕಟ್ಟಿದ್ದ ಅತಿವೇಗಶಾಲಿಗಳಾಗಿಯೂ, ಕಂಚಿನ ಗೊರಸು ಗಳು ಹೊಂಬಣ್ಣದ ಸಟೆ ಇವುಗಳಿಂದ ಮನೋಹರವಾಗಿಯೂ ಇದ್ದ ಕುದುರೆ ಗಳನ್ನು ಆ ಸಮುದ್ರಾಧಿದೇವನು ತನ್ನ ರಥಕ್ಕೆ ಕಟ್ಟಿ ಅದರಲ್ಲಿ ಕುಳಿತು ಗ್ರೀಕರ ಹಡಗುಗಳಿದ್ದ ಒಳಿಗೆ ಬಂದು ಸಮೀಪದಲ್ಲಿದ್ದ ಸಮುದ್ರಮಧ್ಯದ ಒಂದು ಗುಹೆಯಲ್ಲಿ ತನ್ನ ಕುದುರೆಗಳನ್ನು ಕಟ್ಟಿಹಾಕಿ ಗ್ರೀಕರ ಪಾಳೆಯವನ್ನು ಪ್ರವೇಶಿಸಿದನು.

೧೦೯. ಇಷ್ಟುಹೊತ್ತಿಗೆ ಟ್ರೋಜನರು ಗ್ರೀಕರಮೇಲೆ ಝುಂಝಾ ಮಾರುತದಂತೆ ನುಗ್ಗಿಬರುತ್ತಿದ್ದುದರಿಂದ, ಗ್ರೀಕರು ಅಲ್ಲಲ್ಲಿ ಹೆದರಿ ಹಿಂದೆಗೆಯು

ತ್ತಿದ್ದರು. ಆದಕಾರಣ ಪೊಸೈಡನ್ನನು ಮೊದಲು ಕಾಲ್ಕಾಸಿನ ರೂಪದಲ್ಲಿ
ಇಬ್ಬರು ಏಯಾಸರ ಬಳಿಗೂ ಹೋಗಿ ಕಾಣಿಸಿಕೊಂಡು ಅವರು ತಮ್ಮ ಶಕ್ತಿ
ಸಾಹಸಗಳನ್ನೆಲ್ಲಾ ಪ್ರಯೋಗಿಸಿದರೆ, ಹೆಕ್ಟರಿನ ಸಾಮರ್ಥ್ಯವೇನೂ ನಡೆಯ
ಲಾರದೆಂದು ಹೇಳಿ ಅವರನ್ನು ಪ್ರೋತ್ಸಾಹಿಸಿದನು. ಈ ಮಾತುಗಳನ್ನು
ಕೇಳಿದ ಕೂಡಲೆ ಅತ್ಯಧಿಕವಾಗಿ ಉಂಟಾದ ಹರ್ಷೋತ್ಸಾಹಗಳಿಂದ, ಒಬ್ಬ
ಏಯಾಸನು ಮತ್ತೊಬ್ಬನನ್ನು ಕುರಿತು—"ಈಗತಾನೆ ನಮ್ಮೊಡನೆ ಮಾತನಾಡಿ
ದಾತನು ಕಾಲ್ಕಾಸಿನ ರೂಪದ ಯಾರೋ ಒಬ್ಬ ದೇವತೆಯಾಗಿರಬಹುದು"
ಎಂದು ಸೂಚಿಸಿದನು. ಪೊಸೈಡನ್ನನು ಅಲ್ಲಿ ಬಹಳ ಹೊತ್ತು ನಿಲ್ಲದೆ ಟ್ಯೂಸರನ್ನೇ
ಮೊದಲಾದ ಇತರ ಗ್ರೀಕ್ ವೀರರುಗಳ ಸಮೀಪಕ್ಕೆ ಹೋಗಿ ಅವರುಗಳನ್ನು
ಕುರಿತು—"ಗುಳ್ಳೆಯನರಿಗಳಿಗೂ ತೋಳಗಳಿಗೂ ಇತರ ಕ್ಷುದ್ರಮೃಗಗಳಿಗೂ
ಸುಲಭವಾಗಿ ಆಹಾರವಾಗುವ ಜಿಂಕೆಯ ಹಿಂಡುಗಳಂತೆ ಇರುವ ಈ ಟ್ರೋ
ಜನರು ನಮ್ಮ ಕೋಟೆಯನ್ನು ಹತ್ತಿಬರುವರಲ್ಲಾ! ಈ ನಾಚಿಕೆಗೇಡುಂಟೆ!
ಈಗಲೇ ಬನ್ನಿ, ಇವರಿಗೆ ತಕ್ಕ ಶಿಕ್ಷೆಯನ್ನು ಮಾಡುವ" ಎಂದು ಪ್ರೋತ್ಸಾಹಿ
ಸುತ್ತ ಬಂದನು. ಇದರಿಂದ ಗ್ರೀಕರಿಗೆ ವೀರಾವೇಶಹುಟ್ಟಿತು. ಇದಿರು
ಪಕ್ಕದಲ್ಲಿ ಹೆಕ್ಟರನೂ, ಬೆಟ್ಟದಿಂದ ಉರುಳುತ್ತಿರುವ ದೊಡ್ಡ ಬಂಡೆಯಂತೆ
ಗ್ರೀಕರಮೇಲೆ ರಭಸದಿಂದ ನುಗ್ಗುತ್ತಾ ತನ್ನ ಕಡೆಯವರನ್ನು ಹುರಿದುಂಬಿಸು
ತ್ತಿದ್ದನು.

೧೧೧. ಟ್ಯೂಸರನು ಪ್ರಿಯಾಮಿನ ಮಗಳ ಮಗನಾದ ಇಂಬ್ರಿಯಾಸನ್ನು
ತನ್ನ ಒಂದು ಬಾಣದಿಂದ ಹೊಡೆದು ಕೊಂದನು. ಮೃತನ ಶಸ್ತ್ರಕವಚಾದಿ
ಗಳನ್ನು ವಶಪಡಿಸಿಕೊಳ್ಳುವುದಕ್ಕಾಗಿ ಗ್ರೀಕರಿಗೂ, ಅವುಗಳನ್ನು ಉಳಿಸಿಕೊಳ್ಳ
ಬೇಕೆಂದು ಟ್ರೋಜನರಿಗೂ ಬಹಳಹೊತ್ತು ಕಾದಾಟವಾಯಿತು. ಹೆಕ್ಟರನು
ಆಂಫಿಮೇಕಸ್ ಎಂಬೊಬ್ಬ ಗ್ರೀಕ್ ಯೋಧನನ್ನು ಕೊಂದನು. ಈ ಯೋಧನು
ಪೊಸೈಡನ್ನಿನ ಮೊಮ್ಮಗನಾಗಿದ್ದುದರಿಂದ, ಆ ದೇವನಿಗೆ ಬಹಳ ಕೋಪ
ವುಂಟಾಗಿ, ಗ್ರೀಕ್ ಯೋಧರುಗಳನ್ನು ಮತ್ತಷ್ಟು ರಭಸದಿಂದ ಯುದ್ಧಮಾಡ
ಬೇಕೆಂದು ಪ್ರೋತ್ಸಾಹಿಸಿದನು. ಕ್ರೀಟ್ ದ್ವೀಪದ ಮಹಾವೀರನಾದ
ಐಡೊಮಿನಿಯಸ್ಸಿಗೆ ಪೊಸೈಡನ್ನನು ಈಟೋಲಿಯಪ್ರಾಂತ್ಯಾಧಿಪತಿಯಾದ
ಥೋಸ್ ಎಂಬಾತನ ರೂಪದಿಂದ ಕಾಣಿಸಿಕೊಂಡು ಅವನ ಶಕ್ತಿಸಾಹಸ

ಗಳನ್ನೆಲ್ಲಾ ಶತ್ರುಗಳಮೇಲೆ ತೋರಿಸುವಂತೆ ಪ್ರೇರಿಸಿದನು. ಐಡೊಮಿನಿಯಸ್ಸಿನ ಹಿಂದೆ ಅವನ ಆಶ್ರಿತನಾದ ಮೇರಿಯೋನಸ್ ಎಂಬವನೂ ಅನೇಕ ಇತರ ಯೋಧರೂ ಯುದ್ಧಕ್ಕೆ ನುಗ್ಗಿ ತಮ್ಮ ಇದಿರಾಳುಗಳೊಡನೆ ಅತ್ಯಂತ ಉತ್ಸಾಹದಿಂದ ಕಾದಲಾರಂಭಿಸಿದರು. ಐಡೊಮಿನಿಯಸ್ಸನು ಶತ್ರುಗಳ ರಭಸವು ಹೆಚ್ಚಾಗಿದ್ದ ಕಡೆಗೇ ನುಗ್ಗಿ ಯುದ್ಧಕ್ಕೆ ತೊಡಗಿದನು. ಅದನ್ನು ಕಂಡು ಟ್ರೋಜನರು ಅವನನ್ನು ಬಲವಾಗಿ ಮುತ್ತಿಕೊಂಡರು.

೧೧೧. ಮೊದಲು ಐಡೊಮಿನಿಯಸ್ಸಿಗೂ ಆಥ್ರಿಯೊನಿಯಸ್ಸೆಂಬ ಟ್ರೋಜನ್ ಯೋಧನಿಗೂ ಯುದ್ಧವು ಮೊದಲಾಯಿತು. ಈ ಯೋಧನು ಪ್ರಯಾಮಿನ ಅತ್ಯಂತ ಸುಂದರಿಯಾಗಿದ್ದ ಮಗಳಾದ ಕೆಸಾಂಡ್ರಳನ್ನು ಮದುವೆ ಮಾಡಿಕೊಳ್ಳಬೇಕೆಂದು ಇಚ್ಛಿಸಿದ್ದನು. ಆದುದರಿಂದ ಅವನು ಗ್ರೀಕರನ್ನು ಓಡಿಸಿಬಿಡುವುದಾಗಿಯೂ ಅದಕ್ಕೆ ಪ್ರತಿಫಲವಾಗಿ ಕೆಸಾಂಡ್ರಳನ್ನು ತನಗೆ ಮದುವೆಮಾಡಿಕೊಡಬೇಕೆಂಬುದಾಗಿಯೂ ಪ್ರಯಾಮಿನೊಡನೆ ನಿಬಂಧನೆ ಮಾಡಿಕೊಂಡೇ ಯುದ್ಧಕ್ಕೆ ಬಂದಿದ್ದನು. ಆದರೆ ಸ್ವಲ್ಪಹೊತ್ತಿನಲ್ಲಿಯೇ ಐಡೊಮಿನಿಯಸ್ಸನು ತನ್ನ ಈಟಿಯಿಂದ ಅವನನ್ನು ತಿವಿದು ಕೊಂದು ಅವನ ಆಸೆಗಳನ್ನು ಮಣ್ಣುಗೂಡಿಸಿಬಿಟ್ಟನು. ಅವನ ಶವವನ್ನು ಐಡೊಮಿನಿಯಸ್ಸನು ಗ್ರೀಕರ ಪಾಳೆಯಕ್ಕೆ ದರದರನೆ ಎಳೆದುಕೊಂಡು ಹೋಗುತ್ತಿದ್ದಾಗ, ಏಸಿಯಸ್ಸೆಂಬ ಮತ್ತೊಬ್ಬ ಟ್ರೋಜನ್‌ವೀರನು ಐಡೊಮಿನಿಯಸ್ಸಿನಮೇಲೆ ಬಿದ್ದು ಅವನಿಗೆ ಗಾಯಗೊಳಿಸಿದನು. ಆದರೆ ಅಷ್ಟರಲ್ಲಿಯೇ ನೆಸ್ಟರಿನ ಮಗನಾದ ಆಂಟಿಲೋಕಸ್ಸನು ಬಂದು ಏಸಿಯಸ್ಸನ್ನು ತನ್ನ ಈಟಿಯಿಂದ ತಿವಿದು ಕೊಂದು ಐಡೊಮಿನಿಯಸ್ಸಿಗೆ ಸಹಾಯಮಾಡಿದನು. ಸ್ವಲ್ಪಹೊತ್ತಿನಲ್ಲಿಯೇ ಐಡೊಮಿನಿಯಸ್ಸನು ಚೇತರಿಸಿಕೊಂಡು, ಪುನಃ ಯುದ್ಧಕ್ಕೆ ನಿಲ್ಲಲು ಪ್ರಯಾಮಿನ ಮಗನಾದ ಡೆಯಿಫೋಬಸ್ಸನು ಒಂದು ಈಟಿಯನ್ನು ಐಡೊಮಿನಿಯಸ್ಸಿನಮೇಲೆ ಎಸೆದನು. ಆದರೆ ಆ ಏಟು ಮತ್ತೊಬ್ಬ ಗ್ರೀಕ್ ವೀರನಿಗೆ ತಗುಲಿ ಅವನನ್ನು ಕೊಂದುಬಿಟ್ಟಿತು. ಅಂತೂ ಹೀಗೆ ಒಬ್ಬ ಶತ್ರು ಹತನಾದುದನ್ನು ಕಂಡು ಡೆಯಿಫೋಬಸ್ಸನು ಬಹಳ ಸಂತೋಷದಿಂದ 'ಪರಲೋಕಕ್ಕೆ ಒಂಟಿಯಾಗಿ ಹೋಗುತ್ತಿದ್ದ ಏಸಿಯಸ್ಸಿನ ಜೊತೆಗೆ ಮತ್ತೊಬ್ಬನನ್ನು ಸಿದ್ಧಪಡಿಸಿದುದಾಯಿತು!' ಎಂದು ಕೂಗಿಕೊಂಡನು.

೧೧೩. ಐಡೊಮಿನಿಯಸ್ಸನು ತನಗೆ ಆಗಿದ್ದ ಗಾಯಕ್ಕೆ ಹೆದರದೆ ಈಸಿಯಸ್ಸಿನ ಭಾವನನ್ನು ಕೊಂದುಬಿಟ್ಟ. ಡೆಯಿಫೋಬಸ್ಸನ್ನು ಕುರಿತು, "ಈಗ ಏನು ಹೇಳುವೆ ?" ಎಂದು ಹಂಗಿಸಿದನು ಈ ಮರ್ಮೋದ್ಘಾಟನವನ್ನು ಈನಿಯಾಸನು ಕೇಳಿ, ರೋಷಗ್ರಸ್ತನಾಗಿ ಐಡೊಮಿನಿಯಸ್ಸಿನೊಡನೆ ಯುದ್ಧಕ್ಕೆ ನಿಂತನು. ಈಗ ಐಡೊಮಿನಿಯಸ್ಸಿಗೂ ಮನಸ್ಸಿನಲ್ಲಿ ಕಳವಳವುಂಟಾಯಿತು. ಬೇಟೆಗಾರರು ತನ್ನನ್ನು ಆವರಿಸಿ ಇಕ್ಕಟ್ಟಾದ ಪ್ರದೇಶಕ್ಕೆ ಅಟ್ಟಿಕೊಂಡುಬಂದು ಕೊಲ್ಲಲು ಯತ್ನಿಸಿದಾಗ ಕಾಡಹಂದಿಯು ತನ್ನ ಮೈಕೂದಲನ್ನು ನಿಲ್ಲಿಸಿಕೊಂಡು ಕಿಡಿಗುಟ್ಟುವಂತಿರುವ ಕೆಂಗಣ್ಣಿನಿಂದ ದುರದುರನೆ ನೋಡುತ್ತ ತನ್ನ ಕೋರೆದಾಡೆಗಳನ್ನು ತೋರಿಸುತ್ತ ಅಷ್ಟುಜನರಮೇಲೂ ಹೇಗೆ ಪ್ರತಿಭಟಿಸುವುದೋ ಹಾಗೆಯೇ ಐಡೊಮಿನಿಯಸ್ಸನು ಈನಿಯಸ್ಸನ್ನೂ ಉಳಿದ ಇದಿರಾಳುಗಳನ್ನೂ ಪ್ರತಿಭಟಿಸುತ್ತ ತನ್ನ ಸಹಾಯಕ್ಕಾಗಿ ಇತರ ಗ್ರೀಕ್‌ಯೋಧರೂ ಬರುವಂತೆ ಗಟ್ಟಿಯಾಗಿ ಗರ್ಜಿಸಿದನು. ಈನಿಯಸ್ಸನೂ. ಡೆಯಿಫೋಬಸ್, ಪ್ಯಾರಿಸ್ ಮೊದಲಾದವರನ್ನು ತನ್ನ ಸಹಾಯಕ್ಕೆ ಕರೆದುಕೊಂಡು ಯುದ್ಧಕ್ಕೆ ಮೊದಲು ಮಾಡಿದನು.

೧೧೪. ಎರಡುಕಡೆಯವರೂ ಬಹಳ ಹಠದಿಂದ ಕಾದಾಡಿದರು. ಕತ್ತಿಗಳೂ ಕಂಚಿನ ಅಲಗಿನ ಈಟಿಗಳೂ ಇದಿರಾಳುಗಳ ಉರಸ್ತ್ರಾಣಗಳಿಗೆ ತಗುಲಿ ಶಬ್ದಮಾಡುತ್ತಿದ್ದುವು. ಆಗಾಗ ಈಟಿಗಳ ತಿವಿತದಿಂದ ಪ್ರತ್ಯರ್ಥಿಗಳಲ್ಲಿ ಒಬ್ಬೊಬ್ಬರು ಸತ್ತುಬೀಳುತ್ತಿದ್ದರು ಐಡೊಮಿನಿಯಸ್ಸಿನ ಸುತ್ತಲೂ ಅನೇಕ ಟ್ರೋಜನರು ಮುತ್ತಿಕೊಂಡಕಾರಣ ಅವನು ಸ್ವಲ್ಪ ಹಿಮ್ಮೆಟ್ಟಬೇಕಾಯಿತು. ಹೀಗೆ ಹಿಂದಕ್ಕೆ ಬರುತ್ತಿದ್ದಾಗ ಅವನಮೇಲೆ ಡೆಯಿಫೋಬಸ್ಸನು ಮತ್ತೊಮ್ಮೆ ತನ್ನ ಈಟಿಯನ್ನು ಪ್ರಯೋಗಿಸಿದನು. ಆಗಲೂ ಗುರಿತಪ್ಪಿ ಅದು ಮತ್ತೊಬ್ಬ ಗ್ರೀಕ್ ವೀರನನ್ನು ಕೊಂದುಬಿಟ್ಟಿತು. ತನ್ನ ಯಜಮಾನನಿಗೆ ಉಂಟಾಗಿದ್ದ ಶತ್ರುಬಾಧೆಯನ್ನು ನೋಡಿ ಮೆರಿಯೋನಸ್ಸನು ಐಡೊಮಿನಿಯಸ್ಸಿನ ಸಹಾಯಕ್ಕಾಗಿ ಬಂದು, ಡೆಯಿಫೋಬಸ್ಸಿನ ತೋಳಿನಮೇಲೆ ಗಾಯಮಾಡಿದನು. ಇದನ್ನು ಕಂಡು ಡೆಯಿಫೋಬಸ್ಸಿನ ತಮ್ಮನೊಬ್ಬನು ಯುದ್ಧರಂಗಕ್ಕೆ ಬಂದು ಬಲಾತ್ಕಾರದಿಂದ ತನ್ನ ಅಣ್ಣನನ್ನು ಟ್ರಾಯ್‌ಪಟ್ಟಣಕ್ಕೆ ರಥದಲ್ಲಿ ತೆಗೆದುಕೊಂಡು ಹೋದನು.

೧೧೪. ಇಷ್ಟಾದರೂ ಯುದ್ಧವು ಸ್ವಲ್ಪವೂ ನಿಲ್ಲಲಿಲ್ಲ. ಈನಿಯಾಸನು ಗ್ರೀಕ್ ಯೋಧರುಗಳಮೇಲೆ ರಭಸದಿಂದ ಕಾದಾಡುತ್ತ, ಅನೇಕರನ್ನು ಕೊಂದುಬಿಟ್ಟನು. ಆಂಟಿಲೋಕಸ್ಸನು ಥೂನ್ ಎಂಬವನನ್ನು ಬೆನ್ನಮೇಲೆ ತಿವಿದು ಕೆಡಹಿದನು. ಪೋಸೈಡನ್ನನು ಆಂಟಿಲೋಕಸ್ಸಿನ ಸುತ್ತಲೂ ಕಾವಲಾಗಿದ್ದ ಕಾರಣ ಆತನನ್ನು ಮುತ್ತಿಕೊಂಡಿದ್ದ ಶತ್ರುಗಳಿಂದ ಆಂಟಿಲೋಕಸ್ಸಿಗೆ ಬಾಧೆಯೇನೂ ಆಗಲಿಲ್ಲ. ಏಸಿಯಸ್ಸಿನ ಮಗನಾದ ಅಡಾಮಸ್ಸನು ತನ್ನ ತಂದೆಗಾಗಿ ಮುಯ್ಯಿತೀರಿಸಿಕೊಳ್ಳಬೇಕೆಂದು ಎಷ್ಟೋ ಸಾಹಸಪಟ್ಟರೂ, ಆಂಟಿಲೋಕಸ್ಸಿನಮೇಲೆ ಅವನ ಕೈಯೂ ನಡೆಯಲಿಲ್ಲ. ಕಡೆಗೆ ಅವನು ಅತ್ಯಂತಸಾಹಸದಿಂದ ಪ್ರಯೋಗಿಸಿದ ಈಟಿಯು ಆಂಟಿಲೋಕಸ್ಸಿನ ಗುರಾಣಿಯಲ್ಲಿ ಸಿಕ್ಕಿಕೊಂಡುಬಿಟ್ಟುದರಿಂದ, ಅದನ್ನು ಕಿತ್ತು ತೆಗೆಯಲಾರದೆ ಹಿಮ್ಮೆಟ್ಟುವುದರಲ್ಲಿದ್ದನು. ಆದರೆ ಈ ಸಮಯದಲ್ಲಿ ಮೆರಿಯೋನಸ್ಸನು ಒಂದು ಅಡಾಮಸ್ಸಿನ ಕೆಳಹೊಟ್ಟೆಗೆ ತಿವಿದುದರಿಂದ ಅಡಾಮಸ್ಸನು ಗತಪ್ರಾಣನಾದನು.

೧೧೫. ಮತ್ತೊಂದುಕಡೆ ಮೆನೆಲಾಸನು ಪ್ರಯಾಮಿನ ಮಗನಾದ ಹೆಲೆನಸಿನಮೇಲೆ ಯುದ್ಧಮಾಡುತ್ತಿದ್ದನು. ಈ ಹೆಲೆನಸನು ಬಿಟ್ಟ ಒಂದು ಬಾಣವು ಮೆನೆಲಾಸಿನ ಕವಚಕ್ಕೆ ತಗುಲಿ, ಅದನ್ನು ಭೇದಿಸಲಾರದೆ ಹಿಂದಕ್ಕೆ ಸಿಡಿದುಹೋಯಿತು. ಆದರೆ ಇದಕ್ಕೆ ಪ್ರತಿಯಾಗಿ ಮೆನೆಲಾಸನು ತನ್ನ ಕಂಚಿನ ಈಟಿಯನ್ನು ರಭಸದಿಂದ ತಿವಿಯಲು ಹೆಲೆನಸ್ಸಿನ ಕೈಗೆ ಬಲವಾಗಿ ಏಟುಬಿದ್ದು ಅವನು ಹಿಂದಕ್ಕೆ ಓಡಿಹೋಗಬೇಕಾಯಿತು. ಟ್ರೋಜನರ ಕಡೆಯ ವೈದ್ಯನೊಬ್ಬನು ಹೆಲೆನಸ್ಸಿನ ಗಾಯಕ್ಕೆ ಕುರಿಯ ತುಪ್ಪಟವನ್ನು ಸುತ್ತಿ ಕಟ್ಟಿ ಚಿಕಿತ್ಸೆ ಮಾಡಿದನು. ಅಷ್ಟೊಂದುಕಾಲ ನಡೆದ ಯುದ್ಧಕ್ಕೂ ಮೆನೆಲಾಸನು ಮುಖ್ಯಕಾರಣವಾಗಿದ್ದನೆಂದು ಭಾವಿಸಿ ಅನೇಕ ಟ್ರೋಜನ್‌ವೀರರು ಅವನನ್ನು ಕೊಂದುಬಿಡಬೇಕೆಂದು ಯತ್ನಿಸಿದರು. ಆದರೆ ಅವನು ಸ್ವಲ್ಪವಾದರೂ ಹೆದರದೆ ಇವರೊಡನೆಲ್ಲಾ ಧೈರ್ಯದಿಂದ ಕಾದಿ ಅನೇಕ ಶತ್ರುಗಳನ್ನು ಹತಮಾಡುತ್ತಿದ್ದನು. ಹಿಂದೆ ತನಗೆ ಅತಿಥಿಸತ್ಕಾರವನ್ನು ಮಾಡಿದ್ದ ಒಬ್ಬಾನೊಬ್ಬ ವಿದೇಶೀಯ ವೀರನನ್ನು ಮೆನೆಲಾಸನು ಕೊಂದುಬಿಟ್ಟುದರಿಂದ, ಪ್ಯಾರಿಸ್ಸಿಗೆ ರೇಗಿಹೋಗಿ ಆತನು ಒಂದು ಬಾಣವನ್ನು ಮೆನೆಲಾಸಿನಮೇಲೆ ಪ್ರಯೋಗಿಸಿದನು. ಆದರೆ ಅದು ಕಾರಿಂತ್‌ಪಟ್ಟಣದಿಂದ ಬಂದಿದ್ದ ಯೂಕಿನರ್ ಎಂಬೊಬ್ಬ ಗ್ರೀಕ್‌ವೀರ

ನಿಗೆ ತಗುಲಿ ಅವನನ್ನು ಕೊಂದುಬಿಟ್ಟಿತು. ಭವಿಷ್ಯಜ್ಞಾನಿಯು ಮಗನಾಗಿದ್ದ ಆ ವೀರನು ಅಸಹ್ಯಕರವಾದ ಒಂದು ವ್ಯಾಧಿಯಿಂದ ತನ್ನ ಉಪ್ಪರಿಗೆಯಲ್ಲಿ ಆಗಲಿ, ಅಥವಾ ಟ್ರಾಯ್ ಬಳಿಯ ಯುದ್ಧದಲ್ಲಿ ವೀರೋಚಿತರೀತಿಯಿಂದ ಆಗಲಿ ತನಗೆ ಮರಣವುಂಟಾಗುವುದೆಂಬುದನ್ನು ತಿಳಿದು ಯುದ್ಧಕ್ಷೇತ್ರದಲ್ಲಾಗುವ ಮರಣವೇ ಮೇಲೆಂದು ನಿರ್ಧರಿಸಿ ಗ್ರೀಕರ ಜೊತೆಯಲ್ಲೇ ಯುದ್ಧಕ್ಕೆ ಹೊರಟುಬಂದಿದ್ದನು.

೧೧೬. ಈ ಕಾಲದಲ್ಲೆಲ್ಲಾ ಹೆಕ್ಟರನು ಮೊದಲು ಕೋಟೆಯೊಳಕ್ಕೆ ದುಮುಕಿದ್ದ ಸ್ಥಳದ ಬಳಿಯಲ್ಲಿಯೇ ನಿಂತು ಕಾದಾಡುತ್ತ ಮುಂದಮುಂದಕ್ಕೆ ನುಗ್ಗುತ್ತಿದ್ದನು. ಅವನ ಇದಿರಿನಲ್ಲಿ ಇಬ್ಬರು ಏಯಾಸರೂ ನಿಂತು ಅವನ ಉರವಣಿಗೆಗೆ ಪ್ರತಿಕ್ರಿಯೆಯನ್ನು ಮಾಡಲು ಯತ್ನಿಸುತ್ತಿದ್ದರು. ಈ ಸಮಯದಲ್ಲಿ ಪಾಲಿಡೇಮಸ್ ಎಂಬೊಬ್ಬ ಟ್ರೋಜನನು ಹೆಕ್ಟರನ ಬಳಿಗೆ ಬಂದು "ಹೆಕ್ಟರ್, ನಿನಗೆ ಇರುವ ಪರಾಕ್ರಮದಿಂದ ನೀನು ಭ್ರಮಿಸಿ ಸರ್ವಜ್ಞನೆಂದು ತಿಳಿದು ಕೊಂಡುಬಿಟ್ಟಿರುವೆ. ಯಾವನೊಬ್ಬ ಮನುಷ್ಯನಿಗೂ ದೇವರು ಸರ್ವವಿಧವಾದ ಸಾಮರ್ಥ್ಯವನ್ನೂ ದಯೆಪಾಲಿಸುವುದಿಲ್ಲ. ಈಗಲಾದರೂ ನೀನು ನನ್ನ ಮಾತನ್ನು ಕೇಳಿ ಮುಂದಕ್ಕೆ ನುಗ್ಗದೆ ಹಿಂದಿರುಗುವುದು ಒಳ್ಳೆಯದು. ಹಡಗುಗಳ ಸಮೀಪದಲ್ಲಿ ಎಂದೂ ಯುದ್ಧಕ್ಕೆ ಹಿಂದೆಗೆಯದ ಆ ಪ್ರಸಿದ್ಧವೀರನು ಇರುವುದನ್ನು ಜ್ಞಾಪಿಸಿಕೊ" ಎಂದು ಹೇಳಲು ಹೆಕ್ಟರನು ಅವನ ಮಾತನ್ನು ಲಕ್ಷ್ಯಮಾಡದೆ ತನ್ನ ಕಡೆಯವರನ್ನು ಪ್ರೋತ್ಸಾಹಿಸುತ್ತ ಶತ್ರುಗಳ ಮೇಲೆ ನುಗ್ಗಿಹೋದನು. ಅವನು ದಾರಿಯಲ್ಲಿ ಸಿಕ್ಕಿದ ಪ್ಯಾರಿಸನ್ನು ಕಂಡು ತನ್ನ ಸಂಗಡಿಗರ ವಿಷಯವನ್ನು ವಿಚಾರಿಸಲಾಗಿ, ಅವರಲ್ಲಿ ಅನೇಕರು ಗ್ರೀಕ್‌ಯೋಧರುಗಳಿಂದ ಹತವಾಗಿಯೋ ಏಟುತಿಂದೋ ಇದ್ದರೆಂದು ತಿಳಿದು ಖಿನ್ನನಾಗಿ ಅಷ್ಟೊಂದು ಅನಿಷ್ಟಕ್ಕೂ ಪ್ಯಾರಿಸ್ಸನೇ ಕಾರಣವೆಂದು ಅವನನ್ನು ದೂಷಿಸಿ ಮುಂದ ಮುಂದಕ್ಕೆ ನುಗ್ಗಿಹೋದನು. ಹಿರಿಯ ಏಯಾಸನು ಹೆಕ್ಟರಿನ ಮುಂದೆ ಕಾಣಿಸಿಕೊಂಡು "ಅಯ್ಯಾ ಹೆಕ್ಟರ್, ಹಿಂದೆ ನಮ್ಮ ಮೇಲೆ ಜ್ಯೂಸಿನ ದಯೆಯು ಇಲ್ಲದಿದ್ದುದರಿಂದ ನಾವು ಪರಾಜಿತರಾಗಿದ್ದೆವು; ಇನ್ನಾದರೂ ನಿಮ್ಮ ಪಟ್ಟಣವು ನಮ್ಮ ಕೈಗೆ ಬೀಳದಿರುವುದೇ? ಇನ್ನು ಸ್ವಲ್ಪ ಹೊತ್ತಿನಲ್ಲಿಯೇ ನೀನು 'ಅಯ್ಯೋ! ನನ್ನ ಕುದುರೆಗಳಿಗೆ ಗಿಡುಗಗಳ ವೇಗವಾದರೂ ಇದ್ದಿದ್ದರೆ

ಚೆನ್ನಾಗಿದ್ದಿತಲ್ಲಾ !' ಎಂದು ಹೇಳಿಕೊಳ್ಳುವೆ" ಎಂದು ಹಂಗಿಸುತ್ತಿರುವಾಗ ಜ್ಯೂಸನು ಗ್ರೀಕರ ಪಾಳೆಯದ ಬಲಗಡೆಗೆ ಒಂದು ಹದ್ದು ಹಾರಿಹೋಗುವಂತೆ ಶುಭಶಕುನವನ್ನು ಅನುಗ್ರಹಿಸಿದನು. ಆದರೂ ಹೆಕ್ಟರನು ಏಯಾಸನ್ನು ಕುರಿತು, "ಏಯಾಸ್, ನೀನು ನನ್ನ ಈ ಉದ್ದವಾದ ಈಟಿಯನ್ನು ಕಂಡು ಓಡಿಹೋಗದೆ ನನ್ನ ಇದಿರಿನಲ್ಲಿ ನಿಂತು ಕಾದಾಡಿದರೆ ಸ್ವಲ್ಪ ಹೊತ್ತಿನಲ್ಲಿಯೇ ಹಕ್ಕಿನಾಯಿಗಳಿಗೆ ನೀನು ತುತ್ತಾಗುವುದು ನಿಜ" ಎಂದು ಹೇಳುತ್ತಾ ಏಯಾಸಿನ ಮೇಲೆ ನುಗ್ಗಿಹೋದನು. ಈ ವೀರರುಗಳ ಉರವಣೆಯನ್ನು ಕಂಡು ಉಭಯ ಪಕ್ಷಗಳ ಯೋಧರೂ, ದೇವನಿವಾಸಸ್ಥಾನವಾದ ಒಲಿಂಪಸ್ ಪರ್ವತದ ವರೆಗೂ ಕೇಳಿಸುವಂತೆ ಗಟ್ಟಿಯಾಗಿ ಸಿಂಹಗರ್ಜನೆಯನ್ನು ಮಾಡಿದರು.

## XVII

೧೧೭. ಮೆಕಾವನ್ನಿನ ಬಳಿಯಲ್ಲಿದ್ದ ನೆಸ್ಟಾರನು ಅದ್ಭುತವಾದ ಆ ಸಿಂಹಗರ್ಜನೆಯನ್ನು ಕೇಳಿ, ಆ ಅರ್ಭಟಕ್ಕೆ ಕಾರಣವೇನೆಂಬುದನ್ನು ತಿಳಿದುಕೊಂಡುಬರುವುದಾಗಿ ಗಾಯಗಂಡಿದ್ದ ಮೆಕಾವನ್ನಿಗೆ ತಿಳಿಸಿ ಹರಿತವಾದ ಅಲಗಿದ್ದ ಒಂದು ಈಟಿಯನ್ನೂ ಒಂದು ಗುರಾಣಿಯನ್ನೂ ತೆಗೆದುಕೊಂಡು ಗುಡಿಸಿಲಿನ ಹೊರಕ್ಕೆ ಬಂದು ನೋಡಲಾಗಿ, ತಮ್ಮ ಗೋಡೆಯನ್ನೂ ದಾಟಿ ಬಂದಿದ್ದ ಟ್ರೋಜನರ ಹೊಡೆತಕ್ಕೆ ಹೆದರಿ ಓಡಿ ಬರುತ್ತಿದ್ದ ಗ್ರೀಕರ ತಂಡಗಳು ಗೋಚರವಾದುವು. ಈ ಅನಾಹುತವನ್ನು ಕಂಡು ನೆಸ್ಟಾರನು ಸ್ವಲ್ಪ ಹೊತ್ತಿನತನಕ ದಿಗ್ಭ್ರಮೆಪಟ್ಟು ಇತಿಕರ್ತವ್ಯ ವಿಮೂಢನಾದನು. ಆ ಸಮಯಕ್ಕೆ ಸರಿಯಾಗಿ ಅಗಮೆಮ್ನಾನ್, ಒಡಿಸಿಯಸ್ ಡೈಯೊಮಿಡೀಸ್ ಮುಂತಾದ ಗ್ರೀಕ್ ಪ್ರಮುಖರು ನೆಸ್ಟಾರನು ಇದ್ದ ಬಳಿಗೆ ಬಂದರು. ಅವನನ್ನು ಕಂಡಕೂಡಲೆ ಅಗಮೆಮ್ನಾನನು,— "ನೆಸ್ಟಾರ್, ನಮ್ಮ ಶತ್ರುವಾದ ಹೆಕ್ಟರನು ಟ್ರೋಜನರ ಸಭೆಯಲ್ಲಿ 'ಗ್ರೀಕರ ಹಡಗುಗಳಿಗೆ ಬೆಂಕಿಹಾಕಿ ಬಿಡುವವರೆಗೂ ಹಿಂದಿರುಗುವುದಿಲ್ಲ' ಎಂದು ಪ್ರತಿಜ್ಞೆ ಮಾಡಿರುವನಂತೆ. ಏಕಿಲೀಸನಂತೆಯೇ ಉಳಿದ ಗ್ರೀಕ್ ಯೋಧರಿಗೂ ನನ್ನ ಮೇಲೆ ಕೋಪವಿರುವುದೆಂದು ಕಾಣುವುದು. ಆದುದರಿಂದಲೇ ಈಗ ಅವರು ಮನಃಪೂರ್ವಕವಾಗಿ ಶತ್ರುಗಳೊಡನೆ ಕಾದಾಡುತ್ತಿಲ್ಲ. ಹೀಗಿರುವಾಗ

ಹೆಕ್ಟರಿನ ಪ್ರತಿಜ್ಞೆಯು ನಡೆಯದೆ ಇರುವುದೆ? ಸೋತು ಸರ್ವನಾಶವಾಗುವುದಕ್ಕಿಂತ ಓಡಿಹೋಗುವುದು ಒಳ್ಳೆಯದಲ್ಲವೆ?" ಎಂದು ಶೋಕದಿಂದ ಪ್ರಶ್ನಿಸಿದನು.

೧೧೮. ಆಗಮೆಮ್ನಾನಿನ ಈ ಮಾತುಗಳು ಒಡಿಸಿಯಸ್ಸಿನ ಕಿವಿಗೆ ಬಿದ್ದಕೂಡಲೆ ಅವನು—"ಅಗಮೆಮ್ನಾನ್, ನೀನು ನಮ್ಮಂತಹವರ ಸೈನ್ಯಕ್ಕೆ ಅಧಿಪತಿಯಾದುದು ಉಚಿತವಲ್ಲ. ಇಷ್ಟು ದಿನವೂ ನಾವು ಇಷ್ಟೊಂದು ಕಷ್ಟಪಟ್ಟುದೂ ಏಕೆ? ಇಂತಹ ಶೂರರ ಸೈನ್ಯಕ್ಕೆ ನೀನು ಪ್ರಮುಖನಾಗಿದ್ದರೂ, ನಿನ್ನ ಬಾಯಿಂದ ಹೀಗೆ ಮಾತು ಹೊರಡಬಹುದೆ? ಇದೇ ಮಾತನ್ನು ಮತ್ತೆ ಯಾವ ಗ್ರೀಕ್‌ಯೋಧರಾದರೂ ಕೇಳಿದರೆ ನಾಚಿಕೆಗೇಡಾದೀತು! ಅವರಿಗೆ ಈ ಸೂಚನೆಯು ತಿಳಿದರೆ ಅವರ ಯುದ್ಧಾಸಕ್ತಿಯೆಲ್ಲಾ ನಾಶವಾಗಿ ಹೋದೀತು! ಆದುದರಿಂದ ಮೌನವಾಗಿರು" ಎಂದು ಕಠಿನವಾಗಿ ಹೇಳಿದನು. ಈ ಮಾತನ್ನು ಕೇಳಿ ಅಗಮೆಮ್ನಾನನು ಕೋಪಿಸಿಕೊಳ್ಳದೆ, "ಮತ್ತೆ ಯಾರಾದರೂ ಏನಾದರೂ ಹೇಳಬೇಕಾಗಿದ್ದರೆ ಹೇಳಬಹುದು" ಎಂದು ತಿಳಿಸಿದನು. ಡೈಯೊಮಿಡೀಸನು ಎದ್ದುನಿಂತು "ಅಗಮೆಮ್ನಾನ್, ನಮ್ಮ ವಂಶವು ಪ್ರಸಿದ್ಧವಾದುದೆಂದೂ, ನಮ್ಮ ತಂದೆಯಾದ ಟೈಡಿಯಸ್ಸಿಗೆ ಬೇಕಾದಷ್ಟು ಹೊಲಗದ್ದೆಗಳೂ, ತೋಟತುಡಿಕೆಗಳೂ ಕುರಿಗಳ ಮಂದೆಗಳೂ ಇದ್ದುವೆಂದೂ ಅವನು ಬಹಳ ಶೂರನಾಗಿದ್ದನೆಂದೂ ನೀನು ಕೇಳಿಯೇ ಇರುವೆ. ಆದುದರಿಂದ ಇವನೊಬ್ಬ ಅಜ್ಞಾತಕುಲಸಂಭವನೆಂದು ಭಾವಿಸಿ ನನ್ನ ಮಾತನ್ನು ಕಳೆದುಹಾಕಬೇಡ. ನಮಗೆಲ್ಲರಿಗೂ ಗಾಯಗಳಾಗಿದ್ದರೂಕೂಡ ಲಕ್ಷ್ಯಮಾಡದೆ ಈಗಲೇ ನಾವು ಬಲವಾಗಿ ಯುದ್ಧವು ನಡೆಯುತ್ತಿರುವಲ್ಲಿಗೆ ಹೋಗಿ ನಮ್ಮ ಕಡೆಯವರಿಗೆ ಪ್ರೋತ್ಸಾಹಿಸುವ" ಎಂದು ಹೇಳಿದನು. ಅಲ್ಲಿದ್ದ ಗ್ರೀಕ್ ಪ್ರಮುಖರಿಗೆ ಈ ಸೂಚನೆಯು ಸಮ್ಮತವಾದುದರಿಂದ ಅವರೆಲ್ಲರೂ ಗ್ರೀಕ್ ಯೋಧರು ಹೆಣಗುತ್ತಿದ್ದ ಕಡೆಗೆ ಹೋದರು.

೧೧೯. ನೆಸ್ಟಾರ್, ಅಗಮೆಮ್ನಾನ್ ಮುಂತಾದ ವೀರರು ಹೀಗೆ ಹೋಗುತ್ತಿದ್ದಾಗ ಪೋಸೈಡನ್ನನು ಒಬ್ಬ ವೃದ್ಧನ ವೇಷದಿಂದ ಅವರಿಗೆ ಕಾಣಿಸಿಕೊಂಡು ಅಗಮೆಮ್ನಾನಿನ ಬಲಗೈಯನ್ನು ಹಿಡಿದುಕೊಂಡು, "ಅಗಮೆಮ್ನಾನ್, ಗ್ರೀಕರಿಗುಂಟಾಗಿರುವ ಈ ಅಪಜಯದಿಂದ ಮಂಕನೂ, ದೈವವಿಮುಖನೂ ಆದ

ಏಕಿಲೀಸಿಗೆ ತೃಪ್ತಿಯುಂಟಾಗಿರಬಹುದು. ನಿನ್ನಮೇಲೆ ದೇವತೆಗಳಿಗೆ ಅಭಿಮಾನ ವಿರುವುದು. ಆದುದರಿಂದ ಟ್ರೋಜನರಿಗೆ ಜಯವಾಗುವುದು ಅಸಂಭವ” ಎಂದು ಹೇಳಿ ಒಂಬತ್ತುಹತ್ತುಸಾವಿರ ಮಂದಿ ಏಕಕಾಲದಲ್ಲಿ ಗರ್ಜಿಸಿದರೆ ಎಷ್ಟು ಶಬ್ದವಾಗುವುದೋ ಅಷ್ಟು ಗಟ್ಟಿಯಾಗಿ ಗರ್ಜಿಸಿ ಬೇಗಬೇಗನೆ ಹೊರಟು ಹೋದನು. ತಮ್ಮ ಹಿಂದುಗಡೆ ಉಂಟಾದ ಈ ಗರ್ಜನೆಯನ್ನು ಕೇಳಿ ಗ್ರೀಕ್ ಯೋಧರ ಉತ್ಸಾಹವು ನೂರ್ಮಡಿಸಿತು. ಹೀಗೆ ತನ್ನ ಆಶ್ರಿತರಿಗೆ ಉಂಟಾದ ಪ್ರೋತ್ಸಾಹವನ್ನು ಕಂಡು ಹೀರಾದೇವಿಯೂ ಬಹಳ ಸಂತೋಷಿಸಿದಳು.

೧೨೦. ಈ ಸಮಯದಲ್ಲಿ ಜ್ಯೂಸನು ಬಹುಶೃಂಗಿಯಾದ ಐಡಾ ಪರ್ವತದ ಎತ್ತರವಾದ ಒಂದು ಕೋಡುಗಲ್ಲಿನಮೇಲೆ ಕುಳಿತು ಟ್ರಾಯ್ ಪಟ್ಟಣದ ಬಳಿಯಲ್ಲಿ ನಡೆಯುತ್ತಿದ್ದ ಯುದ್ಧವನ್ನು ನೋಡುತ್ತಿದ್ದನು. ಎತ್ತಿನ ಕಣ್ಣಿನಂತೆ ಇದ್ದ ನೇತ್ರಗಳುಳ್ಳ ಹೀರಾದೇವಿಯು ಇದನ್ನು ಒಲಿಂಪಸ್ ಪರ್ವತ ದಿಂದಲೇ ಕಂಡು ಆ ಸಮಯದಲ್ಲಿ ತನ್ನ ಪತಿಯನ್ನು ವಶಪಡಿಸಿಕೊಳ್ಳಬೇಕೆಂದು ನಿರ್ಧರಿಸಿದಳು. ಆದುದರಿಂದ ಆಕೆಯು ತನ್ನ ಸ್ನಾನಗೃಹಕ್ಕೆ ಹೋಗಿ ಅಮೃತ ಧಾರೆಗಳಿಂದ ಅಭ್ಯಂಜನಮಾಡಿ, ಕೆಲವು ತುಂತುರುಗಳನ್ನು ಚಿಮುಕಿಸಿದ ಮಾತ್ರಕ್ಕೇ ಭೂಮ್ಯಾಕಾಶಗಳೆಲ್ಲವನ್ನೂ ಸುಗಂಧದಿಂದ ತುಂಬತಕ್ಕ ಪರಿಮಳಮಯವಾದ ಇಪ್ಪೆಯ * ಎಣ್ಣೆಯನ್ನು ಲೇಪಿಸಿಕೊಂಡು, ಕಲಾಭಿಮಾನದೇವತೆಯಾದ ಅಥೆನಿ ದೇವಿಯೇ ಸ್ವಹಸ್ತದಿಂದ ಸಿದ್ಧಪಡಿಸಿದ್ದ ಗಮಗಮಿಸುತ್ತಿದ್ದ ಅನರ್ಘ್ಯ ವಸ್ತುಗಳನ್ನು ಧರಿಸಿಕೊಂಡಳು. ತನ್ನ ಉಡುಪು ಕದಲಿ ಹೋಗದಂತೆ ಚಿನ್ನದ

---

* ಗ್ರೀಸಿನಲ್ಲಿ ಅತಿಪ್ರಖ್ಯಾತವಾದ ಆಥೆನ್ಸ್ ನಗರಿಯು ಯಾರ ಅಧೀನಕ್ಕೆ ಒಳಪಟ್ಟಿತ ಬೇಕೆಂಬ ವಿಷಯದಲ್ಲಿ ಹಿಂದೆ ಒಂದುಸಲ ಅಥೆನಿದೇವಿಗೂ ಪೊಸೈಡನ್ನಿಗೂ ವಿವಾದ ಹುಟ್ಟಿತಂತ ಲೂ, ದೇವತೆಗಳು ಅವರಿಬ್ಬರಲ್ಲಿ ಮನುಷ್ಯರಿಗೆ ಅತಿಹಿತಕರವಾದ ವಸ್ತುವನ್ನು ಯಾರು ನಿರ್ಮಿಸುವರೋ ಅತಂಹವರಿಗೇ ಆಥೆನ್ಸ್ ಸೇರಿರತಕ್ಕುದೆಂದು ತಿಳಿಸಲಾಗಿ ಪೊಸೈಡನ್ನನು ಕುದುರೆಯುನ್ನೂ ಅಥೆನಿಯು ಇಪ್ಪೆಯ ಗಿಡವನ್ನೂ ನಿರ್ಮಿಸಿದರೆಂತಲೂ, ಆದರೆ ದೇವ ಸಭೆಯಲ್ಲಿ ಕುದುರೆಗಿಂತಲೂ ಇಪ್ಪೆಯಗಿಡವೇ ಮನುಷ್ಯನಿಗೆ ಬಹಳ ಉಪಯೋಗಕರವಾದು ದೆಂದು ನಿರ್ಣಯವಾಯಿತೆಂತಲೂ ಒಂದು ಕಥೆಯಿರುವುದು. ಈ ಕಥೆಯುಮೂಲಕ ಇಪ್ಪೆಯ ಗಿಡದಿಂದ ಉತ್ಪನ್ನವಾದ ಎಣ್ಣೆ ಮುಂತಾದುವುಗಳ ವಿಷಯದಲ್ಲಿ ಗ್ರೀಕರಿಗೆ ಎಷ್ಟು ಪ್ರೀತಿಗೌರ ವಗಳು ಇದ್ದುವೆಂಬುದು ತಿಳಿದುಬರುವುದು. ಇಂತಹ ಗೌರವಾಭಿಮಾನಗಳೇ ಭಾರತೀಯರಿಗೂ [illegible]

ಹಿಡಿಕೆ(Clasp)ಗಳಿಂದ ಅಲ್ಲಲ್ಲಿ ಅಲಂಕರಿಸಿಕೊಂಡಳು. ಅನಂತರ ನೂರು ಜಾಲರಿಗಳಿಂದ ಅಲಂಕೃತವಾಗಿದ್ದ ಹಾಟನ್ನೂ, ಥಳಥಳಾಯಮಾನವಾದ ಮೂರು ಲಂಬಕಗಳಿದ್ದ ಅಮೂಲ್ಯವಾದ ಕರ್ಣಾಭರಣಗಳನ್ನೂ ಸೂರ್ಯಪ್ರಭೆಯನ್ನು ಹೊರಹೊಮ್ಮಿಸುತ್ತಿದ್ದ ದಾವಣಿಯೊಂದನ್ನೂ ಧರಿಸಿಕೊಂಡು ಬಳಿಕ ಕಾಲುಗಳಿಗೆ ಎಕ್ಕಡಗಳನ್ನು ಮೆಟ್ಟಿಕೊಂಡು ತನ್ನ ಬಳಿಗೆ ಅನುರಾಗಾಭಿಮಾನ ದೇವತೆಯಾದ ಅಫ್ರೋಡೈಟಿಯನ್ನು ಕರೆದು, ಆಕೆಗೆ ತನ್ನ ಉದ್ದೇಶವನ್ನು ಉಪಾಯವಾಗಿ ತಿಳಿಸಿ ಸಮ್ಮೋಹವನ್ನುಂಟುಮಾಡುವ ಮಾಹಾತ್ಮ್ಯೆಯಿದ್ದ ಆಕೆಯ, ಹಾವಿನಂತಹ ಒಂದು ಆಭರಣವನ್ನು ತೆಗೆದುಕೊಂಡು ಜ್ಯೂಸಿನ ಬಳಿಗೆ ಹೊರಟುಬರುತ್ತಿದ್ದಳು. ದಾರಿಯಲ್ಲಿ ಮೃತ್ಯುದೇವನ ಸಹೋದರನಾದ ನಿದ್ರಾಭಿಮಾನದೇವನನ್ನು ಕಂಡು, ಆತನು ತನ್ನ ಪ್ರಭಾವದಿಂದ ಜ್ಯೂಸಿಗೆ ನಿದ್ರೆಯನ್ನುಂಟಾಗುವಂತೆ ತನಗೆ ಸಹಾಯಮಾಡಬೇಕೆಂದು ಕೇಳಿಕೊಂಡಳು.

೧೨೧. ಆದರೆ ನಿದ್ರಾಭಿಮಾನದೇವನು ಹೀರಾದೇವಿಯನ್ನು ಕುರಿತು "ಹಿಂದೆ ಒಂದುಸಲ, ಟ್ರಾಯ್‌ಪಟ್ಟಣವನ್ನು ಜಯಿಸಿ ಹಿಂದಕ್ಕೆ ಹೋಗುತ್ತಿದ್ದ ಹರ್ಕ್ಯುಲಸ್ಸನ್ನು ನೀನು ಶಿಕ್ಷಿಸಿದ ಸಂದರ್ಭದಲ್ಲಿ, ಆ ವಿಷಯವು ಜ್ಯೂಸಿಗೆ ತಿಳಿಯದಿರಲೆಂದು ಆತನಿಗೆ ನಿದ್ರೆಯನ್ನುಂಟುಮಾಡಬೇಕೆಂದು ನೀನು ನನ್ನನ್ನು ಕೇಳಿಕೊಂಡೆಯಲ್ಲವೆ? ಅದೇಮೇರೆಗೆ ನಾನು ನಡೆದುಕೊಂಡುದನ್ನು ನೋಡಿ ಎಚ್ಚರವಾದಮೇಲೆ ಜ್ಯೂಸನು ದೇವತೆಗಳಮೇಲೆಲ್ಲಾ ಕೋಪಿಸಿಕೊಂಡು, ನನ್ನನ್ನು ಬಲವಾಗಿ ದಂಡಿಸಬೇಕೆಂದು ಹುಡುಕಿಕೊಂಡು ಬಂದಾಗ ರಾತ್ರ್ಯಭಿಮಾನದೇವನ ಸಹಾಯದಿಂದ ತಪ್ಪಿಸಿಕೊಂಡು ಹೊರಟುಹೋದೆನು. ಇಲ್ಲದಿದ್ದರೆ ನನ್ನ ಪಾಡು ಏನಾಗುತ್ತಿದ್ದಿತೊ? ಈಗ ಪುನಃ ನಾನು ನಿನ್ನ ಸಹಾಯಕ್ಕಾಗಿ ಪ್ರಯತ್ನಿಸಿ, ಮತ್ತೊಮ್ಮೆ ಕಷ್ಟಕ್ಕೆ ಗುರಿಯಾಗುವುದು ಹೇಗೆ?" ಎಂದು ಬಹುಚಿಂತೆಯಿಂದ ಹೇಳಿದನು. ಅದಕ್ಕೆ ಹೀರಾದೇವಿಯು—"ನಿದ್ರಾಭಿಮಾನದೇವನೇ, ಇದೇಕೆ ಹೀಗೆ ಹೆದರುತ್ತೀಯೆ? ಸದ್ಯದಲ್ಲಿ ಜ್ಯೂಸನು ಟ್ರೋಜನರಿಗೆ ಸಹಾಯಮಾಡುತ್ತಿದ್ದರೂ, ಕಡೆಗೂ ಅವರಿಗೇ ಜಯವನ್ನುಂಟುಮಾಡಬೇಕೆಂದು ಅವನ ಮನಸ್ಸಿನಲ್ಲಿಲ್ಲ. ನೀನು ಈಗ ನನ್ನ ಮಾತನ್ನು ಕೇಳಿ ನನಗೆ ಸಹಾಯಮಾಡಿದುದೇ ಆದರೆ, ನೀನು ಎಷ್ಟೋ ಕಾಲದಿಂದ ಪ್ರೀತಿಸುತ್ತಿರುವ ಪಸಿಥಿಯಾದೇವಿಯು ನಿನ್ನನ್ನು ವರಿಸುವಂತೆ ಅನುಗ್ರಹಿಸುವೆನು"

ಎಂದು ಹೇಳಿದಳು. ಈ ವಿಷಯದಲ್ಲಿ ಎಷ್ಟೋ ಕಾಲದಿಂದಲೂ ತನ್ನ ಅನೇಕ ಪ್ರಯತ್ನಗಳು ವ್ಯರ್ಥವಾಗಿದುದ್ದರಿಂದ ಹೀರಾದೇವಿಯ ಮಾತಿನಿಂದ ನಿದ್ರಾಭಿಮಾನದೇವನಿಗೆ ನಂಬಿಕೆಯುಂಟಾಗದೆ ಅಧೋಲೋಕದಲ್ಲಿ ಹರಿಯುತ್ತಿರುವ ಸ್ಟಿಕ್ಸ್ (Styx) ಎಂಬ ನದಿಯಮೇಲೂ ಭೂಮಿಯಮೇಲೂ ಆಣೆಯನ್ನಿಟ್ಟುಕೊಂಡು ವಾಗ್ದಾನಮಾಡಬೇಕೆಂದು ಆಕೆಯನ್ನು ಕೇಳಿಕೊಂಡನು. ಹೀರಾದೇವಿಯು ಹಾಗೆಯೇ ಮಾಡಲಾಗಿ, ನಿದ್ರಾಭಿಮಾನದೇವನು ಆಕೆಯ ಹಿಂದೆಯೇ ಹೊರಟು ಐಡಾಪರ್ವತದ ಸಮೀಪದಲ್ಲಿದ್ದ ಬಹಳ ಎತ್ತರವಾದ ಒಂದು ದೇವದಾರುವೃಕ್ಷದಮೇಲೆ, ಒಂದು ಬಗೆಯ ಹಾಲುಹಕ್ಕಿಯ ರೂಪದಿಂದ ಹೋಗಿ ಕುಳಿತುಕೊಂಡನು. ಹೀರಳು ಜ್ಯೂಸಿನ ಸಮೀಪಕ್ಕೆ ಹೋದಕೂಡಲೆ ಆತನಿಗೆ ಮೋಹವುಂಟಾಯಿತು. ಇದೇ ಸಮಯವನ್ನೇ ಕಾದುಕೊಂಡಿದ್ದ ನಿದ್ರಾಭಿಮಾನದೇವನು ತನ್ನ ಮಾಹಾತ್ಮ್ಯೆಯಿಂದ ಜ್ಯೂಸಿಗೆ ಗಾಢನಿದ್ರೆಯನ್ನುಂಟುಮಾಡಿದನು.

೧೨೨. ಈ ನಡುವೆ ಪೋಸೈಡನ್ನನು ಗ್ರೀಕರ ಸೈನ್ಯದಲ್ಲಿ ಕಾಣಿಸಿಕೊಂಡು ಅವರನ್ನು ಬಹಳವಾಗಿ ಪ್ರೋತ್ಸಾಹಿಸುತ್ತಾ ಬಂದನು. ತಮಗೆ ಗಾಯವಾಗಿದ್ದರೂ ಡೈಯೊಮೀಡೀಸ್, ಒಡಿಸಿಯಸ್, ಅಗಮೆಮ್ನಾನ್, ಮೊದಲಾದ ಗ್ರೀಕ್ ಪ್ರಮುಖರು ತಮ್ಮ ಯೋಧರನ್ನು ಪ್ರೋತ್ಸಾಹಿಸುತ್ತಾ ಬಂದುದರಿಂದ ಯುದ್ಧವು ಬಹಳ ಘೋರವಾಗಿ ನಡೆಯಲಾರಂಭವಾಯಿತು. ಸಮುದ್ರವು ಚಂಡಮಾರುತಕ್ಕೆ ಸಿಕ್ಕಿ ಗರ್ಜಿಸುವಂತೆ ಯುದ್ಧಕ್ಷೇತ್ರದಲ್ಲಿಯೂ ಬಹಳ ಬಲವಾದ ಆರ್ಭಟವಾಗುತ್ತಿದ್ದಿತು. ಹೆಕ್ಟರನು ಈ ಕಾಲದಲ್ಲಿ ತನ್ನ ಶಕ್ತಿಸಾಮರ್ಥ್ಯಗಳೆಲ್ಲವನ್ನೂ ಪ್ರಯೋಗಿಸಿ ಯುದ್ಧಮಾಡುತ್ತಿದ್ದನು. ಅವನು ಹಿರಿಯ ಏಯಾಸಿನ ಮೇಲೆ ಎಸೆದ ಈಟಿಯಿಂದ ಏಯಾಸಿಗೆ ಬಾಧೆಯೇನೂ ಆಗಲಿಲ್ಲ. ಬಳಿಕ ಏಯಾಸನು ರೇಗಿ ಒಂದು ದೊಡ್ಡಕಲ್ಲನ್ನು ಎತ್ತಿ ಚೆನ್ನಾಗಿ ಗುರಿಕಟ್ಟಿ ಹೆಕ್ಟರಿನಮೇಲೆ ಎಸೆದುದರಿಂದ ಅದು ಆ ಯೋಧನ ಎದೆಗೆ ತಗುಲಿ ಅವನು ಬುಗುರಿಯಂತೆ ಗಿರಗಿರನೆ ತಿರುಗುತ್ತಾ ಕೆಳಗೆ ಬಿದ್ದುಬಿಟ್ಟನು. ಗ್ರೀಕರು ಇದನ್ನು ಕಂಡು ಪರಮೋತ್ಸಾಹಭರಿತರಾಗಿ ಮುಂದಕ್ಕೆ ನುಗ್ಗಿದರು. ಆದರೆ ಪಾಲಿಡೇಮಸ್', ಈನಿಯಾಸ್, ಸಾರ್ಪೀಡನ್ ಮೊದಲಾದ ಟ್ರೋಜನ್ ವೀರರು ಹೆಕ್ಟರಿನ ರಕ್ಷಣೆಗೆ ಓಡಿಬಂದು ಸಿದ್ಧವಾದುದರಿಂದ ಗ್ರೀಕರ ಆ ಉರವಣೆಯಿಂದ ಅಷ್ಟು

ಪ್ರಯೋಜನವಾಗಲಿಲ್ಲ. ಟ್ರೋಜನ್ ವೀರರಲ್ಲಿ ಕೆಲವರು ಹೆಕ್ಟರನ್ನು ರಥದಲ್ಲಿ ಹಾಕಿಕೊಂಡು ಸಮೀಪದಲ್ಲಿದ್ದ ಸ್ಕಮಾಂಡ್ರಾಸ್ ನದಿಯ ಬಳಿಗೆ ತೆಗೆದುಕೊಂಡುಹೋಗಿ ಅವನ ತಲೆಗೂ ಎದೆಗೂ ನೀರನ್ನು ಹಾಕಿ ತಟ್ಟಲು ಹೆಕ್ಟರಿಗೆ ಚೇತನವುಂಟಾಯಿತು. ಆದರೂ ಸ್ವಲ್ಪಹೊತ್ತಿನಲ್ಲೇ ಅವನು ಕಪ್ಪಗಿದ್ದ ರಕ್ತವನ್ನು ಕಕ್ಕಿ ಪುನಃ ಸ್ಮರಣೆ ತಪ್ಪಿ ಬಿದ್ದುಬಿಟ್ಟನು.

೧೨೩. ಗ್ರೀಕರು ಈ ಸಮಯದಲ್ಲೆಲ್ಲಾ ರಭಸದಿಂದ ಯುದ್ಧ ಮಾಡುತ್ತಲೇ ಇದ್ದರು. ಉಭಯ ಪಕ್ಷದ ವೀರರೂ ಪ್ರತಿಪಕ್ಷದ ಕೆಲಕೆಲವು ಯೋಧರನ್ನು ಕೊಲ್ಲುತ್ತಿದ್ದರು ಕಿರಿಯ ಏಯಾಸನು ಪಾಲಿಡೇಮಸ್ಸನ ಗರ್ವೋಕ್ತಿಗಳನ್ನು ಸಹಿಸಲಾರದೆ ಅವನ ಮೇಲೆ ಒಂದು ಈಟಿಯನ್ನು ಎಸೆದನು. ಅದು ತಗುಲಿದ್ದರೆ ಪಾಲಿಡೇಮಸ್ಸನ ಪಾಡು ಅಲ್ಲಿಗೇ ಮುಗಿಯುತ್ತಿದ್ದಿತು ಆದರೆ ಆ ಈಟಿಯು ಗ್ರೀಕರ ಪಕ್ಷಪಾತಿಯಾಗಿದ್ದ ಆಂಟಿನರ್ ಎಂಬಾತನ ಮಗನೊಬ್ಬನನ್ನು ಕೊಂದುಬಿಟ್ಟಿತು. ಒಟ್ಟಿನಲ್ಲಿ ಟ್ರೋಜನರಿಗೆ ಆ ದಿವಸದ ಯುದ್ಧದಿಂದ ಅಪಜಯವಾಗುವಂತೆ ತೋರುತ್ತಿದ್ದಿತು.

## XVIII

೧೨೪. ಹೇರಾದೇವಿಯ ಮಾಯಕ್ಕೆ ಒಳಗಾಗಿ ಗಾಢನಿದ್ರಾಸಕ್ತನಾಗಿದ್ದ ಜ್ಯೂಸಿಗೆ ಸ್ವಲ್ಪಹೊತ್ತಿನಲ್ಲಿಯೇ ಎಚ್ಚರವಾಯಿತು. ಆಗ ಆತನು ಯುದ್ಧ ರಂಗದಕಡೆಗೆ ತಿರುಗಿನೋಡಲು, ಟ್ರೋಜನರು ದಿಕ್ಕುದಿಕ್ಕಿಗೆ ಓಡುತ್ತಿದ್ದುದನ್ನೂ ಹೆಕ್ಟರನು ಮೂರ್ಛೆ ಬಿದ್ದಿದ್ದುದನ್ನೂ ಕಂಡ ಆತನಿಗೆ ಕೋಪಾಶ್ಚರ್ಯಗಳು ಏಕಕಾಲದಲ್ಲಿ ಉಂಟಾಗಿ ಆತನು ತನ್ನ ಬಳಿಯಲ್ಲಿದ್ದ ಹೇರಾದೇವಿಯನ್ನು ಕುರಿತು, "ಹೇರಾ, ಇದೇನು ನಿನ್ನ ತಂತ್ರ? ನಾನು ಹಿಂದೆ ಒಂದುಸಲ ನಿನ್ನನ್ನು ಕೋದಂಡಕ್ಕೆ ಹಾಕಿ ನಿನ್ನ ಕಾಲುಗಳಿಗೆ ಎರಡು ಅಡಿಗಲ್ಲುಗಳನ್ನು ತೂಗಹಾಕಿದ್ದುದೂ ನಿನ್ನ ಕೈಗಳಿಗೆ ಚಿನ್ನದ ಸಂಕಲೆಗಳನ್ನು ತೊಡಿಸಿದ್ದುದೂ ಆಗಲೇ ಮರೆತುಹೋಯಿತೆ? ನಿನ್ನ ಆ ಅವಸ್ಥೆಯನ್ನು ನೋಡಿ ಅನೇಕ ದೇವತೆಗಳು ವ್ಯಸನಪಡುತ್ತಿದ್ದರೂ, ನನ್ನ ಚಿತ್ತಕ್ಕೆ ಪ್ರತಿಹೇಳದೆ ಅವರೆಲ್ಲರೂ ಸುಮ್ಮನೆ ಇದ್ದುದು ನಿನಗೆ ಜ್ಞಾಪಕವಿಲ್ಲವೋ? ನನ್ನ ಪುತ್ರನಾದ ಹೆರ್‍ಯಾಕ್ಲಸ್ಸಿಗೆ ದಾರಿ ತಪ್ಪಿಸಿ ಎಷ್ಟೆಷ್ಟೋ ಕಷ್ಟಕೊಡಬೇಕೆಂದು ನೀನು ಮಾಡಿದ ಯತ್ನಗಳಿಂದ

ಫಲವೇನಾದರೂ ಆಯಿತೆ? ಅವನು ಕಡೆಗೂ ಆರ್ಗಾಸ್ ಪ್ರಾಂತ್ಯಕ್ಕೆ ಹೋಗಿ ಸೇರುವಂತೆ ನಾನು ಮಾಡಲಿಲ್ಲವೆ? ಇನ್ನಾದರೂ ನಿನ್ನ ಕುತಂತ್ರಗಳನ್ನು ಬಿಡು" ಎಂದು ಬಹಳ ಕೋಪದಿಂದ ಗದರಿಸಿದನು. ಆಗ ಹೀರಾದೇವಿಯು ಜ್ಯೂಸನ್ನು ಕುರಿತು—"ನಿನ್ನಾಣೆಗೂ, ಸ್ಟಿಕ್ಸ್ ನದಿಯ ಆಣೆಗೂ, ಗ್ರೀಕರಕಡೆಗೆ ಸೇರಿ ಯುದ್ಧಮಾಡಬೇಕೆಂದು ನಾನು ಪೊಸೈಡನ್ನಿಗೆ ಪ್ರೇರಿಸಿಲ್ಲ" ಎಂದು ಸಮಾಧಾನಹೇಳಿದಳು. ಅದನ್ನು ಕೇಳಿ ಜ್ಯೂಸನು ಸ್ವಲ್ಪ ಶಾಂತಿಯನ್ನು ತಂದುಕೊಂಡು, "ಹೀರಾ, ನೀನೂ ನಾನೂ ಏಕಮನಸ್ಕರಾಗಿದ್ದರೆ ಪೊಸೈಡನ್ನನು ಏನುತಾನೆ ಮಾಡುವನು? ಈಗ ನೀನು ಒಲಿಂಪಸ್ಸಿಗೆ ಹೋಗಿ ಐರಿಸ್‌ದೇವಿಯನ್ನೂ ಅಪೋಲೋದೇವನನ್ನೂ ನನ್ನ ಬಳಿಗೆ ಕಳುಹಿಸು. ಐರಿಸ್ಸಳ ಮೂಲಕ ಪೊಸೈಡನ್ನಿಗೆ ಯುದ್ಧದ ಗೋಜಿಗೆ ಬರಕೂಡದೆಂದು ಹೇಳಿ ಕಳುಹಿಸುವೆನು. ಅಪೋಲೋವಿನ ಮೂಲಕ ಹೆಕ್ಟರನಿಗೆ ಸ್ಮೃತಿಯನ್ನೂ ಪ್ರೋತ್ಸಾಹವನ್ನೂ ಉಂಟುಮಾಡಿ ಗ್ರೀಕರ ದಳದಲ್ಲಿ ದಿಗ್ಭ್ರಾಂತಿಯುಂಟಾಗುವಂತೆ ಏರ್ಪಡಿಸುವೆನು ಆ ಸಮಯದಲ್ಲಿ ಹೆಕ್ಟರನು ಗ್ರೀಕರ ಹಡಗುಗಳಿಗೆ ಬೆಂಕಿಹೊತ್ತಿಸುವನು. ಅದನ್ನು ನೋಡಿ ಸಹಿಸಲಾರದೆ ಏಕಿಲೀಸನು ತನ್ನ ಪರಮಮಿತ್ರನಾದ ಪೆಟ್ರೋಕ್ಲಸ್ಸನ್ನು ಕಳುಹಿಸಿಕೊಡುವನು. ಅವನು ಯುದ್ಧಮಾಡುತ್ತಾ ನನ್ನ ಅಂಶದಿಂದ ಜನಿಸಿರುವ ಸಾರ್ಪೀಡನ್ನನ್ನು ಕೊಲ್ಲುವನು. ಅದನ್ನು ಸಹಿಸಲಾರದೆ ಹೆಕ್ಟರನು ಪೆಟ್ರೋಕಸ್ಸನ್ನು ಹತಮಾಡುವನು. ಇಲ್ಲಿಗೆ ಟ್ರೋಜನರ ವಿಜಯಪ್ರವಾಹವು ನಿಲ್ಲುವುದು. ಕಟ್ಟಕಡೆಗೆ ಗ್ರೀಕರಿಗೇ ಜಯವಾಗುವುದು ನಿಜವೆಂದು ತಿಳಿ" ಎಂದು ಹೀರಾದೇವಿಯನ್ನು ಸಮಾಧಾನಪಡಿಸಿ ಕಳುಹಿಸಿಕೊಟ್ಟನು.

೧೨೫. ಜ್ಯೂಸನು ಕಡೆಕಡೆಗೆ ಶಾಂತಿಯಿಂದ ವ್ಯಾತನಾಡಿದುದನ್ನು ಕಂಡು ಹೀರಾದೇವಿಯು ಸಂತುಷ್ಟಳಾಗಿ ಮನೋವೇಗದಿಂದ ಹೋಗಿ ಒಲಿಂಪಸ್ ಪರ್ವತದಲ್ಲಿ ನಡೆಯುತ್ತಿದ್ದ ದೇವಸಭೆಯನ್ನು ಪ್ರವೇಶಿಸಿದಳು. ಆಕೆಯನ್ನು ಕಂಡಕೂಡಲೆ ಉಳಿದ ದೇವತೆಗಳು ಎದ್ದುನಿಂತು ಆಕೆಯನ್ನು ಸಂಭಾವಿಸಿದರು. ಆಗ ಥೀಮಿಸ್ ಎಂಬೊಬ್ಬ ದೇವತೆಯು ಹೀರಳ ಬಳಿಗೆಬಂದು, "ಹೀರಾದೇವಿಯೆ, ಇದೇಕೆ ನಿನ್ನ ಮುಖವು ಕಳೆಗುಂದಿರುವುದು?" ಎಂದು ಕೇಳಿದಳು. ಆಗ ಹೀರಳು ಸಭೆಯವರನ್ನು ಕುರಿತು—"ಸದಸ್ಯರೆ, ನನ್ನ ಶಕ್ತಿ

ಸಾಹಸಗಳು ಜ್ಯೂಸಿನ ಮೇಲೆ ಕೆಂದಲಾರವು ; ಯುದ್ಧಾಭಿಮಾನದೇವನಾದ ಈ ಏರೀಸಿನ ಮಗನಾದ ಎಸ್ಕ್ಯಲೇಪಸ್ಸನ್ನು ಜ್ಯೂಸನು ಕ್ಷಣಮಾತ್ರದಲ್ಲಿ ಕೊಲ್ಲಿಸಿಬಿಟ್ಟಿರುವನು" ಎಂದು ಹೇಳಿ ಇನ್ನೂ ಮುಂದಕ್ಕೆ ಮಾತನಾಡುತ್ತಿರುವಷ್ಟರಲ್ಲಿ, ಏರೀಸನು ಸಡಗರದಿಂದ ಎದ್ದುನಿಂತು ತನ್ನ ತೊಡೆಗಳನ್ನು ತಟ್ಟಿಕೊಳ್ಳುತ್ತಾ. ‹ ನನ್ನ ಮಗನನ್ನು ಕೊಲ್ಲಿಸಿದುದಕ್ಕಾಗಿ ನಾನು ಮುಯ್ಯಿ ತೀರಿಸಿಕೊಳ್ಳುವೆನು ; ನನ್ನನ್ನು ಒಬ್ಬರೂ ದೂಷಿಸಬೇಡಿ ; ಜ್ಯೂಸನು ನನ್ನನ್ನು ಈ ದಿನವೇ ನಾಶಮಾಡಿಬಿಟ್ಟರೂ ನನಗೆ ವ್ಯಥೆಯಿಲ್ಲ" ಎಂದು ಹೇಳಿ ರಥಕ್ಕೆ ಕುದುರೆಗಳನ್ನು ಕಟ್ಟಿ ಟ್ರೋಜನ್ ಯುದ್ಧರಂಗಕ್ಕೆ ಹೊರಡುವುದರಲ್ಲಿದ್ದನು. ಆದರೆ ಆಗ ಅಥೆನಿದೇವಿಯು ತನ್ನ ಪೀಠದಿಂದ ಎದ್ದುಬಂದು ಏರೀಸಿನ ಶಸ್ತ್ರಕವಚಾದಿಗಳನ್ನು ತೆಗೆದಿರಿಸಿ ‹‹ ಇದೇನು ! ನಿನಗೆ ಹುಚ್ಚುಹಿಡಿಯಿತೆ ? ನೀನು ಮಾಡುವುದು ನಮ್ಮೆಲ್ಲರಿಗೂ ಪ್ರಾಣಸಂಕಟಕ್ಕೆ ಬರುವುದು. ನೀನು ಜ್ಯೂಸನ್ನು ರೇಗಿಸಿದರೆ ಆತನು ಐಡಾಪರ್ವತದಿಂದ ಈಗಲೇ ಬಂದು ನಮ್ಮೆಲ್ಲರನ್ನು ಗೋಳಾಡಿಸಿ ‹ ಕೆಟ್ಟೆವು ! ಕೆಟ್ಟೆವು !› ಎನ್ನುವಂತೆ ಮಾಡಿಬಿಡುವನು ಎಂದು ಹೇಳಿ ಆತನು ಪುನಃ ತನ್ನ ಪೀಠದಲ್ಲಿ ಕುಳಿತುಕೊಳ್ಳುವಂತೆ ಮಾಡಿದಳು. ಅನಂತರ ಹೀರಾದೇವಿಯು ಐರಿಸ್ ದೇವಿಯನ್ನೂ ಅಪೋಲೋದೇವನನ್ನೂ ತನ್ನ ಸಮೀಪಕ್ಕೆ ಬರಹೇಳಿ ಐಡಾಪರ್ವತದಲ್ಲಿದ್ದ ಜ್ಯೂಸನ್ನು ಅವರು ಕೂಡಲೆ ಕಾಣಿಸಿಕೊಳ್ಳಬೇಕೆಂದು ಹೇಳಿ ಅವರನ್ನು ಕಳುಹಿಸಿಕೊಟ್ಟನು.

೧೨೬. ಐರಿಸ್ಸನ್ನು ಕಂಡಕೂಡಲೆ ಜ್ಯೂಸನು ಆಕೆಯನ್ನು ಪೋಸೈಡನ್ನಿನ ಬಳಿಗೆ ಕಳುಹಿಸಿ ಆತನು ಕೂಡಲೆ ಯುದ್ಧಭೂಮಿಯನ್ನು ಬಿಟ್ಟು ಹೋಗಬೇಕೆಂದೂ, ತಪ್ಪಿದರೆ, ಆವನ ಅಗ್ರಜನೂ ಅಧಿಕಪ್ರಬಲನೂ ಆದ ತನ್ನಿಂದ ಬಹಳವಾಗಿ ಬಾಧೆಯುಂಟಾಗುವುದೆಂದೂ ತಿಳಿಸಿದನು. ಪೋಸೈಡನ್ನನು ಮೊದಲು ಜ್ಯೂಸಿನ ಸಂದೇಶಕ್ಕೆ ಕಿವಿಗೊಡದೆ ‹‹ ನಮ್ಮ ಮೂವರು ಸಹೋದರರುಗಳಲ್ಲಿ ಜ್ಯೂಸಿಗೆ ಸ್ವರ್ಗಲೋಕವೂ, ಪ್ಲೂಟೋವಿಗೆ ಅಧೋಲೋಕವೂ, ನನಗೆ ಜಲಲೋಕವೂ ಸಲ್ಲಬೇಕೆಂದು ಹಿಂದೆಯೇ ವಿಭಾಗವಾಗಿದ್ದರೂ, ನಮ್ಮೆಲ್ಲರಿಗೂ ಸ್ವರ್ಗದಲ್ಲಿಯೂ ಭೂಲೋಕದಲ್ಲಿಯೂ ಬೇಕಾದಕಡೆ ವಿಹರಿಸುವ ಸ್ವಾತಂತ್ರ್ಯವಿರುವುದು. ನಮ್ಮ ಅಣ್ಣನಾದ ಜ್ಯೂಸನು ಇಂತಹ ಗೊಡ್ಡುಬೆದರಿಕೆಗಳಿಂದ ತನ್ನ ಹೆಂಡತಿ ಮಕ್ಕಳುಗಳನ್ನು ಹೆದರಿಸಬಹುದೇ ಹೊರತು ನನ್ನಂತಹವ

ನ ಮುಂದೆ ಅದರಿಂದ ಏನೂ ಫಲವಾಗಲಾರದು" ಎಂದು ಏರಿಸಿನೊಡನೆ ಪ್ರತಿಭಟಿಸುತ್ತಿದ್ದನು. ಆದರೆ ಆಕೆಯು, ಹಾಗೆ ಮಾತನಾಡುವುದು ಯುಕ್ತವಲ್ಲವೆಂದೂ ಒಂದುವೇಳೆ ಆ ಇಬ್ಬರು ಸಹೋದರರಿಗೂ ಯುದ್ಧವು ಮೊದಲಾದ ಪಕ್ಷದಲ್ಲಿ, ಹಿರಿಯರ ಆಜ್ಞೆಯನ್ನು ಉಲ್ಲಂಘಿಸುವವರಿಗೂ ಇತರ ಅಪರಾಧಿಗಳಿಗೂ ಶಿಕ್ಷೆಯನ್ನು ವಿಧಿಸುವ ಮೂವರು ಕರಾಳದೇವಿಯರ (Furies) ಕೋಪಕ್ಕೆ ಗುರಿಯಾಗಬೇಕಾಗುವುದೆಂದು ಎಚ್ಚರಿಸಿದುದರಿಂದ, ಪೊಸೈಡನ್ನನು ಮರು ಮಾತಾಡದೆ ತನ್ನ ರಾಜ್ಯವಾದ ಸಮುದ್ರದೊಳಕ್ಕೆ ಹೊರಟುಹೋದನು.

೧೨೭. ಅತ್ತ ಜ್ಯೂಸನು ಅಪೋಲೋವನ್ನು ತನ್ನ ಬಳಿಗೆ ಕರೆದು ಪ್ರಭಾಯುಕ್ತವಾದ ತನ್ನ ಗುರಾಣಿಯನ್ನು ಅವನ ಕೈಗೆ ಕೊಟ್ಟು ಅದನ್ನು ಗ್ರೀಕರ ಇದಿರಿಗೆ ತೋರಿಸಿ ಅವರಿಗೆ ದಿಗ್ಭ್ರಮೆಯನ್ನುಂಟುಮಾಡಬೇಕೆಂದೂ, ಹೆಕ್ಟರಿಗೆ ಚೈತನ್ಯವನ್ನುಂಟುಮಾಡಿ ಗ್ರೀಕರಮೇಲೆ ಬೀಳುವಂತೆ ಅವನನ್ನು ಉತ್ತೇಜನಗೊಳಿಸಬೇಕೆಂದೂ ಆಜ್ಞಾಪಿಸಿದನು. ಅದೇಮೇರೆಗೆ ಅಪೋಲೋದೇವನು ಟ್ರೋಜನರ ಪಾಳೆಯಕ್ಕೆ ಬಂದು ಜ್ಯೂಸಿನ ಆಜ್ಞೆಯಂತೆ ನಡೆಯಿಸಿದನು. ಅಪೋಲೋವಿನ ಪ್ರಭಾವದಿಂದ ಹೆಕ್ಟರಿಗೆ ಅದ್ಭುತವಾದ ಧೈರ್ಯೋತ್ಸಾಹಗಳು ಉಂಟಾದುವು. ಇದನ್ನು ಕಂಡು ಏಯಾಸನೂ ಐಡೊಮಿನಿಯಸ್ಸನೂ ಮೆರಿಯೋನಸ್ಸನೂ ಟ್ಯೂಸರನೂ ಒಟ್ಟಾಗಿ ಹೆಕ್ಟರನ್ನು ಇದಿರಿಸಿದರು. ಈ ಮಧ್ಯದಲ್ಲಿ ಉಳಿದ ಗ್ರೀಕರು ತಮ್ಮ ತಮ್ಮ ಹಡಗುಗಳ ಬಳಿಗೆ ಹಿಮ್ಮೆಟ್ಟುತ್ತಿದ್ದರು. ಕುರಿಯಮಂದೆಗೆ ನುಗ್ಗಿದ ಕರಡಿಗಳಹಾಗೆ ಅಪೋಲೋದೇವನೂ ಹೆಕ್ಟರನೂ ಗ್ರೀಕರ ಪಾಳೆಯದೊಳಕ್ಕೆ ನುಗ್ಗಿ ಬಹಳ ಹಾವಳಿಮಾಡುತ್ತಿದ್ದರು. ಇತರ ಟ್ರೋಜನರೂ ಅವರ ಹಿಂದೆ ರಭಸದಿಂದ ನುಗ್ಗಿದರು. ಈಟಿಗಳೂ ಕಲ್ಲುಗಳೂ ಉಭಯಪಾರ್ಶ್ವಗಳಲ್ಲಿಯೂ ಸಾಂದ್ರವಾಗಿ ಬೀಳುತ್ತಿದ್ದುವು. ಯುದ್ಧಕ್ಕೆ ಹಿಂದೆಗೆಯುತ್ತಿದ್ದ ಟ್ರೋಜನರಿಗೆ ಇನ್ನು ಉಳಿಗಾಲವಿಲ್ಲವೆಂದು ಹೆಕ್ಟರನು ಬೆದರಿಸುತ್ತಿದ್ದುದರಿಂದ ತಮ್ಮ ಕಡೆಯವರ ಕೈಯಿಂದಲೇ ಅವಮಾನ ಹೊಂದಿ ಸಾಯುವುದಕ್ಕಿಂತ ಶತ್ರುಗಳಮೇಲೆ ಕಾದಿ ಸಾಯುವುದು ಮೇಲೆಂದು ಟ್ರೋಜನರು ಭಾವಿಸಿ ತಮ್ಮ ಶಕ್ತಿ ಸಾಹಸಗಳೆಲ್ಲವನ್ನೂ ಪ್ರಯೋಗಿಸಿ ಯುದ್ಧ ಮಾಡುತ್ತಿದ್ದರು ಒಬ್ಬ ಸಣ್ಣಹುಡುಗನು ಸಮುದ್ರತೀರದಲ್ಲಿ ಆಟಕ್ಕಾಗಿ ಮರಳಿನಿಂದ ಮಾಡಿದ "ಕಟ್ಟೆಯಾಗಲು" [illegible] ಹಸ್ತಪಾದಗಳಿಂದ ಹಾಗೆ

ಬೇಸರವಾದ ಕೂಡಲೆ ತುಳಿದು ಕೆದರಿಬಿಡುವಹಾಗೆ, ಅಪೋಲೋ ದೇವನು ತನ್ನ ಬಾಣವರ್ಷಗಳಿಂದ ಗ್ರೀಕರ ಪಾಳೆಯದಲ್ಲಿ ಬಹಳ ಹಾವಳಿಯನ್ನೂ ದಿಗ್ಭ್ರಾಂತಿಯನ್ನೂ ಉಂಟುಮಾಡಿ ಗ್ರೀಕರನ್ನು ಚೆದರಿಸಿದನು. ಈ ಅಪಘಾತವನ್ನು ಕಂಡು ನೆಸ್ಟಾರನು—“ ಜಗತ್ಪಿತೃವಾದ ಜ್ಯೂಸನೆ, ನಾವು ಈ ದಂಡಯಾತ್ರೆಗಾಗಿ ಪಯಣಹೊರಟಾಗ ನಮ್ಮ ಕೆಲಸವು ಕೈಗೂಡುವುದೆಂದು ಸೂಚಿಸುವುದಕ್ಕಾಗಿ ನಮಗೆ ಶುಭಶಕುನವನ್ನು ಕರುಣಿಸಿದೆಯಲ್ಲವೆ? ಟ್ರೋಜನರ ಈ ಹಾವಳಿಯನ್ನು ತಪ್ಪಿಸಕೂಡದೆ?” ಎಂದು ಪ್ರಾರ್ಥಿಸಿದನು. ಇದನ್ನು ಕೇಳಿ ಮನಮರುಗಿ ಜ್ಯೂಸನು ಒಂದು ಗುಡುಗನ್ನುಂಟುಮಾಡಿ ಗ್ರೀಕರ ವಿಷಯದಲ್ಲಿದ್ದ ತನ್ನ ಪ್ರೀತಿಯನ್ನು ಸೂಚಿಸಿದನು. ಇದು ತಮಗೇ ಉಂಟಾದ ಶುಭಶಕುನವೆಂದು ಭಾವಿಸಿ ಟ್ರೋಜನರು ಮತ್ತಷ್ಟು ರಭಸದಿಂದ ಮುಂದಕ್ಕೆ ನುಗ್ಗಿ ಹಡಗುಗಳ ವರೆಗೂ ಗ್ರೀಕರನ್ನು ಅಟ್ಟಿಕೊಂಡು ಬಂದುಬಿಟ್ಟರು.

೧೨೮. ಗಾಯಹೊಂದಿದ್ದ ಯೂರಿಪೈಲಸ್ಸಿಗೆ ಶುಶ್ರೂಷೆಮಾಡುತ್ತ ಕುಳಿತಿದ್ದ ಪೆಟ್ರೋಕ್ಲಸ್ಸನು ಗ್ರೀಕರಿಗಾದ ಅಪಜಯವನ್ನು ಕಂಡು ಬಹಳ ಖೇದಪಡುತ್ತಾ ಯೂರಿಪೈಲಸ್ಸಿನ ಅನುಮತಿಯನ್ನು ಪಡೆದು ಏಕಿಲೀಸಿನ ಗುಡಾರಕ್ಕೆ ಹೋದನು. ಈ ನಡುವೆ ಏಯಾಸನೂ ಅವನ ಬಲತಮ್ಮನಾದ ಟ್ಯೂಸರನೂ ಟ್ರೋಜನರಮೇಲೆ ತಮ್ಮ ಶಕ್ತಿಸಾಹಸಗಳೆಲ್ಲವನ್ನೂ ಪ್ರಯೋಗಿಸಿ ಕಾದುತ್ತಿದ್ದರು. ಏಯಾಸನು ಗ್ರೀಕರನ್ನು ಕುರಿತು—“ ಗ್ರೀಕ್ ವೀರರೇ, ಹೆಕ್ಟರನಿಗೆ ನಮ್ಮ ಹಡಗುಗಳು ಅಧೀನವಾದರೆ ನಮ್ಮ ಪಾಡೇನಾಗುವುದು ಗೊತ್ತಿದೆಯೆ? ನಾವು ಈ ಶತ್ರುಗಳ ಕೈಗೆ ಸಿಕ್ಕಿಬಿದ್ದು ಪಶುಗಳಂತೆ ನಾಶವಾಗುವುದಕ್ಕೆ ಬದಲು ಯುದ್ಧಭೂಮಿಯಲ್ಲಿ ಶತ್ರುಗಳ ಇದಿರಿದಿರಿಗೆ ಕಾದಿ ಅವರ ಶಸ್ತ್ರಗಳಿಂದ ಹತರಾಗುವುದೇ ಅತ್ಯುತ್ತಮವು. ಆದುದರಿಂದ ಸ್ವಲ್ಪವೂ ಹಿಂದೆಗೆಯದೆ ಯುದ್ಧಮಾಡಿ” ಎಂದು ಪ್ರೋತ್ಸಾಹಿಸುತ್ತಿದ್ದನು. ಟ್ಯೂಸರನು ತನ್ನ ಬಾಣಗಳಿಂದ ಅನೇಕ ಶತ್ರುಗಳನ್ನು ಕೊಂದು ಕೆಡಹುತ್ತಿದ್ದನು. ಅವನು ಹೆಕ್ಟರನಮೇಲೆ ಒಂದು ಬಾಣವನ್ನು ಗುರಿಕಟ್ಟಿ ಪ್ರಯೋಗಿಸಬೇಕೆಂದಿರುವಲ್ಲಿ, ಅದೇ ವೇಳೆಗೆ ಅವನಬಿಲ್ಲಿಗೆ ಹೊಸತಾಗಿ ಕಟ್ಟಿದ್ದ ಹೆದೆಯು ಜ್ಯೂಸಿನ ಇಚ್ಛೆಯಂತೆ ಫಟ್ಟನೆ ಕಿತ್ತುಹೋಯಿತು. ಆದುದರಿಂದ ಅವನು ಬಿಲ್ಲು ಬಾಣಗಳನ್ನು ತ್ಯಜಿಸಿ ಈಟಿಗುರಾಣಿಗಳನ್ನು ಹಿಡಿದು ಯುದ್ಧಮಾಡಲಾರಂಭಿಸಿದನು. ಮೆನೆಲಾಸನೂ

ಬಹುಸಾಹಸದಿಂದ ಯುದ್ಧಮಾಡುತ್ತ ತನ್ನ ಕಡೆಯವರಿಗೆ ಉತ್ಸಾಹವನ್ನುಂಟು ಮಾಡುತ್ತಿದ್ದನು. ಆದರೆ ಜ್ಯೂಸನು ಟ್ರೋಜನರಲ್ಲಿ ಧೈರ್ಯೋತ್ಸಾಹಗಳನ್ನು ಹೆಚ್ಚಿಸುತ್ತಿದ್ದುದರಿಂದಲೂ, ಅವರು ಹಸಿದ ಸಿಂಹಗಳಂತೆ ಗ್ರೀಕರಮೇಲೆ ಬಿದ್ದುದರಿಂದಲೂ ಗ್ರೀಕರ ಶಕ್ತಿಸಾಹಸಗಳು ಉಡುಗಿಹೋಗುವಂತೆ ಆಗಿದ್ದಿತು. ಹೆಕ್ಟರಿನ ಅಂತ್ಯಕಾಲವು ಸಮಿಾಪಿಸುತ್ತಿದ್ದುದನ್ನು ತಿಳಿದೇ ಜ್ಯೂಸನು ಹೆಕ್ಟರಿಗೆ ಸಾಧ್ಯವಾದಷ್ಟು ವಿಜಯಕೀರ್ತಿಗಳುಂಟಾಗುವಂತೆ ಅನುಗ್ರಹಿಸಿದ್ದನು. ಹಿಂದೆ ಹೀರಾದೇವಿಯ ಪ್ರೇರಣೆಯಪ್ರಕಾರ ಹರ್ಕ್ಯಾಕ್ಲಸ್ಸಿಗೆ ಬಹಳ ಬಾಧೆಯನ್ನುಂಟುಮಾಡಿದ್ದ ಯೂರಿಸ್ಥಿಯಸ್ಸಿಗೆ ಆಪ್ತಸೇವಕನ ಮಗನಾದ ಪೆರಿಫೀಟೀಸನು ತನ್ನ ಅಪಾಲಗುಲ್ಫವಾದ ಗುರಾಣಿಯನ್ನು ಎಡವಿ ಬಿದ್ದುಬಿಡಲು, ಹೆಕ್ಟರನು ಅದನ್ನು ಕಂಡು ತಟ್ಟನೆ ಮುಂದಕ್ಕೆ ನುಗ್ಗಿ ತನ್ನ ಈಟಿಯಿಂದ ಅವನನ್ನು ಕೊಂದುಬಿಟ್ಟನು. ನೆಸ್ಟಾರನು ಗ್ರೀಕರಿಗೆ ಎಷ್ಟೆಷ್ಟೇ ಪ್ರೋತ್ಸಾಹಿಸಿದರೂ ಏನೂ ಪ್ರಯೋಜನವಾಗದೆ ಟ್ರೋಜನರ ಕೈಯೇ ಬಲವಾಗುತ್ತ ಬಂದಿತು.

೧೨೯. ಕಡೆಗೆ ಟ್ರೋಜನರು ಗ್ರೀಕರ ಹಡಗುಗಳೊಳಕ್ಕೇ ನುಗ್ಗಲು ಹವಣಿಸಿಕೊಳ್ಳುತ್ತಿದ್ದರು. ಏಯಾಸನು ತನ್ನ ಕಡೆಯವರನ್ನು ಸಹಾಯಕ್ಕೆ ಕರೆಯುತ್ತ, ಒಂದು ಹಡಗಿನಿಂದ ಮತ್ತೊಂದಕ್ಕೆ ನೆಗೆಯುತ್ತ ಇಪ್ಪತ್ತೆರಡು ಮೊಳಗಳಷ್ಟು ಉದ್ದವಾಗಿದ್ದ ಭರ್ಜಿಗಳನ್ನು ಹಿಡಿದುಕೊಂಡು ಟ್ರೋಜನರಲ್ಲಿ ಮುಂದಕ್ಕೆ ನುಗ್ಗಿಬರುತ್ತಿದ್ದವರನ್ನು ತಿವಿದುಕೆಡಹುತ್ತಿದ್ದನು. ಟ್ರಾಯ್ ಸಮುದ್ರತೀರದಲ್ಲಿ ಮೊತ್ತಮೊದಲು ಕಾಲಿಟ್ಟು ಹತನಾಗಿದ್ದ ಪ್ರೊಟಿಸಿಲಾಸನ ಹಡಗಿನ ಬಳಿಗೆ ಹೆಕ್ಟರನು ನುಗ್ಗಿಬಂದು ಅದಕ್ಕೆ ಬೆಂಕಿಯನ್ನು ಹೊತ್ತಿಸಬೇಕೆಂದು ತನ್ನ ಕಡೆಯವರಿಗೆ ಪ್ರೋತ್ಸಾಹಿಸುತ್ತಿದ್ದನು. ಆ ಹಡಗಿನ ಬಳಿಯಲ್ಲಿ ಅನೇಕ ಯೋಧರುಗಳು ಕತ್ತಿ ಈಟಿ ಭರ್ಜಿ ಕೊಡಲಿಗಳಿಂದ ಬಹಳ ಘೋರವಾಗಿ ಕಾದಾಡಿ ಒಬ್ಬರನೊಬ್ಬರು ಕೊಲ್ಲುತ್ತಿದ್ದರು. ಏಯಾಸಿನ ಆ ಅಮಾನುಷ ಪರಾಕ್ರಮದಿಂದ ಹನ್ನೆರಡು ಮಂದಿ ಟ್ರೋಜನ್ ವೀರರು ಹತರಾಗಿಹೋಗಿದ್ದರು. ಆದರೂ ಹೆಕ್ಟರಿನ ಉದ್ದೇಶವೇ ನೆರವೇರುವಂತೆ ತೋರುತ್ತಿದ್ದಿತು.

———

## XIX.

೧೩೦. ಯೂರಿಪೈಲಸ್ಸಿನ ಗುಡಿಸಿಲಿನಿಂದ ಹೊರಟು ಪೆಟ್ರೋಕ್ಲಸ್ಸನು ಏಕಿಲೀಸಿನ ಬಳಿಗೆ ಹೋಗಿ ದುಃಖಾತಿಶಯದಿಂದ ಅವನಮುಂದೆ ಕಣ್ಣೀರನ್ನು ಸುರಿಸುತ್ತ ಸುಮ್ಮನೆ ನಿಂತುಕೊಂಡನು. ಅದನ್ನು ಕಂಡು ಏಕಿಲೀಸನು, "ಪೆಟ್ರೋಕ್ಲಸ್, ಇದೇನು ! ಹೆಣ್ಣುಮಗುವಿನಂತೆ ಹೀಗೆ ಅಳುತ್ತ ನಿಂತಿರುವೆ? ನಮ್ಮ ಊರಿನಿಂದ ಬಂದ ಕೆಟ್ಟಸುದ್ದಿಯನ್ನೇನಾದರೂ ಕೇಳಿದೆಯಾ ? ಅಥವಾ, ಗ್ರೀಕರು ನನ್ನ ವಿಷಯದಲ್ಲಿ ಹಿಂದೆ ತೋರಿಸಿದ ಅಗೌರವದ ಫಲವನ್ನು ಈಗ ಅನುಭವಿಸುತ್ತಿರುವರೆಂದು ದುಃಖಿಸುತ್ತಿರುವೆಯಾ ? ಇದೇಕೆ ? ಏನಾಯಿತು ?" ಎಂದು ಪ್ರಶ್ನಿಸಿದನು. ಅದಕ್ಕೆ ಪೆಟ್ರೋಕ್ಲಸ್ಸನು, "ಏಕಿಲೀಸ್, ನಮ್ಮ ಸೈನ್ಯದಲ್ಲಿ ಡೈಯೊಮಿಡೀಸಿಗೂ, ಒಡಿಸಿಯಸ್ಸಿಗೂ, ಅಗಮೆಮ್ನಾನಿಗೂ, ಯೂರಿಪೈಲಸ್ಸಿಗೂ ಬಲವಾಗಿ ಗಾಯಗಳಾಗಿವೆ. ನೀನು ನಿಷ್ಕರುಣಿಯಾಗಿ ಇಲ್ಲಿ ಸುಮ್ಮನೆ ಇದ್ದುಬಿಟ್ಟಿರುವೆ ! ನಿಮ್ಮ ತಾಯಿಯು ನಿನಗೆ ಮುಂದಾಗಿಯೇ ಕೊಟ್ಟ ಎಚ್ಚರಿಕೆಯಿಂದ, ಹೆದರಿಕೊಂಡು ನೀನು ಹೀಗೆ ಯುದ್ಧಕ್ಕೆ ಹಿಂದೆಗೆಯುತ್ತಿದೀಯೆ ಎಂದು ತೋರುವುದು. ಯುದ್ಧಭೂಮಿಯಲ್ಲಿ ನಿನಗೆ ಮರಣವುಂಟಾದೀತೆಂಬ ಸಂಶಯವಿದ್ದಪಕ್ಷದಲ್ಲಿ ನಿನ್ನ ಅನುಯಾಯಿಗಳಾದ ಮರ್ಮಿಡನರುಗಳನ್ನು ನನ್ನ ಸಹಾಯಕ್ಕೆ ಕೊಟ್ಟು ನನ್ನನ್ನಾದರೂ ಯುದ್ಧಕ್ಕೆ ಕಳುಹಿಸಿಕೊಡು" ಎಂದು ಕೇಳಿಕೊಂಡನು. ಏಕಿಲೀಸನು ಪೆಟ್ರೋಕ್ಲಸ್ಸನ್ನು ಕುರಿತು—"ಮಿತ್ರನೆ, ಮರಣದ ಹೆದರಿಕೆಯು ನನಗೆ ಲೇಶವಾದರೂ ಇರುವುದಿಲ್ಲ. ಗ್ರೀಕರೆಲ್ಲರೂ ಒಪ್ಪಿ ನನ್ನಪಾಲಿಗೆ ಬಿಟ್ಟುಕೊಟ್ಟಿದ್ದ ಬ್ರಿಸೇಯಿಸಳನ್ನು, ಅದೇ ಗ್ರೀಕರ ಸಮಕ್ಷದಲ್ಲಿ ಅಗಮೆಮ್ನಾನನು ಅಪಹರಿಸಿದುದೇ, ನಾನು ಹೀಗೆ ಸುಮ್ಮನಿರುವುದಕ್ಕೆ ಕಾರಣವು. ಹಿಂದೆ ಆದುದಂತೂ ಆಗಿಹೋಯಿತು; ಈಗ ನೀನು ನನ್ನ ಶಸ್ತ್ರಕವಚಗಳನ್ನು ಧರಿಸಿ, ನನ್ನ ಅನುಯಾಯಿಗಳೊಡನೆ ಯುದ್ಧಕ್ಕೆ ಹೊರಡು. ಆದರೆ ಯುದ್ಧಮಾಡುತ್ತಿರುವಾಗ ಉತ್ಸಾಹಾತಿಶಯದಿಂದ ಮೈಮರೆತು ಟ್ರಾಯ್ ನಗರಿಯ ಬಾಗಿಲವರೆಗೂ ನುಗ್ಗಿಬಿಟ್ಟೀಯೆ ! ಜೋಕೆ !" ಎಂದು ಬುದ್ಧಿವಾದವನ್ನು ಹೇಳಿ, ತನ್ನ ಈಟಿಯೊಂದು ಹೊರತಾಗಿ, ಉಳಿದ ಶಸ್ತ್ರಗಳನ್ನೂ ಉಡಿಗೆಗಳನ್ನೂ ತಾನೇ ಅವನಿಗೆ ಅಳವಡಿಸಿದನು. ಬಳಿಕ ಏಕಿಲೀಸನು ತನ್ನ ಪೆಟ್ಟಿಗೆಯಿಂದ ಚಿನ್ನದ ಒಂದು ಬಟ್ಟಲನ್ನು ತೆಗೆದು ಅದನ್ನು ಗಂಧಕದ ಪುಡಿ

ಯಿಂದಲೂ ನಿರ್ಮಲೋದಕದಿಂದಲೂ ಶುದ್ಧಿಮಾಡಿ, ಕೆಂಪಗೆ ಥಳಥಳಿಸುತ್ತಿದ್ದ ದ್ರಾಕ್ಷಾರಸವನ್ನು ಅದಕ್ಕೆ ತುಂಬಿ ಜ್ಯೂಸನ್ನು ಉದ್ದೇಶಿಸಿ—"ಮಹಾಮಹಿಮನಾದ ಜಗತ್ಪಿತೃವೆ, ಹಿಂದೆ ನೀನು ನನ್ನ ಪ್ರಾರ್ಥನೆಯನ್ನು ಲಾಲಿಸಿ ಗ್ರೀಕರಿಗೆ ಸ್ವಲ್ಪಕಾಲ ಅಪಜಯವನ್ನುಂಟುಮಾಡಿ, ನನ್ನ ಮನಸ್ಸಿಗೆ ಶಾಂತಿಯನ್ನು ಕಲ್ಪಿಸಿದೆ; ಈಗಲೂ ಈ ನನ್ನ ಪ್ರಾರ್ಥನೆಯನ್ನು ಲಾಲಿಸಿ ನನ್ನ ಮಿತ್ರನಿಗೆ ಜಯವನ್ನುಂಟುಮಾಡಿ ಅವನನ್ನು ಸುರಕ್ಷಿತವಾಗಿ ನನ್ನ ಒಳಿಗೆ ಪುನಃ ತಂದು ಸೇರಿಸು" ಎಂದು ಪ್ರಾರ್ಥನೆಯನ್ನು ಮಾಡಿ, ಅನಂತರ ಪೆಟ್ರೋಕ್ಲಸ್ಸನ್ನು ಯುದ್ಧಕ್ಕೆ ಕಳುಹಿಸಿಕೊಟ್ಟನು.

೧೩೧. ಈ ಸಮಯದಲ್ಲಿ ಅತಿಮಾನುಷಶೌರ್ಯದಿಂದ ಕಾದುತ್ತಿದ್ದ ಹಿರಿಯ ಏಯಾಸಿಸಮೇಲೆ ಟ್ರೋಜನರು ಬಾಣಗಳ ಮಳೆಯನ್ನು ಸುರಿಸುತ್ತಿದ್ದರು. ಬಹಳ ಹೊತ್ತಿನಿಂದ ಎಡೆಬಿಡದೆ ಗುರಾಣಿಯನ್ನು ಹಿಡಿದಿದ್ದುದರಿಂದ ಅವನ ಎಡಗೈಯು ಸೋತುಹೋಗಿದ್ದಿತು; ಬೆವರು ಬಹಳವಾಗಿ ಸುರಿಯುತ್ತಿದ್ದಿತು; ಉಸಿರಾಡುವುದೂ ಸಹ ಕಷ್ಟವಾಗುತ್ತಿದ್ದಿತು. ಹೀಗಿರುವಾಗ ಹೆಕ್ಟರನು ರಭಸದಿಂದ ಮುಂದೆ ನುಗ್ಗಿ ಏಯಾಸಿನ ಈಟಿಯನ್ನು ಒಂದೇ ಏಟಿನಿಂದ ಕಡಿದು ಹಾಕಿದನು. ಕೂಡಲೆ ಟ್ರೋಜನರು ಅವನು ನಿಂತಿದ್ದ ಹಡಗಿನ ಅನೇಕ ಭಾಗಗಳಲ್ಲಿ ಬೆಂಕಿಯನ್ನು ಹೊತ್ತಿಸಿಬಿಟ್ಟರು. ಇಷ್ಟು ಹೊತ್ತಿಗೆ, ಪೆಟ್ರೋಕ್ಲಸ್ಸನು ದೇವಾಂಶಸಂಭೂತವಾದ ಮೂರು ಕುದುರೆಗಳು ಹೂಡಿದ್ದ ರಥದಲ್ಲಿ ಕುಳಿತು ತನ್ನ ಸಾರಥಿಯಾದ ಆಟೊಮಿಡನ್ನಿನೊಡನೆ ಸಂಭಾಷಿಸುತ್ತ ಯುದ್ಧಭೂಮಿಗೆ ಬಂದನು. ಹಸಿದ ತೋಳಗಳಂತೆ ಯುದ್ಧಾಸಕ್ತಿಯಿಂದ ಹಾತೊರೆಯುತ್ತಿದ್ದ ಮರ್ಮಿಡನರುಗಳೊಡನೆ ಪೆಟ್ರೋಕ್ಲಸ್ಸನು ಬರುತ್ತಿದ್ದುದನ್ನು ಕಂಡು, ಏಕಿಲೀಸನೇ ಯುದ್ಧಕ್ಕೆ ಬಂದುಬಿಟ್ಟನೆಂದು ಟ್ರೋಜನರೆಲ್ಲರೂ ಹೆದರಿ ಹಿಂದೆಗೆಯುತ್ತಿದ್ದರು. ಮರ್ಮಿಡನರುಗಳು ಐದು ತಂಡಗಳಾಗಿ ವಿಭಾಗಿಸಿಕೊಂಡು ಪ್ರತಿಯೊಂದು ಪಂಗಡದವರೂ ಒಬ್ಬೊಬ್ಬ ದಳಪತಿಯ ಆಜ್ಞಾಧೀನರಾಗಿ ಮುಂದಕ್ಕೆ ನುಗ್ಗಿ ಸ್ವಲ್ಪಸ್ವಲ್ಪವಾಗಿ ಹಿಮ್ಮೆಟ್ಟುತ್ತಿದ್ದ ಟ್ರೋಜನರ ಮೇಲೆ ಬಿದ್ದರು. ಗ್ರೀಕಸೇನೆಯ ಮುಂದುಗಡೆಯೇ ಪೆಟ್ರೋಕ್ಲಸ್ಸನೂ ಆಟೊಮಿಡನ್ನನೂ ರಭಸದಿಂದ ನುಗ್ಗಿ ಬರುತ್ತಿದ್ದರು.

೧೩೨. ಪ್ರೋಟಿಸಿಲಾಸಿನ ಹಡಗಿನ ಬಳಿಯಲ್ಲಿ ತುಂಬಿಕೊಂಡಿದ್ದ ಟ್ರೋಜನರ ತಂಡವು ಸ್ವಲ್ಪ ಹೊತ್ತಿನಲ್ಲಿಯೇ ಚೆದರಿಹೋಯಿತು. ಆದುದರಿಂದ ಆ ಹಡಗಿಗೆ ಹೊತ್ತಿಕೊಂಡಿದ್ದ ಬೆಂಕಿಯನ್ನು ಆರಿಸಲು ಬಹಳ ತೊಂದರೆ ಆಗಲಿಲ್ಲ. ಕೂಡಲೆ ಪೆಟ್ರೋಕ್ಲಸ್ಸನೂ ಅವನ ಅನುಯಾಯಿಗಳೂ, ಮೆನೆಲಾಸ್, ಆಂಟಿಲೋಕಸ್ ಮೆರಿಯೋನಸ್ ಐಡೊಮಿನಿಯಸ್ ಮುಂತಾದ ಗ್ರೀಕ್ ಯೋಧಾಗ್ರಣಿಗಳೂ ಟ್ರೋಜನರ ದಳದಲ್ಲಿ ಅನೇಕರನ್ನು ಕೊಲ್ಲುತ್ತ ಬಂದರು. ಏಯಾಸನು ಎಡೆಬಿಡದೆ ತನ್ನ ಶಕ್ತಿಸಾಮರ್ಥ್ಯಗಳೆಲ್ಲವನ್ನೂ ಪ್ರಯೋಗಿಸಿ ಹೆಕ್ಟರನೊಡನೆ ಕಾದುತ್ತಿದ್ದನು. ಕಡೆಗೆ ಗ್ರೀಕರ ಕೈಯೇ ಬಲವಾಗಲು ಅವನೂ ಹಿಮ್ಮೆಟ್ಟಬೇಕಾಯಿತು. ಹೀಗೆ ಹಿಂದಕ್ಕೆ ಓಡುತ್ತಿದ್ದಾಗ ಟ್ರೋಜನರ ರಥಗಳ ದೂಲಿಯ ಮರಗಳು ಮುರಿದು ಹೋಗಿ ರಥದ ಕುದುರೆಗಳು ದಿಕ್ಕು ದಿಕ್ಕಿಗೆ ಓಡುತ್ತಿದ್ದುವು. ರಥಿಕರು ಪಾದಚಾರಿಗಳಾಗಿ ಟ್ರಾಯ್ ಪಟ್ಟಣದ ಕೋಟೆಯ ಕಡೆಗೆ ಓಡುತ್ತಿದ್ದರು. ಗ್ರೀಕರೂ ಇಂತಹ ಒಳ್ಳೆಯ ಸಂದರ್ಭವನ್ನು ಕಳೆದುಕೊಳ್ಳದೆ ಅವರ ಹಿಂದೆಯೇ ನುಗ್ಗಿಬರುತ್ತಾ ತಮ್ಮ ಕೈಗೆ ಸಿಕ್ಕಿದ ಪ್ರತ್ಯರ್ಥಿಗಳನ್ನು ಕೊಲ್ಲುತ್ತಿದ್ದುದರಿಂದ, ದಾರಿಯುದ್ದಕ್ಕೂ ಹೆಣಗಳು ರಾಶಿ ರಾಶಿಯಾಗಿ ಬಿದ್ದಿದ್ದುವು. ಪೆಟ್ರೋಕ್ಲಸ್ಸನು ಶತ್ರುಗಳ ಗುಂಪು ಹೆಚ್ಚಾಗಿದ್ದ ಸ್ಥಳವನ್ನೇ ಹುಡುಕಿಕೊಂಡು ಹೋಗುತ್ತ ಅನೇಕ ಟ್ರೋಜನರನ್ನು ಧ್ವಂಸ ಮಾಡಿದನು. ಕಂದಕವನ್ನು ದಾಟುವಾಗ ಅನೇಕ ಟ್ರೋಜನ್ ವೀರಾಗ್ರಣಿಗಳ ರಥಗಳು ಮುರಿದು ಹೋಗಿ, ಕುದುರೆಗಳು ಸಿಕ್ಕಿದಕಡೆಗೆ ಓಡಿ ಹೋಗಿದ್ದರೂ, ಏಕಿಲೀಸಿನ ರಥಕ್ಕೆ ಕಟ್ಟಿದ್ದ ದಿವ್ಯಾಶ್ವಗಳು ರಥವನ್ನು ಕ್ಷಣಮಾತ್ರದಲ್ಲಿ ಕಂದಕದಿಂದ ಈಚೆಗೆ ತಂದುಬಿಟ್ಟುವು. ಸ್ವಲ್ಪದೂರ ಟ್ರೋಜನರನ್ನು ಬೆನ್ನಟ್ಟಿದ ಬಳಿಕ ಅವರನ್ನು ಮುಂದಕ್ಕೆ ಹೋಗಗೊಡದೆ ಪೆಟ್ರೋಕ್ಲಸ್ಸನು ಅಡ್ಡಗಟ್ಟಿ ಗ್ರೀಕರ ಹಡಗುಗಳ ಕಡೆಗೇ ಹಿಂದಿರುಗುವಂತೆ ಮಾಡಿ ಬಹುಮಂದಿ ಟ್ರೋಜನರನ್ನು ಕೊಂದುಬಿಟ್ಟನು. ಥೆಸ್ಟಾರ್ ಎಂಬೊಬ್ಬ ಟ್ರೋಜನನು ತನ್ನ ರಥದಲ್ಲಿ ಕುಳಿತು ಪೆಟ್ರೋಕ್ಲಸ್ಸನ್ನು ಬಹಳವಾಗಿ ಇದಿರಿಸಲು ಪೆಟ್ರೋಕ್ಲಸನು ಸ್ವಲ್ಪ ಹೊತ್ತಿನಲ್ಲಿಯೇ ಅವನ ಶಕ್ತಿಯನ್ನು ಉಡುಗಿಸಿ ತನ್ನ ಈಟಿಯಿಂದ ಅವನ ಬಲದವಡೆಗೆ ತಿವಿದುಬಿಟ್ಟನು. ಆ ತಿವಿತದಿಂದ ಥೆಸ್ಟಾರಿಗೆ ಸ್ಮರಣೆ ತಪ್ಪಿಹೋಯಿತು ಒಬ್ಬ ಬೆಸ್ತನು ತನ್ನ ಗಾಳದ ಕಂಚಿನ ಕೊಕ್ಕೆಯಿಂದ

ಒಂದು ಸೊಗಸಾದ ಮೀನನ್ನು ಹಿಡಿದು ತನ್ನ ಕಡೆಗೆ ಎಳೆದುಕೊಳ್ಳುವಂತೆ, ಪೆಟ್ರೋಕ್ಲಸ್ಸನು ತನ್ನ ಈಟಿಯಿಂದ ಥೆಸ್ಟಾರನ್ನು ತನ್ನ ಕಡೆಗೆ ಎಳೆದುಕೊಂಡು ಅವನನ್ನು ರಥಥಿಂದ ಕೆಳಕ್ಕೆ ಕೆಡಹಿಬಿಟ್ಟನು. ಕೂಡಲೆ ಥೆಸ್ಟಾರನ ಪ್ರಾಣವು ಹಾರಿಹೋಯಿತು. ಹೀಗೆಯೇ ಇನ್ನೂ ಎಷ್ಟೋ ಮಂದಿ ಟ್ರೋಜನರು ಪೆಟ್ರೋಕ್ಲಸ್ಸಿನ ಕೈಗೆ ಸಿಕ್ಕಿ ಹತರಾಗಿಹೋದರು.

೧೩೩. ಲಿಸಿಯಾ ದೇಶದ ರಾಜಪುತ್ರನಾದ ಸಾರ್ಪೀಡನ್ನನು, ತನ್ನ ಕಡೆಯ ಟ್ರೋಜನರಿಗೆ ಸೋಲಾಗುತ್ತಿದ್ದುದನ್ನು ಕಂಡು ಸಹಿಸಲಾರದೆ ಪೆಟ್ರೋಕ್ಲಸ್ಸಿನ ಇದಿರಿಗೆ ನುಗ್ಗಿಬಂದನು. ಸ್ವಲ್ಪಹೊತ್ತಿನಲ್ಲಿಯೇ ಸಾರ್ಪೀಡನ್ನಿಗೂ ಪೆಟ್ರೋಕ್ಲಸ್ಸಿಗೂ ಬಲವಾದ ಯುದ್ಧವು ಕೈಗಟ್ಟಿತು. ಅವರುಗಳು ಒಬ್ಬರನ್ನೊಬ್ಬರು ಮೂದಲಿಸುತ್ತಾ, ರಣಹದ್ದುಗಳು ಬಲವಾಗಿ ಕಾದಾಡುವಂತೆ ಯುದ್ಧಮಾಡಿದರು. ಈ ಸಮಯದಲ್ಲಿ, ಸಾರ್ಪೀಡನ್ನಿನ ಸಾಕ್ಷಾತ್ಪಿತೃವಾದ ಜ್ಯೂಸನು ಹೀರಾದೇವಿಯನ್ನು ಕುರಿತು, "ಹೀರಾ, ಅಗೋ ಅಲ್ಲಿ ಯುದ್ಧಮಾಡುತ್ತಿರುವ ನನ್ನ ಪ್ರಿಯಪುತ್ರನನ್ನು ನೋಡು. ಅವನ ಅಂತ್ಯಕಾಲವು ಸಮೀಪಿಸಿದೆ ಎಂದು ನನಗೆ ತಿಳಿದಿರುವುದು. ಅವನನ್ನು ಉಳಿಸಬೇಕೆಂದು ನನಗೆ ಒಂದೊಂದುಸಲ ಮನಸ್ಸು ಉಂಟಾಗುತ್ತಿರುವುದು. ಕ್ಷಣಮಾತ್ರದಲ್ಲಿ ನಾನು ಅವನನ್ನು ಯುದ್ಧಭೂಮಿಯಿಂದ ಹೊತ್ತುಕೊಂಡು ಹೋಗಿ ಲಿಸಿಯಾದೇಶದೊಳಕ್ಕೆ ಕರೆದುಕೊಂಡು ಹೋಗಿಬಿಡಬಲ್ಲೆನು. ಏನು ಮಾಡಲಿ!" ಎಂದು ಹೇಳಿದನು. ಅದಕ್ಕೆ ಆಕೆಯು "ನೀನು ಅವನ ವಿಧಿಗೆ ವಿರುದ್ಧವಾಗಿ ಆಚರಿಸುವುದು ಸರಿಯಲ್ಲ. ಟ್ರಾಯ್‌ಪಟ್ಟಣದ ಸುತ್ತಲೂ ಕಾದಾಡುತ್ತಿರುವ ಅನೇಕ ದೇವಾಂಶಸಂಭೂತರ ಮಾತಾಪಿತೃಗಳು ಹೀಗೆಯೇ ತಮ್ಮತಮ್ಮ ಪುತ್ರರುಗಳನ್ನು ಕಾಪಾಡಿಕೊಳ್ಳಬೇಕೆಂದು ಯತ್ನಿಸಿದರೆ, ಆಗ ಏನುಮಾಡುವುದಕ್ಕಾದೀತು? ಸಾರ್ಪೀಡನ್ನಿನಮೇಲೆ ನಿನಗೆ ಬಹಳ ಪ್ರೀತಿಯು ಇದ್ದಲ್ಲಿ, ಅವನ ಶವವು ಲಿಸಿಯಾದೇಶಕ್ಕೆ ಬಂದು ಮುಟ್ಟುವಂತೆಯೂ, ಅಲ್ಲಿ ಅದಕ್ಕೆ ತಕ್ಕ ಸಂಸ್ಕಾರವಾಗುವಂತೆಯೂ ಅನುಗ್ರಹಿಸು" ಎಂದು ಹೀರಳು ತಿಳಿಸಲಾಗಿ ಜ್ಯೂಸನು, ತನ್ನ ಮಗನ ಮರಣಸೂಚನೆಗಾಗಿ ರಕ್ತದ ಹನಿಗಳನ್ನು ವರ್ಷಿಸಿದನು. ಈ ನಡುವೆ ಪೆಟ್ರೋಕ್ಲಸ್ಸನೂ ಸಾರ್ಪೀಡನ್ನನೂ ತಮ್ಮತಮ್ಮ ಆಯುಧಗಳನ್ನು ಹಿಡಿದು ಬಹಳ ಶೌರ್ಯದಿಂದ ಕಾದಾಡುತ್ತಿದ್ದರು. ಸಾರ್ಪೀಡನ್ನನು

ಪ್ರಯೋಗಿಸಿದ ಒಂದು ಈಟಿಯಿಂದ ಪೆಟ್ರೋಕ್ಲಸ್ಸಿನ ರಥಕ್ಕೆ ಕಟ್ಟಿದ್ದ ಒಂದು ಕುದುರೆಯು ಹತವಾಯಿತು. ಅದು ಸತ್ತುಹೋಗುವ ಸಮಯದಲ್ಲಿ ತನ್ನ ಕಾಲುಗಳನ್ನು ಬಹಳವಾಗಿ ಒದರುತ್ತಾ ಹೊರಳಾಡಿದುದರಿಂದ, ಉಳಿದ ಎರಡು ಕುದುರೆಗಳೂ ಬಹಳ ಬೆದರಿದುವು. ಅವುಗಳ ಲಗಾಮುಗಳು ಒಂದರೊಡನೆ ಒಂದು ಗೋಜಿಕೊಂಡು ರಥವನ್ನು ನಡೆಸುವುದೇ ಕಷ್ಟವೆನ್ನುವಂತಾಯಿತು. ಅದನ್ನು ಕಂಡು ಆಟೊಮಿಡನ್ನನು ತಟ್ಟನೆ ರಥದಿಂದ ದುಮಿಕಿ, ಒರೆಯಿಂದ ತನ್ನ ಕತ್ತಿಯನ್ನು ಎಳೆದು ಸತ್ತುಬಿದ್ದಿದ್ದ ಕುದುರೆಗೆ ಕಟ್ಟಿದ್ದ ಚರ್ಮದ ಪಟ್ಟಿಗಳನ್ನು ಕತ್ತರಿಸಿಹಾಕಿದನು. ಇದರಿಂದ, ಸ್ವಲ್ಪ ಹೊತ್ತಿನಲ್ಲಿಯೇ ಉಳಿದ ಎರಡು ಕುದುರೆಗಳ ದಿಗ್ಭ್ರಾಂತಿಯು ಶಮನವಾಗಿ ರಥವನ್ನು ನಡೆಯಿಸುವುದು ಸಾಧ್ಯವಾಯಿತು.

೧೩೪. ಇನ್ನು ಸ್ವಲ್ಪ ಹೊತ್ತಾದ ಬಳಿಕ ಸಾರ್ಪೀಡನ್ನನು ತನ್ನ ಈಟಿಯನ್ನು ಪೆಟ್ರೋಕ್ಲಸ್ಸಿನ ಮೇಲೆ ಎಸೆದನು. ಆದರೆ ಅದರಿಂದ ಅವನಿಗೆ ಬಾಧೆಯೇನೂ ಆಗಲಿಲ್ಲ ಪೆಟ್ರೋಕ್ಲಸ್ಸನೂ ಒಂದು ಈಟಿಯಿಂದ ಸಾರ್ಪಿಡನ್ನನನ್ನು ತಿವಿಯಲು, ಅವನು ಅರಚಿಕೊಳ್ಳುತ್ತಾ ನೆಲಕ್ಕೆ ಬಿದ್ದುಬಿಟ್ಟನು. ಹಾಗೆ ಬೀಳುತ್ತಿರುವಾಗ ತನ್ನ ಪರಮಮಿತ್ರನಾದ ಗ್ಲಾಕಸ್ಸನ್ನು ಸ್ಮರಿಸುತ್ತ, ತನ್ನ ದೇಹವನ್ನು ಗ್ರೀಕರು ವಶಪಡಿಸಿಕೊಳ್ಳದಂತೆ ಅವನು ಕಾಪಾಡಬೇಕೆಂದು ಕೇಳಿಕೊಂಡನು. ಇಷ್ಟಾದ ಸ್ವಲ್ಪ ಹೊತ್ತಿನಲ್ಲಿಯೇ ಸಾರ್ಪೀಡನ್ನಿನ ಪ್ರಾಣವು ಹೊರಟುಹೋಯಿತು ಈ ಸಮಯದಲ್ಲಿ ಗ್ಲಾಕಸ್ಸನಿಗೂ ಟ್ರೋಯಸರಿನ ಒಂದು ಬಾಣವು ತಗುಲಿ ದೊಡ್ಡಗಾಯವಾಗಿದ್ದಿತು. ಸಾರ್ಪೀಡನ್ನನು ಸತ್ತು ಹೋದನೆಂಬ ಸುದ್ದಿಯು ಅವನಿಗೆ ಮುಟ್ಟಿದಕೂಡಲೆ ಗ್ಲಾಕಸ್ಸನು ಅಪೊಲೋವನ್ನು ಕುರಿತು, "ಕರುಣಾಳುವಾದ ಅಪೋಲೋದೇವನೆ, ಈಗ ನನ್ನ ಮಿತ್ರನು ಸತ್ತುಹೋಗಿರುವನು ನನಗೂ ಬಲವಾಗಿ ಏಟು ಬಿದ್ದಿರುವುದು. ನನ್ನ ಈ ಕಷ್ಟ ಸಮಯದಲ್ಲಿ ನೀನೇ ನನಗೆ ಗತಿ. ನನ್ನ ಈ ಗಾಯವನ್ನು ವಾಸಿಮಾಡಿ ನಮ್ಮ ಕಡೆಯವರಾದ ಲಿಸಿಯನ್ನರಿಗೆ ಪ್ರೋತ್ಸಾಹವನ್ನುಂಟು ಮಾಡುವಷ್ಟು ಚೈತನ್ಯವನ್ನು ನನಗೆ ಕೊಡು," ಎಂದು ಪ್ರಾರ್ಥಿಸಿಕೊಂಡನು. ಅಪೋಲೋದೇವನು ಅದೇ ಮೇರೆಗೆ ಅವನ ಗಾಯದ ಬಾಧೆಯು ಮಾಯವಾಗುವಂತೆ ಅನುಗ್ರಹಿಸಲಾಗಿ, ಗ್ಲಾಕಸ್ಸನು ಟ್ರೋಜನರ ಪಾಳಯದಲ್ಲಿ ಅಲ್ಲಲ್ಲಿ ಸುತ್ತಾಡಿ

ಒಂದು ಸಲ ಹೆಕ್ಟರನ್ನು ಕುರಿತು, "ಹೆಕ್ಟರನೆ, ನಿನ್ನ ಮಿತ್ರರ ಯೋಗಕ್ಷೇಮವನ್ನು ನೀನು ವಿಚಾರಿಸಲೊಲ್ಲೆ ಸಾರ್ಪೀಡನ್ನನು ಈಗತಾನೆ ಮೃತನಾಗಿರುವನು. ಮುರ್ಮಿಡನರುಗಳು ಅವನ ಶಸ್ತ್ರಕವಚಾದಿಗಳನ್ನು ಅಪಹರಿಸಬೇಕೆಂದು ಅವನ ದೇಹವನ್ನು ವಶಪಡಿಸಿಕೊಳ್ಳುತ್ತಿರುವರಲ್ಲಾ!" ಎಂದು ದೂಷಿಸಿದನು. ಆ ಸುದ್ದಿಯನ್ನು ಕೇಳಿದಕೂಡಲೆ ಹೆಕ್ಟರನಿಗೂ ಟ್ರೋಜನರಿಗೂ ಬಹಳ ವ್ಯಸನವುಂಟಾಯಿತು ಅವರುಗಳೆಲ್ಲರೂ ಸಾರ್ಪೀಡನ್ನನನ್ನು ಬಹಳವಾಗಿ ಪ್ರೀತಿಸುತ್ತಿದ್ದುದೇ ಇದಕ್ಕೆ ಕಾರಣ ಆದುದರಿಂದ ಟ್ರೋಜನರು ಮತ್ತೊಮ್ಮೆ ಧೈರ್ಯತಂದುಕೊಂಡು ಗ್ರೀಕರ ದಳದಮೇಲೆ ನುಗ್ಗಿ ಹೋಗಬೇಕೆಂದು ಹವಣಿಸಿಕೊಳ್ಳುತ್ತಿದ್ದರು. ಈ ನಡುವೆ ಏಕಿಲೀಸಿನ ಬಂಧುವೊಬ್ಬನು ಸಾರ್ಪೀಡನ್ನಿನ ಶರೀರವನ್ನು ವಶಪಡಿಸಿಕೊಳ್ಳಬೇಕೆಂದು ಮುಂದಕ್ಕೆ ನುಗ್ಗಿ ಬಂದು ಅವನ ತಲೆಯನ್ನು ಹಿಡಿದು ಎಳೆಯುತ್ತಿದ್ದನು. ಹೆಕ್ಟರನು ಅವನಮೇಲೆ ಒಂದು ದೊಡ್ಡ ಕಲ್ಲನ್ನು ಬೀರಲು ಅವನು ತಲೆಯೊಡೆದು ಅಲ್ಲಿಯೇ ಸತ್ತು ಬಿದ್ದನು. ಇನ್ನೊಂದುಕಡೆ ಗ್ಲಾಕಸ್ಸನೂ ಗ್ರೀಕರಮೇಲೆ ಬಿದ್ದು ಅವರನ್ನು ಸ್ವಲ್ಪ ಸ್ವಲ್ಪ ಹಿಮ್ಮೆಟ್ಟಿಸುತ್ತಿದ್ದನು. ಮತ್ತೊಂದುಕಡೆ ಈನಿಯಾಸನು ಮೆರಿಯೋನಸ್ಸಿನಮೇಲೆ ಬಲವಾಗಿ ಕಾದುತ್ತಿದ್ದನು.

೧೩೫ ಸಾರ್ಪೀಡನ್ನನು ಸತ್ತುದನ್ನು ಕಂಡು ಅವನನ್ನು ಕೊಂದಿದ್ದ ಪೆಟ್ರೋಕ್ಲಸ್ಸನ್ನು ಹೆಕ್ಟರಿನಿಂದ ಕೊಲ್ಲಿಸಿಬಿಡಬೇಕೆಂದು ಜ್ಯೂಸನು ಮನಸ್ಸು ಮಾಡಿದನು. ಆದುದರಿಂದ ಹೆಕ್ಟರಿನ ಮನಸ್ಸಿನಲ್ಲಿ ಏನೋ ಒಂದು ಬಗೆಯ ಹೆದರಿಕೆಯುಂಟಾಗುವಂತೆ ಮಾಡಿ ಅವನು ತನ್ನ ಸಂಗಡಿಗರೊಡನೆ ಯುದ್ಧ ಭೂಮಿಯನ್ನು ಬಿಟ್ಟು ಟ್ರಾಯ್‌ಪಟ್ಟಣದ ಕಡೆಗೆ ಹಿಂದಿರುಗುವಂತೆ ಪ್ರೇರಿಸಿದನು ಹೀಗೆ ಟ್ರೋಜನರು ಹಿಮ್ಮೆಟ್ಟುತ್ತಲೆ, ಗ್ರೀಕರು ಸಾರ್ಪೀಡನ್ನಿನ ಕಂಚಿನ ಶಸ್ತ್ರಕವಚಾದಿಗಳನ್ನು ವಶಪಡಿಸಿಕೊಂಡು ಓಡಿಹೋಗುತ್ತಿದ್ದ ಟ್ರೋಜನರನ್ನು ಅಟ್ಟಿಕೊಂಡು ಮುಂದಕ್ಕೆ ನುಗ್ಗಿದರು. ಅತ್ತ ಜ್ಯೂಸನು ಅಪೋಲೋವಿನ ಮೂಲಕ ಸಾರ್ಪೀಡನ್ನಿನ ಶರೀರವನ್ನು ಲಿಸಿಯದೇಶಕ್ಕೆ ಸಾಗಿಸಿಬಿಟ್ಟನು. ಅಲ್ಲಿ ಅವನ ಬಂಧುಗಳು ಆ ಶರೀರಕ್ಕೆ ಯೋಗ್ಯವಾದ ಸಂಸ್ಕಾರವನ್ನು ಮಾಡಿದರು. ಇಷ್ಟರಲ್ಲಿ ಟ್ರೋಜನರು ತಮ್ಮ ಕೋಟೆಯ ಬಾಗಿಲಿನವರೆಗೂ ಓಡಿಬಂದಿದ್ದರು. ಪೆಟ್ರೋಕ್ಲಸ್ಸನು ಹೆಕ್ಟರನನ್ನು ಎಡೆಬಿಡದೆ ಅನುಸರಿಸುತ್ತ

ಹಿಂದೆಹಿಂದೆ ಒರುತ್ತಲೇ ಇದ್ದನು. ಈ ಸಮಯದಲ್ಲಿ ಅಪೋಲೋದೇವನು ಒಮ್ಮೆ ಬಲವಾಗಿ ಆರ್ಘಟಿಸಿದುದರಿಂದ, ಪೆಟ್ರೋಕ್ಲಸ್ಸಿಗೆ ದಿಗ್ಭ್ರಮೆಯುಂಟಾಗಿ ಸ್ವಲ್ಪ ಹಿಂದಿರುಗಿ ನೋಡುವಂತಾಯಿತು. ಇಷ್ಟರಲ್ಲಿ, ತನ್ನ ಸೋದರಮಾವನಾದ ಏಸಿಯಸ್ಸನಿಂದ ಪ್ರೇರಿತನಾಗಿ ಹೆಕ್ಟರನು ನಿಂತು ಪೆಟ್ರೋಕ್ಲಸ್ಸಿನಮೇಲೆ ಬಲವಾಗಿ ಕಾದಲಾರಂಭಿಸಿದನು. ಆಗ ಪೆಟ್ರೋಕ್ಲಸ್ಸನು ತನ್ನ ಈಟಿಯನ್ನು ಪ್ರಯೋಗಿಸಿ ಹೆಕ್ಟರಿನ ಸಾರಥಿಯನ್ನು ತಿವಿದುಕೆಡಹಿ, ಆ ಸಾರಥಿಯು ನೆಲಕ್ಕೆ ಪಟ್ಟನೆ ಉರುಳಿದುದನ್ನು ನೋಡಿ "ಆಹಾ! ಎಷ್ಟು ಸೊಗಸಾಗಿ ಬಿದ್ದನು!" ಎಂದು ಹಾಸ್ಯಮಾಡಿಕೊಂಡು ನಕ್ಕನು. ಅದನ್ನು ಲಕ್ಷಿಸದೆ ಹೆಕ್ಟರನು ತನ್ನ ರಥದಿಂದ ದುಮುಕಿ ಪೆಟ್ರೋಕ್ಲಸ್ಸನೊಡನೆ ಯುದ್ಧಕ್ಕೆ ನಿಂತನು. ಸತ್ತುಬಿದ್ದಿದ್ದ ಸಾರಥಿಯ ದೇಹವನ್ನು ವಶಪಡಿಸಿಕೊಳ್ಳಬೇಕೆಂದು ಪೆಟ್ರೋಕ್ಲಸ್ಸನು ಒಂದು ಕಡೆಯೂ ಹೆಕ್ಟರನು ಮತ್ತೊಂದು ಕಡೆಯೂ ಹಿಡಿದು ಎಳೆಯುತ್ತಿದ್ದರು. ಕಡೆಗೆ ಆ ಸಾರಥಿಯ ದೇಹವು ಗ್ರೀಕರಿಗೇ ವಶವಾಯಿತು. ಇದರಿಂದ ಪೆಟ್ರೋಕ್ಲಸ್ಸನು ಬಹಳ ಉತ್ಸಾಹಿತನಾಗಿ ಹೆಕ್ಟರಿನಮೇಲೆ ರಭಸದಿಂದ ನುಗ್ಗಿದನು. ಈ ನಡುವೆ ಯುದ್ಧಾಭಿಮಾನದೇವನಾದ ಏರೀಸನು ಪೆಟ್ರೋಕ್ಲಸ್ಸಿನ ಹಿಂದೆ ಬಂದು ಅವನ ಬೆನ್ನಿನಮೇಲೆ ಬಲವಾಗಿ ಗುದ್ದಲು ಪೆಟ್ರೋಕ್ಲಸ್ಸಿಗೆ ಮೂರ್ಛೆಯುಂಟಾಗಿ, ಅವನು ಧರಿಸಿದ್ದ ಕಿರೀಟವು ನೆಲದಮೇಲೆ ಉರುಳಿಹೋಯಿತು; ಅವನ ಎಡತೋಳಿನಮೇಲೆ ಧರಿಸಿದ್ದ ಗುರಾಣಿಯೂ, ಬಲಗೈಯಲ್ಲಿ ಹಿಡಿದಿದ್ದ ಈಟಿಯೂ ಕೆಳಕ್ಕೆ ಬಿದ್ದುಹೋದುವು ಆಗಲೇ ಅವನ ಕವಚವೂ ಬಿದ್ದುಹೋಯಿತು. ಅಪೋಲೋದೇವನ ಮಾಹಾತ್ಮ್ಯೆಯಿಂದ ಪೆಟ್ರೋಕ್ಲಸ್ಸಿಗೆ ತಲೆ ತಿರುಗುವಂತಾಗಿ ಕಣ್ಣುಗಳು ಕಾಣಿಸದೆಹೋದುವು. ಈ ಸಮಯದಲ್ಲಿ ಹೆಕ್ಟರನು ಮುಂದಕ್ಕೆ ನುಗ್ಗಿ ತನ್ನ ಈಟಿಯಿಂದ ಪೆಟ್ರೋಕ್ಲಸ್ಸಿನ ಕೆಳಹೊಟ್ಟೆಗೆ ತಿವಿದು— "ನಿರ್ಭಾಗ್ಯನಾದ ಪೆಟ್ರೋಕ್ಲಸ್ಸನೇ, ಟ್ರೋಜನ್ ಸ್ತ್ರೀಯರ ಸ್ವಾತಂತ್ರ್ಯವನ್ನು ಧ್ವಂಸಮಾಡುವೆನೆಂದು ಜಂಬಹೇಳಿಕೊಂಡಿದ್ದವನು ನೀನೇ ಅಲ್ಲವೆ?" ಎಂದು ಹಂಗಿಸಿದನು ಪೆಟ್ರೋಕ್ಲಸ್ಸನು ಕುಗ್ಗಿದ ಸ್ವರದಿಂದ ಹೆಕ್ಟರನ್ನು ಕುರಿತು "ಎಲೋ ಹೆಕ್ಟರ್, ನನ್ನನ್ನು ಕೊಂದವನು ನೀನು ಎಂದು ತಿಳಿದಿರುವೆಯೋ? ಹಾಗೆ ಎಂದಿಗೂ ಭಾವಿಸಬೇಡ; ನನ್ನನ್ನು ಇಬ್ಬರು ದೇವತೆಗಳು ಕೊಂದಿರುವರು. ನನ್ನ ಮರಣವು ಈ ಹೊತ್ತುಂಟಾಗಿರುವುದು; ನಿನ್ನ ಮರಣವೂ ಇನ್ನು ಸ್ವಲ್ಪ

ಕಾಲದಲ್ಲಿಯೋ ಏಕಿಲೀಸಿನ ಕೈಯಿಂದ ಸಂಭವಿಸುವುದು" ಎಂದು ಹೇಳಿ ಪ್ರಾಣವನ್ನು ಬಿಟ್ಟನು. ಈ ಭವಿಷ್ಯದ್ವಾದವನ್ನು ಹೆಕ್ಟರನು ಲಕ್ಷ್ಯಮಾಡದೆ, ಆಟೋಮೀಡನ್ನನ್ನು ಹುಡುಕಿಕೊಂಡು ಮುಂದಕ್ಕೆ ನುಗ್ಗಿದನು. ಆದರೆ ಇಷ್ಟರಲ್ಲಿ ಅವನು ತನ್ನ ರಥವನ್ನು ನಡೆಸಿಕೊಂಡು ಗ್ರೀಕರ ಪಾಳೆಯಕ್ಕೆ ಹೊರಟೇ ಹೋಗಿದ್ದನು.

---

## XX

[illegible]. ಹೆಕ್ಟರಿನ ಇರಿತದಿಂದ ಸತ್ತುಬಿದ್ದ ಪೆಟ್ರೋಕ್ಲಸ್ಸಿನ ದೇಹವನ್ನು ವಶಪಡಿಸಿಕೊಳ್ಳಬೇಕೆಂದು ಟ್ರೋಜನರೂ, ಅದನ್ನು ಕಾಪಾಡಿಕೊಳ್ಳಬೇಕೆಂದು ಗ್ರೀಕರೂ, ಬಹಳ ಹಠದಿಂದ ಯುದ್ಧಮಾಡುತ್ತಿದ್ದರು. ಮೆನೆಲಾಸನು ತನ್ನ ಕಡೆಯ ಆ ಪ್ರಸಿದ್ಧವೀರನ ಶರೀರವನ್ನು ಶತ್ರುಗಳ ವಶಪಡಿಸಕೂಡದೆಂದು ದೃಢ ಮನಸ್ಸಿನಿಂದ ಅನೇಕ ಶತ್ರುಗಳನ್ನು ಇದಿರಿಸುತ್ತಿದ್ದನು. ಆದರೆ ಯೂಫೋರ್ಬಸ್ ಎಂಬೊಬ್ಬ ಟ್ರೋಜನ್ ವೀರನು ಹೆಮ್ಮೆಯಿಂದ ನುಗ್ಗಿ ಬಂದು, ಸ್ವಲ್ಪ ಹೊತ್ತು ಕಾದಾಡಿ ಕಡೆಗೆ ಅವನ ಈಟಿಗೆ ತುತ್ತಾದನು. ಕ್ಷುಧಾರ್ತವಾದ ಸಿಂಹವು ಜನಗಳ ಮುಂದೆಗೆ ನುಗ್ಗಿ, ಪುಷ್ಟವಾದ ಒಂದು ಕಡಸಿನಮೇಲೆ ಹಾರಿ ಅದರ ಬಿಸಿ ರಕ್ತವನ್ನು ಹೀರುತ್ತಿರುವಾಗ, ಮಂದೆಯ ನಾಯಿಗಳೂ ಕಾವಲುಗಾರರೂ ದೂರದೂರವಾಗಿಯೇ ನಿಂತು ಅರಚುವಂತೆ, ಯೂಫೋರ್ಬಸ್ಸನ್ನು ತಿವಿದು ಕೆಳಗೆ ಕೆಡವಿ ಬಿಟ್ಟಿದ್ದ ಮೆನೆಲಾಸಿನ ಬಳಿಗೆ ನುಗ್ಗಿ ಹೋಗಲಾರದೆ, ಕಲವರು ಟ್ರೋಜನ್ ಯೋಧರುಗಳು ದೂರದೂರದಿಂದಲೇ ಅರಚಿಕೊಳ್ಳುತ್ತಿದ್ದರು. ಮೆನೆಲಾಸನು ಹತನಾಗಿ ಬಿದ್ದಿದ್ದ ತನ್ನ ಪ್ರತ್ಯರ್ಥಿಯ ಶಸ್ತ್ರಕವಚಾದಿಗಳನ್ನು ವಶಪಡಿಸಿಕೊಳ್ಳಬೇಕೆಂದಿರುವಷ್ಟರಲ್ಲಿ, ಅಪೋಲೋದೇವನು ಒಬ್ಬ ಟ್ರೋಜನ್ ವೀರನ ರೂಪದಲ್ಲಿ ಹೆಕ್ಟರಿಗೆ ಕಾಣಿಸಿಕೊಂಡು, ಅವನಿಗೆ ಯೂಫೋರ್ಬಸ್ಸಿನ ಮರಣವೃತ್ತಾಂತವನ್ನು ತಿಳಿಸಿ ಮೆನೆಲಾಸಿಗೆ ಭಯಹುಟ್ಟುವಂತೆ ಬಲವಾಗಿ ಗರ್ಜಿಸಿದನು. ಈ ಗರ್ಜನೆಯನ್ನು ಕೇಳಿಯೂ, ಅನೇಕಮಂದಿ ಟ್ರೋಜನ್ ವೀರರೊಡನೆ ನುಗ್ಗಿ ಬರುತ್ತಿದ್ದ ಹೆಕ್ಟರನ್ನು ಕಂಡೂ, ಮೆನೆಲಾಸನು ಹೆದರಿ ಏಯಾಸನಿದ್ದ ಬಳಿಗೆ ಹಿಂದಿರುಗಬೇಕಾಯಿತು. ಏಯಾಸನ್ನು ಕಂಡಕೂಡಲೆ ಅವನನ್ನೂ ತನ್ನ ಸಹಾಯಕ್ಕೆ ಕರೆದುಕೊಂಡು ಮೆನೆಲಾಸನು ಹೆಕ್ಟರನಮೇಲೆ ಪುನಃ ಯುದ್ಧಕ್ಕೆ ನಿಂತನು.

೧೩೭. ಇಷ್ಟುಹೊತ್ತಿಗೆ ಪೆಟ್ರೋಕ್ಲಸ್ಸನು ಬಿದ್ದಿದ್ದ ಸ್ಥಳಕ್ಕೆ ಹೆಕ್ಟರನು ಬಂದು ಅವನ ಶಸ್ತ್ರಕವಚಗಳನ್ನು ವಶಪಡಿಸಿಕೊಂಡು ಅವನ ಶವವನ್ನು ಟ್ರಾಯ್ ಪಟ್ಟಣದ ನಾಯಿಗಳಿಗೆ ಹಾಕುವುದಕ್ಕಾಗಿ ಎಳೆದುಕೊಂಡು ಹೋಗುತ್ತಿದ್ದನು. ಆದರೆ ಇಷ್ಟರಲ್ಲಿ ಏಯಾಸನು ಬಂದು ತಡೆದುದರಿಂದ ಹೆಕ್ಟರನು ಪೆಟ್ರೋಕ್ಲಸ್ಸಿನ ಶಸ್ತ್ರಕವಚಾದಿಗಳನ್ನು ಟ್ರಾಯ್ ಪಟ್ಟಣಕ್ಕೆ ಕಳುಹಿಸಿಬಿಟ್ಟು, ತಾನು ಬಂದು ರಥವಲ್ಲಿ ನಿಂತು ಏಯಾಸನೊಡನೆ ಯುದ್ಧಕ್ಕೆ ಪ್ರಾರಂಭಿಸಿದನು. ಏಯಾಸಿನ ಸಹಾಯಕ್ಕೆ ಮೆನೆಲಾಸನೂ ನಿಂತಿದ್ದುದರಿಂದ, ಅವರಿಬ್ಬರಮೇಲೆ ಹೆಕ್ಟರಿನ ಕೈಯು ಸಾಗಲಿಲ್ಲ. ಅದನ್ನು ಕಂಡು ಗ್ಲಾಕಸ್ಸನು ಹೆಕ್ಟರನ್ನು ಕುರಿತು "ಅಯ್ಯಾ ಹೆಕ್ಟರ್, ನಿನ್ನ ಶೌರ್ಯವು ಇಷ್ಟೇಯೋ! ನಿನ್ನ ಹೆಸರು ಮಾತ್ರ ದೊಡ್ಡದು. ಅದನ್ನು ನಂಬಿಕೊಂಡೇ ಸಾರ್ಪೀಡನ್ನನು ವೃಥಾ ಬಲಿಯಾದನು. ಈಗಲೂ ನೀನು ಪೆಟ್ರೋಕ್ಲಸ್ಸಿನ ಶವವನ್ನು ಟ್ರಾಯ್ ಪಟ್ಟಣದೊಳಕ್ಕೆ ತೆಗೆದುಕೊಂಡು ಹೋಗಿಬಿಟ್ಟರೆ, ನಮ್ಮ ಸಾರ್ಪೀಡನ್ನಿನ ಶಸ್ತ್ರಕವಚಗಳು ನಮ್ಮ ವಶವಾಗುವುವೇ ಹೊರತು ಇಲ್ಲದಿದ್ದರೆ ಆಗಲಾರವು" ಎಂದು ಹೇಳಿದನು. ಈ ಮಾತುಗಳನ್ನು ಕೇಳಿದಕೂಡಲೆ ಹೆಕ್ಟರಿಗೆ ಕೋಪವುಂಟಾಗಿ, "ಗ್ಲಾಕಸ್, ಲಿಸಿಯಾದಲ್ಲಿರುವ ಬುದ್ಧಿವಂತರಲ್ಲಿ ನೀನೊಬ್ಬ ಗಣ್ಯಪುರುಷನೆಂದು ತಿಳಿದಿದ್ದೆನು. ಅಂತಹ ನೀನು, ಯುದ್ಧವೆಂದರೆ ನಾನು ಹೆದರುವೆನೆಂದು ಯೋಚಿಸಿರುವೆಯೋ ? ಹಾಗಾದಪಕ್ಷದಲ್ಲಿ, ನೀನು ನನ್ನ ಸಮೀಪದಲ್ಲಿಯೇ ಇದ್ದುಕೊಂಡು, ನನ್ನ ಯುದ್ಧಕ್ರಮವನ್ನು ನೋಡುತ್ತಿರು" ಎಂದು ಹೇಳಿ ಟ್ರಾಯ್ ಪಟ್ಟಣದ ಕಡೆಗೆ ತೆಗೆದುಕೊಂಡು ಹೋಗುತ್ತಿದ್ದ ಪೆಟ್ರೋಕ್ಲಸ್ಸಿನ ಶಸ್ತ್ರಕವಚಾದಿಗಳನ್ನು ಹಿಂದಕ್ಕೆ ತರಿಸಿ, ತಾನೇ ಅವುಗಳನ್ನು ಧರಿಸಿಕೊಂಡು ಮೆನೆಲಾಸ್, ಏಯಾಸ್, ಇವರುಗಳಮೇಲೆ ಯುದ್ಧಕ್ಕೆ ಮೊದಲುಮಾಡಿದನು. ಏಕಿಲೀಸನ ಶಸ್ತ್ರಕವಚವನ್ನು ಹೆಕ್ಟರನು ಧರಿಸಿಕೊಂಡದನ್ನು ನೋಡಿ ಜ್ಯೂಸನು ಹೆಕ್ಟರಿನ ವ್ಯರ್ಥಾಗಾಧಿಯಾಸೆಗಾಗಿ ತನ್ನ ಮನಸ್ಸಿನಲ್ಲಿಯೇ ಕನಿಕರಪಟ್ಟುಕೊಂಡನು.

೧೩೮. ಹೆಕ್ಟರನು ಮಿತ್ರಸೇನೆಯವರಿಗೆ ಉತ್ಸಾಹವುಟ್ಟಿಸುವುದಕ್ಕಾಗಿ ಅವರನ್ನು ಉದ್ದೇಶಿಸಿ "ಮಿತ್ರರೇ, ನಮ್ಮ ಸೇನೆಯು ಹೆಚ್ಚಾಗಿರಬೇಕೆಂದು ನಾನು ನಿಮ್ಮನ್ನು ಇಲ್ಲಿಗೆ ಬರಮಾಡಿಕೊಂಡಿಲ್ಲ. ನಿಮ್ಮ ಸಹಾಯದಿಂದ ಟ್ರೋಜನರ ಸ್ತ್ರೀಯರೂ ಬಾಲರೂ ಉಳಿದುಕೊಳ್ಳುವರೆಂಬ ನಿರೀಕ್ಷೆಯಿಂದಲೇ

ನಿಮಗೆ ತೊಂದರೆಕೊಟ್ಟು ನಿಮ್ಮನ್ನು ಇಲ್ಲಿಗೆ ಬರಮಾಡಿಕೊಂಡೆನು. ಟ್ರೋಜನರಿಂದ ಈಗಲೂ ಧನಧಾನ್ಯಾದಿಗಳನ್ನು ಎತ್ತಿ ನಿಮ್ಮ ಉಪಯೋಗಾರ್ಥವಾಗಿ ಸಲ್ಲಿಸುತ್ತಿರುವುದೂ ಈಯೊಂದು ಉದ್ದೇಶದಿಂದಲೇ. ನಿಮ್ಮಲ್ಲಿ ಯಾರು ಪೆಟ್ರೋಕ್ಲಸ್ಸನ ದೇಹವನ್ನು ಟ್ರಾಯ್ ಪಟ್ಟಣದೊಳಕ್ಕೆ ಎಳೆದುಕೊಂಡು ಹೋಗುವನೋ ಆತನಿಗೆ ಪೆಟ್ರೋಕ್ಲಸ್ಸನ ಈ ಶಸ್ತ್ರಕವಚಾದಿಗಳಲ್ಲಿ ಅರ್ಧಭಾಗದಷ್ಟನ್ನು ಸಲ್ಲಿಸಿ, ಉಳಿದ ಅರ್ಧವನ್ನು ಮಾತ್ರ ನಾನು ಇಟ್ಟುಕೊಳ್ಳುವೆನು" ಎಂದು ಹೇಳಿದನು. ಈ ಸಮಯದಲ್ಲಿ ಇದಿರುಪಕ್ಷದಲ್ಲಿ ಏಯಾಸರೂ ಮೆನೆಲಾಸನೂ ತಮ್ಮತಮ್ಮ ಕಡೆಯವರನ್ನು ಸಹಾಯಕ್ಕೆ ಬರಮಾಡಿಕೊಂಡು ದೃಢಮನಸ್ಸಿನಿಂದ ಶತ್ರುಗಳೊಡನೆ ಹೆಣಗಾಡುತ್ತಿದ್ದರು. ನದೀಮುಖದಲ್ಲಿ ನದಿಯ ಪ್ರವಾಹದೊಡನೆ ಸಂಘಟ್ಟಿಸುವ ಸಮುದ್ರದ ಅಲೆಗಳಂತೆ, ಎರಡು ದಳಗಳೂ ಒಂದರೊಡನೆ ಒಂದು ಬೆರೆತು ಘೋರವಾಗಿ ಕಾದಾಡುತ್ತಿದ್ದುವು. ಯುದ್ಧವು ರಭಸದಿಂದ ನಡೆಯುತ್ತಿದ್ದಾಗ ಟ್ರೋಜನ್ ವೀರನೊಬ್ಬನು ಪೆಟ್ರೋಕ್ಲಸ್ಸನ ಶವದ ಕಾಲಿಗೆ ಒಂದು ಹಗ್ಗವನ್ನು ಕಟ್ಟಿ ಅದನ್ನು ಟ್ರಾಯ್ ಪಟ್ಟಣದೊಳಕ್ಕೆ ಎಳೆದುಕೊಂಡು ಹೋಗಲು ಹವಣಿಸುತ್ತಿದ್ದಾಗ, ಏಯಾಸನು ತನ್ನ ಸುತ್ತಲೂ ಮುತ್ತಿಕೊಂಡಿದ್ದ ಶತ್ರುಗಳನ್ನು ಚೆದರಿಸಿ ಆ ಟ್ರೋಜನ್ ವೀರನನ್ನು ತನ್ನ ಈಟಿಯ ಒಂದೇ ತಿವಿತದಿಂದ ಕೊಂದು ಬಿಟ್ಟನು. ಸ್ವಲ್ಪಹೊತ್ತಿನಲ್ಲಿಯೇ ಹೆಕ್ಟರನೂ ಆ ಸ್ಥಳಕ್ಕೆ ಬರಲಾಗಿ, ಅವನಿಗೂ ಏಯಾಸಿಗೂ ಬಲವಾದ ಕದನವು ಕೈಗಟ್ಟಿತು. ಈ ಉಭಯವೀರರ ಸಹಾಯಾರ್ಥವಾಗಿ ಬಂದಿದ್ದ ಅನೇಕಯೋಧರುಗಳು ಕಾದಾಡಿ ಸತ್ತು ಬಿದ್ದರು. ಅಪೋಲೋದೇವನು ಯುದ್ಧಕ್ಷೇತ್ರಕ್ಕೆ ಬಂದು ಮಾನವವೇಷದಿಂದ ಈನಿಯಾಸಿಗೆ ಕಾಣಿಸಿಕೊಂಡು, ಅವನಿಗೆ ಗ್ರೀಕರಮೇಲೆ ಕಾದುವಂತೆ ಪ್ರೇರಿಸಿದನು. ಪೆಟ್ರೋಕ್ಲಸ್ಸನ ಶವದ ಸುತ್ತಲೂ ರಕ್ತವು ಕೋಡಿಹರಿಯಿತು. ಉಭಯ ಪಕ್ಷದ ಯೋಧರೂ ಕುಪ್ಪೆಕುಪ್ಪೆಯಾಗಿ ಸತ್ತುಬಿದ್ದರು.

೧೩೯. ಅತ್ತ ಏಕಿಲೀಸನು, ತನ್ನ ಪರಮಮಿತ್ರನಾದ ಪೆಟ್ರೋಕ್ಲಸ್ಸನು ವಿಜಯಿಯಾಗಿ ಹಿಂದಿರುಗುವನೆಂದು ನಿರೀಕ್ಷಿಸುತ್ತ ಕುಳಿತಿದ್ದನು. ನೆಸ್ಟಾರನ ಪುತ್ರರಾದ ಆಂಟಿಲೋಕಸ್ಸಿಗೂ ಥ್ರಾಸ್ಯಮೇಡಿಸಿಗೂ ಪೆಟ್ರೋಕ್ಲಸ್ಸನ ಮರಣದ ಸುದ್ದಿಯು ತಿಳಿದಿರಲಿಲ್ಲ. ಪೆಟ್ರೋಕ್ಲಸ್ಸನ ರಥಕ್ಕೆ ಕಟ್ಟಿದ್ದ ದಿವ್ಯಾಶ್ವಗಳೆರಡೂ ತಮ್ಮ ಸ್ವಾಮಿಯ ಮರಣದಿಂದ ದುಃಖಪಡುತ್ತಾ ಧಾರೆಧಾರೆಗಳಾಗಿ

ಕಣ್ಣೀರನ್ನು ಸುರಿಸುತ್ತ ಒಂದು ಕಡೆ ನಿಂತುಬಿಟ್ಟಿದ್ದುವು. ಅವುಗಳನ್ನು ಕಂಡು ಜ್ಯೂಸನು ಸಹ ಮರುಗಿದನು. ಹೆಕ್ಟರನು ಹಾಗೆ ಸುಮ್ಮನೆ ನಿಂತುಕೊಂಡಿದ್ದ ಕುದುರೆಗಳನ್ನು ತನ್ನ ವಶಪಡಿಸಿಕೊಳ್ಳಬೇಕೆಂದು ನೆನೆಸಿ, ತನ್ನ ಸಹಾಯಕ್ಕಾಗಿ ಈನಿಯಾಸನನ್ನೂ ಕರೆದು-ಕೊಂಡು ಮುಂದಕ್ಕೆ ನುಗ್ಗಿದನು. ಆಟೋಮಿಡನನೂ ತನ್ನ ಸಹಾಯಕ್ಕಾಗಿ ಮೆನಿಲಾಸ್, ಏಯಾಸ್ ಮುಂತಾದವರನ್ನು ಕರೆದು ಕೊಂಡು ಅವರೊಡನೆ ಯುದ್ಧಕ್ಕೆ ಸಿದ್ಧನಾದನು. ಇನ್ನು ಸ್ವಲ್ಪಹೊತ್ತಿನವರೆಗೂ ಪೆಟ್ರೋಕ್ಲಸ್ಸಿನ ರಥದ ಬಳಿಯಲ್ಲಿ ಬಲವಾದ ಯುದ್ಧವು ನಡೆಯಿತು.

೧೪೦. ಈ ಸಮಯದಲ್ಲಿ ಜ್ಯೂಸಿನಿಂದ ಪ್ರೇರಿತಳಾಗಿ ಅಥೆನಿದೇವಿಯು ಮೆನೆಲಾಸಿನ ಬಳಿಗೆ ಬಂದು ಆತನನ್ನು ಕುರಿತು—"ಪೆಟ್ರೋಕ್ಲಸ್ಸಿನ ದೇಹವು ಶತ್ರುಗಳ ನಾಯಿಗಳ ಬಾಯಿಗೆ ಸಿಕ್ಕಿಬಿದ್ದರೆ, ಅದರಿಂದ ಆಗುವ ಅವಮಾನವು ನಿನ್ನದೇ ಎಂದು ತಿಳಿ. ಆದಕಾರಣ ಆ ದೇಹವನ್ನು ರಕ್ಷಿಸಿಕೊಳ್ಳಲು ನೀನು ಮನಃಪೂರ್ವಕವಾಗಿ ಯತ್ನಿಸಿದರೆ ನಾನೂ ನಿನಗೆ ಸಹಾಯಮಾಡುವೆನು" ಎಂದು ಹೇಳಿ ಪ್ರೋತ್ಸಾಹಿಸಿದಳು. ಇದರಿಂದ ಅವನು ಬಹಳ ಉತ್ಸಾಹಹೊಂದಿ ಪೆಟ್ರೋಕ್ಲಸ್ಸಿನ ಶರೀರದ ಕಾವಲಿಗೆ ನಿಂತು ಬಹಳ ಶೌರ್ಯದಿಂದ ಶತ್ರುಗಳನ್ನು ಇದಿರಿಸುತ್ತಿದ್ದನು. ಆಗ ಹೆಕ್ಟರಿನ ಪರಮಮಿತ್ರನಾದ ಪೊಡೀಸ ಎಂಬೊಬ್ಬನು ಆ ದೇಹವನ್ನು ತನ್ನ ವಶಪಡಿಸಿಕೊಳ್ಳಬೇಕೆಂದು ನುಗ್ಗಿಬರಲು, ಅವನನ್ನು ಮೆನೆಲಾಸನು ಒಂದೇ ತಿವಿತದಿಂದ ಕೊಂದು ಕೆಡಹಿದನು. ಮೆನೆಲಾಸನನ್ನು ಅಥೆನಿದೇವಿಯು ಪ್ರೋತ್ಸಾಹಿಸಿದ್ದಂತೆಯೇ ಅಪೋಲೋದೇವನು ಹೆಕ್ಟರನಿಗೆ ಕಾಣಿಸಿಕೊಂಡು ಅವನ ಸ್ನೇಹಿತನಾದ ಪೊಡೀಸನನ್ನು ಕೊಂದಿದ್ದುದಕ್ಕಾಗಿ ಗ್ರೀಕರಮೇಲೆ ಮುಯ್ಯಿತೀರಿಸಿಕೊಳ್ಳಬೇಕೆಂದು ಅವನಿಗೆ ಪ್ರೇರಿಸಿದನು. ಇದೇ ಸಮಯದಲ್ಲೇ ಜ್ಯೂಸನು ಗುಡುಗುಸಿಡಿಲುಗಳನ್ನುಂಟುಮಾಡಿ ಗ್ರೀಕರ ದಳದಲ್ಲಿ ಉಲ್ಲೋಲಕಲ್ಲೋಲವನ್ನು ಕಲ್ಪಿಸಿದನು. ಆದುದರಿಂದ ಗ್ರೀಕರ ಬಾಣಗಳು ಗುರಿತಪ್ಪಿ ವ್ಯರ್ಥವಾಗಿ ನೆಲದಮೇಲೆ ಬೀಳುತ್ತಿದ್ದುವು. ಟ್ರೋಜನರ ಬಾಣಗಳಾದರೋ ಗುರಿತಪ್ಪದೆ ಗ್ರೀಕ್ ಯೋಧರುಗಳಲ್ಲಿ ಅನೇಕರನ್ನು ಕೊಲ್ಲುತ್ತಿದ್ದುವು

೧೪೧. ಏಯಾಸನು ತನ್ನ ಆ ಪರಿಸ್ಥಿತಿಯನ್ನು ಕಂಡು ಪೆಟ್ರೋಕ್ಲಸ್ಸಿನ ಮರಣದ ಸುದ್ದಿಯನ್ನು ಏಕಿಲೀಸಿಗೆ ತಿಳಿಸುವ ಏರ್ಪಾಡನ್ನಾದರೂ ಮಾಡಿದರೆ

ಒಳ್ಳೆಯದೆಂದು ಮೆನೆಲಾಸಿಗೆ ಸೂಚಿಸಿದನು. ಪಕ್ಷಿಗಳಲ್ಲೆಲ್ಲಾ ಅತ್ಯಂತ ಚುರುಕಾದ ದೃಷ್ಟಿಯುಳ್ಳ ಹದ್ದು ಪೊದೆಯೊಳಗೆ ಹುದುಗಿಕೊಂಡಿರುವ ವೇಗಶಾಲಿಯಾದ ಮೊಲವನ್ನು ಕಂಡು ಹೇಗೆ ಕ್ಷಣಮಾತ್ರದಲ್ಲಿ ನೆಟ್ಟಗೆ ಎರಗಿ ಹೊತ್ತುಕೊಂಡು ಹೋಗುವುದೋ ಹಾಗೆ, ದೂರದಲ್ಲಿ ತನ್ನ ಕಡೆಯವರನ್ನು ಪ್ರೋತ್ಸಾಹಿಸುತ್ತಾ ಶತ್ರುಗಳೊಡನೆ ಹೆಣಗಾಡುತ್ತಾ ಇದಿರಾಳುಗಳ ಮಧ್ಯದಲ್ಲಿ ಸಿಕ್ಕಿಕೊಂಡಿದ್ದ ಆಂಟಿಲೋಕಸ್ಸಿನ ಬಳಿಗೆ ಮೆನೆಲಾಸನು ನೆಟ್ಟಗೆ ಹೋಗಿ, ಪೆಟ್ರೋಕ್ಲಸ್ಸಿನ ಮರಣವೃತ್ತಾಂತವನ್ನು ಅವನಿಗೆ ತಿಳಿಸಿ ಅದೇ ಸುದ್ದಿಯನ್ನು ಏಕಿಲೀಸಿಗೆ ತಿಳಿಸಿ ಬರುವಂತೆ ಹೇಳಿದನು.

೧೪೨. ಆಂಟಿಲೋಕಸ್ಸನು ವ್ಯಸನಪಡುತ್ತಾ ಏಕಿಲೀಸಿನ ಗುಡಾರದ ಬಳಿಗೆ ಹೋದನು. ಅವನಿಗೆ ಪ್ರತಿಯಾಗಿ ನಿಂತು ಕಾದಾಡುವುದಕ್ಕೋಸುಗ ಮೆನೆಲಾಸನು ಥ್ರಾಸಿಮಿಡೀಸನ್ನು ಕಳುಹಿಸಿ, ತಾನು ಪುನಃ ಪೆಟ್ರೋಕ್ಲಸ್ಸಿನ ಶವದ ಬಳಿಗೆ ಬಂದುನಿಂತು ಕಾದಾಡುತ್ತಿದ್ದನು. ಮೆನೆಲಾಸನು ಹಿಂದಿರುಗಿದುದನ್ನು ಕಂಡು ಏಯಾಸನು ಅವನನ್ನು ಕುರಿತು, “ಮಿತ್ರನೇ, ಏಕಿಲೀಸಿಗೆ ಈ ದುಃಖದ ವೃತ್ತಾಂತವನ್ನು ತಿಳಿಸಿದುದೇನೋ ಆಯಿತು. ನೀನೂ ಮೆರಿಯೋನಸ್ಸನೂ ಸೇರಿ ಪೆಟ್ರೋಕ್ಲಸ್ಸಿನ ಶವವನ್ನು ಗ್ರೀಕರ ಪಾಳೆಯದೊಳಕ್ಕೇ ಸಾಗಿಸಿಬಿಡುವುದು ಬಹಳ ಕ್ಷೇಮಕರವು. ನಾನೂ ಕಿರಿಯ ಏಯಾಸನೂ ಹಿಂದಿನಂತೆಯೇ ಒಟ್ಟಿಗೆ ಸೇರಿ ಶತ್ರುಗಳನ್ನು ಇದಿರಿಸುತ್ತಾ ಇಲ್ಲಿಯೇ ಅವರನ್ನು ತಡೆದುಕೊಂಡಿರುವೆವು” ಎಂದು ಹೇಳಿ ಅವರನ್ನು ಕಳುಹಿಸಿಕೊಟ್ಟನು. ಅದೇ ಮೇರೆಗೆ ಮೆನೆಲಾಸನೂ ಮೆರಿಯೋನಸನೂ ಸುತ್ತ ಮುತ್ತಿಕೊಂಡಿದ್ದ ಶತ್ರುಗಳನ್ನು ಸ್ವಲ್ಪ ದೂರಕ್ಕೆ ಓಡಿಸಿ ಪೆಟ್ರೋಕ್ಲಸ್ಸಿನ ದೇಹವನ್ನು ಹೊತ್ತುಕೊಂಡು ಗ್ರೀಕರ ಪಾಳೆಯದ ಕಡೆಗೆ ತಿರುಗಿದರು. ಇಬ್ಬರು ಏಯಾಸರುಗಳೂ ಅತ್ಯಂತಶೌರ್ಯದಿಂದ, ಶತ್ರುಗಳನ್ನು ಮುಂದಕ್ಕೆ ನುಗ್ಗದಂತೆ ತಡೆಯುತ್ತಿದ್ದುದರಿಂದ, ಅವರು ಮೆನೆಲಾಸನ್ನೂ ಮೆರಿಯೋನಸ್ಸನ್ನೂ ನಿರೋಧಿಸಲಾಗಲಿಲ್ಲ. ಹೆಕ್ಟರನೂ, ಈನಿಯಾಸನೂ ಅದನ್ನು ಕಂಡು ರೇಗಿ, ಗ್ರೀಕರ ದಳದಮೇಲೆ ಉರವಣಿಸಿದರು. ಗಿಡುಗವನ್ನು ಕಂಡು ಸಣ್ಣ ಹಕ್ಕಿಪಕ್ಷಿಗಳು ದಿಗ್ಭ್ರಮೆಗೊಂಡು ಚಿಲಿಪಿಲಿಗುಟ್ಟು ವಂತೆ ಗ್ರೀಕರಲ್ಲಿ ಸಾಮಾನ್ಯರಾದ ಯೋಧರುಗಳು ಅವರ ಉರವಣೆಗೆ ಹೆದರಿ ಬಹಳವಾಗಿ ಗಲಿಬಿಲಿಮಾಡುತ್ತಿದ್ದರು.

---

# XXI

೧೪೩. ಅತ್ತ ಆಂಟಿಲೋಕಸ್ಸನು ವೇಗವಾಗಿ ಹೋಗಿ ಏಕಿಲೀಸನನ್ನು ಕಂಡನು. ಅವನನ್ನು ನೋಡಿದಕೂಡಲೆ ಆಗಂತುಕನು ತನ್ನ ಸ್ನೇಹಿತನ ಮರಣದ ಸುದ್ದಿಯನ್ನು ತಂದಿರುವನೆಂದು ಊಹಿಸಿ ಏಕಿಲೀಸನು ಬಹಳ ಗೋಳಾಡುತ್ತಾ ತನ್ನ ತಲೆಯಮೇಲೆ ದೂಳನ್ನು ಎರಚಿಕೊಳ್ಳುತ್ತಾ ನೆಲದಮೇಲೆ ಹೊರಳಾಡುತಾ ದುಃಖಾತಿರೇಕದಿಂದ ತನ್ನ ಜುಟ್ಟನ್ನು ಹಿಡಿಹಿಡಿಯಾಗಿ ಕಿತ್ತುಕೊಳ್ಳುತಾ ಹಂಬಲಿಸುತ್ತಿದ್ದನು. ಆಂಟಿಲೋಕಸ್ಸನು ಏಕಿಲೀಸಿನ ಎರಡು ಕೈಗಳನ್ನೂ ಬಲವಾಗಿ ಹಿಡಿದುಕೊಂಡು ಅವನನ್ನು ಸಮಾಧಾನಪಡಿಸುತ್ತಿದ್ದನು. ಕೈಗಳನು ಬಿಟ್ಟರೆ, ಏಕಿಲೀಸನು ಎಲ್ಲಿ ತನ್ನ ಕತ್ತಿಯನ್ನು ಹಿರಿದು ಆತ್ಮಹತ್ಯಮಾಡಿ ಕೊಳ್ಳುವನೋ ಎಂದು ಹೆದರಿ, ಆಂಟಿಲೋಕಸ್ಸನು ಅವನ ಕೈಗಳನ್ನು ಸ್ವಲ್ಪ ದುಃಖಶಮನವಾಗುವವರೆಗೂ ಬಿಡಲಿಲ್ಲ. ಏಕಿಲೀಸನು ಹೀಗೆ ಗೋಳಾಡುತ್ತಿರುವುದನ್ನು ಥೀಟೀಸಳು ದಿವ್ಯದೃಷ್ಟಿಯಿಂದ ತಿಳಿದು ತನ್ನ ಸಂಗಡಿಗರಾದ ಕೆಲವರು ಜಲದೇವಿಯರೊಡನೆ ಗೋಳಾಡುತ್ತ ತನ್ನ ಮಗನ ದುಃಖವನ್ನು ಹೋಗಲಾಡಿಸುವುದಕ್ಕಾಗಿ ಅವನಿದ್ದ ಹಡಗಿನ ಒಳಿಗೆ ಬಂದಳು. ಆಕೆಯನ್ನು ಕಂಡ ಕೂಡಲೆ ಏಕಿಲೀಸನು "ಅಮ್ಮಾ, ಜ್ಯೂಸನು ನಮ್ಮಗಳ ಪ್ರಾರ್ಥನೆಯನ್ನು ನಡೆಸಿಕೊಟ್ಟನು. ಆದರೆ ನನಗೆ ಪರಮಮಿತ್ರನಾದ ಪೆಟ್ರೋಕ್ಲಸ್ಸನು ಶತ್ರುಗಳ ಕೈಯಿಂದ ಹತನಾಗಿಹೋಗಿರುವನು. ದೇವತೆಗಳು ನಿನ್ನ ವಿವಾಹ ಕಾಲದಲ್ಲಿ ಪೀಲಿಯಸ್ಸಿಗೆ ಕೊಟ್ಟಿದ್ದ ದಿವ್ಯವಾದ ಶಸ್ತ್ರಕವಚಗಳನ್ನು ಧರಿಸಿಯೇ ಪೆಟ್ರೋಕ್ಲಸ್ಸನು ಕಾದಿ ಮಡಿದಿರುವನು. ಆ ಶಸ್ತ್ರಕವಚಗಳನ್ನೂ ಸಹ ಶತ್ರುಗಳು ವಶಪಡಿಸಿಕೊಂಡಿರುವರು. ನನ್ನ ಪರಮಮಿತ್ರನಾದ ಪೆಟ್ರೋಕ್ಲಸ್ಸಿನ ಮರಣಕ್ಕಾಗಿ ಹೆಕ್ಟರಿನಮೇಲೆ ಮುಯ್ಯಿತೀರಿಸಿಕೊಳ್ಳದಿದ್ದರೆ, ನಾನು ಬದುಕಿ ಏನು ಫಲ?" ಎಂದು ಹೇಳಿಕೊಂಡು ಅತ್ತನು. ಥೀಟೀಸಳು ಏಕಿಲೀಸಿನ ಅಂತ್ಯವು ಸಮೀಪವಾಯಿತೆಂದು ತಿಳಿದು, "ಮಗು, ಇದೇಕೆ ಹೀಗೆ ಮಾತನಾಡುವೆ? ಹೆಕ್ಟರನು ಕಾಲವಾದ ಕೆಲವುದಿನಗಳಲ್ಲೇ ನೀನೂ ಕಾಲಾಧೀನನಾಗುವೆಯಲ್ಲಾ!" ಎಂದು ದುಃಖಾತಿಶಯದಿಂದ ಹೇಳಿದಳು. "ಅಮ್ಮಾ, ನನ್ನ ಸ್ನೇಹಿತನು ಒಂಟಿಯಾಗಿ ಶತ್ರುಗಳೊಡನೆ ಕಾದಾಡುತ್ತಿದ್ದಾಗ ನಾನು ಭೂಮಿಗೆ ಭಾರವಾಗಿ ಈ ಹಡಗುಗಳ ಒಳಿಯಲ್ಲಿ ತೆಪ್ಪನೆ ಇದ್ದುಬಿಟ್ಟೆನು. ಹೀಗಾದರೂ ನಾನು ಪೆಟ್ರೋಕ್ಲಸ್ಸನ್ನು ಕೊಂದ ಹೆಕ್ಟರನ್ನು ಕೊನೆಗಾಣಿಸ

ದಿದ್ದರೆ, ನಾನು ಹುಟ್ಟಿದುದೇ ವ್ಯರ್ಥವು. ಅದೊಂದು ಕೆಲಸವನ್ನು ನಡೆಸಿದ ಮೇಲೆ ನನಗೆ ಮರಣವುಂಟಾದರೆ ಚಿಂತೆಯೇನು ? ಅಂತಹ ಅದ್ಭುತಶೂರನಾದ ಹೆರ್ಕ್ಯುಲೀಸನು ಈಗ ಎಲ್ಲಿರುವನು ? ಅವನ ಕೀರ್ತಿಯು ಮಾತ್ರ ಈಗಲೂ ಭೂಲೋಕದಲ್ಲಿ ಉಳಿದುಕೊಂಡಿರುವುದಿಲ್ಲವೆ ? ಆದುದರಿಂದ ನಾನೂ ಕೀರ್ತಿಯನ್ನು ಗಳಿಸಿದಲ್ಲದೆ ಸಾಯುವುದಕ್ಕೆ ಸ್ವಲ್ಪವಾದರೂ ಹಿಂದೆಗೆಯಲಾರೆನು" ಎಂದು ಹೇಳಿ ತನ್ನ ತಾಯನ್ನು ಒಪ್ಪಿಸಿದನು. ಆಕೆಯು ಹೆಫೆಸ್ಟಸ್ಸಿನಿಂದ ಶಸ್ತ್ರಕವಚಾದಿಗಳನ್ನು ಮಾಡಿಸಿ ತೆಗೆದುಕೊಂಡು ಬರುವುದಾಗಿ ಹೇಳಿ ದೇವತೆಗಳ ಕಮ್ಮಾರನಾದ ಹೆಫೆಸ್ಟಸ್ಸಿನ ಬಳಿಗೆ ಹೋದಳು.

೧೪೪. ಈ ಮಧ್ಯದಲ್ಲಿ ಹೆಕ್ಟರನು ಮೆನೆಲಾಸ್, ಮೆರಿಯೋನಸ್ ಇವರುಗಳನ್ನು ಬೆನ್ನಟ್ಟಿಕೊಂಡು ಬರುತ್ತಲೇ ಇದ್ದನು. ಅವನು ಮೂರುಸಲ ಮುಂದಕ್ಕೆ ನುಗ್ಗಿ ಪೆಟ್ರೋಕ್ಲಸ್ಸಿನ ಕಾಲನ್ನು ಹಿಡಿದು ಎಳೆದಿದ್ದನು ; ಆದರೆ ಮೂರುಸಲವೂ ಅವನಮೇಲೆ ಇಬ್ಬರು ಏಯಾಕ್ಸರೂ ಬಿದ್ದು ಅವನ ಪ್ರಯತ್ನವನ್ನು ಭಂಗಪಡಿಸಿದರು. ಹೀರಾದೇವಿಯು ಐರಿಸ್ಸಳನ್ನು ಏಕಿಲೀಸಿನ ಬಳಿಗೆ ಕಳುಹಿಸಿ, ಹೆಕ್ಟರನ ಹಾವಳಿಯನ್ನು ಆತನಿಗೆ ತಿಳಿಸಿ, ಆತನು ಕಂದಕದಬಳಿಗೆ ಹೋಗಿ ಕಾಣಿಸಿಕೊಂಡಮಾತ್ರಕ್ಕೇ ಟ್ರೋಜನರು ಹಿಂದೆಗೆಯುವರೆಂದು ಹೇಳುವಂತೆ ಏರ್ಪಡಿಸಿದಳು. ಅದೇಸಮಯದಲ್ಲಿ ಅಥೆನಿದೇವಿಯು ಏಕಿಲೀಸಿನ ಸುತ್ತಲೂ ಅದ್ಭುತಪ್ರಭೆಯೊಂದುಂಟಾಗುವಂತೆ ಅನುಗ್ರಹಿಸಿದಳು. ದೈವಪ್ರೇರಣೆಯಿಂದ ಚೋದಿತನಾಗಿ ಏಕಿಲೀಸನು ಕಂದಕದಬಳಿಗೆ ಹೋಗಿ ಗರ್ಜಿಸಲು ಅದರಿಂದ ಟ್ರೋಜನರ ಹೃದಯಗಳು ತಲ್ಲಣಿಸಿದುವು. ಏಕಿಲೀಸಿನ ಆ ಅದ್ಭುತಧ್ವನಿಯನ್ನು ಕೇಳಿಯೂ ಅವನ ಸುತ್ತಲೂ ಪ್ರಜ್ವಲಿಸುತ್ತಿದ್ದ ಪ್ರಭಾವಳಿಯನ್ನು ಕಂಡೂ ಹನ್ನೆರಡು ಮಂದಿ ಟ್ರೋಜನ್ ಯೋಧರು ನಿಂತಲ್ಲಿಯೇ ಸತ್ತುಬಿದ್ದರು ! ಏಕಿಲೀಸಿನ ಆಗಮನದಿಂದ ಟ್ರೋಜನರ ದಳದಲ್ಲಿ ಎಲ್ಲೆಲ್ಲೂ ಹಾಹಾಕಾರವುಂಟಾಗಿ ಪೆಟ್ರೋಕ್ಲಸಿನ ದೇಹದ ಸುತ್ತಲೂ ತುಂಬಿಕೊಂಡಿದ್ದ ಶತ್ರುಗಳು ಹಿಂದೆಗೆದರು. ಆದುದರಿಂದ, ಗ್ರೀಕರು ಪೆಟ್ರೋಕ್ಲಸ್ಸಿನ ದೇಹವನ್ನು ತಮ್ಮ ಪಾಳೆಯಕ್ಕೆ ಸುರಕ್ಷಿತವಾಗಿ ತೆಗೆದುಕೊಂಡು ಬರಲು ಬಹಳ ಸುಲಭವಾಯಿತು. ಇಷ್ಟುಹೊತ್ತಿಗೆ ಸೂರ್ಯಾಸ್ತಮಯ ಸಮಯವಾಗಿದ್ದಿತು. ಸದ್ಯಕ್ಕೆ ಬಿಡುವು ದೊರೆತಿತಲ್ಲಾ ಎಂಬ ಸಂತೋಷದಿಂದ ಟ್ರೋಜನರು ಯುದ್ಧವನ್ನು ನಿಲ್ಲಿಸಿದರು.

೧೪೫ ಟ್ರೋಜನರ ದಳದಲ್ಲಿದ್ದ ಪಾಲಿಡೇಮುಸನು ಪುನಃ ಹೆಕ್ಟರಿನ ಬಳಿಗೆ ಬಂದು “ಹೆಕ್ಟರ್, ಅಗಮೆಮ್ನಾನಿನ ಮೇಲೆ ಏಕಿಲೀಸನು ಕೋಪಿಸಿಕೊಂಡಿದ್ದುದರಿಂದ ಈವರೆಗೂ ನಮಗೆ ಭಯವಿರಲಿಲ್ಲ. ಇನ್ನು ನಮಗೆ ಕಷ್ಟಕ್ಕೆ ಮೊದಲಾಯಿತೆಂದು ತಿಳಿ. ನಾವುಗಳು ಇಲ್ಲಿಯೇ ಇದ್ದುಕೊಂಡು ನಾಳೆಯ ಬೆಳಗ್ಗೆ ಪುನಃ ಯುದ್ಧಕ್ಕೆ ನಿಂತಪಕ್ಷದಲ್ಲಿ, ನಮ್ಮ ಸೈನ್ಯದಲ್ಲಿ ಅನೇಕರು ನಾಯಿ ಹದ್ದುಗಳ ಬಾಯಿಗೆ ತುತ್ತಾಗುವರು. ಅದಕ್ಕೆ ಪ್ರತಿಯಾಗಿ ನಾವುಗಳು ನಮ್ಮ ಬಲವಾದ ಕೋಟೆಯೊಳಕ್ಕೆ ಹೋಗಿ, ಎತ್ತರವಾಗಿಯೂ ದುರ್ಭೇದ್ಯವಾಗಿಯೂ ಇರುವ ಬಾಗಿಲುಗಳನ್ನು ಮುಚ್ಚಿಸಿ, ಉನ್ನತವಾದ ಗೋಪುರಗಳ ಬಳಿಯಲ್ಲಿ ನಿಂತು ಶತ್ರುಗಳೊಡನೆ ಹೋರಾಡಿದರೆ, ಗ್ರೀಕರ ಕೈಯು ಏನೇನೂ ನಡೆಯಲಾರದು. ಚೆನ್ನಾಗಿ ಯೋಚಿಸಿನೋಡು” ಎಂದು ಹಿತೋಕ್ತಿಯನ್ನು ಹೇಳಿದನು. ಆದರೆ ಈ ಬುದ್ಧಿವಾದವು ಹೆಕ್ಟರಿಗೆ ರುಚಿಸಲಿಲ್ಲ. ಆದುದರಿಂದ ಹೆಕ್ಟರನು ಅವನನ್ನು ಕುರಿತು “ಹಿಂದೆ ಅಪಾರವಾದ ಐಶ್ವರ್ಯವು ಟ್ರಾಯ್ ನಗರಿಯಲ್ಲಿ ತುಂಬಿದ್ದುದರಿಂದ ಕೋಟೆಯೊಳಗೆ ಸೇರಿಕೊಂಡು ಯುದ್ಧಮಾಡುತ್ತಿದ್ದುದು ನ್ಯಾಯವಾಗಿದ್ದಿತು. ಈಗ ನಾವು ಹಾಗೆ ಮಾಡುವುದು ಸರಿಯಲ್ಲ. ನಾಳೆ ನಾವೆಲ್ಲರೂ ಇಲ್ಲಿಂದಲೇ ಶತ್ರುಗಳಮೇಲೆ ಬಿದ್ದು ಕಾದಾಡುವುದೇ ಸರಿಯಾದ ಮಾರ್ಗವು” ಎಂದು ಹೇಳಿದನು. ಇದನ್ನು ಕೇಳಿ ಟ್ರೋಜನರೆಲ್ಲರೂ ಬಹಳ ಸಂತೋಷದಿಂದ ಊಟಮಾಡಿ ರಾತ್ರಿಯೆಲ್ಲಾ ವಿಶ್ರಮಿಸಿಕೊಂಡರು. ಗ್ರೀಕರ ಪಾಳೆಯದಲ್ಲಿ ಏಕೀಲೀಸನೂ ಇತರ ಗ್ರೀಕ್ ಯೋಧರೂ ಪೆಟ್ರೋಕ್ಲಸ್ಸಿಸ ಮರಣಕ್ಕಾಗಿ ಗೋಳಾಡುತ್ತಿದ್ದರು. ಇತ್ತ ಏಕಿಲೀಸನು ಹೆಕ್ಟರನ್ನು ಕೊಂದು ಅವನ ಉಡಿಗೆತೊಡಿಗೆಗಳನ್ನು ತರುವವರೆಗೂ, ಹನ್ನೆರಡು ಜನ ಟ್ರೋಜನ್ ಶ್ರೀಮಂತರನ್ನು ಸೆರೆಹಿಡಿಯುವವರೆಗೂ, ತನ್ನ ಮಿತ್ರನ ಶರೀರಕ್ಕೆ ಸಂಸ್ಕಾರಮಾಡುವುದಿಲ್ಲವೆಂದು ಪ್ರತಿಜ್ಞೆಮಾಡಿ, ಒಂದು ಕಡಾಯಿಯಲ್ಲಿ ನೀರನ್ನು ಕಾಯಿಸಿ ಅವನ ದೇಹವನ್ನು ತೊಳೆಯುವಹಾಗೆ ತನ್ನ ಸೇವಕರಿಗೆ ಆಜ್ಞಾಪಿಸಿದನು ಪರಿಚಾರಕರು ಅದೇಮೇರೆಗೆ ಆ ದೇಹವನ್ನು ತೊಳೆದು ಅದಕ್ಕೆ ಇಪ್ಪೆಯ ಎಣ್ಣೆಯನ್ನು ಸವರಿ ಗಾಯಗಳಿದ್ದ ಪ್ರದೇಶಗಳಿಗೆ ಹೊಸ ಔಷಧಗಳನ್ನು ತುಂಬಿ, ಆ ಶರೀರದಮೇಲೆ ಬಿಳಿಯ ಬಟ್ಟೆಯನ್ನು ಹೊದ್ದಿಸಿದರು

೧೪೬. ಅತ್ತ ಥೀಟಿಸಳು ಹೆಫೆಸ್ಟಸ್ಸಿನ ಕಂಚಿನ ಮನೆಗೆ ಬಂದು, ತನ್ನ ಮಗನಿಗಾಗಿ ಶಸ್ತ್ರಕವಚಾದಿಗಳನ್ನು ಮಾಡಿಕೊಡಬೇಕೆಂದು ಅವನನ್ನು ಕೇಳಿಕೊಂಡಳು. ಕೂಡಲೆ ಹೆಫೆಸ್ಟಸ್ಸನು ಮಾಡುತ್ತಿದ್ದ ತನ್ನ ಕೆಲಸವನ್ನು ಅಲ್ಲಿಗೇ ನಿಲ್ಲಿಸಿ, ತನ್ನ ಹೆಂಡತಿಯಾದ ಚಾರಿಸ್ ಎಂಬಾಕೆಯಿಂದ ಥೀಟೀಸಳಿಗೆ ಅತಿಥಿಸತ್ಕಾರವನ್ನು ಮಾಡಿಸಿದನು. ಹಿಂದೆ ಒಂದು ಸಲ ಹೆಫೆಸ್ಟಸ್ಸನು ಜ್ಯೂಸಿನ ಕೋಪಕ್ಕೆ ಒಳಗಾಗಿ ಲೆಮ್ನಾಸ್ ದ್ವೀಪದಮೇಲೆ ಬಿದ್ದು ಕಾಲು ಮುರಿದುಕೊಂಡಾಗ, ಥೀಟೀಸಳೂ ಯೂರಿನೋಮಿ ಎಂಬ ಮತ್ತೊಬ್ಬ ಜಲದೇವತೆಯೂ ಅವನನ್ನು ಉಪಚರಿಸುತ್ತಾ ಒಂಬತ್ತುವರ್ಷಗಳವರೆಗೆ ಕಾಪಾಡಿದ್ದರು. ಆ ಕೃತಜ್ಞತೆಗಾಗಿಯೇ, ಹೆಫೆಸ್ಟಸ್ಸನು ತಟ್ಟನೆ ತನ್ನ ಕುಲುಮೆಯನ್ನು ಬಿಟ್ಟು ಎದ್ದು ಥೀಟೀಸಳ ಬಳಿಗೆ ಕುಂಟುತ್ತಾ ಹೋಗಿ " ತಾಯೆ, ಇದೇನು ಇಷ್ಟುದೂರ ಬಂದಿರುವೆ ? ನೀನು ಬರುವುದೇ ಅಪೂರ್ವವು. ನನ್ನಿಂದ ನಿನಗೆ ಯಾವಸೇವೆಯಾಗಬೇಕಾಗಿರುವುದು ? " ಎಂದು ಮರ್ಯಾದೆಯಿಂದ ಪ್ರಶ್ನಿಸಿದನು. ಅದಕ್ಕೆ ಆಕೆಯು ಅವನಿಗೆ ತನ್ನ ಮಗನಾದ ಏಕಿಲೀಸಿನ ವೃತ್ತಾಂತವನ್ನು ಮೊದಲಿಂದ ಕಡೆಯವರೆಗೂ ತಿಳಿಸಿ ಅವನಿಗಾಗಿ ಒಂದು ಗುರಾಣಿಯನ್ನೂ ಶಿರಸ್ತ್ರಾಣ ಉರಸ್ತ್ರಾಣವೇ ಮುಂತಾದ ರಕ್ಷಣಸಾಧನಗಳನ್ನೂ ಮಾಡಿಕೊಡಬೇಕೆಂದು ಕೇಳಿಕೊಂಡಳು. ಆಕೆಯು ತನ್ನ ಇಷ್ಟವನ್ನು ತಿಳಿಸಿದಕೂಡಲೆ, ಹೆಫೆಸ್ಟಸ್ಸನು, ತಾನಾಗಿಯೇ ಚಲಿಸುತ್ತಿದ್ದ ಕೆಲವು ಸ್ವರ್ಣಪ್ರತಿಮೆಗಳ ಸಹಾಯವನ್ನು ಪಡೆದು ದೊಡ್ಡದೊಡ್ಡ ಮೂಸೆಗಳಲ್ಲಿ ಚಿನ್ನ, ಬೆಳ್ಳಿ, ತವರ, ಕಂಚುಗಳನ್ನು ಹಾಕಿ ಚೆನ್ನಾಗಿ ಕರಗಿಸಿ, ಮೊದಲು ಅದ್ಭುತವಾದ ಒಂದು ಗುರಾಣಿಯನ್ನು ಸಿದ್ಧಪಡಿಸಿದನು. ಅದರಮೇಲೆ ಭೂಮಿಯೂ, ಸೂರ್ಯಚಂದ್ರರೂ, ನಕ್ಷತ್ರಗಳೂ, ಸಮುದ್ರವೂ, ಕಂಡುಬರುವಂತೆ ಲೋಹದಿಂದಲೇ ಕೆತ್ತನೆಯ ಕೆಲಸವನ್ನು ಮಾಡಿದನು. ಅದರ ಒಂದು ಪ್ರದೇಶದಲ್ಲಿ ಎರಡು ಪಟ್ಟಣಗಳ ಚಿತ್ರವು ಇದ್ದಿತು. ಅವುಗಳಲ್ಲೊಂದರಲ್ಲಿ ಮದುವೆಯ ಮೆರವಣಿಗೆಯೊಂದು ಹೋಗುತ್ತಿದ್ದಂತೆ ತೋರುತ್ತಿದ್ದಿತು. ಆ ಮೆರವಣಿಗೆಯಲ್ಲಿ, ಕೆಲವರು ಮದುವಣಿಗಿತ್ತಿಯ ಸುತ್ತಲೂ ಪಂಜುಗಳನ್ನು ಹಿಡಿದುಕೊಂಡು ಹೋಗುತ್ತಿದ್ದುದೂ, ಮತ್ತೆ ಕೆಲವರು ಕೊಳಲು, ವೀಣೆ ಮುಂತಾದ ವಾದ್ಯಗಳನ್ನು ಬಾರಿಸಿಕೊಂಡು ಹೋಗುತ್ತಿದ್ದುದೂ, ಹಾದಿಯಲ್ಲಿ ಹೆಂಗುಸರು ತಮ್ಮತಮ್ಮ ಮನೆಯ ಬಾಗಿಲುಗಳಲ್ಲಿ ಬಂದು

ನಿಂತು ಆ ಮೆರೆವಣಿಗೆಯನ್ನು ನೋಡುತ್ತಿದ್ದುದೂ ಕಂಡುಬರುತ್ತಿದ್ದಿತು. ಮತ್ತೊಂದುಕಡೆಯಲ್ಲಿ ಒಂದು ಸಭೆಯು ನಡೆಯುತ್ತಿದ್ದಂತೆ ಚಿತ್ರಿತವಾಗಿದ್ದಿತು. ಅಲ್ಲಿ ಒಬ್ಬನನ್ನು ಕೊಂದುಬಿಟ್ಟಿದ್ದ ಹತಕನು ಮೃತನ ಬಂಧುವಿಗೆ ಪರಿಹಾರ ದ್ರವ್ಯವನ್ನು ಕೊಡುತ್ತಿದ್ದುದೂ, ಆ ಬಂಧುವು ಸಾಲದೆಂದು ಅದನ್ನು ತಿರಸ್ಕರಿಸುತ್ತಿದ್ದುದೂ, ಆ ವಿಷಯದಲ್ಲಿ ಸದಸ್ಯರುಗಳು ವಾದವಿವಾದಗಳನ್ನು ನಡೆಸುತ್ತಿದ್ದುದೂ ಕಂಡುಬರುತ್ತಿದ್ದುವು. ಇನ್ನೊಂದುಕಡೆ ಒಂದು ಪಟ್ಟಣದ ಮುತ್ತಿಗೆಯು ನಡೆಯುತ್ತಿದ್ದುದು ಬಹಳ ವಿವರವಾಗಿ ಕಂಡುಬರುತ್ತಿದ್ದಿತು. ಅಲ್ಲಿ ಕೋಟೆಯ ಗೋಡೆಗಳಮೇಲೆ ಹೆಂಗಸರುಮಕ್ಕಳು ನಿಂತು ಶತ್ರುಗಳ ವ್ಯರ್ಥಸಾಹಸವನ್ನು ನೋಡುತ್ತಿದ್ದುದೂ, ಶತ್ರುಗಳನ್ನು ಆ ಪಟ್ಟಣದ ವೀರರು ತಿವಿದೂ ಬಡಿದೂ ಕೊಲ್ಲುತ್ತಿದ್ದುದೂ ತೋರುತ್ತಿದ್ದಿತು. ಕೋಟೆಯ ಮತ್ತೊಂದು ಕಡೆ ದನಕುರಿಗಳ ಮಂದೆಗಳನ್ನು ಶತ್ರುಗಳು ವಶಪಡಿಸಿಕೊಳ್ಳುತ್ತಿದ್ದುದು ಬಹಳ ಸ್ಪಷ್ಟವಾಗಿ ತೋರಿಬರುತ್ತಿದ್ದಿತು ಆ ಗುರಾಣಿಯ ಮಗುದೊಂದು ಪ್ರದೇಶದಲ್ಲಿ ಹೊಸದಾಗಿ ಉತ್ತಿದ್ದ ಒಂದು ಹೊಲವೂ ಅದರಲ್ಲಿ ಕೆಲಸಮಾಡುತ್ತಿದ್ದ ಏರುಗಳೂ ಕೃಷೀವಲರೂ ಕಂಡುಬರುತ್ತಿದ್ದರು ಇನ್ನೂ ಒಂದುಕಡೆ ಚಪ್ಪರ ದ್ರಾಕ್ಷಿಯ ಕಪ್ಪನೆಯ ಹಣ್ಣುಗಳ ಗೊಂಚಲುಗಳು ತುಂಬಿದ್ದ ಒಂದು ದ್ರಾಕ್ಷಾರಾಮವು ಕಂಡುಬರುತ್ತಿದ್ದಿತು. ಅದರೊಳಗೆ ತರುಣರು ಅಗಲವಾದ ಹೆಡಿಗೆಗಳಲ್ಲಿ ದ್ರಾಕ್ಷಿಯ ಹಣ್ಣುಗಳ ಗೊಂಚಲುಗಳನ್ನು ತುಂಬಿಕೊಂಡು ಹೋಗುತ್ತಿದ್ದಂತೆ ತೋರುತ್ತಿದ್ದಿತು. ಇನ್ನೊಂದುಕಡೆ ಒಂದು ಹುಲ್ಲುಗಾವಲೂ ಅದರಲ್ಲಿ ಮೇಯುತ್ತಿದ್ದ ಕುರಿಯ ಮಂದೆಗಳೂ ಸಮೀಪದಲ್ಲಿಯೇ ಇದ್ದ ಕುರುಬರ ದೊಡ್ಡಿಗಳೂ ಕಂಡುಬರುತ್ತಿದ್ದುವು. ಬೇರೊಂದುಕಡೆ ಸುಂದರವಸ್ತ್ರಾಭರಣಗಳನ್ನು ಧರಿಸಿದ್ದ ತರುಣರ ಒಂದು ತಂಡವು ನರ್ತನಮಾಡುತ್ತಲಿದ್ದಿತು. ಆ ತಂಡವು ಕುಂಬಾರನ ತಿಗುರಿಯ(ಚಕ್ರದ)ಹಾಗೆ ಸುತ್ತಲೂ ವೇಗವಾಗಿ ತಿರುಗುತ್ತಿದ್ದಿತು. ಇಂತಹ ಅತ್ಯದ್ಭುತವಾದ ಗುರಾಣಿಯನ್ನು ಸಿದ್ಧಪಡಿಸಿದ ವೇಳೆ, ಏಕಿಲೀಸಿಗೆ ಬೇಕಾಗಿದ್ದ ಶಿರಸ್ತ್ರಾಣವೇ ಮೊದಲಾದ ಇತರ ಪರಿಕರಗಳನ್ನು ಮಾಡಿಕೊಡಲು ಹೆಫೆಸ್ಟಸ್ಸಿಗೆ ಬಹಳಕಾಲ ಹಿಡಿಯಲಿಲ್ಲ. ಅವುಗಳನ್ನು ಸಿದ್ಧಪಡಿಸಿದ ಬಳಿಕ ಹೆಫೆಸ್ಟಸ್ಸನು ಅವುಗಳನ್ನು ಥೀಟೀಸಳಿಗೆ ಒಪ್ಪಿಸಲಾಗಿ, ಅದನ್ನು ಆಕೆಯು ತೆಗೆದುಕೊಂಡು ತನ್ನ ಮಗನ ಬಳಿಗೆ ಬಂದಳು.

## XXII.

೧೪೩. ಥೀಟೀಸಳು ಏಕಿಲೀಸನ ಬಳಿಗೆ ಹಿಂದಿರುಗಿ ಬಂದಾಗ ಅರುಣೋದಯಸಮಯವಾಗಿದ್ದಿತು. ಆ ಸಮಯದಲ್ಲಿ ಏಕಿಲೀಸನು ತನ್ನ ಮಿತ್ರನಾದ ಪೆಟ್ರೋಕ್ಲಸ್ಸಿನ ಶರೀರದಮೇಲೆ ಬಿದ್ದು ಗೋಳಾಡುತ್ತಿದ್ದನು. ಅದನ್ನು ಕಂಡು ಆಕೆಯು ಏಕಿಲೀಸನ್ನು ಸಮಾಧಾನಪಡಿಸಿ ತಾನು ತಂದಿದ್ದ ಶಸ್ತ್ರಕವಚಗಳನ್ನು ಅವನಿಗೆ ಕೊಟ್ಟಳು. ಅಲ್ಲಿ ಸುತ್ತಲೂ ತುಂಬಿಕೊಂಡಿದ್ದ ಮರ್ಮಿಡನರು ಆ ಅದ್ಭುತವಾದ ಕವಚಗುರಾಣಿಗಳನ್ನು ನೋಡಿದಾಗ, ಅವರ ಕಣ್ಣುಗಳು ಕೋರಯಿಸಿದುವು. ಏಕಿಲೀಸನು ಮಾತ್ರ ಅವುಗಳನ್ನು ಕಂಡು ಸ್ವಲ್ಪ ಹರ್ಷಿತನಾದರೂ, ತನ್ನ ಮಿತ್ರನ ಶರೀರದಲ್ಲಿದ್ದ ಗಾಯಗಳನ್ನು ಕಂಡು ಶೋಕಿಸುತ್ತಾ ತನ್ನ ತಾಯಿಯನ್ನು ಕುರಿತು, "ಅಮ್ಮಾ, ನನ್ನ ಮಿತ್ರನ ದೇಹದಲ್ಲಿರುವ ಈ ಗಾಯಗಳಮೇಲೆ ನೊಣ ಮುತ್ತಿ ಅವುಗಳಲ್ಲಿ ಕ್ರಿಮಿಕೀಟಗಳನ್ನು ಹುಟ್ಟಿಸದಂತೆ ನೋಡಿಕೊ" ಎಂದು ಪ್ರಾರ್ಥಿಸಿಕೊಂಡನು. ಆದುದರಿಂದ ಆಕೆಯು ಮೃತನ ಶರೀರದೊಳಕ್ಕೆ ಕೆಂಬಣ್ಣವಾಗಿದ್ದ ಕೆಲವು ಅಮೃತಬಿಂದುಗಳನ್ನು ಹಾಕಿ, ಅದು ಕೆಡದಂತೆ ಮಾಡಿದುದಲ್ಲದೆ, ತನ್ನ ಮಗನಿಗೂ ಅದ್ಭುತಶಕ್ತಿಯುಂಟಾಗುವಂತೆ ಅನುಗ್ರಹಿಸಿದಳು. ಕೂಡಲೆ ಏಕಿಲೀಸನು ತನ್ನ ಕಡೆಯ ಯೋಧರುಗಳನ್ನು ಪ್ರೋತ್ಸಾಹಿಸುವುದಕ್ಕಾಗಿ ಸಿಂಹಗರ್ಜನೆಯನ್ನು ಮಾಡಿದನು. ಇದನ್ನು ಕೇಳಿ ಮೂಲೆಮೂಲೆಯಲ್ಲಿದ್ದ ಗ್ರೀಕರು ಅತ್ಯಂತೋತ್ಸಾಹಭರಿತರಾಗಿ, ಆಗತಾನೆ ಕೂಡಲು ಪ್ರಾರಂಭವಾಗಿದ್ದ ಒಂದು ಮಹಾಸಭೆಗೆ ಬಂದುಸೇರಿದರು.

೧೪೪. ಇನ್ನೂ ಗಾಯದಿಂದ ಬಾಧೆಪಡುತ್ತಿದ್ದ ಒಡಿಸಿಯಸ್, ಡೈಯೊಮಿಡೀಸ್, ಅಗಮೆಮ್ನಾನ್ ಮುಂತಾದ ಪ್ರಮುಖರು ತಮ್ಮತಮ್ಮ ಈಟಿಗಳನ್ನು ಊರಿಕೊಂಡು ಆ ಸಭೆಯಲ್ಲಿ ಒಂದುಕಡೆ ಕುಳಿತಿದ್ದರು. ಆಗ ಏಕಿಲೀಸನು ಅಗಮೆಮ್ನಾನನ್ನು ಕುರಿತು, "ಅಯ್ಯಾ, ನಮ್ಮನಮ್ಮ ಜಗಳದಿಂದ ಅನೇಕ ಗ್ರೀಕ್ ಯೋಧರು ಹತರಾದರೇ ಹೊರತು, ನಮ್ಮಿಬ್ಬರಲ್ಲಿ ಯಾರಿಗೂ ಫಲವೇನೂ ಆಗಲಿಲ್ಲ. ಇಷ್ಟು ಜಗಳವೂ ಆ ಒಂದು ಹೆಣ್ಣಿಗಾಗಿ! ಬ್ರಿಸೇಯಿಸಳು ನಮ್ಮ ಕೈಗೆ ಸೆರೆಸಿಕ್ಕುವುದಕ್ಕಿಂತಲೂ ಆದಿನ ಯುದ್ಧದಲ್ಲೇ ನಾಶವಾಗಿಹೋಗಿದ್ದರೆ ಎಷ್ಟೋ ಚೆನ್ನಾಗಿದ್ದಿತಲ್ಲಾ! ಇಗೋ! ಇನ್ನುಮೇಲೆ ನಾನು ನನ್ನ ಕೋಪವನ್ನು ತ್ಯಜಿಸಿದೆನು" ಎಂದು ಸರಳತೆಯಿಂದ ಸಂಭಾಷಿಸಿದನು. ಅಗಮೆಮ್ನಾ

ನನು ಏಕಿಲೀಸಿನ ಮಾತುಗಳನ್ನು ಕೇಳಿ ಪಶ್ಚಾತ್ತಾಪಯುಕ್ತನಾಗಿ, ಮಿತ್ರರೆ, ನನ್ನ ನಡತೆಗಾಗಿ ನಿಮ್ಮಲ್ಲಿ ಅನೇಕರು ನನ್ನನ್ನು ಎಷ್ಟೋ ದೂಷಿಸಿರುವರೆಂದು ನನಗೆ ತಿಳಿದಿರುವುದು. ಆದರೆ ನನ್ನ ಆ ದುರ್ನಯಕ್ಕೆ ಜ್ಯೂಪಿಟರನೇ ಕಾರಣಭೂತನು. ಮನುಷ್ಯನ ಶುಭಾಶುಭಗಳೆಲ್ಲವೂ ದೈವಾಧೀನವು. ಏಕಿಲೀಸ್, ನಾನು ಆ ದಿನ ಒಡಿಸಿಯುಸ್ಸಿನ ಸಂಗಡ ಹೇಳಿಕಳುಹಿಸಿದ್ದ ಮೇರೆಗೆ, ಬ್ರಿಸೇಯಿಸಳನ್ನೂ ಬಹು ವಿಧವಾದ ಅನೇಕವಸ್ತುಗಳನ್ನೂ ನಿನಗೆ ಸಲ್ಲಿಸಿ, ನನ್ನ ವಾಗ್ದಾನವನ್ನು ನೆರವೇರಿಸುವೆನು" ಎಂದು ಹೇಳಿದನು. ಆಗ ಏಕಿಲೀಸನು, "ಮಹಾಶಯನೆ, ನಿನಗೆ ಇಷ್ಟವಿದ್ದರೆ ನಿನ್ನ ವಾಗ್ದಾನವನ್ನು ನೆರವೇರಿಸಬಹುದು; ಇಲ್ಲದಿದ್ದರೆ ಬಿಡಬಹುದು. ನಾನಂತೂ ಗ್ರೀಕ್‌ದಳದ ಮೊತ್ತಮೊದಲಲ್ಲಿ ನಿಂತು ಟ್ರೋಜನರ ಸೈನ್ಯದ ಕೊಬ್ಬನ್ನು ಮುರಿಯುವೆನು" ಎಂದು ಉತ್ತರಕೊಟ್ಟನು.

೧೪೯. ಸುಮ್ಮನೆ ಕುಳಿತುಕೊಂಡು ಇಷ್ಟನ್ನೂ ಕೇಳಿದ್ದ ಒಡಿಸಿಯಸ್ಸನು ಆಗ ಎದ್ದುನಿಂತು "ದೇವತಾಪುತ್ರನಾದ ಮಿತ್ರನೆ, ಈಗ ಗ್ರೀಕರೆಲ್ಲರೂ ದಣಿದು ಹೋಗಿರುವರು; ಬರಿಯಹೊಟ್ಟೆಯಲ್ಲಿ ಶತ್ರುಗಳೊಡನೆ ಯುದ್ಧಮಾಡುವುದು ಉಚಿತವಲ್ಲ. ಅಗಮೆಮ್ನಾನನು ತನ್ನ ವಾಗ್ದತ್ತವಸ್ತುಗಳೆಲ್ಲವನ್ನೂ ಇಲ್ಲಿಗೇ ತರಿಸಿ ಒಪ್ಪಿಸಿ, ನಿನ್ನನ್ನೂ ಈ ಸದಸ್ಯರನ್ನೂ ಸಂತೋಷಪಡಿಸುವಷ್ಟರಲ್ಲಿ, ಈ ಯೋಧರುಗಳು ಆಹಾರಪಾನಗಳನ್ನು ಸೇವಿಸಿ ಯುದ್ಧಕ್ಕೆ ಸಿದ್ಧರಾಗುವುದು ಒಳ್ಳೆಯದು" ಎಂದು ಸೂಚಿಸಿದನು. ಅಗಮೆಮ್ನಾನನು ಆ ಮಾತುಗಳನ್ನು ಕೇಳಿ ಒಡಿಸಿಯಸ್ಸನ್ನು ಶ್ಲಾಘಿಸಿದನು. ಆದರೆ ತನ್ನ ಮಿತ್ರನ ಮರಣಕ್ಕಾಗಿ ಪರಿತಪಿಸುತ್ತಿದ್ದ ಏಕಿಲೀಸನು, ಆ ಕಾರ್ಯಗಳೆಲ್ಲವೂ ವಿರಾಮವಿದ್ದಾಗ ನಡೆಯ ಬಹುದೆಂದೂ, ಕೂಡಲೇ ಯುದ್ಧವನ್ನು ನಡೆಯಿಸುವುದು ಒಳ್ಳೆಯದೆಂದೂ ಸೂಚಿಸಲಾಗಿ ಒಡಿಸಿಯುಸ್ಸನು—"ಅಯ್ಯಾ, ಏಕಿಲೀಸ್, ನಿನಗಿಂತಲೂ ವಯೋವೃದ್ಧನಾದ ನನ್ನ ಸೂಚನೆಯನ್ನು ಕಳೆದುಹಾಕಬೇಡ" ಎಂದು ಹೇಳಿ, ನೆಸ್ಟಾರನ ಮಕ್ಕಳನ್ನೂ ಇನ್ನೂ ಕೆಲವರನ್ನೂ ತನ್ನ ಸಹಾಯಕ್ಕೆ ಕರೆದುಕೊಂಡು ಅಗಮೆಮ್ನಾನನ ಗುಡಿಸಿಲಿಗೆ ಹೋಗಿ, ಆತನು ವಾಗ್ದಾನಮಾಡಿದ್ದಂತೆ ಎಲ್ಲಾ ವಸ್ತುಗಳನ್ನೂ ತೆಗೆಸಿಕೊಂಡುಬಂದು ಆ ಮಹಾಸಭೆಯಲ್ಲಿ ತಂದಿಟ್ಟನು. ಅನಂತರ ಅಗಮೆಮ್ನಾನನು ಸಭೆಗೆ ಬಂದು ಅಲ್ಲಿಗೆ ಸಿದ್ಧಪಡಿಸಿ ತಂದಿದ್ದ ಒಂದು ಹಂದಿಯ ಬಳಿಗೆ ಹೋಗಿ, ಅದರ ಕೆಲವು ಕೂದಲುಗಳನ್ನು ಕಿತ್ತು "ನನ್ನ ಈ

ಮಾತುಗಳಿಗೆ ಜ್ಯೂಸನೂ ಭೂಮಾತೆಯೂ ಸೂರ್ಯನೂ ಸಾಕ್ಷಿಗಳು: ಇವ ರಲ್ಲದೆ, ಅಪಸಾಕ್ಷ್ಯನುಡಿಯುವವರನ್ನೂ ಮಾತಿಗೆ ತಪ್ಪುವವರನ್ನೂ ಶಿಕ್ಷಿಸುವ ಧರ್ಮದೇವತೆಗಳೂ ಸಾಕ್ಷಿಗಳಾಗಿರಲಿ. ದುಡುಕಿನಿಂದ ನಾನು ಬ್ರಿಸೇಯಿಸಳನ್ನು ನನ್ನ ವಶಪಡಿಸಿಕೊಂಡರೂ, ನಾನು ಅವಳನ್ನು ಸರ್ವದಾ ನನ್ನ ಸೋದರಿ ಯಂತೆಯೇ ಭಾವಿಸಿರುವೆನು '' ಎಂದು ಪ್ರಮಾಣಮಾಡಿ ದೇವತೆಗಳ ಪ್ರೀತ್ಯರ್ಥ ವಾಗಿ ಆ ಹಂದಿಯನ್ನು ಕಡಿದು ಯಥಾವಿಧಿಯಾಗಿ ಅರ್ಪಿಸಿದನು ಸಮೀಪ ದಲ್ಲಿಯೇ ನಿಂತಿದ್ದ ಗ್ರೀಕನೊಬ್ಬನು ಆ ಹಂದಿಯ ಶರೀರವನ್ನು ಸಮುದ್ರದೊಳ ಕ್ಕೆಸೆದು ಅಲ್ಲಿದ್ದ ಮೀನುಗಳಿಗೆ ಆಹಾರವನ್ನಾಗಿ ಮಾಡಿದನು. ಇದನ್ನೆಲ್ಲಾ ನೋಡುತ್ತಿದ್ದ ಏಕಿಲೀಸನು ಬಳಿಕ ಎದ್ದುನಿಂತು ಹಿಂದೆ ನಡೆದುದ್ದಕ್ಕೆಲ್ಲಾ ದೈವಚಿತ್ತವೇ ಕಾರಣವೆಂದು ಹೇಳಿ ಅಗಮೆಮ್ನಾನನ್ನು ಸಮಾಧಾನಪಡಿಸಿ, ಊಟಮಾಡಿಕೊಂಡು ಯುದ್ಧಕ್ಕೆ ಸಿದ್ಧರಾಗುವಂತೆ ಉಳಿದ ಗ್ರೀಕರನ್ನು ತ್ವರೆ ಗೊಳಿಸಿದನು.

೧೫೦. ಬ್ರಿಸೇಯಿಸಳು ಏಕಿಲೀಸಿನ ಗುಡಾರಕ್ಕೆ ಬರುತ್ತಾ ಅಲ್ಲಿ ಸತ್ತುಬಿದ್ದಿದ್ದ ಪೆಟ್ರೋಕ್ಲಸ್ಸಿನ ದೇಹವನ್ನು ನೋಡಿ ತನ್ನ ಎದೆಯನ್ನು ಬಡಿದು ಕೊಳ್ಳುತ್ತಾ, ,, ಅಯ್ಯೋ! ಪೆಟ್ರೋಕ್ಲಸ್, ನಾನು ಈ ಗುಡಿಸಿಲನ್ನು ಬಿಟ್ಟು ಹೊರಟಾಗ ನೀನು ಜೀವಸಹಿತವಾಗಿದ್ದೆಯಲ್ಲಾ! ಆ ದುರ್ದಿನ ನನ್ನ ಪತಿ ಯನ್ನೂ ಮೂವರು ಸಹೋದರರನ್ನೂ ಏಕಿಲೀಸನು ಕೊಂದುಬಿಟ್ಟ ಸಮಯದಲ್ಲಿ, ಬಹಳವಾಗಿ ಗೋಳಾಡುತ್ತಿದ್ದ ನನ್ನನ್ನು ನೀನು ಅಷ್ಟೊಂದು ದಯೆಯಿಂದ ಸಮಾಧಾನಪಡಿಸಿದ್ದೆಯಲ್ಲಾ! ನನ್ನ ವಿಷಯದಲ್ಲಿ ಯಾವಾಗಲೂ ಬಹಳ ದಯಾಳುವಾಗಿದ್ದ ನಿನಗೆ ಈ ಅವಸ್ಥೆಯುಂಟಾಯಿತಲ್ಲಾ!'' ಎಂದು ವೃತನ ಗುಣಾತಿಶಯಗಳನ್ನು ನೆನೆನೆನೆದುಕೊಂಡು ಗೋಳಾಡಿದಳು. ' ಈ ನಡುವೆ ಅಗಮೆಮ್ನಾನ್, ಮೆನೆಲಾಸ್, ಒಡಿಸ್ಯುಸ್, ನೆಸ್ಟರ್, ಐಡೊಮಿನಿಯಸ್, ಮೊದಲಾದ ಗ್ರೀಕ್ ಪ್ರಮುಖರು ಏಕಿಲೀಸಿನ ಬಳಿಗೆ ಹೋಗಿ ಸ್ವಲ್ಪ ಆಹಾರ ವನ್ನು ತಮ್ಮೊಡನೆ ಸ್ವೀಕರಿಸಬೇಕೆಂದು ಆತನನ್ನು ಬಗೆಬಗೆಯಾಗಿ ಕೇಳಿಕೊಂಡರು. ಆದರೆ ಏಕಿಲೀಸನು ಒಂದು ತುತ್ತಿನಷ್ಟು ಆಹಾರವನ್ನಾಗಲೀ ಒಂದು ಗುಟುಕಿ ನಷ್ಟು ಪಾನವನ್ನಾಗಲೀ ತೆಗೆದುಕೊಳ್ಳಲು ಒಪ್ಪದೆ, ಹಡಗಿನ ಬಳಿಯಲ್ಲಿ ಒಂಟಿಯಾಗಿ ಕುಳಿತು, ತನ್ನ ಮುದುಕ ತಂದೆಯ ವಿಷಯವನ್ನೂ ಸ್ಕೈರಾಸ್

ದ್ವೀಪದಲ್ಲಿದ್ದ ತನ್ನ ಮಗನಾದ ನಿಯಾಪ್ಟಾಲಿಮಸ್ಸನ್ನೂ ನೆನೆದುಕೊಂಡು ವ್ಯಸನಪಟ್ಟುಕೊಳ್ಳುತ್ತಿದ್ದನು. ಅದನ್ನು ಕಂಡು ಜ್ಯೂಸನಿಗೂ ಕರುಣವುಂಟಾಗಲು ಆತನು ಅಥೆನಿಯನ್ನು ಏಕಿಲೀಸಿನ ಬಳಿಗೆ ಕಳುಹಿಸಿ, ಆಕೆಯ ಮೂಲಕ ಏಕಿಲೀಸಿಗೆ ಗೊತ್ತಾಗದಂತೆ ಅಮೃತಪ್ರಾಶನಮಾಡಿಸಿ ಅವನಲ್ಲಿ ಕ್ಷುತ್ಪಿಪಾಸಗಳುಂಟಾಗದಂತೆಯೂ, ಧೈರ್ಯೋತ್ಸಾಹಗಳು ಹೆಚ್ಚುವಂತೆಯೂ ಏರ್ಪಡಿಸಿದನು. ಕೂಡಲೆ ಏಕಿಲೀಸನು ದೇವನಿರ್ಮಿತವಾದ ಶಸ್ತ್ರಕವಚಾದಿಗಳನ್ನು ಧರಿಸಿಕೊಂಡು ಯುದ್ಧಕ್ಕೆ ಸಿದ್ಧನಾದನು. ಅವನ ಎಡದೋಳಿನ ಮೇಲಿದ್ದ ಅದ್ಭುತವಾದ ಗುರಾಣಿಯು ಚಂದ್ರಮಂಡಲದಂತೆಯೂ ಸಮುದ್ರಮಧ್ಯದ ಶೈಲಾಗ್ರದಿಂದ ಏಳುತ್ತಿರುವ ಅಗ್ನಿಜ್ವಾಲೆಗಳಂತೆಯೂ ಥಳಥಳಿಸುತ್ತಿದ್ದಿತು. ಅನಂತರ ಏಕಿಲೀಸನು ಅದುವರೆಗೂ ಗುಡಿಸಿಲಿನ ಒಂದು ಮೂಲೆಯಲ್ಲಿ ನಿಲ್ಲಿಸಿದ್ದ ಒಂದು ಮಹಾ ಕುಂತಾಯುಧವನ್ನು ಕೈಗೆ ತೆಗೆದುಕೊಂಡನು. ಆ ಆಯುಧವನ್ನು ಏಕಿಲೀಸಿನ ತಂದೆಯಾದ ಪೀಲಿಯಸ್ಸನು ಕೊಟ್ಟು ಕಳುಹಿಸಿದ್ದನು. ಅದನ್ನು ಅವನಿಗೆ ಅವನ ಗುರುವಾದ ಶೈರನ್ನನು ಕೊಟ್ಟಿದ್ದನು. ಅಷ್ಟರಲ್ಲಿ ಆಟೊಮೀಡನ್ನನು ಏಕಿಲೀಸಿನ ರಥಕ್ಕೆ ಜಾಂಥಾಸ್ ಬೇಲಿಯಾಸ್ ಎಂಬ ಎರಡು ದಿವ್ಯಾಶ್ವಗಳನ್ನು ಹೂಡಿ ಅದನ್ನು ಅವನ ಬಳಿಗೆ ತಂದು ನಿಲ್ಲಿಸಿದನು. ಆ ಕುದುರೆಗಳನ್ನು ಕಂಡಕೂಡಲೆ, ಅವು ತನ್ನ ಮಿತ್ರನಾದ ಪೆಟ್ರೋಕ್ಲಸ್ಸಿನ ಶರೀರವನ್ನು ಯುದ್ಧಭೂಮಿಯಲ್ಲಿಯೇ ಬಿಟ್ಟು ತಾವು ಮಾತ್ರ ಗುಡಿಸಿಲಿಗೆ ಹಿಂದಿರುಗಿದ್ದುದನ್ನು ಹೆಕ್ಟರನು ಜ್ಞಾಪಿಸಿಕೊಂಡು, ಪುನಃ ಹಾಗೆ ಮಾಡಕೂಡದೆಂದು ಅವಕ್ಕೆ ಹೇಳಿದನು. ಈ ನಿಂದೆಯನ್ನು ಕೇಳಿ ಜಾಂಥಾಸ್ ಎಂಬ ಕುದುರೆಯು ಸಹಿಸಲಾರದೆ. "ಅಯ್ಯಾ ಏಕಿಲೀಸ್, ಪೆಟ್ರೋಕ್ಲಸ್ಸನು ಕಾಲವಾದುದು ನಮ್ಮ ದೆಸೆಯಿಂದಲ್ಲ; ಅಪೋಲೋದೇವನು ಹೆಕ್ಟರಿಗೆ ಸಹಾಯಮಾಡಿ ಅವನಿಂದ ಪೆಟ್ರೋಕ್ಲಸನ್ನು ಕೊಲ್ಲಿಸಿದನು ನಿನ್ನ ಅಂತ್ಯಕಾಲವೂ ಬಹಳ ದೂರವಾಗಿಲ್ಲ ನೀನು ಒಬ್ಬ ದೇವನಿಂದಲೂ ಒಬ್ಬ ಮಾನವನಿಂದಲೂ ಸ್ವಲ್ಪಕಾಲದಲ್ಲಿಯೇ ಹತನಾಗುವೆ" ಎಂದು ಮನುಷ್ಯಧ್ವನಿಯಿಂದ ಪ್ರತ್ಯುತ್ತರಕೊಟ್ಟಿತು. ಆದರಿಂದ ಏಕಿಲೀಸನು ಸ್ವಲ್ಪವಾದರೂ ವ್ಯಸನಪಡದೆ ಅದನ್ನು ಕುರಿತು, ಆ ವಿಷಯವು ತನಗೆ ಮೊದಲೇ ಗೊತ್ತಿದ್ದಿತೆಂದೂ, ಆದರೂ ಟ್ರೋಜನರಿಗೆ ಯುದ್ಧವು ಸಾಕುಸಾಕೆನ್ನಿಸುವವರೆಗೂ ತನ್ನ ಪ್ರಯತ್ನವನ್ನು ಬಿಡುವುದಿಲ್ಲವೆಂದೂ ತಿಳಿಸಿ ಯುದ್ಧಕ್ಕೆ ಹೊರಡಲು ಸಿದ್ಧನಾದನು.

---

# XXIII.

೧೫೧. ಅತ್ತ ಜ್ಯೂಪಸನು ಏಕಿಲೀಸಿನ ಕರ್ಮಪರಿಪಾಕವು ಅನ್ಯಥಾ ಪರಿಣಮಿಸದಿರುವುದಕ್ಕಾಗಿ, ಎಲ್ಲಾ ದೇವತೆಗಳನ್ನೂ ಒಂದು ಸಭೆಗೆ ಬರಮಾಡಿಕೊಂಡು—“ದೇವತೆಗಳಿರಾ, ಈಗ ಗ್ರೀಕರಿಗೂ ಟ್ರೋಜನರಿಗೂ ಮಹಾ ಘೋರಸಮರವು ನಡೆಯುವುದು. ನಾವು ಈ ಕಾಲದಲ್ಲಿ ಅಲಕ್ಷ್ಯದಿಂದಿದ್ದರೆ ಮಹಾಸಾಹಸಿಯಾದ ಏಕಿಲೀಸನು ಕ್ಷಣಮಾತ್ರದಲ್ಲಿ ಟ್ರಾಯ್ ಪಟ್ಟಣವನ್ನು ಧ್ವಂಸಮಾಡಿ ನಮ್ಮ ಪೂರ್ವನಿರ್ಣಯವನ್ನು ಸಟೆಮಾಡಿಬಿಡುವನು. ಆದುದರಿಂದ ನೀವುಗಳು ನಿಮಗೆ ಇಷ್ಟವಿರುವ ಪಕ್ಷವನ್ನು ವಹಿಸಿ ನಿಮ್ಮನಿಮ್ಮ ಆಶ್ರಿತರಿಗೆ ಸಹಾಯಮಾಡಬಹುದು. ಈ ವಿಷಯದಲ್ಲಿ ಹಿಂದೆ ನಾನು ವಿಧಿಸಿದ್ದ ನಿಷೇಧವನ್ನು ಈಗ ತಪ್ಪಿಸಿರುವೆನು. ಈಗ ನೀವು ಹೊರಡಬಹುದು” ಎಂದು ತಿಳಿಸಿದನು. ಕೂಡಲೆ ಹೀರಾದೇವಿಯೂ ಅಥೆನಿಯೂ ಪೊಸೈಡನ್ನನೂ ಹೆಫೆಸ್ಟಸ್ಸನೂ ಬೇರೆಬೇರೆ ವೇಷದಿಂದ ಗ್ರೀಕರ ದಳವನ್ನು ಪ್ರವೇಶಿಸಿದರು. ಯುದ್ಧಾಭಿಮಾನದೇವತೆಯಾದ ಏರೀಸನೂ ಅಪೋಲೋದೇವನೂ ಆರ್ಟಿಮಿಸ್, ಅಫ್ರೊಡೈಟಿ ಈ ದೇವತೆಗಳೂ, ಬೇರೆಬೇರೆ ಟ್ರೋಜನ್ ಯೋಧರ ಆಕೃತಿಯನ್ನು ತಾಳಿ ಟ್ರೋಜನರ ಸೈನ್ಯವನ್ನು ಹೊಕ್ಕರು. ಗ್ರೀಕರನ್ನು ಪ್ರೋತ್ಸಾಹಿಸಲು ಅಥೆನಿಯು ಒಂದುಬಾರಿ ಸಿಂಹಗರ್ಜನೆ ಮಾಡಲಾಗಿ, ಟ್ರೋಜನರನ್ನು ಹುರಿದುಂಬಿಸುವುದಕ್ಕಾಗಿ ಏರೀಸನೂ ಒಂದುಬಾರಿ ಗರ್ಜನೆ ಮಾಡಿದನು. ಪೊಸೈಡನ್ನನು ಭೂಮಿಯು ಗುಡುಗುವಂತೆ ಮಾಡಲು, ಅಧೋಲೋಕಾಧಿಪತಿಯಾದ ಪ್ಲೂಟೋದೇವನು ತನ್ನ ಮೇಲ್ಗಡೆಯಲ್ಲಿದ್ದ ಲೋಕವು ಬಿದ್ದು, ತನ್ನ ರಾಜ್ಯದೊಳಕ್ಕೆ ಅಗಣಿತಪ್ರಾಣಿಗಳು ನುಗ್ಗಿಬಿಡುವುವೆಂದು ಬೆದರಿದನು. ಅಪೋಲೋ ದೇವನು ಪ್ರಯಾಮಿನ ಒಬ್ಬ ಪುತ್ರನ ಆಕೃತಿಯನ್ನು ಧರಿಸಿ ಈನಿಯಾಸಿನ ಬಳಿಯಲ್ಲಿದ್ದುಕೊಂಡು ಏಕಿಲೀಸನ್ನು ಇದಿರಿಸುವಂತೆ ಅವನನ್ನು ಪ್ರೇರಿಸಿದನು. ಅಪೋಲೋವಿನ ಆ ಉದ್ದೇಶವನ್ನು ಕಂಡು ಹೀರಾದೇವಿಯು ಪೊಸೈಡನ್ನನ್ನೂ ಅಥೆನಿಯನ್ನೂ ತನ್ನ ಸಂಗಡ ಕರೆದುಕೊಂಡು ಏಕಿಲೀಸಿನ ಸಹಾಯಕ್ಕೆ ಹೋಗಬೇಕೆಂದು ಹವಣಿಸುತ್ತಿದ್ದಳು. ಆಗ ಪೊಸೈಡನ್ನನು ಹೀರಾದೇವಿಯನ್ನು ಕುರಿತು ಏರೀಸನಾಗಲೀ ಅಪೋಲೋವಾಗಲೀ ಏಕಿಲೀಸಿನೊಡನೆ ಸ್ವತಃ ಯುದ್ಧಕ್ಕೆ ಪ್ರಾರಂಭಿಸಿದ ಪಕ್ಷದಲ್ಲಿ, ನಾವೂ ಯುದ್ಧಕ್ಕೆ ಕೈಹಾಕಬಹುದೇ ಹೊರತು, ಅಲ್ಲಿಯವರೆಗೂ ಸುಮ್ಮನಿರುವುದು ಒಳ್ಳೆಯದೆಂದು ಸೂಚಿಸಿದನು. ಅಷ್ಟರೊಳಗೆ ಗ್ರೀಕ್

ಪಕ್ಷದ ದೇವತೆಗಳೆಲ್ಲರೂ ಮನುಷ್ಯದೃಷ್ಟಿಗೆ ಗೋಚರಿಸದಂತೆ ಎತ್ತರವಾದ ಒಂದು ಸ್ಥಳದಲ್ಲಿ ಕುಳಿತು ಯುದ್ಧವನ್ನು ನೋಡುತ್ತಿದ್ದರು.

೧೫೨. ಈ ನಡುವೆ ಏಕಿಲೀಸಿನ ಸಮೀಪಕ್ಕೆ ಈನಿಯಾಸನು ಬರಲಾಗಿ, ಏಕಿಲೀಸನು ಅವನನ್ನು ಕುರಿತು "ಇದೇನು! ಈನಿಯಾಸ್, ಹಿಂದೆ ನೀನು ಐಡಾ ಪರ್ವತದ ತಪ್ಪಲಿನಲ್ಲಿ ದನದಮಂದೆಯನ್ನು ಮೇಯಿಸುತ್ತಿದ್ದಾಗ, ನಾನು ನಿನ್ನನ್ನೂ ನಿನ್ನ ಸಹಾಯಕರನ್ನೂ ಹೊಡೆದು ಓಡಿಸಿಬಿಟ್ಟುದನ್ನು ಆಗಲೇ ಮರೆತುಬಿಟ್ಟಿರುವೆ!" ಎಂದು ಹಾಸ್ಯಮಾಡಿದನು ಅದಕ್ಕೆ ಈನಿಯಾಸನು—"ಏಕಿಲೀಸನೆ, ನೀನು ಹೀಗೆ ಹೇಳಿಬಿಟ್ಟರೆ ನಾನು ಮಗುವಿನಂತೆ ಹೆದರಿಕೊಳ್ಳುವೆನೆ? ಹಾಗೆ ಭ್ರಮಿಸ ಬೇಡ. ಬರಿಯ ಮಾತಿನಿಂದೇನು? ಇಂದು ನಿನ್ನ ದೇವತಾಮಾತೆಯಾಗಲಿ ನನ್ನ ದೇವತಾಮಾತೆಯಾಗಲಿ ಪುತ್ರಶೋಕಸಂತಪ್ತರಾಗುವರು. ಕೋಪಕ್ಕೆ ಅಧೀನರಾದ ಸ್ತ್ರೀಯರು ನಡುಬೀದಿಯಲ್ಲಿ ನಿಂತು ನಿಜವನ್ನೂ ಸಟಿಯನ್ನೂ ಬೆರೆಸಿ ಮನಸ್ಸಿಗೆ ಬಂದಂತೆ ಒಬ್ಬರನ್ನೊಬ್ಬರು ಕೆಲೆದಾಡುವಂತೆ ನಾವೂ ಇಲ್ಲಿ ನಿಂತು ವಾಗ್ಯುದ್ಧಮಾಡಿದರೆ ನಮಗೆ ಆಗುವ ಪ್ರಯೋಜನವೇನು?" ಎಂದು ಈನಿಯಾಸನು ಉತ್ತರಕೊಟ್ಟು ತನ್ನ ಪ್ರತ್ಯರ್ಥಿಯಮೇಲೆ ಒಂದು ಈಟಿಯನ್ನು ಎಸೆದನು. ದೇವದತ್ತವಾದ ಗುರಾಣಿಯು ತನ್ನ ಬಳಿ ಇದ್ದರೂ ಅದರ ಅದ್ಭುತ ಮಹಿಮೆಯನ್ನು ತಿಳಿಯದೆ ಏಕಿಲೀಸನು ಅದನ್ನು ಒಡ್ಡಿ ಆ ಈಟಿಯನ್ನು ತಡೆದನು. ಈನಿಯಾಸನು ಅತಿಸಾಹಸದಿಂದ ಎಸೆದಿದ್ದ ಆ ಈಟಿಯು ಏಕಿಲೀಸಿನ ಗುರಾಣಿಯ ಎರಡು ಪದರಗಳನ್ನು ಮಾತ್ರ ಭೇದಿಸಿದ್ದಿತು. ಅನಂತರ ಏಕಿಲೀಸನು ತನ್ನ ಈಟಿಯನ್ನು ಪ್ರಯೋಗಿಸಲು, ಅದು ಈನಿಯಾಸನು ದೂರವಾಗಿ ಹಿಡಿದು ಕೊಂಡಿದ್ದ ಗುರಾಣಿಯನ್ನು ಭೇದಿಸಿಕೊಂಡು ನೆಲದಲ್ಲಿ ನಾಟಿಕೊಂಡಿತು. ಬಳಿಕ ಈನಿಯಾಸನು ಒಂದು ಕಲ್ಲನ್ನು ಎತ್ತಿ ಏಕಿಲೀಸನ್ನು ಹೊಡೆದನು. ಆಗ ಏಕಿಲೀಸನು ಅದನ್ನು ತಪ್ಪಿಸಿಕೊಂಡು ಈನಿಯಾಸನ್ನು ತನ್ನ ಕತ್ತಿಯಿಂದ ಸೀಳಿ ಕೆಡಹುವುದರಲ್ಲಿದ್ದನು. ಆದರೆ ಆ ಸಮರದಲ್ಲಿ ಈನಿಯಾಸನು ಉಳಿದುಕೊಳ್ಳ ಬೇಕೆಂದು ಹಿಂದೆಯೇ ನಿರ್ಣಯವಾಗಿದ್ದಕಾರಣ ಆ ವಿಧಿವಿಲಾಸವನ್ನು ತಿಳಿದ್ದು, ಪೋಸೈಡನ್ನನು ಯುದ್ಧಕ್ಷೇತ್ರದಲ್ಲಿ ಕಾಣಿಸಿಕೊಂಡು ತನ್ನ ಪ್ರಭಾವದಿಂದ ಏಕಿಲೀಸಿನ ಕಣ್ಣಿಗೆ ಕಾವಳವುಚ್ಚಿಕೊಳ್ಳುವಂತೆ ಮಾಡಿ ಈನಿಯಾಸನ್ನು ರಣಾಂಗಣ ದಿಂದ ಹಾರಿಸಿಕೊಂಡು ಹಿಂದುಗಡೆಗೆ ತೆಗೆದುಕೊಂಡುಹೋಗಿಹಾಕಿ, ಅವನನ್ನು

ಕುರಿತು, “ಎಲೈ ಈನಿಯಾಸ್, ಏಕಿಲೀಸಿನಮೇಲೆ ಯುದ್ಧಮಾಡುವ ಬುದ್ಧಿಯು ನಿನಗೇಕೆ ಹುಟ್ಟಿತು? ಅವನೊಡನೆ ಹೋರಾಡಿ ನೀನು ಬದುಕುವುದುಂಟೆ? ಏಕಿಲೀಸನು ಬದುಕಿರುವವರೆಗೂ ಅವನೊಡನೆ ಯುದ್ಧಕ್ಕೆ ನಿಲ್ಲಬೇಡ” ಎಂದು ಬುದ್ಧಿವಾದ ಹೇಳಿ ಅನಂತರ, ಏಕಿಲೀಸಿನ ದೃಷ್ಟಿಗುಂಟಾಗಿದ್ದ ಮಬ್ಬನ್ನು ಹೋಗಲಾಡಿಸಿದನು. ಕೂಡಲೆ ಏಕಿಲೀಸನು ತನ್ನ ಇದಿರಾಳಿಯನ್ನು ಹುಡುಕಿ ಹುಡುಕಿ ಕಾಣದೆ ದೇವತೆಗಳಿಗೆ ಅವನ ವಿಷಯದಲ್ಲಿ ಪಕ್ಷಪಾತವು ಹೆಚ್ಚಾಗಿರಬಹುದೆಂದು ಭಾವಿಸಿಕೊಂಡು ಟ್ರೋಜನರ ದಳದಮೇಲೆ ಉರವಣಿಸಿದನು.

೧೫೨. ಅತ್ತ ಹೆಕ್ಟರನು ತನ್ನ ಕಡೆಯವರನ್ನು ಕುರಿತು ಏಕಿಲೀಸಿಗೆ ಯಾರೂ ಹೆದರಕೂಡದೆಂದೂ ಅವನ ಪ್ರತಾಪವನ್ನು ಕ್ಷಣಮಾತ್ರದಲ್ಲಿ ತಾನು ಅಡಗಿಸಿಬಿಡುವನೆಂದೂ ಹೇಳಿ ಪ್ರೋತ್ಸಾಹಿಸುತ್ತಾ ಏಕಿಲೀಸಿನಮೇಲೆ ಬೀಳಬೇಕೆಂದು ಹವಣಿಸುತ್ತಿದ್ದನು. ಆದರೆ ಅಪೋಲೋದೇವನು ಹೆಕ್ಟರನಿಗೆ ಕಾಣಿಸಿಕೊಂಡು ಹಾಗೆ ದುಡುಕಕೂಡದೆಂದು ಎಚ್ಚರಿಸಿದುದರಿಂದ, ಅವನು ಹಿಂದೆಯೇ ನಿಂತನು. ಈ ನಡುವೆ ಏಕಿಲೀಸನು ಟ್ರೋಜನರ ದಳದೊಳಕ್ಕೆ ನುಗ್ಗಿ ತನಗೆ ಪ್ರತಿಭಟಿಸಿದವರನ್ನು ಕ್ಷಣಮಾತ್ರದಲ್ಲಿ ಕೊಂದು ಕೆಡಹುತ್ತಿದ್ದನು. ಪ್ರಯಾಮಿನ ಪುತ್ರರುಗಳಲ್ಲಿ ಕಟ್ಟಕಡೆಯವನೂ, ಅವನ ಮಾತಾಪಿತೃಭ್ರಾತೃಗಳಿಗೆ ಬಹಳ ಪ್ರೀತಿಪಾತ್ರನೂ ಆದ ಪಾಲಿಡೋರಸ್ಸನು ತರುಣಜನಸಾಮಾನ್ಯವಾದ ಸಾಹಸದಿಂದಲೂ ಚಾಪಲ್ಯದಿಂದಲೂ ಯುದ್ಧವು ನಡೆಯುತ್ತಿದ್ದ ಬಳಿಯಲ್ಲಿ ಅತ್ತಿತ್ತ ವೇಗವಾಗಿ ಸುಳಿದಾಡುತ್ತಾ ತನ್ನನ್ನು ಹೊಡೆಯಬೇಕೆಂದು ಯತ್ನಿಸುತ್ತಿದ್ದ ಶತ್ರುಗಳಿಗೆ ಸಿಕ್ಕದೆ ಅವರಿಗೆ ಆಶಾಭಂಗವನ್ನುಂಟುಮಾಡಿ ಅವರನ್ನು ರೇಗಿಸುತ್ತಾ, ಕಡೆಗೆ ವಿಧಿವಶದಿಂದ ಏಕಿಲೀಸಿನ ಮುಂದೆಯೂ ಸುಳಿದಾಡಿ ಆ ಶೂರನ ಈಟಿಗೆ ಸಿಕ್ಕಿ ಕ್ಷಣಮಾತ್ರದಲ್ಲಿ ಮೃತ್ಯುವಶನಾದನು. ಇದನ್ನು ಕಂಡು ಹೆಕ್ಟರನು ತನ್ನ ದುಃಖಾತಿಶಯದಲ್ಲಿ ಅಪೋಲೋದೇವನ ಬುದ್ಧಿವಾದವನ್ನೂ ಮರೆತು ಏಕಿಲೀಸನ್ನು ಇದಿರಿಸಿದನು.

೧೫೩. ಅವನನ್ನು ಕಂಡಕೂಡಲೆ ಏಕಿಲೀಸಿಗೆ ಪರಮಾನಂದವಾಗಿ ಅವನನ್ನು ಕುರಿತು, “ಹೆಕ್ಟರ್, ಬಂದೆಯಾ! ಬಾ! ಮೃತ್ಯುದೇವನು ನಿನಗಾಗಿ ಕಾದುಕೊಂಡಿರುವನು” ಎಂದು ಕರೆದನು. ಆ ಮಾತುಗಳನ್ನು ಕೇಳಿ ಹೆಕ್ಟರನು ಸ್ವಲ್ಪವೂ ಹೆದರದೆ “ಏಕಿಲೀಸನೆ, ಬರಿಯ ಮಾತಿನಿಂದ ಮಕ್ಕಳನ್ನು ಬೆದರಿಸು

ವಂತೆ ನನ್ನನ್ನು ಬೆದರಿಸಬಹುದೆಂದು ಭಾವಿಸಬೇಡ. ನೀನು ನನಗಿಂತಲೂ ಶೂರನೇನೋ ಹೌದು ; ಆದರೆ ನನ್ನ ಶಸ್ತ್ರಗಳು ದುರ್ಬಲವಾದುವಲ್ಲ. ದೈವಚಿತ್ತ ವಿದ್ದಂತೆ ನಡೆಯುವುದೇ ಹೊರತು ನಿನ್ನ ನನ್ನ ಇಷ್ಟದಂತೆ ನಡೆಯುವುದೆ ?" ಎಂದು ಹೇಳಿ ತನ್ನ ಈಟಿಯನ್ನು ಏಕಿಲೀಸಿನ ಮೇಲೆ ಪ್ರಯೋಗಿಸಿದನು. ಆದರೆ ಅಥೆನಿಯ ಪ್ರಭಾವದಿಂದ ಅದಕ್ಕೆ ಗುರಿಯು ತಪ್ಪಿಹೋಗಿ, ಅದು ಹೆಕ್ಟರಿನ ಪಾದ ಸಮೀಪದಲ್ಲಿಯೇ ಬಿದ್ದುಹೋಯಿತು. ಹೆಕ್ಟರಿನ ಆ ವ್ಯರ್ಥಪ್ರಯತ್ನವನ್ನು ಕಂಡು ಏಕಿಲೀಸನು ಸಿಂಹಗರ್ಜನೆಯನ್ನು ಮಾಡಿ ತನ್ನ ಶಸ್ತ್ರವನ್ನು ಪ್ರಯೋಗಿಸುವುದರಲ್ಲಿದ್ದನು. ಆದರೆ ಅಪೋಲೋದೇವನು ಆ ಸಮಯದಲ್ಲಿ ಏಕಿಲೀಸಿನ ಕಣ್ಣಿಗೆ ಮಂಜು ಮುಚ್ಚಿಕೊಳ್ಳುವಂತೆ ಮಾಡಿಬಿಟ್ಟುದರಿಂದ, ಏಕಿಲೀಸನು ಆಶಾಭಂಗದಿಂದ— "ನಾಯಿಯೇ, ಈ ಸಾರಿಗೆ ನಿನ್ನನ್ನು ಅಪೋಲೋದೇವನು ಉಳಿಸಿದನು. ಇನ್ನೊಂದುಸಾರಿ ನೀನು ನನಗೆ ಇದಿರಾದರೆ ನನಗೂ ದೈವ ಸಹಾಯವು ಒದಗಿಯೇ ಒದಗುವುದು. ಆಗ ನಿನ್ನ ಪರಿಸಮಾಪ್ತಿಯಾಗುವುದು. ಈಗ ನನಗೆ ಸಿಕ್ಕಿದ ಇತರ ಶತ್ರುಗಳನ್ನು ಧ್ವಂಸಮಾಡುವೆನು" ಎಂದು ಹೇಳಿ ದಿಕ್ಕುದಿಕ್ಕಿಗೆ ನುಗ್ಗಿ ತನ್ನ ಇದಿರಿಗೆ ಸಿಕ್ಕಿದ ಟ್ರೋಜನ್ ಯೋಧರನ್ನು ಕೊಂದು ಕೆಡಹುತ್ತ ಬಂದನು. ಅವನ ಕೈಗೆ ಸಿಕ್ಕಿಬಿದ್ದಿದ್ದ ಒಬ್ಬರಿಬ್ಬರು ಟ್ರೋಜನ್ ಯೋಧರು ತಮ್ಮ ಪ್ರಾಣವನ್ನು ಉಳಿಸಬೇಕೆಂದು ಅತಿದೈನ್ಯದಿಂದ ಬೇಡಿ ಕೊಂಡರೂ, ಏಕಿಲೀಸನು ಅವರ ದೀನಾಲಾಪಗಳನ್ನು ಕಿವಿಗೆ ಹಾಕಿಕೊಳ್ಳದೆ ಅವರನ್ನು ಹೊಡೆದು ಮಲಗಿಸಿಬಿಟ್ಟನು. ಏಕಿಲೀಸಿನ ರಥವು ನಿಂತಲ್ಲಿ ನಿಲ್ಲದೆ ಯುದ್ಧಭೂಮಿಯಲ್ಲೆಲ್ಲಾ ಅತ್ತಿತ್ತ ಸುತ್ತಾಡಿ ಅನೇಕ ಟ್ರೋಜನ್ ಯೋಧರುಗಳ ಶರೀರವನ್ನು ರೂಪಳಿಸಿಬಿಟ್ಟಿತು. ರಥದ ದೂರಿಯೂ ಗುಂಬಗಳೂ ರಕ್ತಮಾಂಸ ಮಯವಾಗಿ ಹೋಗಿದ್ದುವು.

---

## XXIV.

೧೫೪ ಏಕಿಲೀಸಿನ ರಭಸವನ್ನು ಕಂಡು ಶತ್ರುಗಳಿಗೆ ದಿಗ್ಭ್ರಾಂತಿ ಯುಂಟಾಗಿ ಅವರಲ್ಲಿ ಅನೇಕರು ಟ್ರಾಯ್‌ಪಟ್ಟಣದ ಬಾಗಿಲ ಬಳಿಗೆ ಓಡ ಲಾರಂಭಿಸಿದರು. ಕಾಡಕಿಚ್ಚಿನ ದಳ್ಳುರಿಗೆ ಸಿಕ್ಕಿದ ಮಿಡಿತೆಗಳ ತಂಡವು ತಮಗೆ ಮೊದಲು ಸಿಕ್ಕುವ ಜಲಾಶಯದೊಳಕ್ಕೆ ಹೇಗೆ ದುಮಿಕುವುವೋ ಹಾಗೆಯೇ

ತೀಳುವುದನ್ನೂ ಏಳುವುದನ್ನೂ ನೋಡದೆ ಓಡಿಹೋಗುತ್ತಾ ಇದ್ದ ಟ್ರೋಜನರು ಹಾರಿಯಲ್ಲಿ ಸಿಕ್ಕಿದ ಸ್ಕಮಾಂಡ್ರಾಸ್ ಎಂಬ ನದಿಯೊಳಕ್ಕೆ ದುಮುಕಿದರು. ಆಹರೂ ಏಕಿಲೀಸನು ತನ್ನ ಭೀಷಣಕಾರ್ಯವನ್ನು ನಿಲ್ಲಿಸದೆ ನದಿಯೊಳಕ್ಕೂ ನುಗ್ಗಿ ಕೈಗೆ ಸಿಕ್ಕಿದವರನ್ನು ತನ್ನ ಕತ್ತಿಯಿಂದ ಕಡಿದು ಕೆಡಹುತ್ತ ಬಂದುದರಿಂದ, ಸ್ವಲ್ಪ ಹೊತ್ತಿನಲ್ಲಿಯೇ ಆ ಹೊಳೆಯು ರಕ್ತಮಯವಾಗಿ ರಕ್ತದ ನದಿಯೋ ಎಂಬ ಸಂಶಯವನ್ನುಂಟುಮಾಡಿತು; ಭೀರುಗಳ ಗೋಳಾಟವೂ ಏಟುಬಿದ್ದಿದ್ದವರ ನರಳಾಟವೂ ಶ್ರೋತೃಗಳಿಗೆ ಕಿವುಡನ್ನುಂಟುಮಾಡುತ್ತಿದ್ದುವು. ನದಿಯೊಳಗೆ ತುಂಬಿಕೊಂಡಿದ್ದವರನ್ನು ಏಕಿಲೀಸನು ತನಗೆ ತೃಪ್ತಿಯಾಗುವವರೆಗೂ ಕೊಂದು ತನ್ನ ಮಿತ್ರನಾದ ಪೆಟ್ರೋಕ್ಲಸ್ಸಿನ ಶವದೊಡನೆ ಹಾಕಿ ಸುಟ್ಟುಬಿಡುವುದಕ್ಕಾಗಿ ಹನ್ನೆರಡು ಮಂದಿ ಟ್ರೋಜನ್ ತರುಣರನ್ನು ತನ್ನ ಕೈಯಿಂದಲೇ ಸೆರೆ ಹಿಡಿದು ಎಳೆದು ತಂದು ಚರ್ಮದ ಪಟ್ಟಿಗಳಿಂದ ಅವರ ಕೈಗಳನ್ನು ಹೆಡಮುರಿಗಿಗಿಸಿ ತಮ್ಮ ಹಡಗುಗಳ ಬಳಿಗೆ ಕಳುಹಿಸಿಕೊಟ್ಟನು.

೧೫೫. ಹಿಂದೆ, ದಂಡಯಾತ್ರೆಯ ಮೊದಮೊದಲಿನಲ್ಲಿ, ಒಂದಾನೊಂದುದಿನ ಪ್ರಿಯಾಮನ ಪುತ್ರರಲ್ಲೊಬ್ಬನಾದ ಲಿಸಿಯಾನ್ ಎಂಬವನು ತನ್ನ ರಥಕ್ಕಾಗಿ ಒಂದು ತೋಟದಲ್ಲಿ ಗಿಡದ ಕೊಂಬೆಗಳನ್ನು ಕಡಿಯುತ್ತಿದ್ದಾಗ, ಏಕಿಲೀಸನು ಅವನನ್ನು ಸೆರೆಹಿಡಿದು ಲೆಮ್ನಾಸ್ ದ್ವೀಪದಲ್ಲಿ ಒಂದುನೂರು ಎತ್ತುಗಳ ಬೆಲೆಗೆ ದಾಸನನ್ನಾಗಿ ಮಾರಿಸಿಬಿಟ್ಟಿದ್ದನು. ಆ ವಿಷಯವನ್ನು ಪ್ರಿಯಾಮನು ತಿಳಿದು, ಮೂರುನೂರು ಎತ್ತುಗಳ ಬೆಲೆಯನ್ನು ಕೊಟ್ಟು ಲಿಸಿಯಾನನ್ನು ಬಿಡಿಸಿಕೊಂಡಿದ್ದನು. ಆದರೆ ಲಿಸಿಯಾನಿನ ದುರ್ದೈವದಿಂದ ಅವನು ಈ ಸಮಯದಲ್ಲಿ ಪುನಃ ಏಕಿಲೀಸಿನ ದೃಷ್ಟಿಗೆ ಗೋಚರವಾದನು. ಏಕಿಲೀಸನು ಅವನನ್ನು ಕಂಡು, ಲೆಮ್ನಾಸಿನಲ್ಲಿ ಯುದ್ಧದ ಗೋಜೇ ಇಲ್ಲದೆ ಇದ್ದುಕೊಂಡಿರಬಹುದಾಗಿದ್ದರೂ ಆ ನಿರ್ಭಾಗ್ಯನನ್ನು ದುರ್ವಿಲಂಘ್ಯವಾದ ಅವನ ಕರ್ಮವೇ ತನ್ನಲ್ಲಿಗೆ ಎಳೆತಂದುಬಿಟ್ಟದ್ದಿತೆಂದು ಭಾವಿಸಿ ಆಶ್ಚರ್ಯಪಟ್ಟನು. ಲಿಸಿಯಾನನು ಹೆಕ್ಟರನ್ನು ಕಂಡಕೂಡಲೆ ಅವನಿಗೆ ಶರಣಾಗತನಾದರೆ ಉಳಿದು ಕೊಳ್ಳಬಹುದೆಂದು ಭ್ರಮಿಸಿ, ಏಕಿಲೀಸಿನ ಪಾದಗಳನ್ನು ಹಿಡಿದು ಬೇಡಿಕೊಳ್ಳುವುದಕ್ಕಾಗಿ ಓಡಿಬರುತ್ತಿದ್ದನು. ಆದರೆ ಪೆಟ್ರೋಕ್ಲಸ್ಸಿನ ಮರಣದಿಂದ ಏಕಿಲೀಸಿನ ಹೃದಯವು ಶೋಷಿಸಿಹೋಗಿದ್ದುದರಿಂದ, ಅವನು ಯಾವ ಟ್ರೋಜನನಿಗೂ

ದಯೆತೋರಿಸುವಂತಿರಲಿಲ್ಲ. ಆದಕಾರಣ ಏಕಿಲೀಸನು ತನ್ನ ಇದಿರಿಗೆ ಬೇಡಿಕೊಳ್ಳುವುದಕ್ಕಾಗಿ ಓಡಿಬರುತ್ತಿದ್ದ ಲಿಸಿಯಾನಿನಮೇಲೆ ನಿರ್ದಯದಿಂದ ತನ್ನ ಈಟಿಯನ್ನು ಪ್ರಯೋಗಿಸಿದನು ಆದರೆ ಲಿಸಿಯಾನನು ಚಾತುರ್ಯದಿಂದ ಆ ಏಟನ್ನು ತಪ್ಪಿಸಿಕೊಂಡು ಓಡಿಬಂದು ಏಕಿಲೀಸಿನ ಕಾಲುಗಳನ್ನು ಹಿಡಿದು— "ದೇವ ಶಾಪುತನಾದ ಏಕಿಲೀಸನೆ, ನಮ್ಮ ತಾಯಿಯು ಹೆತ್ತ ಇಬ್ಬರು ಮಕ್ಕಳುಗಳಲ್ಲಿ ನನ್ನ ಸೋದರನಾದ ಪಾಲಿಡೋರಸ್ಸನ್ನು ಈಗತಾನೇ ನೀನೇ ಕೊಂದು ಬಿಟ್ಟಿರುವೆ. ನನ್ನನ್ನಾದರೂ ಉಳಿಸು. ನಿನ್ನ ಮಿತ್ರನನ್ನು ಕೊಂದವನು ನನ್ನ ಮಲತಾಯಿಯ ಮಗನಾದ ಹೆಕ್ಟರನು ಹೊರತು, ಪಾಲಿಡೋರಸ್ಸನೂ ಅಲ್ಲ; ನಾನೂ ಅಲ್ಲ" ಎಂದು ಗೋಳಾಡುತ್ತ ಬೇಡಿಕೊಂಡನು. ಅವಿಚಲಮನಸ್ಕನಾಗಿದ್ದ ಏಕಿಲೀಸನು ಶರಣಾಗತನಾಗಿ ಬೇಡಿಕೊಳ್ಳುತ್ತಿದ್ದ ಲಿಸಿಯಾನನ್ನು ಕುರಿತು "ನಿನಗಿಂತಲೂ ಎಷ್ಟೋ ಉತ್ತಮನಾದ ಪೆಟ್ರೋಕ್ಲಸ್ಸನು ಸಾಯಲಿಲ್ಲವೆ? ನನ್ನಂತಹ ವೀರನೂ ಮೃತ್ಯುವಿಗೆ ವಶನಾಗುವುದಿಲ್ಲವೆ? ಹೀಗೆ ಏಕೆ ಗೋಳಾಡುವೆ?" ಎಂದು ಹೇಳಿ ಅವನನ್ನು ಕತ್ತರಿಸಿಹಾಕಿ "ನಿನ್ನ ಮೃದು ಶರೀರದಲ್ಲಿ ಸ್ವಲ್ಪ ಭಾಗವು ಈ ನದಿಯಲ್ಲಿರುವ ಮೀನುಗಳಿಗೂ, ಮತ್ತಷ್ಟು ಭಾಗವು ಸಮುದ್ರದಲ್ಲಿರುವ ಮೀನುಗಳಿಗೂ ಆಹಾರವಾಗುವುದು; ನನ್ನ ಕೈಗೆ ಸಿಕ್ಕುವ ಯಾವ ಟ್ರೋಜನಿಗೂ ನಾನು ಸ್ವಲ್ಪವಾದರೂ ದಯೆ ತೋರಿಸುವನಲ್ಲ. ನಾನು ಯುದ್ಧಮಾಡದೆ ನನ್ನ ಹಡಗುಗಳ ಬಳಿಯಲ್ಲಿ ಸುಮ್ಮನಿದ್ದರೂ ನಮ್ಮ ಕಡೆಯವರಿಗೆ ಅಷ್ಟೊಂದು ಹಿಂಸೆಯನ್ನುಂಟುಮಾಡಿದ ಟ್ರೋಜನರಿಗೆ ನಾನು ತಕ್ಕ ಶಿಕ್ಷೆಯನ್ನು ಮಾಡದೆ ಎಂದಿಗೂ ಬಿಡುವುದಿಲ್ಲ ಈ ಸ್ಕಮಾಂಡ್ರಾನ್ ನದಿಯ ಅಭಿಮಾನದೇವನಾದ ಜಾಂಥಾಸನೇ ಟ್ರೋಜನರ ಸಹಾಯಕ್ಕೆ ಬಂದು ನಿಂತರೂ, ನಾನು ಹೆದರುವುದಿಲ್ಲ" ಎಂದು ಹೇಳುತ್ತಾ ಲಿಸಿಯಾನಿನ ಶವವನ್ನು ಆ ನದಿಯೊಳಕ್ಕೆ ಎಸೆದುಬಿಟ್ಟನು

೧೫೭. ಏಕಿಲೀಸಿನ ಆ ಮಾತುಗಳನ್ನು ಕೇಳಿ ಜಾಂಥಾಸನು ಕುಪಿತನಾಗಿ ಮತ್ತೊಬ್ಬ ನದ್ಯಭಿಮಾನದೇವನ ಪುತ್ರನಾದ ಆಸ್ಟರೋಪಯಸ್ ಎಂಬವನನ್ನು ಉತ್ತೇಜನಗೊಳಿಸಿ ಏಕಿಲೀಸಿನೊಡನೆ ಕಾದುವಂತೆ ಪ್ರೇರಿಸಿದನು ಆ ವೀರನು ಟ್ರೋಜನರ ದಳಕ್ಕೆ ಬಂದು ಹನ್ನೊಂದು ದಿನಗಳು ಮಾತ್ರವಾಗಿದ್ದುವು. ಆತನಿಗೆ ಎರಡು ಕೈಗಳಿಂದಲೂ ಶಸ್ತ್ರಗಳನ್ನು ಪ್ರಯೋಗಿಸಲು ತಿಳಿದಿದ್ದಿತು

ಅವನು ತನ್ನ ಬಂದುಕೈಯಲ್ಲಿದ್ದ ಈಟಿಯಿಂದ ಏಕಿಲೀಸಿನ ಗುರಾಣಿಯನ್ನು ಮುಕ್ಕಾಲುಪಾಲಿನಷ್ಟು ಭೇದಿಸಿದನು. ಮತ್ತೊಂದರಿಂದ ಏಕಿಲೀಸಿನ ಬಲ ಮೊಳಕೈಗೆ ಸ್ವಲ್ಪ ಗಾಯವನ್ನು ಮಾಡಿ ರಕ್ತಪಾತವನ್ನುಂಟುಮಾಡಿದನು. ಆದರೆ ಏಕಿಲೀಸನು ತನ್ನ ಗಾಯವನ್ನು ಲಕ್ಷಿಸದೆ, ಆಸ್ಟರೋಪಯುಸ್ಸಿನಮೇಲೆ ತನ್ನ ಮಹಾಕುಂತಾಯುಧವನ್ನು ಪ್ರಯೋಗಿಸಿದನು. ಅದು ಗುರಿತಪ್ಪಿ ಬಿದ್ದುಹೋಗಲು, ಏಕಿಲೀಸನು ತನ್ನ ಕತ್ತಿಯಿಂದಲೇ ಪ್ರತ್ಯರ್ಥಿಯನ್ನು ಸೀಳಿ, ಅವನ ಶಸ್ತ್ರಕವಚಗಳನ್ನು ಸುಲಿದುಕೊಂಡು ಅವನ ಶವವನ್ನು ಕುರಿತು, "ನಿಮ್ಮಪ್ಪನು ತೊದಲು ನುಡಿಯನ್ನು ನುಡಿಯುವ ನದ್ಯಭಿಮಾನದೇವನಾದರೆ, ನಮ್ಮಯ್ಯನು ದೇವಾಧಿದೇವನಾದ ಸಾಕ್ಷಾತ್ ಜ್ಯೂಸನೇ" ಎಂದು ಹೇಳುತ್ತಾ ಆ ಶವವನ್ನು ನದಿಯೊಳಕ್ಕೆ ಎಸೆದುಬಿಟ್ಟನು. ಇದರಿಂದ ಜಾಂಥಾಸನು ಮತ್ತೂ ಕ್ಷುಭಿತನಾಗಿ ಏಕಿಲೀಸನ್ನು ಸಂಬೋಧಿಸಿ—"ನೀನು ನದಿಯಪಾತ್ರದೊಳಗೇ ನಿಂತು ಯುದ್ಧಮಾಡುವುದಕ್ಕೆ ಪ್ರತಿಯಾಗಿ, ನದೀತೀರದಲ್ಲಿ ಬೇಕಾದಷ್ಟು ಕಾದಾಡಬಹುದು" ಎಂದು ತಿಳಿಸಿದನು. ಅದನ್ನು ಏಕಿಲೀಸನು ಗಮನಿಸದಿದ್ದುದರಿಂದ, ಆ ನದಿಯಲ್ಲಿ ಹುಚ್ಚುಹೊಳೆಯು ಬಂದು ಏಕಿಲೀಸಿನ ಗುರಾಣಿಯಮೇಲೆ ನುಗ್ಗಿ ಕೊಚ್ಚಿಕೊಂಡುಹೋಗುವಂತೆ ಮಾಡಿತು. ನದಿಯ ತೀರದಲ್ಲಿ ಬೆಳೆದಿದ್ದ ಒಂದು ಗಿಡದ ಕೊಂಬೆಯನ್ನಾದರೂ ಹಿಡಿದುಕೊಂಡು ದಡಕ್ಕೆ ಬರಬಹುದೆಂದು ಯೋಚಿಸಿ ಏಕಿಲೀಸನು ಆ ಗಿಡದ ಒಂದು ಕೊಂಬೆಗೆ ಕೈಹಾಕಲು ಪ್ರವಾಹವು ಬುಡಸಹಿತವಾಗಿ ಆ ಮರವನ್ನೇ ಉರುಳಿಸಿಬಿಟ್ಟಿತು. ಏಕಿಲೀಸನು ತನಗೆ ಜಲಸಮಾಧಿಯುಂಟಾಗುವುದೆಂದು ಕೊರಗುತ್ತಾ "ಜಗತ್ಪಿತೃವಾದ ಜ್ಯೂಸನೆ, ನನ್ನನ್ನು ಅಪೋಲೋದೇವನು ಕೊಲ್ಲುವನೆಂದು ಥೀಟೀಸಳಿಂದ ಕೇಳಿದ್ದೆನಲ್ಲಾ! ಶೂರರ ಕೈಯಿಂದ ಶಸ್ತ್ರಪೂತಮರಣವಾಗುವುದೆಂದು ನಂಬಿಕೊಂಡಿದ್ದ ನನಗೆ, ನೀನು ಇಂತಹ ತುಚ್ಛಮರಣವನ್ನುಂಟುಮಾಡಬಹುದೆ?" ಎಂದು ಮೊರೆಯಿಟ್ಟನು. ಕೂಡಲೆ ಪೊಸೈಡನ್ನನೂ ಅಥೆನಿಯೂ ಮನುಷ್ಯಾಕೃತಿಯಲ್ಲಿ ಏಕಿಲೀಸಿನ ಹತ್ತಿರಕ್ಕೆ ಬಂದು ಅವನ ಕೈಗಳನ್ನು ಹಿಡಿದುಕೊಂಡು ನದಿಯತೀರಕ್ಕೆ ತಂದುಬಿಟ್ಟು, ಹೆಕ್ಟರನ್ನು ಕೊಂದ ಉತ್ತರಕ್ಷಣದಲ್ಲಿಯೇ ಅಲ್ಲಿ ನಿಲ್ಲದೆ ಗ್ರೀಕರ ಹಡಗುಗಳ ಬಳಿಗೆ ಹೊರಟುಹೋಗಬೇಕೆಂದು ಏಕಿಲೀಸಿಗೆ ಬುದ್ಧಿಯನ್ನು ಹೇಳಿ ಅದೃಶ್ಯರಾದರು.

೧೫೭. ತನ್ನ ಶತ್ರುವು ಕೈವಶವಾದನೆಂದು ಭಾವಿಸಿಕೊಂಡಿದ್ದ ಜಾಂಥಾಸನು ತನಗೆ ಹಾಗೆ ಉಂಟಾಗಿದ್ದ ಆಶಾಭಂಗದಿಂದ ಮತ್ತಷ್ಟು ಕೆರಳಿ ಪ್ರವಾಹವು ದಡಮೀರಿ ಹರಿಯುವಂತೆ ಮಾಡಿ, ನದಿಯೊಳಗೆ ತುಂಬಿಕೊಂಡಿದ್ದ ಶವಗಳನ್ನು ದಿಕ್ಕುದಿಕ್ಕಿಗೆ ಹರಡಿಬಿಟ್ಟನು. ಅನಂತರ, ಆ ನದ್ಯಭಿಮಾನದೇವನು ತನ್ನ ಸಮೀಪದಲ್ಲಿಯೇ ಹರಿಯುತ್ತಿದ್ದ ಸಿಮೊಯಿಸ್ ಎಂಬ ನದಿಯ ಅಭಿಮಾನದೇವನ ಸಹಾಯವನ್ನು ಕೋರಿ, ಅದನ್ನು ಪಡೆದುಕೊಂಡು ಏಕಿಲೀಸಿನ ಹೆಮ್ಮೆಯನ್ನು ಅಡಗಿಸಿಬಿಡಬೇಕೆಂದು ಪುನಃ ಯತ್ನಿಸಿ ಅವನಮೇಲೆ ಒಂದು ದೊಡ್ಡ ಅಲೆಯು ಬಂದು ಅಪ್ಪಳಿಸುವಂತೆ ಮಾಡಿದನು. ಆಗ, ಹೀರಾ ದೇವಿಯು ತನ್ನ ಮಗನಾದ ಹೆಫೆಸ್ಟಸ್ಸನ್ನು ಬರಮಾಡಿಕೊಂಡು ಅವನ ಮೂಲಕ ಒಂದು ಕಾಡುಕಿಚ್ಚನ್ನುಂಟುಮಾಡಿಸಿ, ಆ ನದ್ಯಭಿಮಾನದೇವತೆಗಳ ಕ್ರೋಧವನ್ನು ಅಡಗಿಸಿಬಿಟ್ಟಳು. ಹೆಫೆಸ್ಟಸ್ಸಿನ ಹಾವಳಿಯನ್ನು ತಡೆಯಲಾರದೆ ಆ ದೇವತೆಗಳು ಹೀರಾದೇವಿಯ ಕ್ಷಮಾಪಣೆಯನ್ನು ಬೇಡಿಕೊಳ್ಳಲಾಗಿ ಆಕೆಯ ಆಜ್ಞೆಯಂತೆ ಹೆಫೆಸ್ಟಸ್ಸನು ತನ್ನ ಬೇಗೆಯನ್ನು ಶಾಂತಿಪಡಿಸಿದನು.

೧೫೮. ಈ ಸಮಯದಲ್ಲಿ, ರಣಕ್ಷೇತ್ರಕ್ಕೆ ಬಂದಿದ್ದ ದೇವತೆಗಳಲ್ಲಿ ಕೋಲಾಹಲವೊಂದುಂಟಾಯಿತು! ದೇವದುಂದುಭಿಗಳು ಮೊಳಗಿದುವು; ಜ್ಯೂಸನು ಬಲವಾಗಿ ಗುಡುಗುಸಿಡಿಲುಗಳನ್ನುಂಟುಮಾಡಿದನು; ಪೃಥಿವಿಯು ನರಳುವ ಶಬ್ದವನ್ನು ಮಾಡತೊಡಗಿತು. ಯುದ್ಧಾಭಿಮಾನದೇವನಾದ ಏರೀಸನು ರಭಸದಿಂದ ಅಥೆನಿಯ ಬಳಿಗೆ ನುಗ್ಗಿ ಬಂದು, "ಎಲೈ ತೊಣಚಿಯೇ, ನೀನು ಡೈಯೊಮೀಡೀಸಿಗೆ ದುರ್ಬೋಧನೆ ಮಾಡಿ ನನಗೆ ಗಾಯಮಾಡಿಸಿದುದು ನಿನಗೆ ಜ್ಞಾಪಕವಿದೆಯೋ? ಇಗೋ, ನೋಡು! ಅದಕ್ಕಾಗಿ ಈಗ ನಿನ್ನಮೇಲೆ ಮುಯ್ಯಿತೀರಿಸಿಕೊಳ್ಳುವೆನು" ಎಂದು ಹೇಳಿ ತನ್ನ ಈಟಿಯನ್ನು ಎಸೆದನು. ಅಥೆನಿಯು ಕ್ಷಣಮಾತ್ರದಲ್ಲಿ ಹಿಂದಕ್ಕೆ ಜಿಗಿದು ಆ ಏಟನ್ನು ತಪ್ಪಿಸಿಕೊಂಡು ಒಂದು ದೊಡ್ಡ ಬಂಡೆಯನ್ನು ಎತ್ತಿ ಏರೀಸಿನಮೇಲೆ ಬೀರಿದಳು. ಆಕೆಯ ಏಟನ್ನು ತಪ್ಪಿಸಿಕೊಳ್ಳಲು ಏರೀಸಿನಿಂದಾಗದೆ ಅವನು ನೆಲದಮೇಲೆ ಉರುಳಿಕೊಂಡುದನ್ನು ನೋಡಿ, ಅಥೆನಿಯು ಉತ್ಸಾಹದಿಂದ ಅವನನ್ನು ಕುರಿತು, "ಎಲೋ ಬೆಪ್ಪ! ಇನ್ನಾದರೂ ಜ್ಞಾನವಿರಲಿ. ನೀನು ಎಂದಿಗೂ ನನ್ನ ಇದಿರಿಗೆ ನಿಂತು ಕಾದಲಾರೆ. ನೀನು ಗ್ರೀಕರ ಪಕ್ಷವನ್ನು ತ್ಯಜಿಸಿ ಟ್ರೋಜನರ

ಪಕ್ಷವನ್ನು ವಹಿಸಿದುದಕ್ಕೆ ನಿನಗೆ ಇಷ್ಟು ಶಿಕ್ಷೆ ಸಾಕಲ್ಲವೆ ?" ಎಂದು ಹಾಸ್ಯ ಮಾಡಿದಳು. ಆಗ ಅಫ್ರೊಡೈಟಿಯು ಕೆಳಗೆ ಬಿದ್ದಿದ್ದ ಏರೀಸನನ್ನು ಕರೆದುಕೊಂಡು ಹೋಗುತ್ತಿದ್ದುದನ್ನು ಹೀರಾದೇವಿಯು ಕಂಡು, ಅಥೆನಿಯನ್ನು ಕರೆದು "ಮಗು, ಆ ದುಷ್ಟೆಗೆ ಸ್ವಲ್ಪ ಬಿಸಿಮುಟ್ಟಿಸಲೊಲ್ಲೆಯ" ಎಂದು ಪ್ರೋತ್ಸಾಹಿಸಲಾಗಿ, ಅಥೆನಿಯು ತತ್ಕ್ಷಣವೇ ಅಫ್ರೊಡೈಟಿಯ ಬಳಿಗೆ ನುಗ್ಗಿ ಅವಳ ಎದೆಯಮೇಲೆ ಬಲವಾಗಿ ಗುದ್ದಿದಳು. ಅಫ್ರೊಡೈಟಿಯು ಆ ಏಟನ್ನು ತಡೆದುಕೊಳ್ಳಲಾರದೆ ಏರೀಸನನ್ನು ನೆಲದಮೇಲೆ ಕೆಡವಿ ತಾನೂ ದೊಪ್ಪನೆ ಬಿದ್ದುಬಿಟ್ಟಳು. ಅವರ ದುರವಸ್ಥೆಯನ್ನು ಕಂಡು ಹೀರಾದೇವಿಯು ಬಹಳ ಸಂತೋಷಪಟ್ಟಳು.

೧೫೯. ಅತ್ತ ಪೊಸೈಡನ್ನನು ತನ್ನ ಇದಿರಿಗಿದ್ದ ಅಪೋಲೋವನ್ನು ಕುರಿತು—"ನಾವೇಕೆ ಇಲ್ಲಿ ಸುಮ್ಮನೆ ನಿಂತಿರಬೇಕು ? ಯುದ್ಧಮಾಡದೆಯೇ ನಾವು ಕಂಚಿನ ಹೊಸ್ತಿಲುಳ್ಳ ಸ್ವರ್ಗವನ್ನು ಪ್ರವೇಶಿಸಿದರೆ ದೇವತೆಗಳೆಲ್ಲರೂ ನಮ್ಮನ್ನು ನೋಡಿ ನಗುವರು. ಆದುದರಿಂದ ಬಾ ನಾವೂ ಯುದ್ಧಮಾಡುವ. ನೀನೇ ಯುದ್ಧವನ್ನು ಮೊದಲುಮಾಡು. ಹಿಂದೆ ನಾನೂ ನೀನೂ ಜ್ಯೂಸಿನ ಕೋಪದಿಂದ ಮಾನವರಾಗಿ ಹುಟ್ಟಿ ಟ್ರಾಯ್ ಪಟ್ಟಣದ ದೊರೆಯಾಗಿದ್ದ ಲ್ಯಾವೊಮಿಡನ್ನಿನ ಬಳಿಯಲ್ಲಿ ಸೇವಕರಾಗಿದ್ದುಕೊಂಡು ಅವನ ಆಜ್ಞೆಯಂತೆ ಇಲ್ಲಿಯ ಕೋಟೆಯ ಗೋಡೆಯನ್ನು ಕಟ್ಟಿಕೊಟ್ಟುದೂ, ಆ ಬಳಿಕ ಅವನು ಹಿಂದೆ ವಾಗ್ದಾನಮಾಡಿದ್ದ ದಿವ್ಯಾಶ್ವಗಳನ್ನು ನಮಗೆ ಕೊಡದೆ ಪುನಃ ಆ ಕುದುರೆಗಳ ಸುದ್ದಿಯನ್ನೆತ್ತಿದರೆ ಕಿವಿಗಳನ್ನು ಹರಿಸಿ ಕೈಕಾಲುಗಳನ್ನು ಬಿಗಿಸಿ ನಮ್ಮನ್ನು ದ್ವೀಪಾಂತರಗಳಲ್ಲಿ ಮಾರಿಸಿಬಿಡುವುದಾಗಿ ಬೆದರಿಸಿದುದೂ ನಿನಗೆ ಜ್ಞಾಪಕವಿದೆಯೆ ? ಅಂತಹ ಕೃತಘ್ನಾಗ್ರೇಸರರಾದ ಟ್ರೋಜನರ ಪಕ್ಷವನ್ನು ವಹಿಸಿರುವ ನಿನ್ನ ವಿವೇಕವನ್ನು ಎಷ್ಟು ಕೊಂಡಾಡಿದರೂ ಸಾಲದು ! ಇರಲಿ ! ಬಾ. ನನ್ನೊಡನೆ ಯುದ್ಧಕ್ಕೆ ನಿಲ್ಲು" ಎಂದು ಮರ್ಮಭೇದಕವಾಗಿ ಹೇಳಿದನು.

೧೬೦. ಅಪೋಲೋದೇವನು ಅದಕ್ಕೆ ಪ್ರತ್ಯುತ್ತರವಾಗಿ "ಎಲೈ ಸಾಗರಾಧಿಪತಿಯೇ, ಒಂದು ಋತುವಿನಲ್ಲಿ ಚಿಗುರಿ ಮತ್ತೊಂದು ಋತುವಿನಲ್ಲಿ ಉದಿರಿಹೋಗುವ ಎಲೆಗಳಂತೆ ಅಲ್ಪಕಾಲಜೀವಿಗಳಾಗಿರುವ ಮರ್ತ್ಯರಿಗಾಗಿ ನಾವೇಕೆ ಕಾದಾಡಬೇಕು ? ನನಗೆ ಅಂತಹ ಹುಚ್ಚೇನೂ ಇಲ್ಲ. ಆ ಮಾನವರು ತಮ್ಮತಮ್ಮಲ್ಲೇ ಬೇಕಾದಷ್ಟು ಕಾದಾಡಲಿ" ಎಂದು ಹೇಳಿದನು. ಆತನ ಸಹೋ

ದರಿಯಾದ ಆರ್ಟಿಮಿಸ್ಸಳು ಈ ಮಾತುಗಳನ್ನು ಕೇಳಿ “ ಎಲೈ ಸೋದರನೆ, ಹಾಗಾದರೆ ಈ ಬಿಲ್ಲುಬಾಣಗಳು ವೃಥಾ ನಿನಗೆ ಹೊರೆಯಾಗಿರುವುವಲ್ಲವೆ? ಇಂತಹ ಉತ್ತಮಾಯುಧಗಳು ನಿನ್ನಂತಹ ಭೀರುಗಳಿಗೇಕೆ ? ” ಎಂದು ಅಪೋಲೋವನ್ನು ಧಿಕ್ಕರಿಸಿದಳು. ಹೀರಾದೇವಿಯು ಈ ದೂಷಣೆಯನ್ನು ಕೇಳಿ ರೇಗಿ ಆರ್ಟಿಮಿಸ್ಸಳ ಬಳಿಗೆ ತಟ್ಟನೆ ಬಂದು “ ಎಲೆ ಕುತಂತ್ರಿ ಹೆಣ್ಣೆ ! ನಿನಗೆ ಇಷ್ಟೊಂದು ಧೈರ್ಯಬಂದಿತೆ ? ” ಎಂದು ಹೇಳಿ ಕಪೋಲಕ್ಕೆ ಎರಡು ಏಟುಗಳನ್ನು ಹೊಡೆಯಲು, ಆರ್ಟಿಮಿಸ್ಸಳು ತನ್ನ ಬಿಲ್ಲುಬಾಣಗಳನ್ನು ಕೆಳಕ್ಕೆಸೆದುಬಿಟ್ಟು ಗಿಡುಗವನ್ನು ಕಂಡು ಓಡಿಹೋಗುವ ಪಾರಿವಾಳದಂತೆ ಪಲಾಯನಮಾಡಿ ಜ್ಯೂಸಿನ ಬಳಿಗೆ ಹೋಗಿ ಹೀರಾದೇವಿಯಮೇಲೆ ಬಹಳವಾಗಿ ದೂರುಹೇಳಿಕೊಂಡಳು.

೧೬೧. ಅತ್ತ ಕೋಟೆಯ ಗೋಡೆಯಮೇಲೆ ನಿಂತು ನೋಡುತ್ತಿದ್ದ ಪ್ರಯಾಮನು ಟ್ರೋಜನರನ್ನು ನಿಂತಲ್ಲಿ ನಿಲ್ಲಗೊಡಿಸದೆ ಏಕಿಲೀಸನು ಅಟ್ಟಿಕೊಂಡು ಬರುತ್ತಿದ್ದುದನ್ನು ಕಂಡು, ಕೋಟೆಯ ಬಾಗಿಲುಗಳ ಬಳಿಗೆಹೋಗಿ ಅಲ್ಲಿದ್ದ ಕಾವಲುಗಾರರನ್ನು ಕುರಿತು, “ ನಮ್ಮ ಕಡೆಯವರು ಓಡಿಬರುತ್ತಿರುವರು. ಬೇಗನೆ ಬಾಗಿಲುಗಳನ್ನು ತೆಗೆದು ಅವರು ಒಳಕ್ಕೆ ಬಂದಕೂಡಲೆ ಪುನಃ ಮುಚ್ಚಿಬಿಡಿ ” ಎಂದು ಹೇಳಿದನು. ಅವರು ಅದೇಮೇರೆಗೆ ಬಾಗಿಲನ್ನು ತೆರೆಯಲು ಅನೇಕ ಟ್ರೋಜನರು ಕೋಟೆಯೊಳಕ್ಕೆ ಬಂದು ಸೇರಿಕೊಂಡರು. ಆಗ ಅಪೋಲೋದೇವನು ಅಜಿನರ್ ಎಂಬ ಒಬ್ಬ ಟ್ರೋಜನನನ್ನು ಪ್ರೋತ್ಸಾಹಿಸಿ ಏಕಿಲೀಸಿನ ಮುಂದೆ ಸುಳಿದಾಡಿ ಅವನನ್ನು ಬೇರೊಂದುದಿಕ್ಕಿಗೆ ಎಳೆದುಕೊಂಡು ಹೋಗುವಹಾಗೆ ಏರ್ಪಡಿಸಿದನು. ಆದುದರಿಂದ ಏಕಿಲೀಸನು ಅಜಿನರನ್ನು ಸ್ವಲ್ಪದೂರ ಅಟ್ಟಿಕೊಂಡು ಹೋಗಲು, ಅವನು ತಟ್ಟನೆ ಹಿಂದಕ್ಕೆ ತಿರುಗಿ ತನ್ನ ಈಟಿಯನ್ನು ಏಕಿಲೀಸಿನಮೇಲೆ ಎಸೆದನು. ಆದರೂ ಅದರಿಂದ ಏನೂ ಪ್ರಯೋಜನವಾಗಲಿಲ್ಲ. ಏಕಿಲೀಸನೂ ತನ್ನ ಪ್ರತ್ಯರ್ಥಿಯಮೇಲೆ ಈಟಿಯನ್ನೆಸೆಯುವಷ್ಟರಲ್ಲಿ ಅಪೋಲೋದೇವನು ಅಜಿನರಿನ ಸುತ್ತಲೂ ಒಂದು ಮೋಡವು ಮುಚ್ಚಿಕೊಳ್ಳುವಂತೆ ಮಾಡಿ ಮತ್ತೆ ಸ್ವಲ್ಪ ದೂರದಲ್ಲಿ ತಾನೇ ಅಜಿನರಿನ ವೇಷವನ್ನು ಧರಿಸಿ ಏಕಿಲೀಸನ್ನು ಮತ್ತಷ್ಟು ದೂರ ಎಳೆದುಕೊಂಡು ಹೋದನು. ಇಷ್ಟುಹೊತ್ತಿಗೆ ಹೆಕ್ಟರೊಬ್ಬನು ಹೊರತಾಗಿ ಟ್ರೋಜನರೆಲ್ಲರೂ ಕೋಟೆಯೊಳಕ್ಕೆ ಸೇರಿಕೊಂಡು ಬಿಟ್ಟಿದ್ದರು.

---

# XXV.

೧೬೨. ಅಪೋಲೋದೇವನು ತಟ್ಟನೆ ಓಡುವುದನ್ನು ನಿಲ್ಲಿಸಿ "ಅಯ್ಯಾ, ಎಕಿಲೀಸ್, ಎಷ್ಟೇ ಆದರೂ ನೀನು ಮಾನವನೇ, ನಾನು ದೇವನೇ. ನೀನು ಇನ್ನೆಷ್ಟೇ ಕಷ್ಟಪಟ್ಟರೂ ನೀನು ಬೇರೆ ನನ್ನನ್ನು ಹಿಡಿಯಲಾರೆ" ಎಂದು ಹೇಳಿದನು. ಏಕಿಲೀಸನು ಆ ಮಾತುಗಳನ್ನು ಕೇಳಿ "ಎಲೈ ಅಪೋಲೋ ದೇವನೆ, ನನ್ನನ್ನು ಬೇರೊಂದುದಿಕ್ಕಿಗೆ ಎಳೆತಂದು ನನ್ನ ಮನೋರಥವನ್ನು ಭಂಗಪಡಿಸಿದೆ. ದೇವತೆಗಳಮೇಲೆ ಮಾನವರ ಕೈಯು ನಡೆಯುವಹಾಗಿದ್ದರೆ ನಿನ್ನನ್ನು ಈಗಲೇ ಏನುಮಾಡಿಬಿಡುತ್ತಿದ್ದೆನೋ!" ಎಂದು ಗರ್ಜಿಸಿ ಟ್ರಾಯ್ ನಗರದ ದಿಕ್ಕಿಗೆ ತಿರುಗಿದನು.

೧೬೩. ಕೋಟೆಯ ಹೊರಗಡೆ ಒಂಟಿಯಾಗಿ, ನಿಂತಿದ್ದ ಹೆಕ್ಟರನನ್ನೂ ಮೃಗಶಿರಾನಕ್ಷತ್ರರಾಶಿಯಲ್ಲಿ ಕೆಂಪಗೆ ಪ್ರಕಾಶಿಸುವ ಸಿರಿಯಸ್ ನಕ್ಷತ್ರದಂತೆ ಥಳಥಳಿಸುತ್ತಿದ್ದ ಗುರಾಣಿಯನ್ನು ಹಿಡಿದು ತನ್ನ ಮಗನಮೇಲೆ ನುಗ್ಗಿಬರುತ್ತಿದ್ದ ಏಕಿಲೀಸನನ್ನೂ ಕಂಡು ಪ್ರಯಾಮನು ತನ್ನ ತಲೆಯನ್ನು ಕೈಗಳಿಂದ ಬಡಿದು ಕೊಳ್ಳುತ್ತಾ ಹೆಕ್ಟರನನ್ನು ಕರೆದು ಪಟ್ಟಣದೊಳಕ್ಕೆ ಒಂದುಬಿಡುವಂತೆ ಬಗೆಬಗೆ ಯಾಗಿ ಬೇಡಿಕೊಂಡನು. "ಅಪ್ಪಾ ಹೆಕ್ಟರನೇ, ದುರಾತ್ಮನಾದ ಈ ಏಕಿ ಲೀಸನು ನನ್ನ ಮಕ್ಕಳಲ್ಲಿ ಕೆಲವರನ್ನು ಸೆರೆಹಿಡಿದು ಪರದೇಶದಲ್ಲಿ ದಾಸರನ್ನಾಗಿ ಮಾರಿಬಿಟ್ಟಿರುವನು; ಮತ್ತೆ ಅನೇಕರನ್ನು ಕೊಂದೇಬಿಟ್ಟಿರುವನು ಲಿಸಿಯಾನನೂ ಪಾಲಿಡೋರಸನೂ ಈ ದುಷ್ಟನಿಗೆ ಸೆರೆಸಿಕ್ಕಿರುವರೋ? ಅಥವಾ ಮೃತ್ಯುಸ್ವ ರೂಪನಾದ ಈ ದುರಾತ್ಮನಿಂದ ಹತರಾದರೋ? ತಿಳಿಯದಲ್ಲಾ! ಒಂದುವೇಳೆ ಸೆರೆಸಿಕ್ಕಿದ್ದ ಪಕ್ಷದಲ್ಲಿ ಲ್ಯಾವೋಟೆಗೆ ಅವರ ಮಾತಾಮಹನು ಅಪಾರವಾಗಿ ಕೊಟ್ಟಿರುವ ಬಳಿವಳಿಯಿಂದ ಬೇಕಾದಷ್ಟು ಪರಿಹಾರದ್ರವ್ಯವನ್ನು ಸಲ್ಲಿಸಿ ಅವರನ್ನು ಬಿಡಿಸಿಕೊಳ್ಳುವೆನು. ಒಂದುವೇಳೆ ಅವರು ಹತರಾಗಿ ಹೋಗಿದ್ದರೆ, ನಾನು ಏನು ಮಾಡಲಿ! ಅಯ್ಯೋ! ಮಗು, ಹೆಕ್ಟರ್, ನೀನು ಈಗ ಪಟ್ಟಣದೊಳಕ್ಕೆ ಬಂದು ಬಿಟ್ಟರೆ, ನನ್ನ ದುಃಖವು ಬಹಳಮಟ್ಟಿಗೆ ಶಾಂತವಾಗುವುದಪ್ಪಾ! ಮುದುಕ ನಾದ ನಿನ್ನ ತಂದೆಯಮೇಲೆ ನಿನಗೆ ದಯೆಯಿಲ್ಲವೆ? ಈ ದುಷ್ಟನ ಕೈಯಿಂದ ನೀನೂ ಹತನಾದರೆ, ನಮ್ಮ ಹೆಂಗುಸರಮಕ್ಕಳ ಗತಿಯೇನಾಗುವುದು? ಎಂದು ಯೋಚಿಸುವುದಿಲ್ಲವೆ? ನನ್ನ ಅವಸ್ಥೆಯು ಏನಾಗುವುದು ಬಲ್ಲೆಯಾ? ನನ್ನನ್ನೂ ಯಾವನೋ ಬಿಟ್ಟು ಹುಮ್ಮಾಗಿಗ... ಕೊರಗುತ್ತಿರುವನು. ಈಗ ...

ಹಾಕಿದ ನಾಯಿಗಳೇ ನನ್ನನ್ನು ಅತ್ತಿತ್ತ ಎಳೆದಾಡುತ್ತಾ, ಕಿತ್ತು ತಿಂದುಬಿಡುವು ವಲ್ಲಾ! ಇಂತಹ ದುರ್ಗತಿಗೆ ನನ್ನನ್ನು ಗುರಿಮಾಡಬೇಡಪ್ಪಾ!" ಎಂದು ಗೋಳಾಡಿದನು. ಹೆಕ್ಟರನ ತಾಯಿಯಾದ ಹೆಕ್ಯೂಬಳೂ ಕೋಟೆಯ ಗೋಡೆಯಮೇಲೆ ನಿಂತು ಹೆಕ್ಟರನ್ನು ಪಟ್ಟಣದೊಳಕ್ಕೆ ಬಂದುಬಿಡುವಂತೆ ಎಷ್ಟೋ ಬಗೆಯಾಗಿ ಪ್ರಾರ್ಥಿಸಿಕೊಂಡಳು.

೧೬೪. ತನ್ನ ವೃದ್ಧಮಾತಾಪಿತೃಗಳ ಗೋಳನ್ನು ಕೇಳಿದ್ದರೂ, ಹೆಕ್ಟರನು ಅವರಮಾತಿಗೆ ವಿಧೇಯನಾಗಿ ಕಿವಿಗೊಡಲಿಲ್ಲ. ಕೋಟೆಯೊಳಗೆ ಕಾಲಿಟ್ಟಕೂಡಲೆ ಪಾಲಿಡೇಮಸ್ಸನು ತನ್ನನ್ನು ಹಂಗಿಸದೆ ಬಿಡನೆಂದು ಅವನು ಹೆದರಿಕೊಂಡಿದ್ದನು. ಆದರೂ ಒಂದುಸಲ, ತನ್ನ ಶಸ್ತ್ರಕವಚಾದಿಗಳನ್ನು ತೆಗೆದು ಹಾಕಿ ಏಕಿಲೀಸಿಗೆ ಕಾಣಿಸಿಕೊಂಡು—"ಹೆಲೆನಳನ್ನೂ ಅವಳು ತಂದಿದ್ದ ದ್ರವ್ಯಗಳನ್ನೂ ಟ್ರಾಯ್ ಪಟ್ಟಣದ ಸಕಲೈಶ್ವರ್ಯವನ್ನೂ ಗ್ರೀಕರಿಗೆ ಒಪ್ಪಿಸಿ ಬಿಡುವೆವು" ಎಂದು ಹೇಳಿದರೆ ಏಕಿಲೀಸನು ಸಮ್ಮತಿಸಬಹುದೆಂದು ಹೆಕ್ಟರನು ಭಾವಿಸಿಕೊಂಡನು. ಆದರೆ ಉತ್ತರಕ್ಷಣದಲ್ಲಿಯೇ, ಏಕಿಲೀಸನು ತನ್ನಮಾತಿಗೆ ಕಿವಿಗೊಡದೆ ತನ್ನಮೇಲೆ ಬಿದ್ದರೆ, ಆಗ ಹೆಂಗುಸಿನಂತೆ ಶಸ್ತ್ರವಿಹೀನನಾಗಿ ಏಕಿಲೀಸನ ಕೈಯಿಂದ ಸಾಯಬೇಕಾಗುವುದೆಂದು ಯೋಚಿಸಿಕೊಂಡನು. ಹೀಗೆ ಸ್ವಲ್ಪಹೊತ್ತು ಬಗೆಬಗೆಯಾಗಿ ಯೋಚಿಸಿಕೊಳ್ಳುತ್ತಾ, ಕಡೆಗೆ ಅವನೊಡನೆ ಕಾದಾಡುವುದೇ ಸರಿಯೆಂದು ನಿರ್ಧರಿಸಿಕೊಂಡು ಯುದ್ಧಕ್ಕೆ ಸಿದ್ಧನಾದನು.

೧೬೫. ಆದರೆ ಇನ್ನು ಸ್ವಲ್ಪಹೊತ್ತಿನಲ್ಲಿಯೇ ಹೆಕ್ಟರಿನ ಮನಸ್ಸು ಬಲವಾದ ಕಳವಳಕ್ಕೀಡಾಯಿತು. ಆದುದರಿಂದ ಅವನು ಅಲ್ಲಿ ನಿಲ್ಲದೆ ಕೋಟೆಯ ಸುತ್ತಲೂ ಓಡಲು ಮೊದಲುಮಾಡಿದನು. ಗಿಡುಗವು ಪಾರಿವಾಳವನ್ನು ಅಟ್ಟಿಕೊಂಡು ಹೋಗುವಂತೆ ಏಕಿಲೀಸನು ಹೆಕ್ಟರಿನ ಬೆನ್ನಟ್ಟಿದನು. ಸ್ಕಮಾಂಡ್ರಾಸ್ ನದಿಗೆ ಹರಿದು ನೀರನ್ನು ಒದಗಿಸುತ್ತಿದ್ದ ತಣ್ಣೀರಿನ ಚಿಲುಮೆಯನ್ನೂ ಬಿಸಿನೀರಿನ ಬುಗ್ಗೆಯನ್ನೂ ದಾಟಿ, ಶಾಂತಿಕಾಲದಲ್ಲಿ ಟ್ರಾಯ್‌ನಗರದ ಸ್ತ್ರೀಯರು ಬಟ್ಟೆಗಳನ್ನು ಒಗೆಯುತ್ತಿದ್ದ ಕಲ್ಯಾಣಿಗಳನ್ನೂ ಹಿಂದೆಬಿಟ್ಟು, ಜೂಜಿನ ಕುದುರೆಗಳಂತೆ ಅವರಿಬ್ಬರೂ ಆ ನಗರಿಯ ಸುತ್ತಲೂ ಮೂರು ಬಳಸುಹಾಕಿದರು. ನಾಲ್ಕನೆಯ ಪ್ರದಕ್ಷಿಣವು ಪ್ರಾರಂಭವಾಗುವ ಸಮಯದಲ್ಲಿ ಅಥೀನಾದೇವಿಯು ಡಿಯಿಫೋಬಸ್ಸನ ಆಕೃತಿಯಿಂದ ಹೆಕ್ಟರನಿಗೆ ಕಾಣಿಸಿಕೊಂಡಳು. ಹೆಕ್ಟರನು ಅಲ್ಲಿಯೇ ನಿಂತು

ಏಕಿಲೀಸನ್ನು ಇದಿರಿಸುವಂತೆಯೂ, ತಾನೂ ಸಹಾಯಮಾಡುವಂತೆಯೂ ಹೇಳಿ ಪ್ರೋತ್ಸಾಹಿಸಿದುದರಿಂದ, ಅವನು ನಿಂತುಕೊಂಡು “ಏಕಿಲೀಸ್, ಇನ್ನು ನಾನು ನಿನಗೆ ಬೆನ್ನುತೋರಿಸಿ ಓಡಿಹೋಗುವುದಿಲ್ಲ. ದೈವಸಾಕ್ಷಿಯಾಗಿ ಹೇಳುವ ನನ್ನ ಈ ಮಾತುಗಳನ್ನು ಕೇಳು. ಒಂದುವೇಳೆ ನಾನೇ ನಿನ್ನನ್ನು ಕೊಂದರೆ, ನಿನ್ನ ಶರೀರವನ್ನು ಯೋಗ್ಯಸಂಸ್ಕಾರಕ್ಕಾಗಿ ನಿಮ್ಮ ಕಡೆಯವರಿಗೆ ಒಪ್ಪಿಸಿಬಿಡುವೆನು ; ಹಾಗಲ್ಲದೆ ನೀನೇ ನನ್ನನ್ನು ಕೊಂದರೂ, ನೀನು ನನ್ನ ದೇಹವನ್ನು ನಮ್ಮವರಿಗೆ ಒಪ್ಪಿಸಿಬಿಡು” ಎಂದು ಹೇಳಿದನು. ಅದಕ್ಕೆ ಏಕಿಲೀಸನು—“ಹುಚ್ಚ, ನನಗೂ ನಿನಗೂ ನಿಯಮನಿಬಂಧನೆಗಳಾಗುವುದುಂಟೆ? ಸಿಂಹಗಳಿಗೂ ಮಾನವರಿಗೂ ಎಲ್ಲಿಯ ನಿಬಂಧನೆಗಳು? ತೋಳಗಳಿಗೂ ಕುರಿಗಳಿಗೂ ಎಂತಹ ಸಂಧಿ? ಕೆಲಸಕ್ಕೆ ಬಾರದ ಈ ಮಾತುಗಳನ್ನು ಬಿಟ್ಟು, ಶೂರನಂತೆ ಈಟಿಯನ್ನು ಹಿಡಿದು ಯುದ್ಧಕ್ಕೆ ನಿಲ್ಲು. ಒಂದು ಗಂಟೆಯಲ್ಲಿಯೇ ನಿನ್ನನ್ನು ಕೊಂದುಬಿಟ್ಟು ನನ್ನ ಹಗೆಯನ್ನು ತೀರಿಸಿಕೊಳ್ಳುವೆನು” ಎಂದು ಹೇಳಿ ತತ್‌ಕ್ಷಣವೇ ತನ್ನ ಈಟಿಯನ್ನು ಪ್ರಯೋಗಿಸಿದನು. ಆದರೆ ಹೆಕ್ಟರನು ಚಾತುರ್ಯದಿಂದ ಆ ಗುರಿಯನ್ನು ತಪ್ಪಿಸಿಕೊಂಡಕಾರಣ, ಅಥೆನಿದೇವಿಯು ಅದನ್ನು ನೋಡಿ ಸಹಿಸಲಾರದೆ ನೆಲದಲ್ಲಿ ನಾಟಿಕೊಂಡಿದ್ದ ಈಟಿಯನ್ನು ಕಿತ್ತು ಏಕಿಲೀಸಿಗೆ ತೆಗೆದುಕೊಟ್ಟಳು. ಇಷ್ಟರಲ್ಲಿ ಹೆಕ್ಟರನೂ ತನ್ನ ಈಟಿಯನ್ನು ಪ್ರಯೋಗಿಸಿದನು ಆದರೆ ದೇವನಿರ್ಮಿತವಾದ ಗುರಾಣಿಯಮೇಲೆ ಆ ಈಟಿಯ ಪ್ರಭಾವವೇನೂ ಸಾಗದೆ, ಅದು ಹಿಂದಕ್ಕೆ ಸಿಡಿದುಹೋಯಿತು. ಆದುದರಿಂದ ಹೆಕ್ಟರನು ತನ್ನ ತಮ್ಮನಾದ ಡೆಯಿಫೋಬಸ್ಸನ್ನು ಕರೆದು ಮತ್ತೊಂದು ಈಟಿಯನ್ನು ಕೊಡಹೇಳಲಾಗಿ, ಅವನ ಸುಳಿವೇ ಕಾಣಲಿಲ್ಲ! ಕೂಡಲೆ ಹೆಕ್ಟರನು ಹಿಂದೆ ತನಗೆ ಕಾಣಿಸಿಕೊಂಡಿದ್ದ ಡೆಯಿಫೋಬಸ್ಸನು ನಿಜವಾದವನಲ್ಲವೆಂದು ನಿರ್ಧರಿಸಿ, ತನ್ನ ಕತ್ತಿಯನ್ನೇ ಹಿರಿದು ರಭಸದಿಂದ ಏಕಿಲೀಸಿನಮೇಲೆ ನುಗ್ಗಿಬೀಸಿದನು. ಪುನಃ, ಏಕಿಲೀಸನ ಗುರಾಣಿಯಮೇಲೆ ಹೆಕ್ಟರಿನ ಆಯುಧವು ಕೆಂದಲಾರದೆ ಹೋಯಿತು.

೧೬೬. ಹೆಕ್ಟರನು ಧರಿಸಿಕೊಂಡಿದ್ದ ಪೆಟ್ರೋಕ್ಲಸ್ಸಿನ ಕವಚ ಶಿರಸ್ತ್ರಾಣಾದಿಗಳನ್ನು ಚೆನ್ನಾಗಿ ಪರೀಕ್ಷಿಸಿ, ಏಕಿಲೀಸನು ಆಯವಾಗಿದ್ದ ಪ್ರದೇಶದಲ್ಲಿ ತನ್ನ ಈಟಿಯಿಂದ ತಿವಿದುಬಿಟ್ಟುದರಿಂದ, ಹೆಕ್ಟರನು ಆ ಏಟನ್ನು ತಡೆಯಲಾರದೆ ಕ್ಷಣಮಾತ್ರದಲ್ಲಿ ನೆಲಕ್ಕೆ ಬಿದ್ದುಬಿಟ್ಟನು. ಆಗ ಏಕಿಲೀಸನು ತನ್ನ ಪ್ರತ್ಯರ್ಥಿ

ಯನ್ನು ಕುರಿತು. “ಎಲೋ ಮೂಢನೆ, ಪೆಟ್ರೋಕ್ಲಸ್ಸನ್ನು ಕೊಂದಾಗ ಏನು ಯೋಚಿಸಿಕೊಂಡಿದ್ದೆ? ನಿನಗೆ ಆ ಸಮಯದಲ್ಲಿ ನನ್ನ ಜ್ಞಾಪಕವೇ ಬಾರಲಿಲ್ಲವಲ್ಲವೆ? ಈಗ ನೋಡು. ನಿನ್ನ ಹೆಣವನ್ನು ಹದ್ದು ಕಾಗೆ ನಾಯಿಗಳು ಕಿತ್ತು ತಿನ್ನುವುವು” ಎಂದು ಹೇಳಿದನು. ಹೆಕ್ಟರನು ಮಾತನಾಡಲಾರದೆ ದೀನ ಸ್ವರದಿಂದ ತನ್ನ ದೇಹಕ್ಕೆ ಅವಮಾನಮಾಡಕೂಡದೆಂದೂ, ಅಗ್ನಿಸಂಸ್ಕಾರಕ್ಕಾಗಿ ಅದನ್ನು ಟ್ರೋಜನರಿಗೆ ಒಪ್ಪಿಸಿದ ಪಕ್ಷದಲ್ಲಿ, ಅವರು ಅದಕ್ಕಾಗಿ ಬಹಳ ಹಣವನ್ನು ಕೊಡುವರೆಂದೂ ತಿಳಿಸಿ ಪ್ರಾರ್ಥಿಸಿಕೊಂಡನು. ಆದರೆ ಏಕಿಲೀಸಿನ ಮನಸ್ಸು ಕಲ್ಲಿನಂತಾಗಿದ್ದುದರಿಂದ ಅವನು—“ನಾಯಿಯೆ, ಬಾಯಿಮುಚ್ಚು, ನಿನ್ನ ಹೆಣದ ತೂಕದ ಚಿನ್ನವನ್ನು ಕೊಟ್ಟರೂ ಅದನ್ನು ನಿನ್ನ ಕಡೆಯವರಿಗೆ ಕೊಡಲಾರೆನು” ಎಂದು ಗದರಿಸಿದನು. ಹೆಕ್ಟರನು ಅವನ ಹೃದಯಕಾಠಿನ್ಯವನ್ನು ದೂಷಿಸಿ, ಅವನನ್ನೂ ಟ್ರಾಯ್‌ಪಟ್ಟಣದ ಸ್ಕೀಯನ್‌ದ್ವಾರದ ಬಳಿಯಲ್ಲಿ ಪ್ಯಾರಿಸ್ಸನೂ ಅಪೋಲೋದೇವನೂ ಕೊಂದುಬಿಡುವರೆಂದು ತಿಳಿಸಿ ಪ್ರಾಣ ಬಿಟ್ಟನು. ಅದಕ್ಕೆ ಏಕಿಲೀಸನು ವ್ಯಥೆಪಡದೆ ತನ್ನ ವಿಧಿಯಿದ್ದಂತೆ ನಡೆದು ಹೋಗಲೆಂದು ಹೇಳಿ ಕೂಡಲೆ ಹೆಕ್ಟರಿನ ಶಸ್ತ್ರಕವಚಾದಿಗಳನ್ನು ವಶಪಡಿಸಿಕೊಂಡನು. ಬಳಿಕ ಅವನ ಪಾದಗಳಲ್ಲಿ ಒಂದೊಂದು ರಂಧ್ರವನ್ನು ಕೊರೆದು, ಅವುಗಳೊಳಕ್ಕೆ ಚರ್ಮದ ಪಟ್ಟಿಗಳನ್ನು ಪೋಣಿಸಿ ಆ ಪಟ್ಟಿಗಳನ್ನು ತನ್ನ ರಥಕ್ಕೆ ಬಿಗಿದು ಅದನ್ನು ಟ್ರಾಯ್ ಪಟ್ಟಣದ ಸುತ್ತಲೂ ವೇಗವಾಗಿ ಮೂರುಸಲ ಪ್ರದಕ್ಷಿಣೆ ಮಾಡಿಸಿದನು. ಆ ಘೋರಕೃತ್ಯವನ್ನು ಕಂಡು ಪ್ರಿಯಾಮನೂ ಹೆಕ್ಯೂಬಳೂ ಉಳಿದ ಟ್ರೋಜನರೂ ಬಹಳವಾಗಿ ಶೋಕಿಸಿದರು. ಕ್ರೂರಾತ್ಮನಾದ ಏಕಿಲೀಸನ್ನು ಪ್ರಾರ್ಥಿಸಿಕೊಂಡು ತನ್ನ ಮಗನ ಶರೀರವನ್ನು ತರುವುದಕ್ಕಾಗಿ ಪ್ರಿಯಾಮನು ಹಲವುಬಾರಿ ಪಟ್ಟಣದಿಂದ ಹೊರಕ್ಕೆ ಬರಲು ಯತ್ನಿಸಿದನು. ಆದರೆ ಅವನ ಪ್ರಯತ್ನವು ನಿಷ್ಫಲವಾಗುವುದೆಂದು ಟ್ರೋಜನರು ಅವನನ್ನು ತಡೆದು ನಿಲ್ಲಿಸಿದರು.

೧೬೭. ಈ ಸಮಯದಲ್ಲಿ, ಹೆಕ್ಟರಿನ ಪತ್ನಿಯಾದ ಆಂಡ್ರೊಮೇಕಿಯು ತನ್ನ ಪತಿಯು ಸ್ವಲ್ಪಹೊತ್ತಿನಲ್ಲೇ ಯುದ್ಧಭೂಮಿಯಿಂದ ದಣಿದು ಹಿಂದಿರುಗುವನೆಂದೂ, ಆತನಿಗೆ ಸ್ನಾನಕ್ಕಾಗಿ ಬಿಸಿನೀರನ್ನು ಕಾಯಿಸಿ ಸಿದ್ಧಪಡಿಸಿರಬೇಕೆಂದೂ ತನ್ನ ಸೇವಕಿಯರಿಗೆ ಆಜ್ಞಾಪಿಸಿ, ತಾನು ಅಂದವಾದ ಕಸೂತಿಯ ಒಂದು

ಚಾಳವನ್ನು ಹಾಕುತ್ತಿದ್ದಳು. ಅಷ್ಟರಲ್ಲಿ ಕೋಟೆಯಿಂದ ಗೋಳಿನ ದೊಡ್ಡ ಶಬ್ದವೊಂದು ಕೇಳಬಂದುದರಿಂದ, ಆಂಡ್ರೊಮೇಕಿಯು ತಟ್ಟನೆ ಹೊರಕ್ಕೆ ಬಂದು ವಿಚಾರಿಸಲಾಗಿ ಹೆಕ್ಟರಿನ ಮರಣವಾರ್ತೆಯು ತಿಳಿದುಬಂದಿತು. ಆ ಭಯಂಕರ ವಾದ ಸುದ್ದಿಯನ್ನು ಕೇಳಿದಕೂಡಲೆ ಅವಳ ಕಣ್ಣುಗಳಿಗೆ ಗಾಢಾಂಧಕಾರವು ಮುಚ್ಚಿಕೊಂಡಂತಾಗಿ ಅವಳು ಸ್ಮೃತಿತಪ್ಪಿ ಬಿದ್ದುಬಿಟ್ಟಳು. ಆಗ ಅವಳ ಅತ್ತಿಗೆ ನಾದಿನಿಯರೂ ಓರಗಿತ್ತಿಯರೂ ಬಂದು ಬಹಳ ಶೈತ್ಯೋಪಚಾರ ಮಾಡಿದಬಳಿಕ, ಆಕೆಗೆ ಸ್ಮರಣೆಯುಂಟಾಗಿ ತನಗೂ ತನ್ನ ಶಿಶುವಿಗೂ ಒದಗಿದ್ದ ದುರವಸ್ಥೆಗಾಗಿ ಅವಳು ಬಹಳ ಶೋಕಿಸಿದಳು.

---

## XXVI

೧೬೮. ಅತ್ತ ಗ್ರೀಕ್ ಸೈನ್ಯದಲ್ಲಿ ಮರ್ಮಿಡನ್ನರು ಹೊರತಾಗಿ ಉಳಿದವರೆಲ್ಲರೂ ತಮ್ಮ ಹಡಗುಗಳ ಬಳಿಗೆ ಹಿಂದಿರುಗಿದ್ದರು. ಮರ್ಮಿಡನ್ನರು ಮಾತ್ರ ಏಕಿಲೀಸಿನ ಅಪ್ಪಣೆಯಂತೆ ಪೆಟ್ರೋಕ್ಲಸ್ಸಿನ ಶವದ ಸುತ್ತಲೂ ಮೂರು ಸಾರಿ ಪ್ರದಕ್ಷಿಣೆಮಾಡಿದ ಬಳಿಕ ತಮ್ಮ ತಮ್ಮ ಕುದುರೆಗಳ ಜೀನು ಲಗಾಮು ಗಳನ್ನು ತೆಗೆದುಹಾಕಿ ವಿಶ್ರಮಿಸಿಕೊಂಡರು. ಈ ಸಮಯದಲ್ಲಿ ಹೆಕ್ಟರಿನ ಶರೀರವು ಏಕಿಲೀಸಿನ ರಥದ ಬಳಿಯಲ್ಲಿಯೇ ದೂಳಿನಲ್ಲಿ ಬಿದ್ದಿದ್ದಿತು. ಒಂದುಕಡೆ ಅನೇಕ ದನಕುರಿಗಳನ್ನು ಕೊಂದು ಅಡಿಗೆಯನ್ನು ಸಿದ್ಧಪಡಿಸುತ್ತಿದ್ದರು. ಅಗಮೆಮ್ನಾನಿನ ಕಡೆಯವರು ಏಕಿಲೀಸನು ಇದ್ದಬಳಿಗೆ ಬಂದು ಬಹಳ ಒತ್ತಾಯ ಮಾಡಿ ಅವನನ್ನು ತಮ್ಮ ದಣಿಯಬಳಿಗೆ ಕರೆದುಕೊಂಡು ಹೋದರು. ಅಗಮೆಮ್ನಾನನೂ ಇತರ ಗ್ರೀಕ್ ಪ್ರಮುಖರೂ ಅವನಿಗಾಗಿ ಸಿದ್ಧಪಡಿಸಿದ್ದ ಬಿಸಿನೀರಿ ನಲ್ಲಿ ಸ್ನಾನಮಾಡಿ ವಿಶ್ರಮಿಸಿಕೊಳ್ಳಬೇಕೆಂದು ಏಕಿಲೀಸನು ಬಗೆಬಗೆಯಾಗಿ ಕೇಳಿಕೊಂಡರೂ, ಪೆಟ್ರೋಕ್ಲಸ್ಸಿನ ದೇಹಕ್ಕೆ ಸಂಸ್ಕಾರವಾಗುವವರೆಗೂ ಸ್ನಾನದ ಸುದ್ದಿಗೇ ಹೋಗುವುದಿಲ್ಲವೆಂದು ಪ್ರತಿಜ್ಞೆಮಾಡಿ, ಮೃತನ ಸಂಸ್ಕಾರ ಕ್ಕಾಗಿ ಮಾರನೆಯದಿನವಾದರೂ ಸೌದೆಯನ್ನು ತರಿಸಿಕೊಡಬೇಕೆಂದು ಅಗಮೆ ಮ್ನಾನಿಗೆ ಹೇಳಿಕಳುಹಿಸಿ ಗ್ರೀಕರ ಪಾಳೆಯದ ಒಂದು ತುದಿಯಲ್ಲಿದ್ದ ತನ್ನ ಗುಡಿ ಸಿಲಿಗೆ ಬಂದು ಸ್ವಲ್ಪ ವಿಶ್ರಮಿಸಿಕೊಳ್ಳುವುದಕ್ಕಾಗಿ ಕಣ್ಣುಮುಚ್ಚಿದನು. ಕೂಡಲೆ ನಿದ್ರೆಯು ಬಲವಾಗಿ ಹಿಡಿಯಿತು. ಸ್ವಲ್ಪ ಹೊತ್ತಿನಲ್ಲಿಯೇ ಅವನಿಗೆ ಸ್ವಪ್ನವೊಂ ದುಂಟಾಗಿ ಅದರಲ್ಲಿ ಪೆಟ್ರೋಕ್ಲಸ್ಸನು, ಇನ್ನೂ ತನ್ನ ದೇಹಕ್ಕೆ ಸಂಸ್ಕಾರ

ವಾಗದಿದ್ದುದಕ್ಕಾಗಿ ದೂಷಿಸಿದಂತೆಯೂ, ಸ್ವಲ್ಪ ಕಾಲದಲ್ಲೇ ಏಕಿಲೀಸನೂ ತನ್ನ ಬಳಿಯನ್ನೇ ಸೇರುವಂತೆಯೂ, ಅನಂತರ ಅವನ ಶರೀರವನ್ನೂ ದಹಿಸಿ ತಮ್ಮಿಬ್ಬರ ಅಸ್ಥಿಗಳನ್ನೂ ಒಂದೇ ಸ್ವರ್ಣಪಾತ್ರೆಯಲ್ಲಿ ಹಾಕಿ ಭೂಸ್ಥಾಪನೆ ಮಾಡಿಸಬೇಕೆಂದು ಹೇಳಿದಂತೆಯೂ ತೋರಿತು.

೧೬೯. ಈ ಸ್ವಪ್ನವಾದ ಕೂಡಲೆ ಏಕಿಲೀಸನು ಎದ್ದು ಕುಳಿತು, "ಆಹಾ! ಇಲ್ಲಿಯಂತೆಯೇ ಪರಲೋಕದಲ್ಲಿಯೂ ವ್ಯಕ್ತಿಗಳಿಗೆ ಆಕಾರಧ್ವನಿಗಳಿರುವುವು! ಆದರೆ ಅವರು ಮೂರ್ತಸ್ವರೂಪಿಗಳಲ್ಲ" ಎಂದು ಹೇಳಿಕೊಂಡು ತನ್ನ ಕಡೆಯವರಾದ ಮರ್ಮಿಡನ್ನರೊಡನೆ ಪೆಟ್ರೋಕ್ಲಸ್ಸಿಗಾಗಿ ಪುನಃ ಗೋಳಾಡತೊಡಗಿದನು. ಇಷ್ಟು ಹೊತ್ತಿಗೆ ಅರುಣೋದಯಸಮಯವಾಗಿದ್ದಿತು. ಮೆರಿಯೋನಸ್ ಮೊದಲಾದವರು ಅಗಮೆಮ್ನಾನನ ಅಪ್ಪಣೆಯಂತೆ ಸೌದೆಗಾಗಿ ಅನೇಕ ಹೇಸರಕತ್ತೆಗಳಮೇಲೆ ಕೌದಿ ಕಂಟಲೆಗಳನ್ನು ಹಾಕಿಕೊಂಡು ಐಡಾ ಪರ್ವತಪ್ರಾಂತಕ್ಕೆ ಹೊರಟರು. ಸ್ವಲ್ಪ ಹೊತ್ತಿನಲ್ಲಿಯೇ ಬೇಕಾದಷ್ಟು ಸೌದೆಯೂ ಒಂದೊದಗಿತು. ಆಗ ಮರ್ಮಿಡನ್ನರೂ ಇತರ ಗ್ರೀಕ್ ಯೋಧರೂ ದುಃಖಸೂಚಕವಾಗಿ ತಮ್ಮ ತಲೆಗೂದಲನ್ನು ಹಿಡಿಹಿಡಿಯಾಗಿ ಕಿತ್ತು ಶವದ ಮೇಲೆ ಹಾಕಿದರು. ಏಕಿಲೀಸನೂ ತಾನು ಸ್ವದೇಶಕ್ಕೆ ಹಿಂದಿರುಗಿದ ಮೇಲೆ ದೇವರಿಗೆ ಅರ್ಪಿಸಬೇಕೆಂದು ಬಳಿಸಿದ್ದ ಕೂದಲಿನ ಒಂದು ತಿರಿಯನ್ನು ಕತ್ತರಿಸಿ, ಅದನ್ನು ಶವದ ಕೈಯಲ್ಲಿಟ್ಟು ಗೋಳಾಡಿದನು.

೧೭೦. ಅನಂತರ ಏಕಿಲೀಸನು ಅಗಮೆಮ್ನಾನನನ್ನು ಕುರಿತು, ಅಗ್ನಿಸಂಸ್ಕಾರಸಂಬಂಧವಾದ ಭೋಜನವು ಪ್ರಾರಂಭವಾಗಬಹುದೆಂದು ತಿಳಿಸಿದನು. ಅಷ್ಟರಲ್ಲಿ ಅವನು ಕೆಲವು ಪ್ರಮುಖರೊಡನೆ ಸೇರಿ ಒಂದುನೂರು ಅಡಿ ಉದ್ದವಾಗಿಯೂ ಒಂದುನೂರು ಅಡಿ ಅಗಲವಾಗಿಯೂ ಇದ್ದ ಒಂದು ದೊಡ್ಡ ಚಿತಿಯನ್ನು ಏರ್ಪಡಿಸಿ ಅದರ ಮಧ್ಯಭಾಗದಲ್ಲಿ ಪೆಟ್ರೋಕ್ಲಸ್ಸಿನ ದೇಹವನ್ನು ಇರಿಸಿ ಅದರ ಸುತ್ತಲೂ ಅನೇಕ ದನಕುರಿಗಳ ಕೊಬ್ಬನ್ನು ಸುರಿದು ಜೇನು ತುಪ್ಪವನ್ನೂ ಎಣ್ಣೆಯನ್ನೂ ತುಂಬಿದ್ದ ಜಾಡಿಗಳನ್ನು ಚಿತಿಯಮೇಲೆ ಇರಿಸಿದನು. ಬಳಿಕ, ಪೆಟ್ರೋಕ್ಲಸ್ಸನು ಸಾಕುತ್ತಿದ್ದ ಒಂಬತ್ತು ನಾಯಿಗಳನ್ನೂ ಕೆಲವು ಕುದುರೆಗಳನ್ನೂ ಸ್ಕಮಾಂಡ್ರಾಸ್ ನದಿಯೊಳಗೆ ತನಗೆ ಸೆರೆಸಿಕ್ಕಿಬಿದ್ದಿದ್ದ ಹನ್ನೆರಡು ಮಂದಿ ಟ್ರೋಜನ್ ತರುಣರನ್ನೂ ಕೊಂದು ಆ ಎಲ್ಲಾ ಶರೀರಗಳನ್ನೂ

ಚಿತಿಯ ಅಂಚುಗಳಲ್ಲಿರಿಸಿದ ಬಳಿಕ, ಪೆಟ್ರೋಕ್ಲಸ್ಸನ್ನು ಸಂಬೋಧಿಸಿ, ತನ್ನ ಪ್ರತಿಜ್ಞೆಯಂತೆ ನಡೆದುಕೊಂಡಿರುವುದಾಗಿಯೂ ಹೆಕ್ಟರಿಗೆ ಅಂತಹ ಸಂಸ್ಕಾರ ವಾಗಗೊಡಿಸುವುದಿಲ್ಲವೆಂದೂ ಹೇಳಿದನು.

೧೭೧. ಆದರೆ ಹೆಕ್ಟರಿನ ವಿಷಯದಲ್ಲಿ ಆಫ್ರೊಡೈಟಿಯೂ ಅಪೋಲೋ ದೇವನೂ ಅಭಿಮಾನಶಾಲಿಗಳಾಗಿದ್ದುದರಿಂದ ಆಕೆಯು ಹೆಕ್ಟರಿನ ಶರೀರದೊಳಕ್ಕೆ ಕೆಲವು ಅಮೃತಬಿಂದುಗಳನ್ನು ಸುರಿದು ಕೆಡದಂತೆ ಏರ್ಪಡಿಸಿದಳು; ಸೂರ್ಯನ ತಾಪದಿಂದ ಆ ಶರೀರದಲ್ಲಿ ಕ್ರಿಮಿಕೀಟಗಳುಂಟಾಗದಂತೆ ಅಪೋಲೋ ದೇವನು ಅದರ ಸುತ್ತಲೂ ಕಣ್ಣಿನೆಯ ಒಂದು ಮೋಡವು ಆವರಿಸಿಕೊಳ್ಳುವಂತೆ ಏರ್ಪಡಿಸಿದನು.

೧೭೨. ಏಕಿಲೀಸನು ಚಿತಿಗೆ ಬೆಂಕಿಯನ್ನು ಹೊತ್ತಿಸುವುದಕ್ಕೆ ಮೊದಲು ಪಶ್ಚಿಮೋತ್ತರ ಮಾರುತಗಳ ಅಭಿಮಾನದೇವತೆಗಳನ್ನು ಪ್ರಾರ್ಥಿಸಿ ಆ ಚಿತಾಗ್ನಿಯು ಚೆನ್ನಾಗಿ ಪ್ರಜ್ವಲಿಸುವಂತೆ ಅನುಗ್ರಹಿಸಬೇಕೆಂದು ಪ್ರಾರ್ಥಿಸಿದನು. ಅವನ ಕೋರಿಕೆಯಂತೆ ಆ ಮಾರುತಗಳು ಬಲವಾಗಿ ಬೀಸಲಾರಂಭಿಸಿದುದರಿಂದ ಚಿತಿಯು ಚೆನ್ನಾಗಿ ಉರಿಯತೊಡಗಿತು. ಏಕಿಲೀಸನು ಮೃತನ ತೃಪ್ತ್ಯರ್ಥವಾಗಿ ಅನೇಕವೇಳೆ ದ್ರಾಕ್ಷಾರಸವನ್ನು ಭೂಮಿಯಮೇಲೆ ಸುರಿದು ಚಿತಿಯು ಚೆನ್ನಾಗಿ ಉರಿದುಹೋದಮೇಲೆ, ಅಗಮೆಮ್ನಾನ್ ಮುಂತಾದವರ ಸಹಾಯದಿಂದ ಪುನಃ ದ್ರಾಕ್ಷಾರಸವನ್ನು ಸುರಿದು ಚಿತಾಗ್ನಿಯನ್ನು ನೊಂದಿಸಿ ಚಿತಿಯ ಮಧ್ಯಭಾಗದಲ್ಲಿದ್ದ ಪೆಟ್ರೋಕ್ಲಸ್ಸಿನ ಮೂಳೆಗಳನ್ನು ಆರಿಸಿ ಅವುಗಳನ್ನು ಚಿನ್ನದ ಒಂದು ಪಾತ್ರೆಗೆ ತುಂಬಿದನು. ಬಳಿಕ ಅವನು ಅಗಮೆಮ್ನಾನ್ ಮುಂತಾದವರನ್ನು ಕುರಿತು— “ಈ ಅಸ್ಥಿಪಾತ್ರೆಯನ್ನು ಅಗ್ನಿಸಂಸ್ಕಾರವಾದ ಸ್ಥಳದಲ್ಲಿಯೇ ಹೂಳಿಬಿಟ್ಟುಮೇಲೆ ಒಂದು ಸಣ್ಣ ಮಣ್ಣುಗುಡ್ಡೆಯನ್ನು ಹಾಕಿಬಿಡಿ” ಎಂದು ಹೇಳಿದನು.

೧೭೩. ಅನಂತರ ಏಕಿಲೀಸನು ತನ್ನ ಗುಡಿಸಿಲಿಗೆ ಹೋಗಿ, ಚತುರಳಾದ ಒಬ್ಬ ಸ್ತ್ರೀಯನ್ನೂ, ಕೆಲವು ದಿವ್ಯಾಶ್ವಗಳನ್ನೂ, ಹೇಸರಕತ್ತೆಗಳನ್ನೂ, ಎತ್ತುಗಳನ್ನೂ, ಕೆಲವು ಕಡಾಯಿಗಳನ್ನೂ, ಅಸ್ಥಿಪಾತ್ರೆಗಳನ್ನೂ ತೆಗೆಸಿಕೊಂಡು ಸಂಸ್ಕಾರವಾದ ಸ್ಥಳಕ್ಕೆ ಪುನಃ ಬಂದು ಅಲ್ಲಿ ಸೇರಿದ್ದವರನ್ನು ಕುರಿತು— “ಇಗೋ! ಮೃತನ ತೃಪ್ತ್ಯರ್ಥವಾಗಿ ಕೆಲವು ಸ್ಪರ್ಧೆಗಳನ್ನು ಏರ್ಪಡಿಸಿರುವೆನು.

ಈ ದಿವ್ಯಾಶ್ವಗಳನ್ನು ನಮ್ಮ ತಂದೆಗೆ ದೇವತೆಗಳು ಕೊಟ್ಟಿದ್ದರು. ನಾನು ಇಲ್ಲಿಗೆ ಬಂದಾಗ ಅವನ್ನು ನಮ್ಮ ತಂದೆಯು ನನಗೆ ಕೊಟ್ಟುಕಳುಹಿಸಿದನು. ರಥಗಳ ಜೂಜಿನಲ್ಲಿ ಮೊತ್ತಮೊದಲನೆಯವನಾಗುವವನಿಗೆ ಈ ಕುದುರೆಗಳು ದೊರೆಯುವುವು. ನಾನು ಈ ಪಂಥದಲ್ಲಿ ಸೇರುವುದಿಲ್ಲವಾದುದರಿಂದ, ಉಳಿದವರು ಧೈರ್ಯದಿಂದ ಇದರಲ್ಲಿ ಪ್ರವೇಶಿಸಬಹುದು'' ಎಂದು ಹೇಳಿದನು. ಇದನ್ನು ಕೇಳಿ ಐವರು ಗ್ರೀಕ್ ಯೋಧಾಗ್ರಣಿಗಳು ಸ್ಪರ್ಧೆಗೆ ಬಂದರು. ಅವರ ರಥಗಳು ಯಾವ ಯಾವ ಸ್ಥಳದಲ್ಲಿ ನಿಲ್ಲಬೇಕೆಂಬುದನ್ನು ನಿರ್ಧರಿಸುವುದಕ್ಕಾಗಿ ಏಕಿಲೀಸನು ಚೀಟಿಗಳನ್ನು ಹಾಕಿದನು ಆ ಐವರಲ್ಲಿ ಮೊದಲನೆಯ ಸ್ಥಾನವು ಆಂಟಿಲೋಕಸ್ಸನಿಗೂ ೨, ೩, ೪, ೫ನೆಯ ಸ್ಥಾನಗಳು ಅನುಕ್ರಮವಾಗಿ ಯೂಮಿಲಸ್, ಮೆನೆಲಾಸ್, ಮೆರಿಯೋನಸ್, ಡೈಯೊಮಿಾಡೀಸ್ ಎಂಬವರಿಗೂ ದೊರೆತುವು.

೧೭೪. ಈ ರಥಿಕರುಗಳ ಕುದುರೆಗಳಲ್ಲಿ ಡೈಯೊಮಿಾಡೀಸಿನವು ಈನಿಯಾಸಿನಿಂದ ವಶಪಡಿಸಿಕೊಂಡಿದ್ದ ಉತ್ತಮಾಶ್ವಗಳಾಗಿದ್ದುವು; ಆಂಟಿಲೋಕಸ್ಸನವು ಬಹಳ ಮೆಲ್ಲಗೆ ಓಡುವುವಾಗಿದ್ದುವು. ಆದುದರಿಂದ ನೆಸ್ಟಾರನು ಆಂಟಿಲೋಕಸ್ಸನ್ನು ತನ್ನ ಸಮಿಾಪಕ್ಕೆ ಕರೆದು, “ಶಕ್ತಿಯಿಂದಾಗದ ಕೆಲಸವನ್ನು ಯುಕ್ತಿಯಿಂದ ಸಾಧಿಸಲಾಗುವುದೆಂದೂ, ಕುದುರೆಗಳನ್ನು ಸಿಕ್ಕಿಸಿಕ್ಕಿದಂತೆ ಓಡಿಸಿ ಮೊದಲೇ ಬಹಳ ದಣಿಸದೆ, ಗಮ್ಯಸ್ಥಾನವು ಸಮಿಾಪವಾದಕೂಡಲೆ ಸ್ವಲ್ಪ ಎಡಗಡೆಗೆ ಬಾಗಿದಂತೆ ಬಲವಾಗಿ ಊರಿಕುಳಿತು ಎಡಗೋಲಿನ ಕುದುರೆಯನ್ನು ತುಯ್ದು, ಚಾವಟಿಯಿಂದ ಹೊಡೆಯುತ್ತಾ ಬೇಗಬೇಗನೆ ಓಡಿಸಬೇಕೆಂದೂ ಹಿತವಾದಹೇಳಿದನು ಇನ್ನು ಸ್ವಲ್ಪ ಹೊತ್ತಾದ ಬಳಿಕ ರಥಗಳನ್ನು ಓಡಿಸಲಾರಂಭಿಸಿದರು. ಸ್ವಲ್ಪಕಾಲದಲ್ಲಿಯೇ ಯೂಮಿಲಸ್ಸಿನ ರಥವು ಮೊದಲನೆಯದಾಗಲು, ಡೈಯೊಮಿಾಡೀಸನು ಬಹಳ ಪ್ರಯತ್ನಮಾಡಿ ತನ್ನ ರಥವನ್ನು ಮುಂದಕ್ಕೆ ತಂದನು. ಆದರೆ ಈಗ ಅಪೋಲೋದೇವನು ಡೈಯೊಮಿಾಡೀಸಿಗೆ ಪ್ರತಿಬಂಧಕಮಾಡತೊಡಗಿದುದರಿಂದ ಅಥೆನಿಯು ಕೋಪಿಸಿಕೊಂಡು ಯೂಮಿಲಸ್ಸಿಗೆ ಅಡ್ಡಿಮಾಡಿ ಅವನ ನೊಗವನ್ನು ಮುರಿದುಬಿಟ್ಟಳು. ಕಡೆಯಲ್ಲಿ ಡೈಯೊಮಿಾಡೀಸನೇ ಮೊದಲನೆಯವನಾದನು. ಆ ಬಳಿಕ ಆಂಟಿಲೋಕಸ್, ಮೆನೆಲಾಸ್, ಮೆರಿಯೋನಸ್, ಯೂಮಿಲಸ್ ಇವರುಗಳು ಬಂದರು. ರಥದ ಜೂಜಿನ

ಉತ್ಸಾಹಾತಿಶಯದಲ್ಲಿ ಆಂಟಿಲೋಕಸ್ಸನು ಬಹಳವಾಗಿ ತನ್ನ ರಥವನ್ನು ಅತ್ತಿತ್ತ ಹಿಡಿಸುತ್ತಾ ಮಾರ್ಗಕ್ಕೆ ಅಡ್ಡವಾಗಿ ಬರುತ್ತಿದ್ದುದರಿಂದ ಮೆನೆಲಾಸನು, ತನ್ನ ರಥದ ವೇಗವನ್ನು ಸ್ವಲ್ಪ ತಗ್ಗಿಸಿ ತಮ್ಮಿಬ್ಬರ ರಥಗಳಿಗೂ ಡಿಕ್ಕಿಹೊಡೆಯದಂತೆ ತಪ್ಪಿಸಿಕೊಳ್ಳಬೇಕಾಯಿತು. ಹಾಗಿಲ್ಲದಿದ್ದರೆ ಮೆನೆಲಾಸನೇ ಎರಡನೆಯವನಾಗುತ್ತಿದ್ದನು.

೧೭೫. ಏಕಿಲೀಸನು ತನ್ನ ವಾಗ್ದಾನದಂತೆ ಆ ಉತ್ತಮಾಶ್ವಗಳನ್ನು ಡೈಯೋಮಿಡೀಸಿಗೆ ಬಹುಮಾನವಾಗಿ ಕೊಟ್ಟನು. ಆಂಟಿಲೋಕಸ್ಸನಿಗೆ ಒಂದು ಹೆಣ್ಣು ಕುದುರೆಯು ಬಹುಮಾನವಾಗಿ ಒಂದಿತು. ಆದರೆ ಅದು ನ್ಯಾಯವಾಗಿ ತನಗೇ ಸಲ್ಲಬೇಕಾಗಿದ್ದಿತೆಂದು ಹೇಳುತ್ತಾ ಮೆನೆಲಾಸನು ಅಡ್ಡಿಮಾಡಿದುದರಿಂದ ಆಂಟಿಲೋಕಸ್ಸನು ತಾನು ಮಾಡಿದ್ದ ಅನ್ಯಾಯವನ್ನು ಒಪ್ಪಿಕೊಂಡು ತನ್ನ ಬಹುಮಾನವನ್ನು ಮೆನೆಲಾಸಿಗೇ ಕೊಟ್ಟುಬಿಟ್ಟನು. ಆಗ ಮೆನೆಲಾಸನು ಉದಾತ್ತಬುದ್ಧಿಯಿಂದ, ಆಂಟಿಲೋಕಸ್ಸಿಗೆ ಬಂದಿದ್ದ ಬಹುಮಾನವನ್ನು ಅವನಿಗೇ ಕೊಟ್ಟುಬಿಟ್ಟು, ಮುಂದೆ ಯಾವಾಗಲೂ ಸ್ಪರ್ಧೆಗಳಲ್ಲಿ ಅಡ್ಡದಾರಿಯನ್ನು ಹಿಡಿಯದಂತೆ ಅವನಿಗೆ ನಯವಾಗಿ ತಿಳಿಸಿದನು. ಆ ಸ್ಪರ್ಧೆಗಳಲ್ಲಿ ಭಾಗಿಗಳಾಗಿದ್ದ ಇತರ ರಥಿಕರಿಗೂ ಬಹುಮಾನಗಳು ದೊರೆತುವು. ಕಡೆಯವನಾದ ಯೂಮಿಲಸ್ಸಿಗೂ ಆಸ್ಟಿರೋಪಯಸ್ಸಿನ ಶಸ್ತ್ರಕವಚಗಳು ಬಹುಮತಿಯಾಗಿ ಸಿಕ್ಕಿದುವು.

೧೭೬. ಆ ಬಳಿಕ ಮುಷ್ಟಿಯುದ್ಧವು ಪ್ರಾರಂಭವಾಗುವುದರಲ್ಲಿದ್ದಿತು. ಆಗ ಈಪಿಯುಸ್ ಎಂಬೊಬ್ಬನು ಮುಂದೆ ಬಂದು ಮೊದಲನೆಯ ಬಹುಮಾನವಾಗಿದ್ದ ಹೇಸರಕತ್ತೆಯು ತನಗೇ ಸೇರಬೇಕೆಂದು ಕೇಳಿದನು. ಆದರೆ ಡೈಯೊಮಿಡೀಸನ ಕಡೆಯವನಾದ ಯೂರಿಯೇಲಸ್ಸನು ಹಿಂದೆ ಈಡಿಪಸ್ಸಿನ *

---

* ಈಡಿಪಸ್ಸನು ಗ್ರೀಸಿನ ಥೀಬ್ಸ್ ಎಂಬ ಪಟ್ಟಣದ ರಾಜನಾಗಿದ್ದ ಲೇಯುಸಿನ ಮಗನು. ಇವನು ಜನಿಸಿದಾಗ ಲೇಯುಸನು ತನ್ನ ಮಗನಿಂದಲೇ ತನಗೆ ಮರಣವುಂಟಾಗುವುದೆಂಬ ಭವಿಷ್ಯವನ್ನು ಕೇಳಿ ಆ ಮಗುವನ್ನು ಬೆಟ್ಟದಮೇಲೆ ಹಾಕಿಸಿಬಿಟ್ಟನು. ಆದರೆ ಕರ್ಮವಿಪಾಕದಿಂದ ಆ ಮಗುವು ಕಾರಿಂಥ್ ಪಟ್ಟಣದ ದೊರೆಯ ಬಳಿಯಲ್ಲಿದ್ದ ಒಬ್ಬ ಕುರುಬನಿಗೆ ಸಿಕ್ಕಿ, ಆ ರಾಜನ ಅರಮನೆಯಲ್ಲೇ ಬೆಳೆಯುತ್ತಿದ್ದಿತು. ಸ್ವಲ್ಪ ಕಾಲವಾದಮೇಲೆ ಈಡಿಪಸ್ಸನು ಡೆಲ್ಫಿಗೆ ಹೋಗಿ ಅಲ್ಲಿ ಆಗುತ್ತಿದ್ದ ಆಕಾಶವಾಣಿಯ ಮೂಲಕ ತನ್ನ ಪಿತೃಘಾತಕಯೋಗವನ್ನರಿತು, ಕಾರಿಂಥಿನ ರಾಜನೇ ತನ್ನ ತಂದೆಯೆಂದು ಭ್ರಮಿಸಿ ವಿದೇಶಸಂಚಾರಕ್ಕಾಗಿ ಹೊರಟನು. ಮಾರ್ಗವಶದಿಂದ

ಶವಸಂಸ್ಕಾರಸಮಯದಲ್ಲಿ ನಡೆದ ಸ್ಪರ್ಧೆಯಲ್ಲಿ ಅನೇಕರನ್ನು ಗೆದ್ದಿದ್ದುದರಿಂದ, ಈಪಿಯಸ್ಸಿಗೆ ಆ ಬಹುಮಾನವನ್ನು ಕೊಡಕೂಡದೆಂದು ಅಡ್ಡಿಮಾಡಿದನು. ಆದರೆ ಅವರಿಬ್ಬರ ನಡುವೆ ನಡೆದ ಮುಷ್ಟಿಯುದ್ಧದಲ್ಲಿ ಯೂರಿಯೇಲಸ್ಸನು ಸ್ವಲ್ಪ ಹೊತ್ತಿನಲ್ಲಿಯೇ ಏಟುತಿಂದು ರಕ್ತವನ್ನು ಕಕ್ಕುತ್ತಾ ಕೆಳಕ್ಕೆ ಬಿದ್ದುಬಿಡುತ್ತಿದ್ದನು. ಅಷ್ಟರಲ್ಲಿ ಈಪಿಯಸ್ಸನು ಅವನನ್ನು ಬೀಳದಂತೆ ಹಿಡಿದುಕೊಂಡು ಅವನ ಸಂಗಡಿಗರ ಕೈಗೆ ಒಪ್ಪಿಸಿದನು. ಆದುದರಿಂದ ಮೊದಲನೆಯ ಬಹುಮಾನವಾಗಿದ್ದ ಹೇಸರಕತ್ತೆಯು ಈಪಿಯಸ್ಸಿಗೇ ದೊರೆಯಿತು. ಸೋತಿದ್ದವನಿಗೂ ಜೋಡಿಹಿಡಿಗಳಿದ್ದ ಒಂದು ಬಟ್ಟಲು ಬಹುಮಾನವಾಗಿ ಬಂದಿತು.

೧೭೭ ಕುಸ್ತಿಯು ಮೂರನೆಯ ಸ್ಪರ್ಧೆಯಾಗಿದ್ದುದರಿಂದ, ಅದಕ್ಕಾಗಿ ಹಿರಿಯ ಏಯಾಸನೂ ಒಡಿಸಿಯಸ್ಸನೂ ಅಖಾಡವನ್ನು ಪ್ರವೇಶಿಸಿದರು. ಅವರಲ್ಲಿ ಏಯಾಸನು ಅದ್ಭುತಾಕಾರಿಯು; ಅವನ ಶಕ್ತಿಸಾಹಸಗಳೂ ಆಶ್ಚರ್ಯಕರವಾದುವು. ಒಡಿಸಿಯಸ್ಸನು ಗಿಡ್ಡಾಗಿದ್ದನು. ಆದರೂ ಅವನ ಚಟುವಟಿಕೆಯೂ ಕಾಯಶಕ್ತಿಯೂ ತಂತ್ರಗಳೂ ಅಸಾಧಾರಣವಾದುವು. ಹೀಗೆ ಆ ಇಬ್ಬರಿಗೂ ಸರಿಸಮವಾದ ದೇಹಬಲವಿದ್ದುದರಿಂದ ಒಬ್ಬರನ್ನೊಬ್ಬರು ಕೆಡಹಬೇಕೆಂದು ಅವರು ಎಷ್ಟೋ ಹೊತ್ತು ಹೆಣಗಾಡಿದರು. ಆದರೆ ಯಾರೊಬ್ಬರೂ ಕೆಳಕ್ಕೆ ಬೀಳಲಿಲ್ಲ. ಆಗ ಏಯಾಸನು ತಮ್ಮಿಬ್ಬರಲ್ಲಿ ಯಾವನು ಇನ್ನೊಬ್ಬನನ್ನು ಮೇಲಕ್ಕೆ ಎತ್ತಿಬಿಡುವನೋ ಅವನೇ ಗೆದ್ದಂತೆ ಭಾವಿಸತಕ್ಕದೆಂದು ಸೂಚಿಸಲಾಗಿ, ಅದಕ್ಕೆ ಒಡಿಸಿಯಸ್ಸನೂ ಒಪ್ಪಿದನು. ಸ್ವಲ್ಪಹೊತ್ತಿನಲ್ಲಿಯೇ ಏಯಾಸನು

---

ಅವನು ಥೀಬ್ಸಿಗೆ ಬಂದಾಗ, ಅದನ್ನು ಕಾಡುತ್ತಿದ್ದ ಸ್ಫಿಂಕ್ಸ್ ಎಂಬ ವಿಲಕ್ಷಣಪ್ರಾಣಿಯು ಹಾಕಿದ್ದ "ಬೇರೆ ಬೇರೆ ಕಾಲಗಳಲ್ಲಿ ೪-೨-೩ ಕಾಲುಗಳನ್ನೂ, ಸದಾ ಒಂದೇಧ್ವನಿಯನ್ನೂ ಪಡೆದು, ತನ್ನ ಕಾಲುಗಳ ಸಂಖ್ಯೆಯು ಹೆಚ್ಚಾದಷ್ಟೂ ಅಶಕ್ತವಾಗಿರುವ ಪ್ರಾಣಿ ಯಾವುದು?" ಎಂಬ ಪ್ರಶ್ನೆಗೆ "ಮಾನವನು" ಎಂದು ಉತ್ತರಹೇಳಿ, ಅದರ ಬಾಧೆಯನ್ನು ತಪ್ಪಿಸಿ ಥೀಬ್ಸ್ ಪಟ್ಟಣಕ್ಕೆ ದೊರೆಯಾದನು. ಆದರೆ ಈ ಸಂದರ್ಭದಲ್ಲಿ ಈಡಿಪಸ್ಸನು ಅಜ್ಞಾನದಿಂದ ತನ್ನ ಜನಕನಾದ ಲೇಯಸ್ಸನ್ನೇ ಕೊಂದುದಲ್ಲದೆ ಮತ್ತೊಂದು ಮಹಾಪಾತಕವನ್ನು ಮಾಡಿದನು. ಕೆಲವು ವರ್ಷಗಳಾದನಂತರ ಅವನಿಗೆ ಈ ರಹಸ್ಯಗಳು ತಿಳಿಯಲಾಗಿ, ಈಡಿಪಸ್ಸನು ತನ್ನ ಕಣ್ಣುಗಳನ್ನು ತಾನೇ ಕಿತ್ತುಕೊಂಡು, ತನ್ನ ಒಬ್ಬ ಮಗಳಾದ ಆಂಟಿಗೊನಿ ಎಂಬಾಕೆಯ ಸಹಾಯದಿಂದ ಊರೂರನ್ನೂ ಅಲೆಯುತ್ತಾ ಕಡೆಗೆ ಅಥೇನ್ಸಿನ ಸಮೀಪದಲ್ಲಿ ಕೆಲವುಕಾಲ ವಾಸಿಸುತ್ತಿದ್ದಾಗ, ದೇವತೆಗಳಿಗೆ ಕರುಣೆಹುಟ್ಟಿ ಅವನನ್ನು ಭೂಲೋಕದಿಂದ ಅದೃಶ್ಯಪಡಿಸಿದರು.

ಒಡಿಸಿಯಸ್ಸನ್ನು ಮೇಲಕ್ಕೆ ಎತ್ತಿಬಿಡುವುದರಲ್ಲಿದ್ದನು. ಆದರೆ ಆ ಸಮಯಕ್ಕೆ ಸರಿಯಾಗಿ ಒಡಿಸಿಯಸ್ಸನು ಏಯಾಸಿನ ಮಂಡಿಯ ಸಮೀಪದಲ್ಲಿ ಒದೆದು ಅವನನ್ನು ನೆಲಕ್ಕೆ ಕೆಡಹಿ ಅವನಮೇಲೆ ತಾನೂ ಬಿದ್ದುಬಿಟ್ಟನು. ಇದರಿಂದ ಅವರಿಬ್ಬರಲ್ಲಿ ಯಾರು ಉತ್ತಮರೆಂಬುದು ಗೊತ್ತಾಗದೇಹೋಯಿತು. ಅದೇ ಸ್ಪರ್ಧೆಯು ಮತ್ತೊಮ್ಮೆ ಪ್ರಾರಂಭವಾಗಲು ಒಡಿಸಿಯಸ್ಸನು ಏಯಾಸನ್ನು ಎತ್ತುವುದಕ್ಕೆ ಪ್ರಯತ್ನಿಸಿದನು. ಆಗಲೂ ಅವರಿಬ್ಬರೂ ನೆಲಕ್ಕೆ ಉರುಳಿಕೊಂಡು ಬಿದ್ದುಬಿಟ್ಟರು. ಆದುದರಿಂದ ಅವರು ಮೂರನೆಯಸಾರಿ ಪ್ರಯತ್ನವನ್ನು ಮಾಡಬೇಕೆಂದು ಹವಣಿಸಿಕೊಳ್ಳುತ್ತಿದ್ದಾಗ ಏಕಿಲೀಸನು ಅವರ ಸ್ಪರ್ಧೆಯನ್ನು ನಿಲ್ಲಿಸಿ ಬಹುಮಾನವನ್ನು ಇಬ್ಬರಿಗೂ ಹಂಚಿಕೊಟ್ಟನು.

೧೭೮ ಅನಂತರ ಓಟದ ಸ್ಪರ್ಧೆಯು ಪ್ರಾರಂಭವಾಯಿತು ಅದಕ್ಕೆ ಮೊದಲನೆಯ ಬಹುಮಾನವು ಒಂದು ಬೆಳ್ಳಿಯಬಟ್ಟಲೆಂದೂ ಎರಡನೆಯ ಬಹುಮಾನವು ಒಂದು ಎತ್ತು ಎಂದೂ ನಿಷ್ಕರ್ಷೆಯಾಗಿದ್ದಿತು. ಆ ಸ್ಪರ್ಧೆಗೆ ಕಿರಿಯ ಏಯಾಸನೂ ಒಡಿಸಿಯಸ್ಸನೂ ಆಂಟಿಲೋಕಸ್ಸನೂ ಸೇರಿದರು. ಮೊದಲಿಂದಲೂ ಆ ಸ್ಪರ್ಧೆಯಲ್ಲಿ ಏಯಾಸನೇ ವಿಜಯಿಯಾಗುವಂತೆ ತೋರುತ್ತಿದ್ದಿತು. ಆದರೆ ಒಡಿಸಿಯಸ್ಸನು ತನ್ನ ಅಭಿಮಾನದೇವಿಯಾದ ಅಥೆನಿಯ ಸಹಾಯವನ್ನು ಪ್ರಾರ್ಥಿಸಿಕೊಳ್ಳಲಾಗಿ, ಓಡುತ್ತಿದ್ದಾಗ ಏಯಾಸನು ಕಾಲ್ ಜಾರಿ ಬಿದ್ದುಬಿಟ್ಟನು. ಆದುದರಿಂದ ಒಡಿಸಿಯಸ್ಸಿಗೇ ಮೊದಲನೆಯ ಬಹುಮಾನವು ದೊರೆಯಿತು. ಎರಡನೆಯ ಬಹುಮಾನವು ಏಯಾಸನಿಗೆ ಸಿಕ್ಕಿತು. ಆಂಟಿಲೋಕಸ್ಸನಿಗೂ ಸ್ವಲ್ಪ ದ್ರವ್ಯವು ಬಹುಮತಿಯಾಗಿ ಬಂದಿತು.

೧೭೯. ಹೀಗೆಯೇ ಈಟಿಯ ಕಾಳಗದ ಸ್ಪರ್ಧೆಯೊಂದು ನಡೆದು ಅದರಲ್ಲಿ ಡೈಯೊಮೀಡೀಸನು ತನ್ನ ಪ್ರತಿದ್ವಂದ್ವಿಯಾಗಿದ್ದ ಹಿರಿಯ ಏಯಾಸನ್ನು ಸೋಲಿಸುವುದರಲ್ಲಿದ್ದನು. ಆಗ ಸದಸ್ಯರು ಬಹುಮಾನವನ್ನು ಅವರಿಬ್ಬರಿಗೂ ಸಮವಾಗಿ ಹಂಚತಕ್ಕದೆಂದು ನಿಷ್ಕರ್ಷಿಸಿದರು. ಏಕಿಲೀಸನು ಬಹುಮಾನವನ್ನು ಹಂಚಿಕೊಟ್ಟು ಡೈಯೊಮೀಡೀಸಿಗೆ ಜೊತೆಗೆ ಒರೆಸಹಿತವಾಗಿದ್ದ ಒಂದು ಕತ್ತಿಯನ್ನೂ ಕೊಟ್ಟನು. ಅನಂತರ ಭಾರವನ್ನು ದೂರವಾಗಿ ಎಸೆಯುವುದು, ಬಾಣಗಳನ್ನು ಬಿಡುವುದು,—ಈ ಕಾರ್ಯಗಳಲ್ಲಿ ಸ್ಪರ್ಧೆಗಳು ನಡೆದುವು. ಮೊದಲನೆಯ ಸ್ಪರ್ಧೆಯ ಬಹುಮಾನವು ಪೋಲಿಪ್ಯೆಟೀಸ್ ಎಂಬವನಿಗೆ ದೊರೆ

ಯಿತು. ಧನುರ್ವಿದ್ಯಾಬಹುಮತಿಗಳಾಗಿದ್ದ ಹತ್ತು ಗಂಡುಗೊಡಲಿಗಳೂ ಹತ್ತು ಸಾಮಾನ್ಯವಾದ ಕೊಡಲಿಗಳೂ ಟ್ಯೂಸರನಿಗೂ ಮೆರಿಯೋನಸ್ಸನಿಗೂ ದೊರೆತುವು. ಏಕಿಲೀಸನು ಗ್ರೀಕ್ ಸೈನ್ಯಾಧಿಪತಿಯಾಗಿದ್ದ ಅಗಮೆಮ್ನಾನಿಗೆ ಒಂದು ದೊಡ್ಡ ಕಡಾಯಿಯನ್ನು ಬಹುಮಾನಮಾಡಿದನು. ಇಲ್ಲಿಗೆ ಪೆಟ್ರೋಕ್ಲಸ್ಸಿನ ಶವಸಂಸ್ಕಾರಕಾರ್ಯಗಳು ಮುಗಿದಂತಾದುವು.

---

## XXVI.

೧೬೦. ಸ್ಪರ್ಧೆಗಳೆಲ್ಲವೂ ಮುಗಿದಮೇಲೆ ಗ್ರೀಕರು ತಮ್ಮತಮ್ಮ ಗುಡಿಸಿಲುಗಳಿಗೂ ಹಡಗುಗಳಿಗೂ ಹೋಗಿ, ಊಟಮಾಡಿ ಮಲಗಿಕೊಂಡರು ಏಕಿಲೀಸಿಗೆ ಮಾತ್ರ ಪೆಟ್ರೋಕ್ಲಸ್ಸಿನ ನೆನಪಿನಿಂದ ನಿದ್ದೆ ಬಾರಲಿಲ್ಲ. ಅವನು ಅರುಣೋದಯವಾದ ಕೂಡಲೆ ಎದ್ದು, ಹೆಕ್ಟರಿನ ಶವವನ್ನು ತನ್ನ ರಥಕ್ಕೆ ಕಟ್ಟಿ ಅದನ್ನು ಪೆಟ್ರೋಕ್ಲಸ್ಸಿನ ಸಮಾಧಿಯ ಸುತ್ತಲೂ ಮೂರುಸಲ ಸುತ್ತಿಸಿದನು. ಈ ಸಮಯದಲ್ಲಿ ದೇವತೆಗಳಲ್ಲಿ ಕೆಲವರಿಗೆ ಹೆಕ್ಟರಿನ ದೇಹವನ್ನು ಅಪಹರಿಸಬೇಕೆಂಬ ಮನಸ್ಸು ಇದ್ದಿತು. ಆದರೆ ಹಿಂದೆ ಟ್ರೋಜನರ ದೊರೆಯಾಗಿದ್ದ ಲ್ಯಾವೋಮಿಡನ್ನನು ವಾಗ್ದಾನಭಂಗಮಾಡಿದ್ದುದರಿಂದ ಪೋಸೈಡನ್ನಿಗೂ, ಮೂರುಜನ ದೇವತೆಗಳಲ್ಲಿ ಆಫ್ರೋಡೈಟಿಯೇ ಅತ್ಯಂತ ಸುಂದರಿಯೆಂದು ಪ್ಯಾರಿಸ್ಸನು ನಿಷ್ಕರ್ಷಿಸಿದ್ದುದರಿಂದ ಹೀರಳಿಗೂ ಅಥೆನಿಗೂ, ಟ್ರೋಜನರ ವಿಷಯದಲ್ಲಿ ದ್ವೇಷವುಂಟಾಗಿದ್ದಿತು. ಆದುದರಿಂದ ಹೆಕ್ಟರಿನ ದೇಹವನ್ನು ಮರೆಮಾಡಲು ಆ ಮೂವರಿಗೂ ಮನಸ್ಸಿರಲಿಲ್ಲ. ಅಪೋಲೋದೇವನು ಮಾತ್ರ ಹೆಕ್ಟರಿನ ಪಕ್ಷವನ್ನು ವಹಿಸಿ ಮಾತನಾಡಿದನು ಜ್ಯೂಸನೂ ಅದನ್ನೇ ಪುಷ್ಟೀಕರಿಸಿದನು. ಆದರೂ ಹೆಕ್ಟರಿನ ಶರೀರವನ್ನು ಅದೃಶ್ಯಪಡಿಸುವುದು ಜ್ಯೂಸಿಗೆ ಸಮ್ಮತವಾಗಿರಲಿಲ್ಲ. ಆದುದರಿಂದ ಆತನು ಐರಿಸ್ ದೇವಿಗೆ ಹೇಳಿ ಥೀಟೀಸಳನ್ನು ತನ್ನ ಬಳಿಗೆ ಬರಮಾಡಿಕೊಂಡು ಆಕೆಯೊಡನೆ ಪ್ರಯಾಮನಿಂದ ಪರಿಹಾರದ್ರವ್ಯವನ್ನು ಪಡೆದು ಹೆಕ್ಟರಿನ ದೇಹವನ್ನು ಟ್ರೋಜನರಿಗೆ ಒಪ್ಪಿಸಿಬಿಡಬೇಕೆಂದು ಏಕಿಲೀಸಿಗೆ ಹೇಳಿ ಕಳುಹಿಸಿದನು. ಜ್ಯೂಸನು ಐರಿಸಳನ್ನು ಕರೆದು ಪ್ರಯಾಮನ್ನು ಕಂಡು ಹೆಕ್ಟರಿನ ದೇಹಕ್ಕಾಗಿ ಬೇಡಿಕೊಳ್ಳುವಂತೆ ಹೇಳಿಕಳುಹಿಸಿದನು.

೧೬೧. ಜ್ಯೂಸಿನ ಆಜ್ಞೆಯಂತೆ ಥೀಟೀಸಳು ತನ್ನ ಮಗನ ಬಳಿಗೆ ಬಂದು ಬೋಧಿಸಲಾಗಿ, ಅವನು ಜ್ಯೂಸಿನ ಆಜ್ಞೆಯಂತೆಯೂ ತಾಯಿಯ ಬೋಧನೆಯಂ

ತೆಯೂ ಆಚರಿಸಲು ಒಪ್ಪಿದನು. ಇಷ್ಟರಲ್ಲಿ ಜ್ಯೂಸನು ಕಳುಹಿಸಿದ್ದ ಐರಿಸಳು ಪ್ರಯಾಮಿನ ಬಳಿಗೆ ಹೋಗಿ ಬಹಳ ಪರಿಹಾರದ್ರವ್ಯವನ್ನು ತೆಗೆದುಕೊಂಡು ತನ್ನೊಡನೆ ಒಬ್ಬ ವಯೋವೃದ್ಧನನ್ನೂ ಕರೆದುಕೊಂಡು ಗ್ರೀಕರ ಪಾಳೆಯಕ್ಕೆ ಹೋಗಿ ಪ್ರಾರ್ಥಿಸಿಕೊಂಡರೆ ಯೋಗ್ಯಸಂಸ್ಕಾರಕ್ಕಾಗಿ ಹೆಕ್ಟರಿನ ದೇಹವು ದೊರೆಯುವುದೆಂದು ತಿಳಿಸಿದಳು. ಆಕೆಯು ಅರಮನೆಗೆ ಬಂದಾಗ ಪ್ರಯಾಮಿನ ಮಕ್ಕಳುಗಳು ಅವನ ಸುತ್ತಲೂ ಕುಳಿತುಕೊಂಡು ಗೋಳಾಡುತ್ತಿದ್ದರು. ಪ್ರಯಾಮನು ದುಃಖಾತಿರೇಕದಿಂದ ತನ್ನ ಮೇಲೆ ದೂಳನ್ನು ಎರಚಿಕೊಂಡಿದ್ದುದರಿಂದ ಅವನ ಮೈಕೈಕಾಲುಗಳು ಬಹಳ ಕೊಳೆಯಾಗಿದ್ದುವು ಪ್ರಯಾಮಿನ ಪುತ್ರಿಯರೂ ಸೊಸೆಯರೂ ಮತ್ತೊಂದು ಕಡೆ ರೋದಿಸುತ್ತಿದ್ದರು. ಐರಿಸಳು ಜ್ಯೂಸಿನ ಸಂದೇಶವನ್ನು ಪ್ರಯಾಮಿಗೆ ತಿಳಿಸಿದ ಕೂಡಲೆ, ಅವನು ಹೆಕ್ಯೂಬಳನ್ನು ಕರೆದು ಆಕೆಗೆ ಜ್ಯೂಸಿನ ಆಜ್ಞೆಯನ್ನು ತಿಳಿಸಿ ಆಕೆಯ ಅಭಿಪ್ರಾಯವನ್ನು ಕೇಳಿದನು. ಕ್ರೂರಿಯಾದ ಏಕಿಲೀಸಿನ ಬಳಿಗೆ ಪ್ರಯಾಮನ್ನು ಕಳುಹಿಸಲು ಹೆಕ್ಯೂಬಳಿಗೆ ಸ್ವಲ್ಪವೂ ಮನಸ್ಸಿರಲಿಲ್ಲ. ಆದರೂ ಪ್ರಯಾಮನು ಪುತ್ರವ್ಯಾಮೋಹದಿಂದ, ತನಗೆ ಏನಾದರೂ ಚಿಂತೆಯಿಲ್ಲವೆಂದು ನಿರ್ಧರಿಸಿ ತನ್ನ ಬೊಕ್ಕಸದಿಂದ ಹನ್ನೆರಡು ಸೀರೆಗಳನ್ನೂ, ಹನ್ನೆರಡು ಕುದುರೆಗಳನ್ನೂ ಹನ್ನೆರಡು ದುಕೂಲಗಳನ್ನೂ ಚಿನ್ನದ ಅನೇಕ ನಾಣ್ಯಗಳನ್ನೂ ಇನ್ನೂ ಅನೇಕ ಅನರ್ಘ್ಯವಸ್ತುಗಳನ್ನೂ, ಸಂಗ್ರಹಿಸಿ, ಅಲ್ಲಿದ್ದ ತನ್ನ ಒಂಬತ್ತುಮಂದಿ ಗಂಡುಮಕ್ಕಳನ್ನೂ ಕರೆದು ಆ ವಸ್ತುಗಳನ್ನು ಗಾಡಿಯಲ್ಲಿಡುವಂತೆ ಹೇಳಿದನು. ಆ ಸಮಯದಲ್ಲಿ ಪ್ರಯಾಮನಿಗೆ ಪ್ರತಿಹೇಳಲು ಯಾರಿಗೂ ಧೈರ್ಯವಿರಲಿಲ್ಲ. ಸ್ವಲ್ಪ ಹೊತ್ತಿನಲ್ಲಿಯೇ, ಬೊಕ್ಕಸದಿಂದ ತೆಗೆಸಿ ಬೇರೆ ಇಡಿಸಿದ್ದ ವಸ್ತ್ರಾದಿಗಳೆಲ್ಲವನ್ನೂ ಆ ರಥದಲ್ಲಿ ಅಣಿಯಾಗಿ ಜೋಡಿಸಿಡಲು, ಪ್ರಯಾಮನೂ ವಯೋವೃದ್ಧನಾದ ಒಬ್ಬ ಚಾರನೂ ರಥದಲ್ಲಿ ಕುಳಿತುಕೊಂಡರು. ಆಗ ಹೆಕ್ಯೂಬಳು ಜೇನುತುಪ್ಪದಂತೆ ಸಿಹಿಯಾಗಿದ್ದ ದ್ರಾಕ್ಷಾರಸವನ್ನು ಚಿನ್ನದ ಒಂದು ಬಟ್ಟಲಿನಲ್ಲಿ ತುಂಬಿಕೊಂಡು ಬಂದು ಜ್ಯೂಸಿಗೆ ಅರ್ಪಿಸುವುದಕ್ಕಾಗಿ ಪ್ರಯಾಮಿನ ಕೈಗೆಕೊಟ್ಟು, ಶುಭಶಕುನವುಂಟಾಗುವಂತೆ ಅನುಗ್ರಹಿಸಬೇಕೆಂದು ಜ್ಯೂಸನ್ನು ಪ್ರಾರ್ಥಿಸಹೇಳಿ, ಒಂದುವೇಳೆ, ಶುಭಶಕುನಗಳುಂಟಾಗದಿದ್ದ ಪಕ್ಷದಲ್ಲಿ ಪ್ರಯಾಣವನ್ನು ನಿಲ್ಲಿಸಬೇಕೆಂಬುದಾಗಿಯೂ ಪ್ರಯಾಮನಿಗೆ ಪ್ರಾರ್ಥಿಸಿಕೊಂಡಳು. ಆತನು ತನ್ನ ಹೆಂಡತಿಯ ಮಾತನ್ನು ತೆಗೆದುಹಾಕಲಾರದೆ, ಒಬ್ಬ ಸೇವಕಿಯು ಅಲ್ಲಿಗೆ ತಂದಿದ್ದ ನೀರಿನಿಂದ ತನ್ನ

ಕೈಗಳನ್ನು ತೊಳೆದುಕೊಂಡು, ತನ್ನ ಹೆಂಡಿತಿಯು ತಂದಿದ್ದ ದ್ರಾಕ್ಷಾರಸ ಪಾತ್ರೆಯನ್ನು ಕೈಗೆ ತೆಗೆದುಕೊಂಡು ''ಮಹಾಮಹಿಮನಾದ ಜ್ಯೂಸನೆ' ಏಕಿಲೀಸನ ಬಳಿಯಲ್ಲಿ ನನ್ನ ಪ್ರಾರ್ಥನೆಯು ನೆರವೇರುವಂತೆ ಅನುಗ್ರಹಿಸು. ನನ್ನ ಕೋರಿಕೆಯು ನೆರವೇರುವುದು ಎಂಬುವುದನ್ನು ಸೂಚಿಸುವುದಕ್ಕಾಗಿ ನನ್ನ ಬಲಗಡೆ ಒಂದು ಪಕ್ಷಿಯು ಕಾಣಿಸಿಕೊಳ್ಳುವಂತೆ ಅನುಗ್ರಹಿಸು'' ಎಂದು ಭಕ್ತಿಯಿಂದ ಗಟ್ಟಿಯಾಗಿ ಪ್ರಾರ್ಥಿಸಿದನು.

೧೮೨. ಆಗ ಸ್ವಲ್ಪ ಹೊತ್ತಿನಲ್ಲಿಯೇ ಒಂದು ಕರಿಯ ಹದ್ದು ಟ್ರಾಯ್ ಪಟ್ಟಣದ ಬಲಗಡೆಗೆ ತನ್ನ ರೆಕ್ಕೆಗಳನ್ನು ವಿಸ್ತರಿಸಿಕೊಂಡು ಹಾರಿಹೋಯಿತು. ಈ ಶುಭಸೂಚನೆಯನ್ನು ಕಂಡು ಪ್ರಯಾಮನು ಸ್ವಲ್ಪ ಸಂತೋಷಪಟ್ಟುಕೊಂಡು ತನ್ನ ನಾಲ್ಕು ಚಕ್ರಗಳ ಗಾಡಿಯಲ್ಲಿ ಕುಳಿತು ಪಯಣಹೊರಟನು ಅವನ ಬಂಧುಮಿತ್ರರುಗಳೆಲ್ಲರೂ ಪ್ರಯಾಮನು ಪುನಃ ಹಿಂದಕ್ಕೆ ಬರಲಾರನೆಂದು ತಿಳಿದಿದ್ದರೋ ಎಂಬಂತೆ ಗೋಳಾಡುತ್ತ ಹಿಂದೆಹಿಂದೆ ಹೊರಟರು. ಜ್ಯೂಸನು ವೃದ್ಧನಾದ ಪ್ರಯಾಮನನ್ನು ಕಂಡು ಕನಿಕರಪಟ್ಟು ತನ್ನ ಮಗನಾದ ಹರ್ಮಿಸ್ ದೇವನನ್ನು ಕರೆದು, ಆ ವೃದ್ಧನನ್ನು ಗ್ರೀಕರ ಪಾಳೆಯಕ್ಕೆ ಕರೆದುಕೊಂಡು ಹೋಗಿಬಿಡುವಂತೆ ಆಜ್ಞಾಪಿಸಿದನು. ಆ ಕೂಡಲೆ ಹರ್ಮಿಸನು ತನ್ನ ಅದ್ಭುತವಾದ ಪಾದುಕೆಗಳನ್ನು ಧರಿಸಿ ಪ್ರಯಾಮನ ಬಳಿಗೆ ಕ್ಷಣಮಾತ್ರದಲ್ಲಿ ಬಂದನು. ಅವನನ್ನು ಕಂಡು ಹೆದರಿಕೆಯಿಂದ ಪ್ರಯಾಮನಿಗೆ ರೋಮಾಂಚವೂ ದಿಗ್ಭ್ರಮೆಯೂ ಉಂಟಾದುವು. ಆಗ ಹರ್ಮಿಸನು ಅವನೊಡನೆ ಕರುಣದಿಂದ ಮಾತನಾಡುತ್ತ ತಾನು ಏಕಿಲೀಸಿನ ಸೇವಕನೆಂದೂ ಹೆಕ್ಟರಿನ ಶವವು ಸ್ವಲ್ಪವೂ ಕೆಡದೆ ಸಮಗ್ರವಾಗಿ ಏಕಿಲೀಸಿನ ಹಡಗಿನ ಬಳಿಯಲ್ಲಿರುವುದೆಂದೂ ತಿಳಿಸಿದನು. ಆ ಸುದ್ದಿಯನ್ನು ಕೇಳಿ ಪ್ರಯಾಮನು ಬಹಳ ಸಂತೋಷಪಟ್ಟು ದೇವತೆಗಳನು ಸ್ತೋತ್ರಮಾಡುತ್ತ ತನಗೆ ಕಾಣಿಸಿಕೊಂಡಿದ್ದ ಪುರುಷನಿಗೆ ತನ್ನ ಬಳಿಯಲ್ಲಿದ್ದ ಚಿನ್ನದ ಬಟ್ಟಲನ್ನು ಬಹುಮಾನವಾಗಿ ಕೊಡುವುದಕ್ಕೆ ಹೋದನು. ಆದರೆ ಹರ್ಮಿಸ್ಸನು ಅದನ್ನು ಪರಿಗ್ರಹಿಸದೆ, ರಥದಮೇಲೆ ಹತ್ತಿ ಅದನ್ನು ಗ್ರೀಕರ ಪಾಳೆಯದ ಬಳಿಗೆ ತಂದುಬಿಟ್ಟನು. ಬಳಿಕ ಪಾಳೆಯದ ಬಾಗಿಲುಗಳನ್ನು ಅಗಲವಾಗಿ ತೆರೆದು ರಥವನ್ನು ಪಾಳೆಯದೊಳಕ್ಕೆ ತಂದನು. ಈ ಸಮಯದಲ್ಲಿ ಗ್ರೀಕ್ ಯೋಧರುಗಳೆಲ್ಲರಿಗೂ ಗಾಢನಿದ್ರೆಯುಂಟಾಗಿದ್ದುದರಿಂದ, ಪ್ರಯಾಮನ ಪ್ರಯಾಣಕ್ಕೆ ಯಾವ ಅಡ್ಡಿಯೂ ಉಂಟಾಗಲಿಲ್ಲ. ಏಕಿಲೀಸಿನ ಗುಡಾರವನ್ನು

ಸಮೀಪಿಸಿದ ಕೂಡಲೆ ಹರ್ಮಿಸನು ತಾನು ಯಾರೆಂಬುದನ್ನು ಪ್ರಿಯಾಮನಿಗೆ ತಿಳಿಸಿ ಪ್ರಿಯಾಮನ್ನು ಕುರಿತು ಏಕಿಲೀಸಿಗೆ ಅವನ ತಂದೆಯ ಜ್ಞಾಪಕ ಉಂಟಾಗುವಂತೆಯೂ ತನ್ನ ಪ್ರಾರ್ಥನೆಯನ್ನು ನಡೆಸಿಕೊಡಬೇಕೆಂದು ಕೇಳಿ ಕೊಳ್ಳುವಂತೆಯೂ ಬೋಧಿಸಿ ಒಲಿಂಪಸ್ ಪರ್ವತಕ್ಕೆ ಹೊರಟುಹೋದನು.

೧೮೩. ತರುವಾಯ ಪ್ರಿಯಾಮನು ಏಕಿಲೀಸಿನ ಗುಡಿಸಿಲನ್ನು ಏಕಾಂಗಿಯಾಗಿ ಪ್ರವೇಶಿಸಿ ಏಕಿಲೀಸಿನ ಪಾದಗಳನ್ನು ಗಟ್ಟಿಯಾಗಿ ಹಿಡಿದು ಕೊಂಡು, ತನ್ನ ಅನೇಕ ಪುತ್ರರನ್ನು ಕೊಂದಿದ್ದ ಆತನ ಕೈಗಳನ್ನೇ ಮುತ್ತಿಟ್ಟು ಕೊಳ್ಳುತ್ತಾ "ಅಯ್ಯಾ, ದೇವಸಮಾನನಾದ ಏಕಿಲೀಸನೆ, ನಿಮ್ಮ ತಂದೆ ಯಂತೆಯೇ ವೃದ್ಧನಾಗಿರುವ ನನ್ನ ಪ್ರಾರ್ಥನೆಯನ್ನು ಲಾಲಿಸು. ನಿಮ್ಮ ತಂದೆಯು ನಿನ್ನಂತಹ ಶೂರಪುತ್ರನನ್ನು ಪಡೆದು ಕೃತಾರ್ಥನಾಗಿರುವನು. ಆತನು ನಿನ್ನ ಪುನರಾಗಮನವನ್ನೇ ಇದಿರುನೋಡುತ್ತಿರುವನು. ನನ್ನ ದುರವ ಸ್ಥೆಯನ್ನು ನೋಡು! ಹೆಕ್ಯೂಬಳಲ್ಲಿ ಜನಿಸಿದ ಹತ್ತೊಂಬತ್ತುಮಂದಿ ರಾಜ ಪುತ್ರರುಗಳಲ್ಲಿ ಹಲವರು ಹತರಾಗಿ ಹೋದರು; ಉಳಿದ ಮೂವತ್ತೊಂದು ಮಂದಿ ದಾಸೀಪುತ್ರರುಗಳಲ್ಲಿಯೂ ಹಲವರು ಹತರಾಗಿರುವರು. ನನ್ನ ಪುತ್ರರು ಗಳಲ್ಲೆಲ್ಲಾ ಅತ್ಯಂತ ಮುಖ್ಯನಾಗಿದ್ದ ಹೆಕ್ಟರಿನ ವಿಷಯವಾಗಿ ಪ್ರಾರ್ಥಿಸಿಕೊ ಳ್ಳಲು ನಾನು ಇಲ್ಲಿಗೆ ಬಂದಿರುವೆನು. ನನ್ನ ಆ ಮಗನ ಶರೀರವನ್ನು ದಯೆಯಿಟ್ಟು ನನಗೆ ಕೊಡು. ಅದಕ್ಕೆ ಪ್ರತಿಯಾಗಿ ಕೊಡುವುದಕ್ಕೋಸುಗ ಅನೇಕ ವಸ್ತು ಗಳನ್ನು ತಂದಿರುವೆನು. ನನ್ನ ಇದೊಂದು ಪ್ರಾರ್ಥನೆಯನ್ನು ನಡೆಸಿಕೊಡು" ಎಂದು ಬಹಳ ದೈನ್ಯದಿಂದ ಬೇಡಿಕೊಂಡನು.

೧೮೪. ಮೊದಲೇ ಥೀಟೀಸಳ ಹಿತಬೋಧನೆಯಿಂದ ಮನಸ್ಸು ಕರಗಿದ್ದ ಏಕಿಲೀಸಿಗೆ ತನ್ನ ತಂದೆಯ ಸುದ್ದಿಯನ್ನು ಕೇಳಿದಕೂಡಲೆ ಮತ್ತಷ್ಟು ವ್ಯಸನ ವುಂಟಾಯಿತು. ಆದುದರಿಂದ, ಅವನು ಪೆಟ್ರೋಕ್ಲಸ್ಸಿನ ಪ್ರಿಯಾನುಚರರಾಗಿದ್ದ ಆಟೊಮೀಡನ್ನನ್ನೂ ಅಲ್ಕಿಮಸ್ಸನ್ನೂ ತನ್ನ ಸಹಾಯಕ್ಕೆ ಕರೆದುಕೊಂಡು ಹೆಕ್ಟರಿನ ದೇಹಕ್ಕೆ ಪ್ರತಿಯಾಗಿ ತಂದಿದ್ದ ವಸ್ತುಗಳಲ್ಲಿ ಎರಡುಮೂರು ವಸ್ತ್ರಗಳನ್ನು ಪ್ರಿಯಾಮಿನ ರಥದಲ್ಲಿಯೇ ಉಳಿಸಿ, ಮಿಕ್ಕ ವಸ್ತುಗಳನ್ನು ಪ್ರತ್ಯೇಕವಾಗಿ ತೆಗೆಸಿಡಿಸಿದನು. ಅನಂತರ ಅವನು ತನ್ನ ಸೇವಕಿಯರಿಂದ ಹೆಕ್ಟರಿನ ದೇಹವನ್ನು ತೊಳೆಸಿ ಆ ದೇಹಕ್ಕೆ ರಥದಲ್ಲಿದ್ದ ವಸ್ತ್ರಗಳನ್ನು ಧರಿಸಿ

ಅದನ್ನು ತನ್ನ ಮಿತ್ರರ ಸಹಾಯದಿಂದ ಎತ್ತಿಕೊಂಡು ಹೋಗಿ ರಥದಲ್ಲಿಟ್ಟನು. ತಾನು ಹೀಗೆ ಮಾಡಿದುದರಿಂದ ಪೆಟ್ರೋಕ್ಲಸ್ಸಿನ ಆತ್ಮಕ್ಕೆ ಕೋಪ ಉಂಟಾಗಿರಬಹುದೆಂದು ತಿಳಿದು, ಇದಕ್ಕಾಗಿ ತನ್ನನ್ನು ಕ್ಷಮಿಸಬೇಕೆಂದು ತನ್ನ ಮಿತ್ರನ ಆತ್ಮವನ್ನು ಪ್ರಾರ್ಥಿಸಿಕೊಂಡನು. ಆ ಬಳಿಕ ಏಕಿಲೀಸನು ತನ್ನ ಗುಡಿಸಿಲಿನಲ್ಲಿಯೇ ಇದ್ದ ಪ್ರಯಾಮಿನಬಳಿಗೆ ಬಂದು ತಾನು ಮಾಡಿದ್ದ ಕೆಲಸವನ್ನು ಅವನಿಗೆ ತಿಳಿಸಿ, ಊಟಮಾಡಿಸಿ ಆ ರಾತ್ರಿ ಅಲ್ಲಿಯೇ ವಿಶ್ರಮಿಸಿಕೊಳ್ಳುವಂತೆ ಕೇಳಿಕೊಂಡನು. ಪ್ರಯಾಮನು ಅದಕ್ಕೆ ಒಪ್ಪಿ ವಿಶ್ರಮಿಸಿಕೊಳ್ಳುತ್ತಿದ್ದಾಗ, ಹೆಕ್ಟರಿನ ಪ್ರೇತಸಂಸ್ಕಾರಕಾರ್ಯಗಳು ನಡೆಯುವುದಕ್ಕೆ ಎಷ್ಟು ದಿನಗಳು ಹಿಡಿಯುವುವೆಂದು ಏಕಿಲೀಸನು ಕೇಳಲಾಗಿ ಪ್ರಯಾಮನು ಹನ್ನೊಂದುದಿನಗಳು ಹಿಡಿಯುವುವೆಂದು ಉತ್ತರಕೊಟ್ಟನು. ಏಕಿಲೀಸನು ಆ ಹನ್ನೊಂದು ದಿನಗಳವರೆಗೂ ಯುದ್ಧವನ್ನು ನಿಲ್ಲಿಸುವುದಾಗಿ ತಿಳಿಸಿದುದರಿಂದ ಪ್ರಯಾಮಿಗೆ ಅತ್ಯಂತಸಂತೋಷವಾಯಿತು.

೧೮೫. ಹೆಕ್ಟರನು ಕಾಲವಾದಂದಿನಿಂದ ಎಡೆಬಿಡದೆ ಗೋಳಾಡುತ್ತಿದ್ದುದರಿಂದ ಪ್ರಯಾಮನು ನಿದ್ದೆಮಾಡಿಯೇ ಇರಲಿಲ್ಲ. ಆದಕಾರಣ, ತನಗಾಗಿ ಹಾಕಿಸಿದ್ದ ಮಂಚದಮೇಲೆ ಮಲಗಿಕೊಂಡ ಕೂಡಲೆ ಅವನಿಗೆ ಗಾಢವಾದ ನಿದ್ರೆಯು ಬಂದಿತು. ಆಗ ಒಲಿಂಪಸ್ ಪರ್ವತದಿಂದ ದೇವದೂತನಾದ ಹರ್ಮಿಸನು ಬಂದು ಪ್ರಯಾಮಿಗೆ ಸ್ವಪ್ನದಲ್ಲಿ ಕಾಣಿಸಿಕೊಂಡು ಶತ್ರುಗಳ ಪಾಳೆಯದಲ್ಲಿ ಹಾಗೆ ವೈಮರೆತು ನಿದ್ರಿಸುವುದು ಅನುಚಿತವೆಂದು ತಿಳಿಸಿ ಅವನನ್ನು ಎಚ್ಚರಗೊಳಿಸಿ, ಅವನ ರಥವನ್ನು ಟ್ರಾಯ್ ನಗರಿಯ ಬಳಿಗೆ ಸುರಕ್ಷಿತವಾಗಿ ತಂದುಬಿಟ್ಟು ತಾನು ಒಲಿಂಪಸ್ ಪರ್ವತಕ್ಕೆ ಹಿಂದಿರುಗಿದನು.

೧೮೬. ಪ್ರಯಾಮನು ಹೆಕ್ಟರಿನ ಶವವನ್ನು ತೆಗೆದುಕೊಂಡು ಹಿಂದಿರುಗಿ ಬರುತ್ತಿದ್ದುದನ್ನು ಕೋಟೆಯ ಗೋಡೆಯ ಮೇಲೆ ನಿಂತು ನೋಡುತ್ತಿದ್ದ ಕೆಸಾಂಡ್ರಳು ಕಂಡು ಗೋಳಾಡತೊಡಗಿದಳು. ಕೂಡಲೆ ಉಳಿದ ಪಟ್ಟಣಿಗರೂ ಬಾಗಿಲಬಳಿಯಲ್ಲಿಯೇ ತುಂಬಿಕೊಂಡು ಆ ದಿನದ ಸಾಯಂಕಾಲದ ವರೆಗೂ ಎಡೆಬಿಡದೆ ರೋದಿಸಿದರು. ಅನಂತರ ಹೆಕ್ಟರಿನ ದೇಹವನ್ನು ಅರಮನೆಗೆ ತೆಗೆದುಕೊಂಡು ಬರಲಾಗಿ ಆಂಡ್ರೊಮೇಕಿಯೇ ಮೊದಲಾದ ಸ್ತ್ರೀಯರು ಬಹಳ ಗೋಳಾಡಿದರು. ಆಕೆಯು ತನ್ನ ಮಗುವಿಗೆ ರಕ್ಷಕರು ಯಾರಿರುವರೆಂದೂ, ಪಟ್ಟಣವು ಶತ್ರುಗಳ ಕೈಗೆ ವಶವಾದರೆ ತಮಗೆ ಯಾವ ಗತಿಯೆಂದೂ, ಬಗೆ

ಬಗೆಯಾಗಿ ಪ್ರಲಾಪಿಸಿದಳು. ಅದನ್ನು ಕಂಡು ಹೆಕ್ಯೂಬಳು ಮತ್ತಷ್ಟು ಹೆಚ್ಚಾಗಿ ರೋದಿಸಿದಳು. ಈ ಸಮಯದಲ್ಲಿ ಹೆಲೆನಳೂ ಅತ್ಯಂತವಾಗಿ ಗೋಳಾಡುತ್ತಾ "ನನ್ನ ಭಾವನೈದಂದಿರುಗಳಲ್ಲಿ ನೀನು ಅತ್ಯಂತದಯಾಶಾಲಿಯಾಗಿದ್ದೆಯಲ್ಲಾ! ನಾನು ಇಲ್ಲಿಗೆ ಬಂದ ಇಪ್ಪತ್ತುವರ್ಷಗಳ ಕಾಲದಲ್ಲಿ ಒಂದು ದಿನವಾದರೂ ನಿನ್ನ ಬಾಯಿಂದ ಕಠಿನವಾಕ್ಯನ್ನು ಕೇಳಿರಲಿಲ್ಲವಲ್ಲಾ! ಪ್ರಿಯಾಮನು ಹೊರತಾಗಿ ಉಳಿದ ಟ್ರೋಜನರು ನನ್ನನ್ನು ಕಂಡು ಭಯಾಸಹ್ಯಗಳಿಂದ ದೂಷಿಸತೊಡಗಿದರೆ, ಅವರೆಲ್ಲರನ್ನೂ ಗದರಿಸಿಕೊಂಡು ನೀನು ನನಗೆ ಎಷ್ಟೋಸಾರಿ ಉಪಕಾರ ಮಾಡಿದ್ದೆಯಲ್ಲಾ!" ಎಂದು ಬಗೆಬಗೆಯಾಗಿ ಹಂಬಲಿಸಿ ಗೋಳಾಡುತ್ತಿದ್ದಳು. ಹೀಗೆ ಒಂಬತ್ತು ದಿನಗಳವರೆಗೂ ಟ್ರಾಯ್ ಪಟ್ಟಣದಲ್ಲೆಲ್ಲಾ ಎಲ್ಲಿ ನೋಡಿದರೂ ಗೋಳಾಟವು ತುಂಬಿಕೊಂಡಿದ್ದಿತು.

೧೮೭. ಈ ಮಧ್ಯದಲ್ಲಿ ಪ್ರಿಯಾಮನು, ಅನೇಕ ಟ್ರೋಜನರನ್ನು ಐಡಾಪರ್ವತಪ್ರಾಂತ್ಯಕ್ಕೆ ಗಾಡಿಗಳ ಸಮೇತವಾಗಿ ಕಳುಹಿಸಿ ಸೌದೆಯನ್ನು ತರಿಸಿದನು. ಒಂಬತ್ತು ದಿನಗಳವರೆಗೂ ಸೌದೆಯು ರಾಶಿರಾಶಿಯಾಗಿ ಬಂದು ಬೀಳುತ್ತಿದ್ದಿತು. ಹತ್ತನೆಯ ದಿನದ ಪ್ರಾತಃಕಾಲದಲ್ಲಿ ಒಂದು ದೊಡ್ಡ ಚಿತಿಯನ್ನು ಒಟ್ಟಿಸಿ ಅದರ ಮೇಲೆ ಹೆಕ್ಟರಿನ ದೇಹವನ್ನಿಟ್ಟು ಬೆಂಕಿಯನ್ನು ಹೊತ್ತಿಸಿದರು ದೇಹವು ಚೆನ್ನಾಗಿ ಉರಿದುಹೋದ ಮೇಲೆ ಚಿತಿಗೆ ದ್ರಾಕ್ಷಾರಸವನ್ನು ಸುರಿದು ಅದನ್ನು ಆರಿಸಿದರು. ಹೆಕ್ಟರಿನ ಸಹೋದರರೂ ಸ್ನೇಹಿತರೂ ಸೇರಿ ಹೆಕ್ಟರಿನ ಮೂಳೆಗಳನ್ನು ಆರಿಸಿ ಅವನ್ನು ಒಂದು ಸ್ವರ್ಣ ಪಾತ್ರೆಯಲ್ಲಿ ತುಂಬಿ ಒಂದು ಹಳ್ಳದಲ್ಲಿ ಹೂತು ಅದರಮೇಲೆ ದೊಡ್ಡ ಚಪ್ಪಡಿಗಳನ್ನು ಮುಚ್ಚಿ ಅವುಗಳ ಮೇಲೆ ಮಣ್ಣಿನ ರಾಶಿಯನ್ನು ಹಾಕಿದರು. ಶೂರನಾದ ಹೆಕ್ಟರಿನ ಚರಿತ್ರವು ಇಲ್ಲಿಗೆ ಮುಗಿಯಿತು.

## XXVIII.

೧೮೮ ಹೆಕ್ಟರಿನ ಸಂಸ್ಕಾರವು ಮುಗಿದ ಬಳಿಕ ಪುನಃ ಟ್ರಾಯ್ ಪಟ್ಟಣದ ಮುತ್ತಿಗೆಗೆ ಮೊದಲಾಯಿತು. ಟ್ರೋಜನರಿಗೆ ಬಹಳ ಹೆದರಿಕೆಯುಂಟಾಗಿದ್ದುದರಿಂದ ಅವರು ತಮ್ಮ ಪಟ್ಟಣದೊಳಗೇ ಸೇರಿಕೊಂಡು, ತಮ್ಮ ಸಹಾಯಾರ್ಥವಾಗಿ ಬರುವರೆಂದು ನಿರೀಕ್ಷಿಸುತ್ತಿದ್ದ ಅಮೆಜಾನ್ ಎಂಬ ಸ್ತ್ರೀ ಯೋಧರ ದಳವೂ ಮೆಮ್ನಾನ್ ಎಂಬ ಒಬ್ಬರಾಜನೂ ಯಾವಾಗ ಬರುವರೋ

ಎಂದು ಬಹಳ ಕುತೂಹಲದಿಂದ ಇದಿರುನೋಡುತ್ತಿದ್ದರು. ಆದುದರಿಂದ ಆ ಟ್ರೋಜನರು ಬಲವಾಗಿ ಯುದ್ಧಮಾಡುವ ಪ್ರಯತ್ನಗಳೆಲ್ಲವನ್ನೂ ನಿಲ್ಲಿಸಿದ್ದರು. ಗ್ರೀಕರೂ ಅವರ ಗೋಜಿಗೆ ಹೋಗಲು ಅಷ್ಟು ಉತ್ಸಾಹದಿಂದ ಪ್ರಯತ್ನಿಸಲಿಲ್ಲ. ಹೀಗಿರುವಾಗ, ಅಥೆನಿಗೆ ಪ್ರೀತಿಪಾತ್ರವಾದ ಟ್ರಾಯ್ ಪಟ್ಟಣದಲ್ಲಿದ್ದ ಉಲ್ಕಾಶಿಲೆಯನ್ನು ತಂದ ಹೊರತು ತಮಗೆ ಆ ಪಟ್ಟಣವು ವಶವಾಗಲಾರದೆಂಬ ಒಂದು ಪ್ರವಾದವು ಗ್ರೀಕರ ಪಾಳೆಯದಲ್ಲಿ ಹುಟ್ಟಿತು. ಆದುದರಿಂದ ಅದನ್ನು ತೆಗೆದುಕೊಂಡುಬರಲು ಬಹುತಂತ್ರಜ್ಞನಾದ ಒಡಿಸಿಯಸ್ಸನೇ ಸರಿಯಾದವನೆಂದು ಗ್ರೀಕರೆಲ್ಲರೂ ನಿರ್ಧರಿಸಿದರು.

೧೮೯. ಆದರೆ ಒಡಿಸಿಯುಸ್ಸನು ಟ್ರಾಯ್ ನಗರಿಯ ಸೌಭಾಗ್ಯಸ್ವರೂಪವಾಗಿದ್ದ ಆ ಉಲ್ಕಾಶಿಲೆಯನ್ನು ತರುವುದಕ್ಕೆ ಮೊದಲು ತಮ್ಮ ಪಾಳೆಯದಲ್ಲಿ ಆಹಾರಸಾಮಗ್ರಿಗಳಿಗೆ ಅಭಾವವಾಗಿದ್ದುದರಿಂದ, ಮುಂಚೆ ಅದಕ್ಕೆ ಏನಾದರೂ ಉಪಾಯಮಾಡುವುದಾಗಿಯೂ, ಅನಂತರ ಟ್ರಾಯ್ ನಗರದ ಸೌಭಾಗ್ಯಶಿಲೆಯನ್ನು ಕದ್ದುತರುವುದಾಗಿಯೂ ತನ್ನ ಸಂಗಡಿಗರಿಗೆ ತಿಳಿಸಿದನು. ಡೀಲಾಸ್ (Delos) ಎಂಬ ದ್ವೀಪದ ಏನಿಯಸ್ ಎಂಬ ದೊರೆಗೆ, ಕಲ್ಲಿನಿಂದ ರೊಟ್ಟಿಯನ್ನೂ, ನೀರಿನಿಂದ ದ್ರಾಕ್ಷಾರಸವನ್ನೂ, ಕೊಚ್ಚೆಯಿಂದ ಇಪ್ಪೆಯ ಎಣ್ಣೆಯನ್ನೂ ಮಾಡುವ ಶಕ್ತಿಯುಳ್ಳವರಾಗಿದ್ದ ಮೂವರು ಪುತ್ರಿಯರಿರುವರೆಂದೂ, ಅವರನ್ನು ಮದುವೆಮಾಡಿಕೊಂಡು ಅವರನ್ನು ಗ್ರೀಕರ ಪಾಳೆಯಕ್ಕೆ ಕರೆತರುವುದಾಗಿಯೂ ತಿಳಿಸಿ, ತನ್ನ ದೇಶದಿಂದ ಬಂದಿದ್ದ ಕೆಲವರನ್ನು ತನ್ನ ಸಹಾಯಕ್ಕಾಗಿ ಕರೆದುಕೊಂಡು ಪಯಣಹೊರಟು ಒಂದು ದ್ವೀಪಕ್ಕೆ ಹೋಗಿ ಅಲ್ಲಿ ತನ್ನ ಕಡೆಯವರನ್ನು ಇಳಿಸಿ ತಾನೊಬ್ಬನು ಮಾತ್ರ ಒಬ್ಬ ಭಿಕ್ಷುಕನವೇಷವನ್ನು ಹಾಕಿಕೊಂಡು ಗ್ರೀಕರ ಪಾಳೆಯವನ್ನು ಪುನಃ ಪ್ರವೇಶಿಸಿದನು. ಅವನು ಬಹಳ ಕೊಳೆಯಾಗಿಯೂ ಛಿದ್ರಛಿದ್ರವಾಗಿಯೂ ಇದ್ದ ಒಂದು ಅಂಗಿಯನ್ನು ತೊಟ್ಟು ಬಹಳ ಸವೆದುಹೋಗಿದ್ದ ಕೃಷ್ಣಾಜಿನವೊಂದನ್ನು ಹೊದೆದುಕೊಂಡು ಕಂಡಕಂಡವರನ್ನೆಲ್ಲಾ ಹಲ್ಲುಕಿರಿದು ದೈನ್ಯದಿಂದ ಯಾಚಿಸುತ್ತ ಅವರು ಕೊಟ್ಟ ಆಹಾರವಸ್ತುಗಳನ್ನು ಆತುರದಿಂದ ತನ್ನ ಕೊಳೆಚೀಲಕ್ಕೇ ತುಂಬಿಕೊಳ್ಳುತ್ತಾ ಗ್ರೀಕರ ಪಾಳೆಯದಲ್ಲೆಲ್ಲಾ ಸುತ್ತಾಡುತ್ತಿದ್ದನು.

೧೯೦. ಅವನನ್ನು ಕುರಿತು "ನೀನು ಯಾರು?" ಎಂದು ಕೇಳಿದ ಗ್ರೀಕರಿಗೆಲ್ಲಾ, ತಾನು ಕ್ರೀಟ್ ದ್ವೀಪದ ಒಬ್ಬ ಸಮುದ್ರಚೋರನೆಂದೂ,

ಈಜಿಪ್ಟ್ ದೇಶೀಯರಿಗೆ ಸೆರೆಸಿಕ್ಕಿ ಅವರ ಕಲ್ಲಿನ ಗಣಿಗಳಲ್ಲಿ ಎಷ್ಟೋವರುಷ ದಾಸನಾಗಿ ದುಡಿಯುತ್ತಿದ್ದನೆಂದೂ, ಒಂದಾನೊಂದುದಿನ ಸಮಯವನ್ನು ನೋಡಿಕೊಂಡು, ವ್ಯಾಪಾರಾರ್ಥವಾಗಿ ಈಜಿಪ್ಟಿಗೆ ಬಂದಿದ್ದ ಫೊನೀಷಿಯನ್ನರ ಹಡಗಿನಲ್ಲಿ ಕುಳಿತು ಗ್ರೀಕರ ಪಾಳೆಯಕ್ಕೆ ಬಂದುಬಿಟ್ಟಿದ್ದನೆಂದೂ ತಿಳಿಸಿ, ಕ್ರೀಟ್ ದ್ವೀಪಕ್ಕೆ ಹೋಗುತ್ತಿದ್ದ ಯಾವುದಾದರೂ ಹಡಗು ಕಂಡುಬರುವ ವರೆಗೂ ಅಲ್ಲಿ ಇದ್ದುಕೊಂಡು ಇರುವುದಾಗಿ ಹೇಳುತ್ತಬಂದನು. ಆ ಭಿಕ್ಷುಕನು ಡೈಯೊಮಿಡೀಸನ್ನು ಬಹಳವಾಗಿ ಆಶ್ರಯಿಸಿ ಅವನಿಗೆ ತನ್ನ ಅನುಭವಗಳನ್ನು ಸರಸವಾಗಿ ವರ್ಣಿಸಿ ಅವನಿಂದ ಕೆಲವು ಬಟ್ಟೆಬರೆಗಳನ್ನು ಬಹುಮಾನವಾಗಿ ಪಡೆದುಕೊಂಡನು. ಆದರೂ ಆ ಭಿಕ್ಷುಕನಲ್ಲಿ ಕೆಟ್ಟ ಚಾಳಿಯೊಂದಿದ್ದಿತು. ಗ್ರೀಕ್ ಶೂರರುಗಳ ಹಿರಿಯರ ವಿಷಯದಲ್ಲಿ ಏನಾದರೂ ಅವಮಾನಕರವಾದ ವಿಷಯಗಳಿದ್ದರೆ ಅವುಗಳನ್ನು ಸಿಕ್ಕಿದವರ ಮುಂದೆ ಅವನು ಎತ್ತಿಆಡದೆ ಇರುತ್ತಿರಲಿಲ್ಲ. ಅವನಿಗೆ ಚಿಕ್ಕವರು ದೊಡ್ಡವರೆಂಬ ತಾರತಮ್ಯವೇ ಇರಲಿಲ್ಲವಾದುದರಿಂದ, ಗ್ರೀಕರ ಪಾಳೆಯದಲ್ಲೆಲ್ಲಾ ಸಿಕ್ಕಿದಕಡೆ ಸುತ್ತುತ್ತಾ ಎರಡುಮೂರು ದಿನಗಳಲ್ಲಿಯೇ ಗ್ರೀಕರೆಲ್ಲರಿಗೂ ಬೇಸರವುಂಟುಮಾಡಿದನು. ಒಡಿಸಿಯಸ್ಸಿನ ಅಜ್ಜನಾದ ಆಟೊಲಿಕಸ್ಸಿನ ಚೌರ್ಯಕೌಶಲವನ್ನು ವಿವರಿಸಿ ಹೇಳಿ ಒಡಿಸಿಯಸ್ಸನು ಚೋರವಂಶೀಯನೆಂದು ಅನೇಕರ ಮುಂದೆ ದೂರಿದನು. ಆದರೂ ತಾನೇ ಸಮಯನೋಡಿಕೊಂಡಿದ್ದು ಒಡಿಸಿಯಸ್ಸಿನ ಗುಡಿಸಿಲಿನಲ್ಲಿದ್ದ ಬಹಳ ಬೆಲೆಯುಳ್ಳ ಬೆಳ್ಳಿಯ ಒಂದು ಬಟ್ಟಲನ್ನು ಕದ್ದುಬಿಟ್ಟನು. ಅದನ್ನು ಅವನು ತನ್ನ ಚೀಲದಲ್ಲಿ ಹಾಕಿಕೊಂಡಿದ್ದುದನ್ನು ಕೆಲವು ಗ್ರೀಕ್ ತರುಣರು ಕಂಡುಹಿಡಿದು, ಅವನನ್ನು ಪ್ರಹರಿಸಿ ಸ್ಕೀಯಾನ್ ಪಟ್ಟಣ ದ್ವಾರದ ವರೆಗೆ ಅಟ್ಟಿಕೊಂಡುಹೋಗಿ ಮತ್ತೊಮ್ಮೆ ಗ್ರೀಕ್ ಪಾಳೆಯದೊಳಕ್ಕೆ ಕಾಲಿಟ್ಟರೆ ಕೈಕಾಲುಗಳನ್ನು ಕತ್ತರಿಸಿ ಹಾಕಿ ಹದ್ದುನಾಯಿಗಳ ಪಾಲುಮಾಡುವೆವೆಂದು ಹೆದರಿಸಿ ಅವನನ್ನು ತಳ್ಳಿಬಿಟ್ಟರು.

೧೯೧. ಆ ಭಿಕ್ಷುಕನು ಟ್ರಾಯ್ ಪಟ್ಟಣದ ಬಾಗಿಲಬಳಿಯಲ್ಲಿ ಬಹಳ ಗಟ್ಟಿಯಾಗಿ ಗೋಳಾಡುತ್ತ, ಗ್ರೀಕರನ್ನು ಸಿಕ್ಕಿದಂತೆ ಶಪಿಸುತ್ತ ಟ್ರಾಯ್ ಪಟ್ಟಣಿಗರನ್ನು ಕರೆಕರೆದು ತನಗೆ ಆಶ್ರಯಕೊಟ್ಟು ಕಾಪಾಡಬೇಕೆಂದು ಪ್ರಾರ್ಥಿಸಿಕೊಂಡನು. ಆಗ ಅಕಸ್ಮಾತ್ತಾಗಿ ಅದೇ ಸಮಯದಲ್ಲಿ ಹೆಲೆನಳು ಆ ಪಟ್ಟಣ ದ್ವಾರದ ಬಳಿಗೆ ಬಂದು ಆ ಭಿಕ್ಷುಕನ ಮೊರೆಯನ್ನು ಕೇಳಿ, ಅವನನ್ನು ಪಟ್ಟಣ

ದೊಳಕ್ಕೆ ಕರೆದುಕೊಂಡು ಬರಬೇಕೆಂದು ಮನಸ್ಸುಮಾಡಿದಳು. ಅವನು ಅನೇಕ ದೇಶಗಳನ್ನು ಸುತ್ತಿಕೊಂಡು ಬಂದಿರುವುದಾಗಿಯೂ, ಸ್ಪಾರ್ಟದಲ್ಲಿ ಹೆಲೆನಳ ಮಾತಾಪಿತೃಗಳನ್ನೂ ಸಹೋದರರನ್ನೂ ಪುತ್ರಿಯನ್ನೂ ನೋಡಿದ್ದುದಾಗಿಯೂ ಹೇಳಿದುದರಿಂದ ಹೆಲೆನಳಿಗೆ ಕುತೂಹಲವುಂಟಾಗಿ ಆ ಪ್ರಯಾಣಿಕನನ್ನು ತನ್ನ ಮಂದಿರಕ್ಕೇ ಕರೆದುಕೊಂಡು ಹೋದಳು. ಅತಿಥಿಅಭ್ಯಾಗತರುಗಳನ್ನು ಉಪಚರಿಸುವುದು ಬಹಳ ಮುಖ್ಯವಾದ ಧರ್ಮವೆಂದು ಆ ಕಾಲದ ಜನರು ಭಾವಿಸಿದ್ದುದರಿಂದ, ಅವನಿಗೆ ಸ್ನಾನಮಾಡಿಸಿ ಒಳ್ಳೆಯ ಬಟ್ಟೆಬರೆಗಳನ್ನು ಕೊಡಿಸಿದಾಗ, ಆ ಪ್ರಯಾಣಿಕನ ಅದ್ಭುತರೂಪವನ್ನು ಕಂಡು ಹೆಲೆನಳಿಗೆ ಆಶ್ಚರ್ಯವಾಯಿತು. ಆಕೆಯು ಕ್ಷಣಮಾತ್ರದಲ್ಲಿಯೇ ಅವನ ಹೆಸರನ್ನು ಹಿಡಿದು ಕೂಗುವುದರಲ್ಲಿದ್ದಳು ಆದರೆ ಒಡಿಸಿಯಸ್ಸನು ಸನ್ನೆಮಾಡಿದುದರಿಂದ, ಅವಳು ಸುಮ್ಮನಾದಳು. ದೈವವಶದಿಂದ ಪ್ಯಾರಿಸ್ಸನು ಆ ಕಾಲದಲ್ಲಿ ಅರಮನೆಯಲ್ಲಿರಲಿಲ್ಲ ವಾದಕಾರಣ ಒಡಿಸಿಯಸ್ಸಿನ ಗುರುತನ್ನು ಮತ್ತೆ ಯಾರಾದರೂ ಕೂಡಲೆ ಕಂಡು ಹಿಡಿಯುವ ಸಂಭವವಿರಲಿಲ್ಲ. ಆದುದರಿಂದ ಒಡಿಸಿಯಸ್ಸನು ಹೆಲೆನಳನ್ನು ಕುರಿತು ತಾನು ಬಂದಿದ್ದ ಉದ್ದೇಶವನ್ನು ತಿಳಿಸಿ. ಎಂತಿದ್ದರೂ ಟ್ರಾಯ್ ಪಟ್ಟಣವು ಗ್ರೀಕರ ವಶವಾಗುವುದೆಂದೂ, ಆಗ ಮೆನೆಲಾಸನು ಬಂದು ಪ್ರಯಾಮಿನ ಅರಮನೆಯನ್ನು ಪ್ರವೇಶಿಸಿ ಹೆಲೆನಳನ್ನು ಹುಡುಕಿ ಕಂಡು ಹಿಡಿಯುವಾಗ ಹೆಲೆನಳು ಅವನ ಕೋಪಕ್ಕೆ ತುತ್ತಾಗದಂತೆ ನೋಡಿಕೊಳ್ಳು ವುದಾಗಿಯೂ ಹೇಳಿ ಆಕೆಯನ್ನು ನಂಬಿಸಿದನು. ಒಡಿಸಿಯಸ್ಸನು ಹೆಲೆನಳಿಂದ ಗಾಢನಿದ್ರೆಯನ್ನುಂಟುಮಾಡುವ ಒಂದು ಔಷಧದ ಸೀಸೆಯನ್ನು ಪಡೆದುಕೊಂಡು ಪುನಃ ತನ್ನ ಭಿಕ್ಷುಕವೇಷವನ್ನು ಧರಿಸಿ ತನ್ನ ವೃತ್ತಾಂತವನ್ನು ಯಾರಿಗೂ ತಿಳಿಸಕೂಡದೆಂದು ಆಕೆಗೆ ಪ್ರಾರ್ಥಿಸಿ ಟ್ರಾಯ್ ಪಟ್ಟಣದ ಬೀದಿಬೀದಿಯಲ್ಲೂ ಅಲೆದಾಡುತ್ತಾ ರಾತ್ರಿಯಹೊತ್ತಿನಲ್ಲಿ ಕಮ್ಮಾರರ ಕುಲುಮೆಗಳ ಬಳಿಯಲ್ಲಿ ಮಲಗಿ ನಿದ್ರಿಸುತ್ತ ಕೆಲವುದಿನಗಳನ್ನು ಕಳೆದನು. ಅವನು ಪ್ರತಿದಿನವೂ ತಪ್ಪದೆ ಅನೇಕ ದೇವಸ್ಥಾನಗಳಿಗೆ ಹೋಗಿಬರುತ್ತಿದ್ದನು. ಅವನ ವಿಚಾರವಾಗಿ ಯಾರಾದರೂ ಪ್ರಶ್ನೆಗಳನ್ನು ಕೇಳಿದರೆ ತಾನೊಬ್ಬ ಭಿಕ್ಷುಕನೆಂದೂ ಶಾಂತವಾಗಿದ್ದ ಯಾವುದಾದರೂ ಒಂದು ಊರಿಗೆ ಹೋಗಿ ಅಲ್ಲಿ ನೆಲೆಗೊಳ್ಳಬೇಕೆಂದಿದ್ದನೆಂದೂ ದಾರಿಯ ಆಹಾರ ವೆಚ್ಚಗಳಿಗಾಗಿ ಆಹಾರ ಸಾಮಗ್ರಿಗಳನ್ನೂ ಹಣವನ್ನೂ ಭಿಕ್ಷಬೇಡುತ್ತಿದ್ದನೆಂದೂ ತಿಳಿಸುತ್ತಿದ್ದನು. ಟ್ರಾಯ್ ಪಟ್ಟಣದಲ್ಲಿ ಇದ್ದಷ್ಟು

ದಿವಸವೂ ಅವನು ಎಲ್ಲರೊಡನೆಯೂ ವಿನಯದಿಂದಲೂ ದೈನ್ಯದಿಂದಲೂ ಮಾತನಾಡುತ್ತಿದ್ದುದರಿಂದ, ಟ್ರೋಜನರಲ್ಲಿ ಯಾರೂ ಅವನ ವಿಷಯದಲ್ಲಿ ಸಂಶಯಪಡಲು ಅವಕಾಶವಿರಲಿಲ್ಲ.

೧೯೨. ಟ್ರಾಯ್‌ಪಟ್ಟಣದ ಸೌಭಾಗ್ಯಶಿಲೆಯು ಅಥೆನಿಯ ದೇವಸ್ಥಾನದಲ್ಲಿದ್ದಿತು. ಅದು ಆಕಾಶದಿಂದ ಬಿದ್ದ ಒಂದು ಕರಿಯ ಕಲ್ಲಾಗಿದ್ದಿತು. ಅದು ಟ್ರಾಯ್‌ಪಟ್ಟಣದಲ್ಲಿರುವ ವರೆಗೂ ತಮಗೆ ಭಯವಿಲ್ಲವೆಂದು ಟ್ರೋಜನರು ನಂಬಿದ್ದರು. ಆದುದರಿಂದ ಅದನ್ನು ಕಾಪಾಡುವುದಕ್ಕಾಗಿ ಅಥೆನಿದೇವತೆಯ ಅರ್ಚಕಿಯರು ಗರ್ಭಗೃಹದಲ್ಲಿ ಸರದಿಯಮೇರೆಗೆ ಕಾವಲಾಗಿರುತ್ತಿದ್ದರು. ಹೊರಗಡೆಯೂ ಅನೇಕ ಟ್ರೋಜನ್ ಯೋಧರು ಕಾವಲಿದ್ದರು. ಕ್ರೂರವಾದ ವ್ಯಾಧಿಗಳಿಂದ ಪೀಡಿತರಾಗಿದ್ದವರು ಆ ದೇವಸ್ಥಾನದಲ್ಲಿ ಒಂದು ರಾತ್ರೆ ಮಲಗಿದ್ದು ಸ್ವಪ್ನದಲ್ಲಿ ದೇವತೆಯು ಕಾಣಿಸಿಕೊಂಡು ತಿಳಿಸಿದ್ದಮೇರೆಗೆ ನಡೆದುಕೊಂಡರೆ ತಮ್ಮ ರೋಗವು ಪರಿಹಾರವಾಗುವುದೆಂದು ಟ್ರೋಜನರು ನಂಬಿದ್ದುದರಿಂದ ರೋಗಗ್ರಸ್ತರಾಗಿದ್ದವರು ಪ್ರತಿದಿವಸ ರಾತ್ರಿಯೂ ಬಂದು ದೇವಸ್ಥಾನದಲ್ಲಿ ಮಲಗಿದ್ದು ಬೆಳಗ್ಗೆ ಹೊರಟುಹೋಗುತ್ತಿದ್ದರು. ಒಂದಾನೊಂದು ದಿನ ರಾತ್ರಿ ಒಡಿಸಿಯಸ್ಸನೂ ಅದೇ ದೇವಸ್ಥಾನಕ್ಕೆ ಬಂದು ಅಲ್ಲಿ ಮಲಗಿಕೊಂಡಿದ್ದನು. ಪದ್ಧತಿಯಮೇರೆಗೆ ಕಾವಲಿದ್ದ ಅರ್ಚಕಿಯು, ಭಕ್ತರು ಮಲಗಿದ್ದ ಕಡೆಯಲ್ಲಿ ಸುತ್ತಿಕೊಂಡು ಹೋದಳು, ಪುನಃ ಆಕೆಯು ಆಕಡೆ ಬರುವಷ್ಟರೊಳಗಾಗಿ ಒಡಿಸಿಯಸ್ಸನು ತಾನು ಹೆಲೆನಳಿಂದ ಬಹುಮಾನವಾಗಿ ಪಡೆದಿದ್ದ ನಿದ್ರಾಜನಕವಾದ ಔಷಧಿಯ ಸುಂದರವಾದ ಸೀಸೆಯನ್ನು ತನ್ನ ಚೀಲದಿಂದ ಹೊರಕ್ಕೆ ತೆಗೆದು ಆಕೆಯ ಕಣ್ಣಿಗೆ ಬೀಳುವಂತೆ ಇರಿಸಿದ್ದನು. ಎರಡನೆಯಸಾರಿ ಆಕೆಯು ಆ ಕಡೆಗೆ ಬಂದಾಗ ಸೀಸೆಯು ಆಕೆಯ ದೃಷ್ಟಿಗೆ ಬೀಳಲಾಗಿ ಅದನ್ನು ಅವಳು ಕೈಗೆ ತೆಗೆದುಕೊಂಡಾಗ ದೈವವಶದಿಂದ ಆಕೆಗೆ ದುರ್ಬುದ್ಧಿಯುಂಟಾಗಿ ಗಮಗಮಿಸುತ್ತಿದ್ದ ಆ ಔಷಧವನ್ನು ಸ್ವಲ್ಪ ಬಾಯಲ್ಲಿ ಹಾಕಿಕೊಂಡಳು. ಕೂಡಲೆ ಅವಳಿಗೆ ಗಾಢನಿದ್ರೆಯುಂಟಾಯಿತು.

೧೯೩. ಇದೇ ಸಮಯವನ್ನು ಕಾಯುತ್ತಿದ್ದ ಒಡಿಸಿಯಸ್ಸನು ಶಬ್ದಮಾಡದೆ ಮೇಲಕ್ಕೆ ಎದ್ದು, ತನ್ನ ಚೀಲದಲ್ಲಿ ಸಿದ್ಧಪಡಿಸಿಕೊಂಡಿದ್ದ ಸೌಭಾಗ್ಯಶಿಲೆಯಂತಹುದೇ ಒಂದು ಶಿಲೆಯನ್ನು ಗರ್ಭಗೃಹದೊಳಗಿಟ್ಟು, ನಿಜವಾದ ಸೌಭಾಗ್ಯ

ಶಿಲೆಯನ್ನು ತೆಗೆದುಕೊಂಡು ಪಟ್ಟಣದ ಮತ್ತೊಂದು ದ್ವಾರದ ಬಳಿಗೆ ಹೋದನು. ಅಲ್ಲಿ ಅನೇಕವೇಳೆ ಅವನು ಸುತ್ತಾಡಿದ್ದುದರಿಂದ ಅಲ್ಲಿಯ ಕಾವಲುಗಾರರಿಗೆ ಆ ಭಿಕ್ಷುಕನ ಪರಿಚಯವು ಚೆನ್ನಾಗಿ ಉಂಟಾಗಿದ್ದಿತು ಆದುದರಿಂದ ಅವನು ತನ್ನ ದಪ್ಪ ಚೀಲವನ್ನು ತೆರೆದು ತನ್ನ ಪ್ರಯಾಣಕ್ಕೆ ಬೇಕಾಗಿದ್ದಷ್ಟು ಆಹಾರವು ಸಿಕ್ಕಿತೆಂದು ಮೇಲೆಮೇಲೆ ಕಂಡುಬರುತ್ತಿದ್ದ ರೊಟ್ಟಿ ಮೊದಲಾದ ಆಹಾರ ವಸ್ತುಗಳ ಚೂರುಗಳನ್ನು ಆ ಕಾವಲುಗಾರರಿಗೆ ಅವರು ಕೇಳುವುದಕ್ಕಿಂತ ಮುಂಚೆಯೇ ತೋರಿಸಿ ಕೋಟೆಯ ಹೊರಕ್ಕೆ ಬಂದುಬಿಟ್ಟು ಸಮೀಪದಲ್ಲಿಯೇ ಇದ್ದ ಕಾಡನ್ನು ಪ್ರವೇಶಿಸಿದನು. ಅವನು ರಾತ್ರಿಯಾಗುವವರೆಗೂ ದಟ್ಟವಾದ ಒಂದು ಪೊದೆಯಲ್ಲಿ ಅಡಗಿದ್ದು ಬಳಿಕ ಪ್ರಿಯಾಮಿನ ಅರಮನೆಯಲ್ಲಿ ಹೆಲೆನಳು ತನಗೆ ಕೊಟ್ಟಿದ್ದ ಉಡುಪುಗಳನ್ನು ಧರಿಸಿ ಗ್ರೀಕರ ಪಾಳೆಯಕ್ಕೆ ಹಿಂದಿರುಗಿದನು. ಇಷ್ಟುಹೊತ್ತಿಗೆ ಡೀಲಾಸಿಗೆ ಹೋಗಿದ್ದ ಹಡಗಿನ ಸಮಾಚಾರವೇನೂ ಗ್ರೀಕ್ ಪಾಳೆಯದಲ್ಲಿ ತಿಳಿದಿರಲಿಲ್ಲವಾದುದರಿಂದ ಒಡಿಸಿಯಸ್ಸನ್ನು ಕಂಡು ಗ್ರೀಕರೆಲ್ಲರೂ ಆಶ್ಚರ್ಯಭರಿತರಾದರು. ತಾನು ಭಿಕ್ಷುಕವೇಷದಿಂದ ಗ್ರೀಕರ ಪಾಳೆಯದಲ್ಲಿಯೇ ಕೆಲವು ದಿವಸಗಳಿದ್ದ ವಿಷಯವನ್ನೂ ಟ್ರಾಯ್‌ನಗರಿಯಿಂದ ಸೌಭಾಗ್ಯ ಶಿಲೆಯನ್ನು ತಂದಿದ್ದ ವೃತ್ತಾಂತವನ್ನೂ ವಿವರವಾಗಿ ವರ್ಣಿಸಲು ಗ್ರೀಕರಿಗೆ ಮತ್ತಷ್ಟು ಆಶ್ಚರ್ಯವುಂಟಾಯಿತು ಇಷ್ಟರಲ್ಲಿ ಒಂದು ದ್ವೀಪದಲ್ಲಿ ನಿಂತಿದ್ದ ಒಡಿಸಿಯಸ್ಸಿನ ಕಡೆಯವರು ಗ್ರೀಕರ ಪಾಳೆಯಕ್ಕೆ ಬರಿಯ ಕೈಯಲ್ಲಿ ಹಿಂದಿರುಗಿದರು. ಅತ್ತ ಟ್ರೋಜನರು ತಮ್ಮ ಸೌಭಾಗ್ಯಶಿಲೆಯು ಮಾಯವಾಗಿದ್ದುದಕ್ಕಾಗಿ ಬಹಳವಾಗಿ ಗೋಳಾಡಿದರು.

## XXIX

೧೯೪ ಕೆಲವು ದಿನಗಳಲ್ಲೇ ಟ್ರೋಜನರ ಸಹಾಯಕ್ಕಾಗಿ ಥ್ರೇಸ್ ಪ್ರಾಂತದಿಂದ ಅಮೇಜಾನರೆಂಬ ಯುದ್ಧಪ್ರಿಯರಾದ ಸ್ತ್ರೀಯರೂ, ಉದಯಾಚಲದ ಬಳಿಯಿಂದ ಉಷಃಕಾಲಾಭಿಮಾನದೇವಿಯಾದ ಇಯಾಸ್ ಎಂಬಾಕೆಯ ಪುತ್ರನಾದ ಮೆಮ್ನಾನನೂ ಬಂದರು. ಹಿಂದೆ ಅಮೇಜಾನರಿಗೂ ಟ್ರೋಜನರಿಗೂ ಯುದ್ಧವು ನಡೆದು ಅಮೇಜಾನರ ರಾಣಿಯೊಬ್ಬಳು ಹತಳಾಗಿದ್ದಳು ಆದರೂ ಈಗ ಟ್ರೋಜನರಿಗೂ ಅಮೇಜಾನರಿಗೂ ಸ್ನೇಹವಾಗಿದ್ದುದರಿಂದ. ಟ್ರೋಜನರ ಕೋರಿಕೆಯಂತೆ ಅವರು ತಮ್ಮ ಯುದ್ಧಾಭಿಲಾಷೆಯನ್ನು ತೀರಿಸಿಕೊಳ್ಳುವುದಕ್ಕಾ

ಗಿಯೂ ಕೀರ್ತಿಯನ್ನು ಸಂಪಾದಿಸುವುದಕ್ಕಾಗಿಯೂ ಕುದುರೆಗಳಮೇಲೆ ಕುಳಿತು ಟ್ರಾಯ್ ನಗರಿಗೆ ಬಂದಿದ್ದರು. ಅವರ ಪ್ರಮುಖಳಿಗೆ ಪೆಂಥೆಸೀಲಿಯ ಎಂದು ಹೆಸರಿಟ್ಟಿತು. ಒಂದಾನೊಂದುದಿನ ಆಕೆಯು ತನ್ನ ಸೋದರಿಯಾದ ಹಿಪ್ಪಾಲಿಟೆಯೊಡನೆ ಬೇಟೆಯಾಡುತ್ತಿದ್ದಾಗ ಆಕೆಯು ಒಂದು ಜಿಂಕೆಯಮೇಲೆ ಎಸೆದ ಈಟಿಯು ಹಿಪ್ಪಾಲಿಟೆಯನ್ನೇ ಕೊಂದುಬಿಟ್ಟುದರಿಂದ ಪೆಂಥೆಸೀಲಿಯಳಿಗೆ ಅತ್ಯಂತ ದುಃಖವುಂಟಾಗಿ ಪ್ರಪಂಚವೇ ಬೇಡವೆನ್ನಿಸಿದ್ದಿತು. ಆದುದರಿಂದ ಆಕೆಯು ತನ್ನ ಹನ್ನೆರಡುಮಂದಿ ಸಂಗಾತಿಗಳೊಡನೆ ಟ್ರೋಜನರ ಯುದ್ಧರಂಗವನ್ನು ಪ್ರವೇಶಿಸಿದ್ದಳು.

೧೯೫ ಇಂತಹ ಒತ್ತಾಸೆಯು ತಮಗೆ ದೊರೆತಿದ್ದುದಕ್ಕಾಗಿ ಬಹಳ ಸಂತೋಷಪಟ್ಟಿದ್ದ ಟ್ರೋಜನರು ಅಮೇಜಾನರಿಗೆ ಬಗೆಬಗೆಯಾಗಿ ಸತ್ಕಾರವನ್ನು ಮಾಡಿದರು. ಪೆಂಥೆಸೀಲಿಯಳು ಏಕಿಲೀಸನ್ನು ಕೊಂದುಬಿಡುವುದಾಗಿ ಪ್ರಿಯಾಮ್ ಮೊದಲಾದವರಿಗೆ ಬಹಳ ನಂಬಿಕೆಯಿಂದ ಹೇಳಲು, ಆಂಡ್ರೋಮೇಕಿಯು ಅವಳ ವ್ಯರ್ಥಾಭಿಲಾಷೆಗಾಗಿ ತನ್ನ ಮನಸ್ಸಿನಲ್ಲಿಯೇ ಸಂತಾಪಪಟ್ಟುಕೊಳ್ಳುತ್ತಿದ್ದಳು. ಇತ್ತ ಪೆಂಥೆಸೀಲಿಯಳಿಗೆ ಉಂಟಾಗಿದ್ದ ಅತ್ಯಧಿಕವಾದ ಉತ್ಸಾಹದಲ್ಲಿ ಸ್ವಲ್ಪವಾದರೂ ಸಾವಕಾಶಮಾಡುವುದಕ್ಕೆ ಮನಸ್ಸಿರಲಿಲ್ಲ. ಆದುದರಿಂದ ಆಕೆಯು ಮಾರನೆಯದಿನವೇ ಗ್ರೀಕರಮೇಲೆ ಯುದ್ಧಕ್ಕೆ ನಿಂತಳು. ಪೆಂಥೆಸೀಲಿಯಳ ಬಾಣಗಳಿಗೆ ಅನೇಕ ಗ್ರೀಕ್ ಯೋಧರುಗಳು ಸ್ವಲ್ಪಹೊತ್ತಿನಲ್ಲಿಯೇ ಬಲಿಯಾದರು. ಅದನ್ನು ಕಂಡು ಟ್ರೋಜನರಿಗೆ ಬಹಳ ಧೈರ್ಯವುಂಟಾಗಿ ಅವರೂ ಗ್ರೀಕರೊಡನೆ ಬಲವಾಗಿ ಕಾದಾಡತೊಡಗಿದರು. ಪೆಂಥೆಸೀಲಿಯಳು ಗ್ರೀಕರ ಶೂರಾಗ್ರಣಿಗಳನ್ನು ಹೆಸರುಹಿಡಿದು ಕೂಗುತ್ತ ಬಹಳ ರಭಸದಿಂದ ಕಾದಾಡುತ್ತಿದ್ದಳು. ಆಕೆಯ ಸಾಹಸವನ್ನು ತಡೆಯಲಾರದೆ ಗ್ರೀಕರು ತಾವು ತೋಡಿಕೊಂಡಿದ್ದ ಕಂದಕದವರೆಗೂ ಹಿಮ್ಮೆಟ್ಟಬೇಕಾಯಿತು. ಪೆಟ್ರೋಕ್ಲಸ್ಸಿನ ಸಮಾಧಿಯ ಬಳಿಯಲ್ಲಿ ಕುಳಿತು ಗೋಳಾಡುತ್ತಿದ್ದ ಹಿರಿಯ ಏಯಾಸನೂ ಏಕಿಲೀಸನೂ ಯುದ್ಧಭೂಮಿಗೆಹೊರಟು, ಗ್ರೀಕರನ್ನು ಅಟ್ಟಿಕೊಂಡು ಮುಂದೆಮುಂದೆ ನುಗ್ಗಿಬರುತ್ತಿದ್ದ ಅಮೇಜಾನರನ್ನು ಇದಿರಿಸಿದರು. ಪೆಂಥೆಸೀಲಿಯಳು ಸ್ವಲ್ಪವಾದರೂ ಹೆದರದೆ ಒಂದು ಈಟಿಯನ್ನು ಗುರಿಕಟ್ಟಿ ಏಯಾಸನಮೇಲೆ ಎಸೆದಳು. ಆದರೆ ಅದರ ಪ್ರಭಾವವು ಏಯಾಸಿನ ಬಲವಾದ ಗುರಾಣಿಯಮೇಲೆ ಕೆಂದಲಿಲ್ಲ. ಈ ಸಮಯದಲ್ಲಿ ಏಕಿಲೀಸನು ಪೆಂಥೆಸಿಲಿಯಳ ಮೇಲೆ ಕಾಣಿಸಿಕೊಳ್ಳಲು, ಅವಳು ತನ್ನ ಕತ್ತಿಯಿಂದ

ಅವನನ್ನು ಇರಿಯಲು ಪ್ರಯತ್ನಿಸಿದಳು. ಆದರೆ ಏಕಿಲೀಸನೇ ತನ್ನ ಈಟಿಯಿಂದ ಆಕೆಯನ್ನೂ ಆಕೆಯ ಕುದುರೆಯನ್ನೂ ತಿವಿದು ಕೆಳಕ್ಕೆ ಕೆಡಹಿಬಿಟ್ಟನು. ಆಕೆಯು ನೆಲಕ್ಕೆ ಬಿದ್ದಕೂಡಲೆ ಏಕಿಲೀಸಿಗೆ ಬಹಳ ವ್ಯಸನವುಂಟಾಯಿತು. ಅದನ್ನು ಕಂಡು ಕುಹಕಿಯಾಗಿದ್ದ ಥರ್ಸೈಟೀಸನು ಏಕಿಲೀಸಿನ ಶೋಕಕ್ಕಾಗಿ ಹಾಸ್ಯಮಾಡಿಕೊಂಡು ಹೀಯಾಳಿಸಿದನು. ಸ್ವಲ್ಪ ಅವಮಾನವನ್ನೂ ಸಹಿಸದವನಾಗಿದ್ದ ಏಕಿಲೀಸನು ಆ ಕುರೂಪಿಯ ಹಾಸ್ಯವನ್ನು ತಡೆಯಲಾರದೆ ಒಂದುಸಲ ತನ್ನ ಅಂಗೈಯಿಂದ ಅಪ್ಪಳಿಸಲು ಥರ್ಸೈಟೀಸಿನ ಅವತಾರವು ಮುಗಿದುಹೋಯಿತು. ಪೆಂಥೆಸೀಲಿಯಳ ಸುಂದರವಾದ ಮುಖವನ್ನು ಕಂಡು ಇತರ ಗ್ರೀಕ್ ಯೋಧರಿಗೂ ಬಹಳ ದುಃಖವುಂಟಾಗಿದ್ದುದರಿಂದ, ಸ್ವಲ್ಪ ಕಾಲದವರೆಗೆ ಅವರು ಯುದ್ಧಕ್ಕೆ ಅಷ್ಟು ಗಮನವನ್ನು ಕೊಡಲಿಲ್ಲ. ಇಷ್ಟುಹೊತ್ತಿಗೆ ಅಮೇಜಾನರ ದಳವೆಲ್ಲವೂ ನಾಶವಾಗಿಹೋಗಿದ್ದಿತು. ಏಕಿಲೀಸಿನ ಅಪ್ಪಣೆಯಂತೆ ಗ್ರೀಕ್ ಯೋಧರು ಮೃತರಾಗಿದ್ದ ಅಮೇಜಾನರ ಶಸ್ತ್ರಕವಚಾದಿಗಳ ಗೋಜಿಗೆ ಹೋಗದೆ ಅವರ ಶರೀರಗಳನ್ನು ಸಂಸ್ಕರಿಸುವುದಕ್ಕಾಗಿ ಪ್ರಯಾಮಿನ ಬಳಿಗೆ ಕಳುಹಿಸಿಕೊಟ್ಟರು.

೧೯೭. ಕೆಲವು ದಿನಗಳಿಗೆ ಹಿಂದೆ ಮೆಮ್ನಾನ್ ಎಂಬಾತನಿಗೂ ಟ್ರೋಜನರಿಗೂ ಸ್ನೇಹವುಂಟಾಗಿದ್ದುದರಿಂದ ಮೆಮ್ನಾನನು ಒಂದು ದೊಡ್ಡ ಸೈನ್ಯವನ್ನು ತೆಗೆದುಕೊಂಡು ಟ್ರಾಯ್ ಪಟ್ಟಣದ ಬಳಿಗೆ ಬಂದನು. ಅವನು ಯುದ್ಧಕ್ಕೆ ಹೊರಡುವುದಕ್ಕೆ ಮುಂಚೆ ಇಯಾಸಳೂ ಅವನಿಗಾಗಿ ಹೆಫೆಸ್ಟಸ್ಸನಿಂದ ಶಸ್ತ್ರಕವಚಾದಿಗಳನ್ನು ಮಾಡಿಸಿ ತಂದುಕೊಟ್ಟಿದ್ದಳು. ಮೆಮ್ನಾನನು ಬರುವನೆಂಬ ಸುದ್ದಿಯನ್ನು ಕೇಳಿ, ಪಾಲಿಡೇಮಸ್ಸನು ಮತ್ತೊಮ್ಮೆ, ಹೆಲೆನಳನ್ನೂ ಅವಳು ಒಂದಿದ್ದುದಕ್ಕೆ ಎರಡರಷ್ಟು ಪರಿಹಾರದ್ರವ್ಯವನ್ನೂ ಒಪ್ಪಿಸಿ ಸಂಧಿಮಾಡಿಕೊಳ್ಳುವುದು ಉತ್ತಮವೆಂದು ಸೂಚಿಸಿದನು. ಆದರೆ ಪ್ಯಾರಿಸ್ಸನು ಮೂರ್ಖತೆಯಿಂದ ಅಡ್ಡಿಪಡಿಸಿದಕಾರಣ, ಮೆಮ್ನಾನನು ಬಂದಕೂಡಲೆ ಮತ್ತೆ ಘೋರವಾದ ಯುದ್ಧಕ್ಕೆ ಮೊದಲಾಯಿತು.

೧೯೮. ತಮ್ಮಮೇಲೆ ಹೊಸತಾಗಿ ಬಂದ ಶತ್ರುಸೇನೆಯನ್ನು ಕಂಡು ಗ್ರೀಕರು ಆಶ್ಚರ್ಯಚಕಿತರಾದರು. ಮೆಮ್ನಾನಿನ ಸೈನಿಕರು ಕಪ್ಪನೆಯ ಬೊಣ್ಣೆಯರಾಗಿದ್ದುದರಿಂದ ಅವರನ್ನು ಕಂಡು ಗ್ರೀಕರಿಗೆ ಸ್ವಲ್ಪ ಹೆದರಿಕೆಯೂ ಉಂಟಾ

ಗಿದ್ದಿತು. ಅವರು ಮೊದಲು ಗ್ರೀಕರ ಸೇನೆಯ ಎಡಗಡೆಯಲ್ಲಿ ನಿಂತು ಅಲ್ಲಿ ದಳಪತಿಯಾಗಿದ್ದ ಆಂಟಿಲೋಕಸ್ಸಿನೊಡನೆ ಕಾದತೊಡಗಿದರು. ಸಿಂಹವು ಕುರಿಯಮರಿಯಮೇಲೆ ನುಗ್ಗುವಂತೆ ಮೆಮ್ನಾನನು ಆಂಟಿಲೋಕಸಿನ ಮೇಲೆ ನುಗ್ಗಿಬರಲು ಅವನು ಹೆದರದೆ ಒಂದು ಸಮಾಧಿಯ ಶಿಲಾಸ್ತಂಭವನ್ನು ಕಿತ್ತು ಕೊಂಡು ಮೆಮ್ನಾನಿನ ಮೇಲೆ ಎಸೆದನು. ಆದರೆ ಸ್ವಲ್ಪಹೊತ್ತಿನಲ್ಲಿಯೇ ಅವನು ಅದರ ಬಾಧೆಯನ್ನು ಸಹಿಸಿಕೊಂಡು ಆಂಟಿಲೋಕಸ್ಸನ್ನು ತನ್ನ ಈಟಿಯಿಂದ ತಿವಿದು ಕೊಂದುಬಿಟ್ಟನು. ಈ ಸಮಯದಲ್ಲಿ ನೆಸ್ಟಾರನು ಸಮೀಪದಲ್ಲಿಯೇ ಇದ್ದುದರಿಂದ ಅವನು ಮುಂದಕ್ಕೆ ನುಗ್ಗಿಬಂದು ಆಂಟಿಲೋಕಸ್ಸಿನ ಶವದ ಬಳಿಗೆ ನುಗ್ಗಿ ಬರುತ್ತಿದ್ದ ಶತ್ರುಗಳನ್ನು ಬಡಿದಟ್ಟಿದನು. ಆದರೆ ಅವರ ಹೊಮ್ಮನ್ನು ಅಡಗಿಸಲು ಬಹಳಹೊತ್ತಿನವರೆಗೂ ನೆಸ್ಟಾರಿಗೆ ಸಾಧ್ಯವಾಗಲಿಲ್ಲವಾದುದರಿಂದ, ಅವನು ತನ್ನ ಮತ್ತೊಬ್ಬ ಮಗನಾದ ಥ್ರಾಸಿಮಿಡೀಸನ್ನು ತನ್ನ ಸಹಾಯಕ್ಕಾಗಿ ಕೂಗಿಕೊಂಡನು. ತನ್ನ ತಂದೆಯ ವಿಪತ್ತನ್ನು ಕಂಡು ಥ್ರಾಸಿಮಿಡೀಸನು ಕೂಡಲೆ ನುಗ್ಗಿಬಂದನು. ಆದರೆ ಅವನೂ ಮೆಮ್ನಾನಿನೊಡನೆ ಬಹಳಹೊತ್ತು ಕಾದಾಡ ಲಾಗಲಿಲ್ಲ. ಆದುದರಿಂದ ನೆಸ್ಟಾರನೇ ಪುನಃ ಮೆಮ್ನಾನಿನೊಡನೆ ಕಾದಾಡ ತೊಡಗಿದನು. ಆದರೆ ಮೆಮ್ನಾನನು ವೃದ್ಧನಾದ ನೆಸ್ಟಾರಿನೊಡನೆ ಸರಿಸಮ ವಾಗಿ ಕಾದಾಡಲೊಲ್ಲದೆ ಇತರ ಗ್ರೀಕ್ ವೀರರಮೇಲೆ ಬಿದ್ದು ಯುದ್ಧಮಾಡ ತೊಡಗಿದನು.

೧೯೯. ಈ ಸಮಯದಲ್ಲಿ ಏಕಿಲೀಸನು ಯುದ್ಧರಂಗದ ಮತ್ತೊಂದು ಪ್ರದೇಶದಲ್ಲಿ ಕಾದಾಡುತ್ತಿದ್ದನು. ನೆಸ್ಟಾರನು ತನ್ನ ರಥವನ್ನು ಏಕಿಲೀಸಿದ್ದ ಕಡೆಗೆ ವೇಗವಾಗಿ ತೆಗೆದುಕೊಂಡು ಹೋಗಿ ತನ್ನ ಮಗನಾದ ಆಂಟಿಲೋಕಸ್ಸನ್ನು ಮೆಮ್ನಾನನು ಕೊಂದು ಬಿಟ್ಟಿದ್ದ ವಿಷಯವನ್ನು ತಿಳಿಸಿದನು. ಉಳಿದಿದ್ದ ಗ್ರೀಕರ ಸೈನ್ಯದಲ್ಲೆಲ್ಲಾ ಏಕಿಲೀಸಿಗೆ ಆಂಟಿಲೋಕಸ್ಸಿನ ಮೇಲೆಯೇ ಬಹಳ ಪ್ರೀತಿಯಿದ್ದು ದರಿಂದ ಏಕಿಲೀಸನು ಕೂಡಲೆ ಮೆಮ್ನಾನಿನ ಸಮೀಪಕ್ಕೆ ಬಂದು ಅವನ ಮೇಲೆ ಕಾದಾಡತೊಡಗಿದನು. ಏಕಿಲೀಸನ್ನು ಕಂಡು ಮೆಮ್ನಾನನು ಅವನ ಮೇಲೆ ಒಂದು ದೊಡ್ಡ ಕಲ್ಲನ್ನು ಎತ್ತಿ ಬೀಸಾಡಿದನು. ಆದರೆ ಆ ಏಟಿನಿಂದ ಏಕಿಲೀಸಿಗೆ ಬಾಧೆಯೇನೂ ಆಗಲಿಲ್ಲ. ಅದಕ್ಕೆ ಪ್ರತಿಯಾಗಿ ಏಕಿಲೀಸನು ತನ್ನ ಈಟಿಯಿಂದ ಮೆಮ್ನಾನಿಗೆ ಗಾಯಗಾಣಿಸಿದನು. ಹೀಗೆ ಗಾಯಗಂಡಿದ್ದರೂ ಲಕ್ಷ್ಯ

ಮಾಡದೆ ಮೆಮ್ನಾನನು ತನ್ನ ಈಟಿಯಿಂದ ಏಕಿಲೀಸಿನ ತೋಳಿನಮೇಲೆ ಗಾಯವನ್ನುಂಟುಮಾಡಿದನು. ಬಳಿಕ ಆ ಇಬ್ಬರು ಯೋಧಾಗ್ರಣಿಗಳಿಗೂ ಕತ್ತಿಗುರಾಣಿಗಳಿಂದ ಬಹಳ ಹೊತ್ತು ಸರಿಸಮವಾಗಿ ಯುದ್ಧವು ನಡೆಯಿತು. ಕಡೆಗೆ ಏಕಿಲೀಸನು ಗುರಿನೋಡಿ ಹೊಡೆದ ಒಂದು ಏಟಿನಿಂದ ಮೆಮ್ನಾನನು ಸತ್ತು ಕೆಳಕ್ಕೆ ಬಿದ್ದುಬಿಟ್ಟನು. ಏಕಿಲೀಸನು ಮೆಮ್ನಾನಿನ ಶಸ್ತ್ರಕವಚಗಳ ಗೋಜಿಗೆ ಹೋಗದೆ ಇತರ ಶತ್ರುಗಳನ್ನಿದಿರಿಸಿ ಕಾದಾಡಿ ಅವರಲ್ಲನೇಕರನ್ನು ಕೊಂದು ಹಾಕಿ ಉಳಿದವರನ್ನು ಟ್ರಾಯ್ ಪಟ್ಟಣದೊಳಕ್ಕೆ ಓಡಿಸಿಬಿಟ್ಟನು.

೨೦೦. ಏಕಿಲೀಸಿನ ಅದ್ಭುತಪರಾಕ್ರಮದಿಂದ ಗ್ರೀಕರು ಉತ್ತೇಜಿತರಾಗಿ ಓಡಿಹೋಗುತ್ತಿದ್ದ ಟ್ರೋಜನರನ್ನೂ ಅವರ ಸಹಾಯಕರನ್ನೂ ಬೆನ್ನಟ್ಟಿದರು. ಶತ್ರುಗಳ ಪಟ್ಟಣವು ಗ್ರೀಕರ ವಶವಾಗಿ ಹೋಗುವಂತೆ ಕಾಣುತ್ತಿದ್ದಿತು. ಏಕಿಲೀಸನು ಬಹಳವಾಗಿ ದಣಿದು ಹೋಗಿದ್ದರೂ ಲಕ್ಷ್ಯಮಾಡದೆ ಮುಂದಮುಂದಕ್ಕೆ ನುಗ್ಗುತ್ತಾ ತನ್ನ ಕಡೆಯವರಿಗೆ ಪ್ರೋತ್ಸಾಹವನ್ನುಂಟುಮಾಡುವುದಕ್ಕಾಗಿ ಆಗಾಗ ಸಿಂಹನಾದವನ್ನು ಮಾಡುತ್ತಿದ್ದನು ಸ್ವಲ್ಪ ಹೊತ್ತಿನಲ್ಲಿಯೇ ಗ್ರೀಕ್ ಸೇನೆಯು ಸ್ಕೀಯಾನ್ ಪತ್ತನದ್ವಾರದ ವರೆಗೂ ಬಂದುಬಿಟ್ಟಿತು. ಏಕಿಲೀಸನೂ ಅದರ ಮುಂಭಾಗದಲ್ಲಿಯೇ ಮುಂದೆಮುಂದೆ ನುಗ್ಗಿಬರುತ್ತಿದ್ದನು. ಪ್ಯಾರಿಸ್ಸನು ಆ ಪತ್ತನದ್ವಾರದ ಮೇಲುಗಡೆಯಲ್ಲಿದ್ದ ಒಂದು ಕೊತ್ತಲದಮೇಲೆ ತನ್ನ ಬಿಲ್ಲುಬಾಣಗಳನ್ನು ಹಿಡಿದುಕೊಂಡು ಹೆಕ್ಟರನ್ನು ಕೊಂದಿದ್ದುದಕ್ಕಾಗಿ ಏಕಿಲೀಸಿನಮೇಲೆ ಮುಯ್ಯಿತೀರಿಸಿಕೊಳ್ಳಬೇಕೆಂದು ಸಮಯವನ್ನೇ ಕಾಯುತ್ತಿದ್ದನು. ಆದುದರಿಂದ ಅವನು ತನ್ನ ಬಿಲ್ಲಿಗೆ ಹೊಸತಾದ ಒಂದು ಹೆದೆಯನ್ನೇರಿಸಿ ಸಮಯ ನೋಡಿ ಏಕಿಲೀಸಿನ ಹಿಮ್ಮಡಿಗೆ ಗುರಿಕಟ್ಟಿ ಒಂದು ಬಾಣವನ್ನು ಬಿಟ್ಟನು. ಆ ದಿನದ ಯುದ್ಧದಲ್ಲಿ ಬಹಳ ಪರಾಕ್ರಮವನ್ನು ತೋರಿಸಿ ದಣಿದುಹೋಗಿದ್ದ ಏಕಿಲೀಸನು ಆ ಏಟನ್ನು ಸಹಿಸಲಾರದೆ ಕೆಳಕ್ಕೆ ಬಿದ್ದುಬಿಟ್ಟನು. ಆದರೂ ಅವನು ಸುಮ್ಮನಿರದೆ “ಯಾರೋ ಒಬ್ಬ ಹೇಡಿಯು ದೂರದಲ್ಲಿ ನಿಂತುಕೊಂಡು ನನ್ನಮೇಲೆ ಒಂದು ಬಾಣವನ್ನು ಬಿಟ್ಟಿರುವನು. ಅವನಿಗೆ ಶೌರ್ಯವಿದ್ದರೆ ಕತ್ತಿಗುರಾಣಿಗಳನ್ನು ಹಿಡಿದು ನನ್ನ ಇದಿರಿಗೆ ನಿಂತು ಕಾದಾಡಲಿ” ಎಂದು ಗರ್ಜಿಸುತ್ತಾ ತನ್ನ ಹಿಮ್ಮಡಿಗೆ ನಾಟಿಕೊಂಡಿದ್ದ ಬಾಣವನ್ನು ಬಲವಾಗಿ ಕಿತ್ತು ಎಸೆದನು. ಕೂಡಲೆ ಆ ಗಾಯದಿಂದ

ರಕ್ತವು ಧಾರೆಧಾರೆಯಾಗಿ ಹರಿದುದರಿಂದ ಕೆಲವು ಕ್ಷಣಗಳಲ್ಲಿಯೇ ಏಕಿಲೀಸಿನ ಕಣ್ಣುಗಳಿಗೆ ಕತ್ತಲೆಕವಿದುಕೊಂಡಂತಾಗಿ ಅವನು ಸ್ವಲ್ಪಹೊತ್ತಿನಲ್ಲಿಯೇ ಚೇತರಿಸಿಕೊಂಡು ತನ್ನ ಇದಿರಿಗೆ ಸಿಕ್ಕಿದವರನ್ನು ಕತ್ತಿಯಿಂದ ಕಡಿಯುತ್ತ ಬಂದನು. ಅನೇಕ ಟ್ರೋಜನರು ಅವನ ಕತ್ತಿಗೆ ತುತ್ತಾದರು. ರಕ್ತಪಾತದಿಂದ ಏಕಿಲೀಸಿಗೆ ಶಕ್ತಿಯು ಕುಗ್ಗುತ್ತ ಬಂದಿತು. ಬೇಟೆಗಾರರು ಮರಣೋನ್ಮುಖವಾಗಿರುವ ಸಿಂಹವನ್ನು ದೂರದೂರವಾಗಿಯೇ ನಿಂತು ನೋಡುವಂತೆ ಟ್ರೋಜನರು ಏಕಿಲೀಸಿನ ಸಮೀಪಕ್ಕೆ ಬರಲು ಧೈರ್ಯವಿಲ್ಲದೆ ದೂರದಲ್ಲಿಯೇ ನಿಂತು ನೋಡುತ್ತಿದ್ದರು. ಸ್ವಲ್ಪ ಹೊತ್ತಿನಲ್ಲಿಯೇ ಏಕಿಲೀಸನು ಕಾಲವಾದನು. ಸಾಯುವಾಗ ಅವನ ಮುಖದಮೇಲೆ ಸ್ವಲ್ಪವಾದರೂ ದುಃಖಸೂಚನೆಯು ಕಂಡುಬರಲಿಲ್ಲ.

೨೦೧. ಏಕಿಲೀಸಿನ ಮರಣಾನಂತರ, ಈನಿಯಾಸನೂ ಗ್ಲಾಕಸ್ಸನೂ ಪ್ಯಾರಿಸ್ ಮೊದಲಾದ ಟ್ರೋಜನ್ ಯೋಧರೂ ಅವನ ಶರೀರವನ್ನು ವಶಪಡಿಸಿಕೊಳ್ಳಬೇಕೆಂದು ನುಗ್ಗಿಬಂದರು. ಆ ದೇಹವು ಶತ್ರುಗಳ ಕೈಗೆ ಸಿಕ್ಕಬೀಳದಂತೆ ಒಡಿಸಿಯಸ್ಸನೂ ಏಯಾಸರೂ ಬಹಳ ರಭಸದಿಂದ ಕಾದಾಡುತ್ತಿದ್ದರು. ಒಡಿಸಿಯಸ್ಸಿಗೆ ಮುಂಡಿಯ ಹತ್ತಿರ ಒಂದು ಈಟಿಯು ತಗುಲಿ ಗಾಯವಾಗಿದ್ದರೂ ಲಕ್ಷ್ಯಮಾಡದೆ ಅವನು ತನ್ನ ಮಿತ್ರನಾದ ಏಕಿಲೀಸಿನ ಶರೀರವು ಶತ್ರುಗಳ ಕೈಗೆ ಸಿಕ್ಕದಂತೆ ಅದನ್ನು ತನ್ನ ಹೆಗಲಮೇಲೆ ಹೊತ್ತುಕೊಂಡು ಗ್ರೀಕರ ಹಡಗುಗಳ ಕಡೆಗೆ ತಿರುಗಿದನು. ಏಯಾಸರೂ ಮೆನೆಲಾಸನೂ ಅವನ ಬೆಂಗಾವಲಿಗಾಗಿ ಹೊರಟು ತಮ್ಮ ಹಿಂದೆ ಬಂದು ಮೇಲೆಬೀಳುತ್ತಿದ್ದ ಶತ್ರುಗಳನ್ನು ಹೊಡೆದು ಹಿಂದಹಿಂದಕ್ಕೆ ಅಟ್ಟುತ್ತಿದ್ದರು. ಇಷ್ಟುಹೊತ್ತಿಗೆ ನೆಸ್ಟಾರನು ತನ್ನ ರಥವನ್ನು ಒಡಿಸಿಯಸ್ಸಿನ ಬಳಿಗೆ ತಂದುದರಿಂದ, ಅದರಲ್ಲಿ ಆ ಶರೀರವನ್ನು ಹಾಕಿಕೊಂಡು ಗ್ರೀಕರ ಪಾಳೆಯದೊಳಕ್ಕೆ ತೆಗೆದುಕೊಂಡು ಹೋದರು. ಏಕಿಲೀಸಿನ ಶವವನ್ನು ಕಂಡಕೂಡಲೆ ಗ್ರೀಕರ ಪಾಳೆಯದಲ್ಲೆಲ್ಲಾ ಗೋಳಾಟಕ್ಕೆ ಮೊದಲಾಯಿತು. ಬ್ರೀಸೆಯಿಸಳ ದುಃಖವು ಅಪರಿಮಿತವಾಯಿತು.

೨೦೨. ಬಹಳ ಹಠದಿಂದ ಕಾದಾಡುತ್ತಿದ್ದ ಗ್ರೀಕ್ ಯೋಧರಮೇಲೆ ತಮ್ಮ ಸಾಹಸವು ನಡೆಯುವುದಿಲ್ಲವೆಂದು ತಿಳಿದು ಟ್ರೋಜನರು ಹಿಂದಕ್ಕೆ ಹೊರಟು ತಮ್ಮ ಪಟ್ಟಣವನ್ನು ಸೇರಿಕೊಂಡು, ತಮ್ಮ ಮುಖ್ಯ ಶತ್ರುವಾಗಿದ್ದ

ಏಕಿಲೀಸನು ಸತ್ತುದಕ್ಕಾಗಿ ಬಹಳ ಸಂತೋಷಪಟ್ಟರು. ಆ ದಿನ ಪ್ಯಾರಿಸ್ಸಿನ ಸಂತೋಷಕ್ಕೆ ಪಾರವೇ ಇರಲಿಲ್ಲ. ಏಕಿಲೀಸಿನ ಮರಣದ ಸುದ್ದಿಯನ್ನು ಕೇಳಿ ತಮ್ಮ ಅನೇಕಮಂದಿ ಮಕ್ಕಳುಗಳನ್ನು ನಾಶಮಾಡಿದ್ದ ಏಕಿಲೀಸನು ಮೃತ್ಯು ವಶನಾದನೆಂದು ಪ್ರಯಾಮುಸೂ ಅವನ ಪತ್ನಿಯರೂ ಬಹಳ ಸಂತೋಷಿಸಿದರು.

೨೦೩. ಈ ನಡುವೆ ಗ್ರೀಕ್ ಪಾಳೆಯದಲ್ಲಿದ್ದ ಲವರು ಸ್ತ್ರೀಯರು ಏಕಿಲೀಸಿನ ಶರೀರವನ್ನು ತೊಳೆದು ಅದನ್ನು ಚಟ್ಟದಮೇಲೆ ಇಟ್ಟು ಅದರಮೇಲೆ ಬಿಳಿಯ ಹೊದಿಕೆಯನ್ನು ಹೊದ್ದಿಸಿದರು. ಗ್ರೀಕ್ ಯೋಧರುಗಳಲ್ಲಿ ಕೆಲವರು ಹೋಗಿ ಒಂದು ದೊಡ್ಡ ಚಿತಿಯನ್ನೇರ್ಪಡಿಸಿದರು. ಸ್ವಲ್ಪಹೊತ್ತಿನಲ್ಲಿಯೇ ಏಕಿಲೀಸಿನ ಶರೀರವನ್ನು ಚಿತಿಯಮೇಲೆ ಇಡಲಾಗಿ ಗ್ರೀಕ್ ರಾಜಪುತ್ರರುಗಳಲ್ಲಿ ಹಲವರು, ಪದ್ಧತಿಯಮೇರೆಗೆ ತಮ್ಮ ಜುಟ್ಟಿನಿಂದ ಒಂದೊಂದು ತಿರಿಯನ್ನು ಕತ್ತರಿಸಿ ಏಕಿಲೀಸಿನ ಶವದಮೇಲೆ ಹಾಕಿ ತಮ್ಮ ದುಃಖವನ್ನು ಪ್ರದರ್ಶಿಸಿದರು. ಈ ಸಮಯದಲ್ಲಿ ಸಮುದ್ರಮಧ್ಯದಿಂದ ಥೀಟೀಸಳೂ ಆಕೆಯ ಜೊತೆಯ ದೇವತೆಗಳೂ ಗೋಳಾಡುತ್ತ ಬಂದರು. ಅವರನ್ನು ಕಂಡು ಗ್ರೀಕರಲ್ಲಿ ಅನೇಕರು ಬೆದರಿ ಓಡಿಹೋಗುವುದರಲ್ಲಿದ್ದರು. ಆದರೆ ನೆಸ್ಟಾರನು ಹಾಗೆ ಬರುತ್ತಿದ್ದವರು ಥೀಟೀಸಳೂ ಅವಳಕಡೆಯ ದೇವತೆಗಳೂ ಎಂದು ಧೈರ್ಯಹೇಳಿದುದರಿಂದ ಅವರ ಹೆದರಿಕೆಯು ಶಾಂತವಾಯಿತು. ಥೀಟೀಸಳು ತನ್ನ ಮಗನ ಮೃತದೇಹವನ್ನು ಕಂಡು ಗೋಳಾಡುತ್ತ ಅದರಮೇಲೆ ಪರಿಮಳಯುಕ್ತವಾದ ಒಂದು ದಿವ್ಯವಸ್ತ್ರವನ್ನು ಹೊದ್ದಿಸಿದಳು. ಬಳಿಕ ಚಿತಿಗೆ ಬೆಂಕಿಯನ್ನು ಹೊತ್ತಿಸಲಾಗಿ ಕೆಲವು ಗಂಟೆಗಳಲ್ಲಿಯೇ ಚಿತಿಯು ಭಸ್ಮರಾಶಿಯಾಯಿತು * ಬಡಿಸಿಯಸ್ಸನೇ ಮೊದಲಾದವರು ಆ ರಾಶಿಯಲ್ಲಿದ್ದ ಕೆಲವು ಅಸ್ಥಿಗಳನ್ನೂ ಭಸ್ಮವನ್ನೂ ಒಂದು ಸ್ವರ್ಣಪಾತ್ರೆಗೆ ಹಾಕಿ ಅದರೊಡನೆ ಪೆಟ್ರೋಕ್ಲಸ್ಸಿನ ದೇಹದ ಅಸ್ಥಿಭಸ್ಮಗಳನ್ನು ಬೆರೆಸಿ ಆ ಪಾತ್ರೆಯನ್ನು ಭೂಸ್ಥಾಪನೆಮಾಡಿ ಅದರಮೇಲೆ ಒಂದು ದೊಡ್ಡ ಮಣ್ಣುಗುಡ್ಡೆಯನ್ನು ಹಾಕಿದರು.

೨೦೪. ಬಳಿಕ ಪದ್ಧತಿಯಂತೆ ಅವನ ಸಮಾಧಿಯ ಸುತ್ತಲೂ ಅನೇಕ ಸ್ಪರ್ಧೆಗಳು ನಡೆದುವು. ಅವುಗಳಲ್ಲಿ ವಿಜಯಿಗಳಾದವರಿಗೆ ಬಹುಮಾನಗಳನ್ನು

* ಏಕಿಲೀಸಿನ ಶರೀರವು ಚಿತಿಯಮೇಲಿದ್ದಾಗ ಅದೃಶ್ಯನಾಗಿ, ಒಲಿಂಪಸ್ ಪರ್ವತಕ್ಕೆ ಹೋಗಿ ಸೇರಿತೆಂದು ಮತ್ತೊಂದು ಕಥೆ ಇರುವುದು.

ಥೀಟೀಸಳೇ ಕೊಟ್ಟಳು. ಏಕಿಲೀಸಿನ ಶರೀರವನ್ನು ಕಾಪಾಡಿದಾತನಿಗೇ ಶಸ್ತ್ರ ಕವಚಾದಿಗಳನ್ನು ಕೊಡಬೇಕೆಂದು ತೆಗೆದಿರಿಸಿ, ಏಕಿಲೀಸಿನ ದೇಹವನ್ನು ಕಾಪಾಡಿದವರು ಯಾರೆಂಬುದಾಗಿ ಪ್ರಶ್ನಿಸಿದಳು. ಆ ಸಂದರ್ಭದಲ್ಲಿ ಹಿರಿಯ ಏಯಾಸನೂ ಒಡಿಸಿಯಸ್ಸನೂ ನಾನು ತಾನೆಂದು ಹೋರಾಡತೊಡಗಿದರು. ಆ ಸ್ವಯೂಥ ಕಲಹವನ್ನು ಕಂಡು ನೆಸ್ಟಾರನು ವ್ಯಥೆಪಡುತ್ತಾ "ನಮ್ಮನಮ್ಮಲ್ಲಿ ಇಂತಹ ಹೋರಾಟಗಳು ನಡೆಯುವುದು ಒಳ್ಳೆಯದಲ್ಲ. ಗ್ರೀಕರೆಲ್ಲರನ್ನೂ ಒಂದೇಸಮವಾಗಿ ದ್ವೇಷಿಸುತ್ತಲಿರುವ ಟ್ರೋಜನ್ ಸೆರೆಯಾಳುಗಳು ನಮ್ಮಲ್ಲಿ ಬೇಕಾದಷ್ಟು ಮಂದಿ ಇರುವರಲ್ಲಾ ! ಅವರನ್ನೇ ಕೇಳಿದರೆ ಟ್ರೋಜನರಿಗೆ ಅತ್ಯಂತವಾಗಿ ಹಿಂಸೆ ಮಾಡಿರತಕ್ಕವನು ಇಂತಹವನೆಂದು ಗೊತ್ತಾಗಿಹೋಗುವುದು" ಎಂದು ಸೂಚಿಸಿದನು. ಆತನ ಸೂಚನೆಯನ್ನು ಕೇಳಿ ಅಗಮೆಮ್ನಾನನೇ ಮೊದಲಾದ ಗ್ರೀಕರೆಲ್ಲರೂ ಸಂತೋಷಿಸಿ ಟ್ರೋಜನ್ ಸೆರೆಯಾಳುಗಳನ್ನು ಬರಮಾಡಿಕೊಂಡು ಅವರ ಮುಂದೆ ಒಡಿಸಿಯಸ್ಸನೂ ಏಯಾಸನೂ ತಮ್ಮತಮ್ಮ ಸಾಹಸಗಳನ್ನು ಹೇಳಿಕೊಳ್ಳುವಂತೆ ಏರ್ಪಡಿಸಿದರು ಒಡಿಸಿಯಸ್ಸನು ಶಾಂತನಾಗಿದ್ದನ್ನು ಆದುದರಿಂದ ಮೊದಲನೆಯ ಸರದಿಯು ಏಯಾಸಿಗೇ ದೊರೆಯಿತು. ಅವನು ತಾನು ಮಾಡಿದ್ದ ಕೆಲಸವನ್ನು ಸ್ವಲ್ಪಮಟ್ಟಿಗೆ ವರ್ಣಿಸಿ ಒಡಿಸಿಯಸ್ಸಿನಮೇಲೆ ಅನೇಕ ದೋಷಗಳನ್ನು ಹೊರಿಸಿ ಅವನನ್ನು ಹೇಡಿಯೆಂದು ದೂಷಿಸಿದನು. ಒಡಿಸಿಯಸ್ಸಾದರೋ ಏಯಾಸಿನ ಮಾತುಗಳಿಂದ ಸ್ವಲ್ಪವಾದರೂ ವ್ಯಥಿತನಾಗದೆ ತನ್ನ ಕಾರ್ಯಗಳನ್ನು ವಿನಯದಿಂದ ವಿವರಿಸಿ ಕೊನೆಯಲ್ಲಿ ತಾನು ಹೇಡಿಯೋ ಅಲ್ಲವೋ ಎಂಬುದನ್ನು ಹೇಳಬೇಕಾದರೆ ಟ್ರೋಜನರೇ ಯೋಗ್ಯರು ಎಂದು ಹೇಳಿದನು. ಕಡೆಗೆ ಏಕಿಲೀಸಿನ ಶಸ್ತ್ರಕವಚಾದಿಗಳಿಗೆ ಒಡಿಸಿಯಸ್ಸನೇ ಅರ್ಹನೆಂದು ತೀರ್ಮಾನವಾಯಿತು. ಆಗ ಏಯಾಸನು ತನಗೆ ಆದ ಆಶಾಭಂಗದಿಂದ ಅತ್ಯಂತ ಕ್ಷುಭಿತನಾಗಿ, ಹಿಂದೆ ಹೆಕ್ಟರನು ತನಗೆ ಕೊಟ್ಟಿದ್ದ ಕತ್ತಿಯನ್ನು ಹಿಡಿದು ಒಡಿಸಿಯಸ್ಸನ್ನು ಕತ್ತರಿಸಿಹಾಕುವುದಕ್ಕಾಗಿ ಆ ರಾತ್ರಿಯಲ್ಲಿಯೇ ಅವನ ಗುಡಿಸಿಲ ಬಳಿಗೆ ಹೋದನು. ಆದರೆ ಒಡಿಸಿಯಸ್ಸಿನ ಅಭಿಮಾನದೇವತೆಯಾಗಿದ್ದ ಅಥೆನಿಯು ಏಯಾಸಿಗೆ ಬುದ್ಧಿಭ್ರಂಶವುಂಟಾಗುವಂತೆ ಮಾಡಿ ಅವನನ್ನು ಒಂದು ಮಾಳದಲ್ಲಿ ಮೇಯುತ್ತಿದ್ದ ಕುರಿಯಮಂದೆಯೊಳಕ್ಕೆ ಕರೆದುಕೊಂಡುಹೋಗಿ ಬಿಟ್ಟಳು. ಏಯಾಸನು ಆ ಕುರಿಯಮಂದೆಯೇ ಒಡಿಸಿಯಸ್ಸನೆಂದು ತಿಳಿದು ಅದರಲ್ಲಿದ್ದ ಕುರಿಗಳಲ್ಲಿ ಒಂದನ್ನೂ ಬಿಡದಂತೆ ರಾತ್ರಿಯಲ್ಲಿ

ಕತ್ತರಿಸಿಹಾಕಿದನು. ಸೂರ್ಯೋದಯವಾದೊಡನೆಯೇ ಜ್ಞಾನೋದಯವಾಗಲು, ಏಯಾಸನು ತಾನು ಮಾಡಿದ್ದ ಆ ಅಲ್ಪಕೃತ್ಯಕ್ಕಾಗಿ ವ್ಯಸನಪಟ್ಟು ತನ್ನ ಜೊತೆಯವರ ಅವಹೇಳನಕ್ಕೆ ಗುರಿಯಾಗಬಾರದೆಂದು ನಿರ್ಧರಿಸಿ ತನ್ನ ಕತ್ತಿಯಿಂದಲೇ ಆತ್ಮಹತ್ಯಮಾಡಿಕೊಂಡನು. ಅವನ ರಕ್ತವು ಬಿದ್ದಿದ್ದ ಪ್ರದೇಶದಲ್ಲಿ ಒಂದು ಬಗೆಯ ಹೂಗಳು ಬೆಳೆದುಕೊಂಡುವಂತೆ !

೨೦೫. ಅಷ್ಟು ಸ್ವಲ್ಪಕಾಲದಲ್ಲಿಯೇ, ಗ್ರೀಕರ ಪಾಳೆಯದಲ್ಲಿದ್ದ ಏಕಿಲೀಸ್ ಹಿರಿಯ ಏಯಾಸ್ ಆಂಟಿಲೋಕಸ್ ಮುಂತಾದ ಶೂರಾಗ್ರಣಿಗಳು ವಿಧಿವಶರಾದುದಕ್ಕಾಗಿ ಅನೇಕರು ವ್ಯಸನಪಟ್ಟು ಮುಂದಕ್ಕೆ ತಮ್ಮ ಉದ್ದೇಶವು ಹೇಗೆ ನೆರವೇರೀತೋ ಎಂದು ಚಿಂತಿಸುತ್ತಿದ್ದರು. ತನ್ನ ಪ್ರತಿದ್ವಂದ್ವಿಯು ಆತ್ಮಹತ್ಯಮಾಡಿಕೊಂಡಿದ್ದುದಕ್ಕಾಗಿ ಒಡಿಸಿಯಸ್ಸನೂ ಬಹಳವಾಗಿ ಶೋಕಿಸುತ್ತಾ ಏಕಿಲೀಸಿನ ಶಸ್ತ್ರಕವಚಾದಿಗಳನ್ನು ಟ್ರೋಜನ್ ಸೆರೆಯಾಳುಗಳು ತನಗೆ ಕೊಡಬೇಕೆಂದು ತೀರ್ಮಾನಿಸದಿದ್ದರೆ ಎಷ್ಟೋ ಚೆನ್ನಾಗಿದ್ದಿತಲ್ಲಾ ! ಎಂದು ಹೇಳಿಕೊಂಡು ಅದನ್ನು ಉಪಯೋಗಿಸದೆ ಒಂದುಕಡೆಯಲ್ಲಿ ಇಟ್ಟುಕೊಂಡಿದ್ದನು. ಏಯಾಸಿನ ಮರಣಕ್ಕಾಗಿ ಅವನ ಸಹೋದರನಾದ ಟ್ಯೂಸರನೂ ಬಹಳವಾಗಿ ಶೋಕಿಸಿದನು. ಹೀಗೆ ಸ್ವಲ್ಪ ಹೊತ್ತು ಕಳೆದ ಬಳಿಕ ಏಯಾಸಿನ ಉತ್ತರಕ್ರಿಯೆಗಳು ಯಥಾವಿಧಿಯಾಗಿ ನಡೆದುವು.

---

## XXX

೨೦೬. ಅಪರಕ್ರಿಯೆಗಳು ನಡೆದಬಳಿಕ ಗ್ರೀಕರ ಪಾಳೆಯದಲ್ಲಿ ಒಂದು ಸಭೆಯು ಸೇರಿತು. ಅದಕ್ಕೆ ಉಳಿದಿದ್ದ ಗ್ರೀಕ್ ಪ್ರಮುಖರೆಲ್ಲರೂ ತಮ್ಮತಮ್ಮ ಅನುಯಾಯಿಗಳೊಡನೆ ಬಂದಿದ್ದರು. ಏಕಿಲೀಸ್ ಏಯಾಸ್, ಪೆಟ್ರೋಕ್ಲಸ್, ಆಂಟಿಲೋಕಸ್-ಇವರುಗಳು ಕಾಲವಾಗಿದ್ದುದರಿಂದ ಇವರಕಡೆಯ ಸೈನಿಕರಲ್ಲಿ ಉತ್ಸಾಹವು ಕಡಿಮೆಯಾಗುತ್ತಿದ್ದಂತೆ ತೋರಿತು. ಮುಂದೆ ಏನುಮಾಡಬೇಕೋ ಅದನ್ನು ನಿಷ್ಕರ್ಷಿಸುವುದಕ್ಕಾಗಿಯೇ ಆ ಸಭೆಯು ಸೇರಿದ್ದಿತು. ಮೆನೆಲಾಸನು ಆ ಸಭೆಯಲ್ಲಿ ಎದ್ದುನಿಂತು, "ಮಿತ್ರರೆ, ನಮ್ಮಲ್ಲಿ ಬಹು ಪ್ರಸಿದ್ಧವೀರರಾದ ಏಕಿಲೀಸ್ ಪೆಟ್ರೋಕ್ಲಸ್ ಮುಂತಾದವರು ಗತಿಸಿಹೋದರು. ಅವರುಗಳು ಈ ನಿರ್ಭಾಗ್ಯನಾದ ನನಗಾಗಿಯೇ ಇಷ್ಟುದೂರ ಬಂದು ತಮ್ಮ

ಪ್ರಾಣಗಳನ್ನು ತೆತ್ತಿರುವರು. ನಾವುಗಳು ಇಲ್ಲಿಗೆ ಹೊರಡುವುದಕ್ಕೆ ಮುಂಚೆಯೇ ದೇವರು ನನಗೇ ಮರಣವನ್ನುಂಟುಮಾಡಿದ್ದರೆ ಎಷ್ಟೋ ಚೆನ್ನಾಗಿದ್ದಿತಲ್ಲಾ ! ಇನ್ನು ನಾವು ಇಲ್ಲಿ ನಿಂತು ಯುದ್ಧಮಾಡುವುದು ಪ್ರಯೋಜನವಿಲ್ಲ. ಆದುದರಿಂದ ಬನ್ನಿ ನಾವು ನಮ್ಮ ದೇಶಕ್ಕೆ ಹಿಂದಿರುಗುವ" ಎಂದು ಹೇಳಿದನು. ಅದನ್ನು ಕೇಳಿ ಡೈಯೊಮಿಾಡೀಸನು ಕೂಡಲೆ ಎದ್ದುನಿಂತು "ಗ್ರೀಕ್‌ವೀರರೆ, ಮೆನೆಲಾಸನು ನಮ್ಮನ್ನು ಪರೀಕ್ಷಿಸುವುದಕ್ಕಾಗಿಯೇ ಹೀಗೆ ಹೇಳುತ್ತಿರುವನು ಎಂದು ಚೆನ್ನಾಗಿ ಜ್ಞಾಪಕದಲ್ಲಿಡಿ. ಅವನ ಮಾತಿನಮೇರೆಗೆ ಹಿಂದಕ್ಕೆ ಹೋಗುವುದಕ್ಕೆ ನಾವೇನು ಕೆಲಸಕ್ಕೆ ಬಾರದ ಹೇಡಿಗಳೇ? ನೀವು ನಿಮ್ಮ ಈಟಿಕತ್ತಿಗಳನ್ನು ಹರಿತ ಮಾಡಿಕೊಂಡು ಶತ್ರುಗಳೊಡನೆ ಕಾದುವುದಕ್ಕೆ ಸಿದ್ಧವಾಗಿರಿ" ಎಂದು ಹೇಳಿದನು. ಕಾಲ್ಕ್ಯಾಸನೂ, ಮುತ್ತಿಗೆಹಾಕಿದ ಹತ್ತನೆಯ ವರ್ಷದಲ್ಲಿ ಟ್ರಾಯ್ ಪಟ್ಟಣವು ಗ್ರೀಕರಿಗೆ ವಶವಾಗುವುದೆಂದು ತಾನು ಹಿಂದೆ ಎಷ್ಟೋಸಾರಿ ಹೇಳಿದ್ದ ಮಾತುಗಳನ್ನು ಮೆನೆಲಾಸಿಗೂ ಇತರಸದಸ್ಯರಿಗೂ ಜ್ಞಾಪಿಸಿ ಯುದ್ಧಮಾಡುವುದೇ ಒಳ್ಳೆಯದೆಂದು ಬೋಧಿಸಿದನು. ಒಡಿಸಿಯಸ್ಸನೂ ಅದೇ ಅಭಿಪ್ರಾಯವನ್ನೇ ತಿಳಿಸಿ, ತಾನೂ ಡೈಯೋಮಿಾಡೀಸನೂ ಸ್ಕೈರಾಸ್ ದ್ವೀಪಕ್ಕೆ ಹೋಗಿ ಅಲ್ಲಿ ತನ್ನ ಮಾತಾಮಹನ ಮನೆಯಲ್ಲಿ ವಾಸವಾಗಿದ್ದ, ಏಕಿಲೀಸಿನ ಮಗನಾದ ಫಿರ್ರಸ್ಸನ್ನು ಕರೆತರುವುದಾಗಿ ಹೇಳಿದನು. ಬಳಿಕ ಅವರು ಅದೇಮೇರೆಗೆ ಪ್ರಯಾಣ ಹೊರಟು ಕೆಲವುದಿನಗಳಲ್ಲಿ ಆ ದ್ವೀಪವನ್ನು ಸೇರಿ ತಮ್ಮ ಗುರುತಿಗಾಗಿ ಏಕಿಲೀಸಿನ ಶಸ್ತ್ರಕವಚಗಳನ್ನು ಅವನಿಗೆ ತೋರಿಸಿ ಅವನ್ನು ಕೊಟ್ಟು ಅವನನ್ನು ಟ್ರಾಯ್‌ಪಟ್ಟಣದ ಒಳಗೆ ಕರೆದುಕೊಂಡು ಬಂದರು. ನೂತನವಾಗಿತಮ್ಮ ಪಾಳೆಯವನ್ನು ಸೇರಿದ ಫಿರ್ರಸ್ಸಿಗೆ ಗ್ರೀಕರು ನಿಯಾಪ್ಟಾಲಿಮಸ್ ಎಂದರೆ ನೂತನ ಯೋಧ ಎಂಬ ಹೆಸರನ್ನಿಟ್ಟರು. ಅಂದಿನಿಂದ ಅವನಿಗೆ ಆ ಹೆಸರೇ ಶಾಶ್ವತವಾಗಿ ನಿಂತುಹೋಯಿತು.

೨೦೭. ಈನಡುವೆ ಟ್ರೋಜನರ ಸಹಾಯಕ್ಕಾಗಿ ಮಿಸಿಯಾದೇಶದಿಂದ ಯೂರಿಪೈಲಸ್ ಎಂಬೊಬ್ಬ ವೀರನು ಖೀಟರೆಂಬ ತನ್ನ ಸೈನಿಕರೊಡನೆ ಬಂದನು. ಇವನ ತಂದೆಯ ತಂದೆಯು ಬಹುಪ್ರಸಿದ್ಧನಾದ ಹೆರ್ಕ್ಯುಲಿಸ್ ಎಂಬಾತನು ಇವನ ತಾಯಿಯು ಪ್ರಯಾಮಿನ ಮಗಳು. ಅವಳಿಗೆ ಪ್ರಯಾಮಿನ ಬಳಿಯಲ್ಲಿದ್ದ ಸ್ವರ್ಣಮಯವೂ ದೇವದತ್ತವೂ ಆಗಿದ್ದ ದ್ರಾಕ್ಷಾಲತೆಯಮೇಲೆ ಬಹಳ ಆಸೆ

ಯಿದ್ದಿತು. ಆದುದರಿಂದ ಅದನ್ನು ಪ್ರಿಯಾಮನು ಅವಳಿಗೆ ಕೊಟ್ಟು ಕಳುಹಿಸಿ ತನ್ನ ಮೊಮ್ಮಗನನ್ನು ತನ್ನ ಸಹಾಯಾರ್ಥವಾಗಿ ಕರೆಸಿಕೊಂಡಿದ್ದನು. ಯೂರಿಪೈಲಸ್ಸನೂ ಅವನ ಕಡೆಯವರೂ ಒಂದುದಿವಸದ ಮಟ್ಟಿಗೆ ವಿಶ್ರಮಿಸಿಕೊಂಡು ಮೂರನೆಯ ದಿನವೇ ಯುದ್ಧಕ್ಕೆ ಸಿದ್ಧರಾದರು. ಯೂರಿಪೈಲಸ್ಸಿನ ಗುರಾಣಿಯನ್ನು ಚಿನ್ನದಿಂದ ಮಾಡಿದ್ದುದಲ್ಲದೆ ಅದರಮೇಲೆ ಹೆರ್ಕ್ಯುಲಿಸ್ಸಿನ ಅನೇಕ ಅದ್ಭುತ ಕಾರ್ಯಗಳನ್ನು ಕೆತ್ತಿದ್ದರು ಯುದ್ಧಕ್ಕೆ ಆರಂಭವಾದ ಸ್ವಲ್ಪಹೊತ್ತಿನಲ್ಲಿಯೇ ಯೂರಿಪೈಲಸ್ಸನು ನಿರಿಯಸ್ಸೆಂಬ ಒಬ್ಬ ಗ್ರೀಕ್ ಯೋಧನನ್ನು ಕೊಂದುಬಿಟ್ಟನು. ಗ್ರೀಕರ ದಳದಲ್ಲೆಲ್ಲಾ ಏಕಿಲೀಸನ್ನು ಬಿಟ್ಟರೆ ನಿರಿಯಸ್ಸನೇ ಅತ್ಯಂತಸುಂದರ ಪುರುಷನು. ಆಗ ಮೆಕಾವನ್ನನು ಮುಂದಕ್ಕೆ ನುಗ್ಗಿ ನಿರಿಯಸ್ಸಿನ ಶಸ್ತ್ರಕವಚಗಳನ್ನು ಶತ್ರುಗಳು ವಶಪಡಿಸಿಕೊಳ್ಳದಂತೆ ಅಡ್ಡಿಮಾಡುತ್ತ, ಯೂರಿಪೈಲಸ್ಸಿನ ಹೆಗಲನ್ನು ತನ್ನ ಈಟಿಯಿಂದ ತಿವಿದುಬಿಟ್ಟನು. ಆದರೂ ಯೂರಿಪೈಲಸ್ಸನು ಅದನ್ನು ಲಕ್ಷ್ಯಮಾಡದೆ ಮೆಕಾವನ್ನಿನ ಎಡದೋಳನ್ನು ತನ್ನ ಕತ್ತಿಯಿಂದ ಹೊಡೆದನು. ಮೆಕಾವನ್ನನೂ ಲಕ್ಷ್ಯಮಾಡದೆ ದೊಡ್ಡದೊಂದು ಕಲ್ಲನ್ನು ಎತ್ತಿ ಯೂರಿಪೈಲಸ್ಸಿನಮೇಲೆ ಹಾಕಿದನು. ಆ ಏಟನ್ನು ತಪ್ಪಿಸಿಕೊಂಡು ಯೂರಿಪೈಲಸ್ಸನು ಮೆಕಾವನ್ನನ್ನು ತನ್ನ ಈಟಿಯಿಂದ ತಿವಿದು ಮಲಗಿಸಿಬಿಟ್ಟನು. ಆ ಬಳಿಕ ಕೆಲವು ದಿವಸಗಳವರೆಗೆ ಯುದ್ಧವು ನಡೆದುಕೊಂಡುಹೋಯಿತು. ಟ್ಯೂಸರನು, ಅನೇಕವೇಳೆ ಪಟ್ಟಣದೊಳಕ್ಕೆ ಬಂದುಬಿಡಬೇಕೆಂದು ಹೆಕ್ಟರಿಗೆ ಅನೇಕವೇಳೆ ಬೋಧಿಸಿದ್ದ ಡೇಮಸ್ಸನ್ನು ಕೊಂದುಬಿಟ್ಟನು. ಈನಿಯಾಸನು ಟ್ಯೂಸರಿನ ಮೇಲೆ ಒಂದು ದೊಡ್ಡ ಕಲ್ಲನ್ನು ಎಸೆದು ಗಾಯಗೊಳಿಸಿ ಅವನನ್ನು ಗ್ರೀಕರ ಪಾಳೆಯಕ್ಕೆ ಅಟ್ಟಿಬಿಟ್ಟನು. ಪ್ಯಾರಿಸ್ಸನು ಯೂರಿಪೈಲಸ್ ಈನಿಯಾಸ್–ಇವರುಗಳ ಬಳಿಯಲ್ಲಿ ನಿಂತು ಯುದ್ಧಮಾಡುತ್ತಿದ್ದನು. ಐಡೊಮಿನಿಯಸ್ ಮೆರಿಯೋನೆಸ್ ಥ್ರಾಸಿಮೆಡೀಸರುಗಳು ಅಗಮೆಮ್ನಾನ್ ಮೆನೆಲಾಸರ ಬೆಂಗಾವಲಿಗೆ ನಿಂತು ಅನೇಕ ಟ್ರೋಜನರನ್ನು ಧ್ವಂಸಮಾಡುತ್ತಿದ್ದರು ಆದರೆ ಸ್ವಲ್ಪ ಹೊತ್ತಿನಲ್ಲಿಯೇ ಕತ್ತಲೆಯಾದುದರಿಂದ ಉಭಯಪಕ್ಷದ ಸೈನಿಕರೂ ತಮ್ಮತಮ್ಮ ಪಾಳೆಯಕ್ಕೆ ಹಿಂತಿರುಗಿದರು.

೨೦೮. ಮೂರನೆಯ ಬೆಳಗ್ಗೆ ಗ್ರೀಕ್ ಸೈನಿಕರು ನಿಯಾಪ್ಟಾಲಿಮಸ್ಸನ್ನು ತಮ್ಮ ಮುಂದಿಟ್ಟುಕೊಂಡು ಪುನಃ ಯುದ್ಧಕ್ಕೆ ಮೊದಲುಮಾಡಿದರು.

ನಿಯಾಪ್ಟಾಲಿಮಸ್ಸನು ಏಕಿಲೀಸಿನ ಹಾಗೆಯೇ ಇದ್ದುದರಿಂದ ಟ್ರೋಜನರಿಗೆ ಬಹಳ ಹೆದರಿಕೆಯಾಯಿತು. ಗುಡುಗಿನ ಗರ್ಜನೆಯನ್ನು ಕೇಳಿ ಹೆದರಿ ಮಕ್ಕಳು ತಮ್ಮ ಮಾತಾಪಿತೃಗಳ ಬಳಿಗೆ ಹೋಗಿ ಅವಿತುಕೊಳ್ಳುವಂತೆ, ಟ್ರೋಜನ್ಯೋಧರು ಯೂರಿಪ್ಸೈಲಸ್ಸಿನ ಸಮೀಪವನ್ನು ಸೇರಿ ಅವನ ಹಿಂದೆ ಹಿಂದೆ ನಿಂತು ಯುದ್ಧ ಮಾಡುತ್ತಿದ್ದರು. ತನ್ನ ತಂದೆಯನ್ನು ಕೊಂದಿದ್ದ ಟ್ರೋಜನರಮೇಲೆ ಮುಯ್ಯಿ ತೀರಿಸಿಕೊಳ್ಳಬೇಕೆಂದು ದೃಢಸಂಕಲ್ಪನಾಗಿದ್ದ ನಿಯಾಪ್ಟಾಲಿಮಸ್ಸನು ಲೇಶವಾದರೂ ದಯೆಯಿಲ್ಲದೆ ಬಹಳ ರಭಸದಿಂದ ಶತ್ರುಗಳನ್ನು ಕೊಂದು ಕೆಡಹುತ್ತ ಬಂದನು ಆ ದಿನದ ಸಾಯಂಕಾಲದವರೆಗೂ ಘೋರವಾದ ಯುದ್ಧವು ನಡೆದರೂ ಯಾವಪಕ್ಷದವರಿಗೂ ಜಯವಾಗದೇ ಇದ್ದುದರಿಂದ, ಎರಡು ಪಕ್ಷದವರೂ ತಮ್ಮ ತಮ್ಮ ಪಾಳೆಯಗಳಿಗೆ ಹಿಂದಿರುಗಬೇಕಾಯಿತು.

೨೦೯. ಹೀಗೆಯೇ ಯುದ್ಧವು ಅನೇಕ ದಿವಸಗಳವರೆಗೆ ನಡೆಯುತ್ತ ಬಂದರೂ ಯಾವ ಪಕ್ಷದವರಿಗೂ ಜಯಾಪಜಯಗಳು ನಿಷ್ಕೃಷ್ಟವಾಗದಿದ್ದುದರಿಂದ, ಗ್ರೀಕರು ತಮ್ಮ ನೈಮಿತ್ತಿಕನಾದ ಕಾಲ್ಕಾಸನ್ನು ಕುರಿತು ಟ್ರಾಯ್ ಪಟ್ಟಣವು ಇನ್ನೂ ಏಕೆ ತಮಗೆ ವಶವಾಗಲಿಲ್ಲವೆಂದು ಕೇಳಿದರು. ಆಗ ಅವನು ಲೆಮ್ನಾಸ್ ದ್ವೀಪದಲ್ಲಿ ನಿಂತುಹೋಗಿದ್ದ, ಮತ್ತು ಹೆರ್ಯಾಕ್ಲಿಸನ ಬಿಲ್ಲುಬಾಣಗಳನ್ನು ಪಡೆದಿದ್ದ ಫಿಲಾಕ್ಟೀಟಸ್ ಎಂಬ ಪ್ರಸಿದ್ಧ ಧನ್ವಿಯನ್ನು ತಮ್ಮ ಪಾಳೆಯಕ್ಕೆ ಪುನಃ ಕರೆತಂದರೆ ತಮಗೆ ಜಯವಾಗುವುದೆಂದು ತಿಳಿಸಿದನು. ಈ ಫಿಲಾಕ್ಟೀಟಸ್ಸನು ಹೆರ್ಯಾಕ್ಲಿಸ ಆಪ್ತಸೇವಕನಾಗಿದ್ದನು. ಹಿಂದೆ ಹೆರ್ಯಾಕ್ಲಿಸ್ಸನು, ತನ್ನ ಶತ್ರುವಿನ ದುರ್ಬೋಧನೆಗೆ ಒಳಗಾಗಿ ಮೋಸಹೋಗಿದ್ದ ಅವನ ಪತ್ನಿಯು ಪ್ರೀತಿಪೂರ್ವಕವಾಗಿ ಕಳುಹಿಸಿಕೊಟ್ಟಿದ್ದ ಉಡುಪನ್ನು ಧರಿಸಿ ಮೃತ್ಯುವಶವಾದಾಗ ಅವನ ದೇಹವನ್ನು ಸಂಸ್ಕರಿಸಿದ್ದಾತನು ಈ ಫಿಲಾಕ್ಟೀಟಸ್ಸನೇ. ಈ ಉಪಕಾರಕ್ಕಾಗಿ ಹೆರ್ಯಾಕ್ಲಿಸನು ತನ್ನ ಅದ್ಭುತವಾದ ಬಿಲ್ಲುಬಾಣಗಳನ್ನು ಅವನಿಗೆ ದಾನಮಾಡಿದ್ದನು. ಫಿಲಾಕ್ಟೀಟಸನು ಟ್ರೋಜನ್ ದಂಡಯಾತ್ರೆಗಾಗಿ ಹೊರಟು ತನ್ನ ಸಂಗಡಿಗರೊಡನೆ ಬಂದಾನೊಂದು ದಿನ ಲೆಮ್ನಾಸ್ ದ್ವೀಪದಲ್ಲಿ ತಂಗಿ, ಬೇಟೆಯಾಡುತ್ತಿದ್ದಾಗ ಅದ್ಭುತವಾದ ಒಂದು ಜಲಚರದಮೇಲೆ ಬಾಣವೊಂದನ್ನು ಪ್ರಯೋಗಿಸಲು, ಆ ಪ್ರಾಣಿಯು ದಡಕ್ಕೆ ಹತ್ತಿ ಬಂದು ಫಿಲಾಕ್ಟೀಟಸ್ಸನ ಕಾಲನ್ನು ಕಚ್ಚಿ ಸತ್ತುಬಿದ್ದಿತು, ಕೂಡಲೆ ಅವನಕಾಲು ಬಾತುಕೊಂಡು

ದುಃಸಹವಾದ ಬಾಧೆಯೂ ದುರ್ವಾಸನೆಯೂ ಉಂಟಾದುವು. ಆ ನೋವನ್ನು ತಡೆಯಲಾರದೆ ನಿರಂತರವಾಗಿ ಫಿಲಾಕ್ಟೀಟಸ್ಸನು ಘೋರವಾಗಿ ನರಳುತ್ತಿದ್ದುದರಿಂದ ಗ್ರೀಕರ ಪಾಳೆಯದಲ್ಲಿ ಒಬ್ಬರಿಗಾದರೂ ಆಹಾರಪಾನಗಳು ರುಚಿಸದೆ ನಿದ್ದೆ ಹತ್ತದೆ ಅವನನ್ನು ಹಿಂದೆಯೇ ಬಿಟ್ಟು ಹೊರಟುಬಂದಿದ್ದರು. ಕಾಲ್ಕಾಸಿನ ಅಭಿಪ್ರಾಯದಂತೆ ಅವನನ್ನು ಕರೆತರಲು ಒಡಿಸಿಯಸ್ಸನೂ ಡೈಯೋಮಿಡೀಸನೂ ಪುನಃ ಪ್ರಯಾಣಹೊರಟು ಲೆಮ್ನಾಸ್ ದ್ವೀಪವನ್ನು ಸೇರಿದರು. ಅವರನ್ನು ಕಂಡಕೂಡಲೆ ತನ್ನನ್ನು ಕಾಡುಪಾಲುಮಾಡಿಹೋಗಿದ್ದ ಅವರಮೇಲೆ ಕೋಪಗೊಂಡು ಮುಯ್ಯಿತೀರಿಸಿಕೊಳ್ಳಬೇಕೆಂದು ಫಿಲಾಕ್ಟೀಟಸನು ಬಾಣವನ್ನು ಪ್ರಯೋಗಿಸುವುದರಲ್ಲಿದ್ದನು ಆದರೆ ಒಡಿಸಿಯಸ್ಸನು ತನ್ನ ವಾಕ್ಚಾತುರ್ಯದಿಂದ ಅವನನ್ನು ಸಮಾಧಾನಗೊಳಿಸಿ ಅವನ ಗಾಯವನ್ನು ವಾಸಿಮಾಡಿಸುವುದಾಗಿ ನಂಬಿಸಿದುದರಿಂದ, ಫಿಲಾಕ್ಟೀಟಸ್ಸನು ಶಾಂತನಾಗಿ ಅವರೊಡನೆ ಗ್ರೀಕರ ಪಾಳೆಯಕ್ಕೆ ಹೊರಟುಬಂದನು. ಅಲ್ಲಿ ಅವನನ್ನು ಅಗಮೆಮ್ನಾನನೇ ಮೊದಲಾದವರು ಉಪಚರಿಸಿ, ಮೆಕಾವನ್ನಿನ ಸಹೋದರನ ಮೂಲಕ ಕೆಲವು ದಿನಗಳಲ್ಲಿಯೇ ಅವನ ಗಾಯವನ್ನು ವಾಸಿಮಾಡಿಸಿದರು.

೨೧೦. ಅನೇಕವಾರಗಳಿಂದ ನಡೆಯುತ್ತಿದ್ದಂತೆಯೇ ಯುದ್ಧವು ಪುನಃ ಮೊದಲಾಯಿತು. ಪ್ಯಾರಿಸ್ಸನು ಬಹಳ ಉತ್ಸಾಹದಿಂದ ಬಾಣಗಳನ್ನು ಬಿಡುತ್ತಾ ಅನೇಕ ಗ್ರೀಕರಿಗೆ ಗಾಯಗಾಣಿಸುತ್ತಿದ್ದನು. ಫಿಲಾಕ್ಟೀಟಸ್ಸನು ಅದನ್ನು ನೋಡಿ, ಹರ್ಕ್ಯುಲೀಸನು ಉಪಯೋಗಿಸುತ್ತಿದ್ದ ಅದ್ಭುತವಾದ ಬಿಲ್ಲನ್ನು ಹಿಡಿದು ಧನುಷ್ಟಂಕಾರವನ್ನು ಮಾಡುತ್ತ ತನ್ನ ಬಳಿಯಲ್ಲಿ ಯಾವಾಗಲೂ ಇಟ್ಟುಕೊಂಡಿದ್ದ ವಿಷಮಯವಾದ ಬಾಣಗಳಲ್ಲಿ ಒಂದನ್ನು ತನ್ನ ಬಿಲ್ಲಿಗೆ ಹೂಡಿ ಪ್ಯಾರಿಸ್ಸಿನ ಮೇಲೆ ಪ್ರಯೋಗಿಸಿದನು. ಅದು ನೆಟ್ಟಗೆ ಹೋಗಿ ಪ್ಯಾರಿಸ್ಸಿನ ಕೈಮೇಲೆ ಸ್ವಲ್ಪ ಗಾಯಮಾಡಿತು. ಕೂಡಲೆ ಅವನಿಗೆ ದುಃಸಹವಾದ ಯಾತನೆಯುಂಟಾಗಲು ಅವನು ಟ್ರಾಯ್ ಪಟ್ಟಣದೊಳಕ್ಕೆ ಹಿಂದಿರುಗಬೇಕಾಯಿತು. ಅಲ್ಲಿ ಅನೇಕ ವೈದ್ಯರುಗಳು ಬಂದು, ಬಗೆಬಗೆಯಾಗಿ ಚಿಕಿತ್ಸೆಮಾಡಿದರೂ ಪ್ಯಾರಿಸ್ಸಿನ ಬಾಧೆಯು ಕ್ಷಣಕ್ಷಣಕ್ಕೂ ಹೆಚ್ಚಾಗುತ್ತಲಿದ್ದಿತೇ ಹೊರತು ಕಡಿಮೆಯಾಗಲಿಲ್ಲ. ಆದುದರಿಂದ ಅವನಿಗೆ ಆಗ, ತನ್ನ ಪೂರ್ವಪತ್ನಿಯೂ, ವಿಷವೈದ್ಯಳೂ ಆದ ಈನೋನಿಯ ಜ್ಞಾಪಕವುಂಟಾಗಿ, ಐಡಾಪರ್ವತದ ಒಂದು ಗುಹೆಯಲ್ಲಿ ವಾಸ

ಮಾಡುತ್ತಿದ್ದ ಆಕೆಯ ಬಳಿಗೆ ತನ್ನನ್ನು ಕರೆದುಕೊಂಡು ಹೋಗಬೇಕೆಂದು ತಿಳಿಸಿದನು. ಅವನ ಅನುಯಾಯಿಗಳು ಹಾಗೆಯೇ ಮಾಡಲು ಪ್ಯಾರಿಸ್ಸನು ಈನೋನಿಯನ್ನು ಕಂಡು, ತನ್ನ ಅನಾದರಣೆಯನ್ನು ಕ್ಷಮಿಸಿ ತನ್ನ ಯಾತನೆಯನ್ನು ಹೋಗಲಾಡಿಸಬೇಕೆಂದು ಬಗೆಬಗೆಯಾಗಿ ಪ್ರಾರ್ಥಿಸಿಕೊಂಡನು. ಆದರೆ ಆಕೆಯು ಅವನ ಪ್ರಾರ್ಥನೆಗಳಿಗೆ ಕಿವಿಗೊಡದೆ ಹೋದುದರಿಂದ, ಅವನ ಅನುಯಾಯಿಗಳು ಅವನನ್ನು ಟ್ರಾಯ್ ಪಟ್ಟಣಕ್ಕೆ ಹಿಂದಕ್ಕೆ ಹೊತ್ತುಕೊಂಡು ಹೊರಟರು, ದಾರಿಯಲ್ಲಿಯೇ ದಾರುಣವಾದ ಯಾತನೆಯಿಂದ ಅವನು ಮೃತನಾದನು. ಅವನ ಶವವನ್ನು ಪ್ರಯಾಮಿನ ಅರಮನೆಗೆ ತಂದಕೂಡಲೆ ಅರಮನೆಯಲ್ಲೆಲ್ಲಾ ಗೋಳಾಟವು ತುಂಬಿತು. ಹೆಲೆನಳೂ ಪ್ಯಾರಿಸ್ಸಿನ ಮರಣಕ್ಕಾಗಿ ಬಹಳ ವ್ಯಥೆಪಟ್ಟಳು. ಮಾರನೆಯದಿನ ಪ್ಯಾರಿಸ್ಸಿನ ಉತ್ತರಕ್ರಿಯೆಗಳು ಯಥಾವಿಧಿಯಾಗಿ ನಡೆದುವು. ಚಿತೆಯಮೇಲೆ ಪ್ಯಾರಿಸ್ಸಿನ ದೇಹವು ಉರಿಯುತ್ತಿದ್ದಾಗ ಐಡಾಪರ್ವತಪ್ರಾಂತ್ಯದಿಂದ ಒಬ್ಬ ಸುಂದರಸ್ತ್ರೀಯು ಓಡುತ್ತಾಬಂದು ಆ ಚಿತಿಯೊಳಕ್ಕೆ ದುಮಿಕಿ ಸ್ವಲ್ಪಹೊತ್ತಿನಲ್ಲಿಯೇ ಭಸ್ಮವಾಗಿ ಹೋದಳು, ಆಕೆಯು ಯಾರೆಂದು ವಿಚಾರ ಮಾಡಿದಾಗ, ಪ್ಯಾರಿಸ್ಸನ್ನು ಐಡಾಪರ್ವತದ ಗುಹೆಗೆ ಹೊತ್ತುಕೊಂಡು ಹೋಗಿದ್ದವರು, ಆಕೆಯು ಇನೋನಿ ಎಂದು ತಿಳಿಸಿದರು. ಕೆಲವುದಿವಸಗಳಾದ ಬಳಿಕ ಅವಳ ಅಸ್ಥಿಭಸ್ಮಗಳನ್ನು ಹೂತಿದ್ದ ಕಡೆಯಲ್ಲಿಯೇ ಎರಡು ಗಿಡಗಳು ಒಂದರಪಕ್ಕದಲ್ಲಿ ಮತ್ತೊಂದು ಬೆಳೆದು ತಮ್ಮ ಕೊಂಬೆಗಳನ್ನು ಒಂದರೊಡನೆ ಮತ್ತೊಂದು ಸುಲಿದುಕೊಂಡಿರುವಂತೆ ವಿಸ್ತಾರವಾಗಿ ಹರಡಿಕೊಂಡುವು.

---

## XXXI

೨೧೧. ಟ್ರೋಜನರ ವಿಷಯದಲ್ಲಿ ಜ್ಯೂಸಿನ ಕರುಣವು ತಗ್ಗಿದ್ದುದರಿಂದಲೂ, ಆತನು ಹಿಂದೆ ಕೊಟ್ಟಿದ್ದ ಶಾಪವು ಫಲಿಸುವ ಕಾಲವು ಸಮೀಪಿಸಿದ್ದುದರಿಂದಲೂ, ಟ್ರೋಜನರಿಗೆ ಪ್ಯಾರಿಸ್ಸನು ಸತ್ತಬಳಿಕವೂ, ಹಠವೂ ವೃಥಾಭಿಮಾನವೂ ಬಲವಾಗಿಯೇ ಇದ್ದುವು. ಆದುದರಿಂದ ಅವರು ಹೆಲೆನಳನ್ನು ಗ್ರೀಕರ ಬಳಿಗೆ ಕಳುಹಿಸಿಕೊಡಲೊಲ್ಲದೆ, ಟ್ರೋಜನರ ಪಾಳೆಯದಲ್ಲಿ ಪ್ರಮುಖನಾಗಿದ್ದ ಡೆಯಿಫೋಬಸ್ಸನ ವಶಕ್ಕೆ ಆಕೆಯನ್ನು ಕೊಟ್ಟು, ಕೋಟೆಯೊಳಗೇ ನಿಂತು ಗ್ರೀಕರನ್ನು ಇದಿರಿಸುತ್ತ ಬಂದರು. ಗ್ರೀಕರು ಕೋಟೆಯ ಗೋಡೆಗಳ

ಬಳಿಗೆ ಬಂದು ಎಷ್ಟು ಪ್ರಯತ್ನಿಸಿದರೂ ಕೋಟೆಯನ್ನು ಪ್ರವೇಶಿಸಲಾಗದೆ, ಕೋಟೆಯ ಮೇಲಿನಿಂದ ಟ್ರೋಜನರು ಮೇಲಿನಿಂದ ಉರುಳಿಸುತ್ತಿದ್ದ ಕಲ್ಲು ಗುಂಡುಗಳಿಂದ ಹತರಾಗುತ್ತಿದ್ದರು ಕೋಟೆಯನ್ನು ತಮ್ಮ ವಶಪಡಿಸಿಕೊಳ್ಳಬೇಕಾದರೆ ಮತ್ತೇನನ್ನಾದರೂ ಮಾಡಬೇಕಾದುದುಳಿದಿದೆಯೆ ? ಎಂದು ಗ್ರೀಕರು ನೈಮಿತ್ತಿಕನಾದ ಕಾಲ್ಚಾಸನ್ನು ಕೇಳಲಾಗಿ, ಆತನು ಅದಕ್ಕೆ ಹಿಂದಿನ ದಿನ ಒಂದು ಗಿಡುಗವು ಪಾರಿವಾಳವೊಂದನ್ನು ಅಟ್ಟಿಕೊಂಡು ಹೋಯಿತೆಂತಲೂ, ಆದರೆ ಆ ಪಾರಿವಾಳವು ಒಂದು ಬಂಡೆಯೊಳಗಿದ್ದ ಪೊಟರೆಯೊಳಕ್ಕೆ ಸೇರಿಕೊಂಡುಬಿಟ್ಟಿತೆಂತಲೂ, ಆದುದರಿಂದ ಅದನ್ನು ಹಿಡಿಯಲು ಗಿಡುಗಕ್ಕೆ ಆಗದೆ ಅದು ಬಂಡೆಯ ಸುತ್ತಲೂ ಎಷ್ಟೋಬಾರಿ ಹಾರಾಡಿ ಕಡೆಗೆ ದೂರವಲ್ಲಿದ್ದ ಒಂದು ಮರದಲ್ಲಿ ಅವಿತುಕೊಂಡಿದ್ದು ಸ್ವಲ್ಪ ಹೊತ್ತಾದ ಬಳಿಕ ಹೊರಕ್ಕೆ ಬಂದ ಪಾರಿವಾಳವನ್ನು ಹಿಡಿದು ತಿಂದುಬಿಟ್ಟಿತೆಂತಲೂ ಗ್ರೀಕರ ಪ್ರಮುಖರಿಗೆ ತಿಳಿಸಿ, ಅವರೂ ಆ ಗಿಡುಗದ ಉಪಾಯವನ್ನೇ ಅನುಸರಿಸುವುದು ಒಳ್ಳೆಯದೆಂದು ಹೇಳಿದನು. ಬಳಿಕ ಒಡಿಸಿಯಸ್ಸನು ಇತರ ಪ್ರಮುಖರನ್ನು ಕುರಿತು ಕಾಲ್ಚಾಸಿನ ಸೂಚನೆಯು ಬಹಳ ಒಳ್ಳೆಯದೆಂದು ಶ್ಲಾಘಿಸಿ ದೊಡ್ಡದಾದ ಒಂದು ಮರದ ಕುದುರೆಯನ್ನು ಮಾಡಿಸಿ ಅದರೊಳಗೆ ಕೆಲವರು ಗ್ರೀಕ್ ವೀರರುಗಳು ಸೇರಿಕೊಂಡು ಇರಬೇಕೆಂದೂ ಅದನ್ನು ಟ್ರಾಯ್ ಪಟ್ಟಣದ ಬಾಗಿಲ ಬಳಿಯಲ್ಲಿಟ್ಟು ಒಬ್ಬ ಗ್ರೀಕನನ್ನು ಮಾತ್ರ ದೂರದಲ್ಲಿ ನಿಂತಿರುವಂತೆ ಏರ್ಪಡಿಸಿ, ಉಳಿದವರೆಲ್ಲರೂ ತಮ್ಮ ತಮ್ಮ ಹಡಗುಗಳಲ್ಲಿ ಕುಳಿತು ಗ್ರೀಸಿಗೆ ಪಯಣಹೊರಡುವಂತೆ ನಟಿಸಬೇಕೆಂದೂ, ಆದರೆ ಕೂಡಲೆ ಗ್ರೀಸಿಗೇ ಹೊರಟುಹೋಗದೆ ಟೆನೆಡಾಸ್ ದ್ವೀಪದಲ್ಲಿ ತಂಗಿರಬೇಕೆಂದೂ, ಅದರಿಂದ ಟ್ರೋಜನರು ಭ್ರಾಂತರಾಗಿ ಪಟ್ಟಣದ ಹೊರಗೆ ಬಿಟ್ಟಿದ್ದ ಮರದ ಕುದುರೆಯನ್ನು ತಮ್ಮ ನಗರಿಯೊಳಕ್ಕೆ ಎಳೆದುಕೊಂಡು ಹೋಗಿ ಅದನ್ನು ತಮ್ಮ ದೇವರಿಗೆ ಅರ್ಪಿಸುವರೆಂದೂ ತಿಳಿಸಿದನು ಅನಂತರ ಅವರ ವಲ್ಲೇ ಸ್ವಲ್ಪ ಚರ್ಚೆಯಾಗಿ ಕಡೆಗೆ ಕಾಲ್ಚಾಸ್, ಒಡಿಸಿಯಸ್.—ಇವರುಗಳು ಸೂಚಿಸಿದ್ದ ಉಪಾಯವನ್ನು ಅನುಸರಿಸುವುದೇ ಸರಿಯೆಂದು ನಿಷ್ಕರ್ಷೆಯಾಯಿತು.

೨೧೨. ಮೂರು ನಾಲ್ಕು ದಿವಸಗಳೊಳಗಾಗಿ ಗ್ರೀಕರಲ್ಲನೇಕರು ಐಡಾಪರ್ವತಕ್ಕೆ ಹೋಗಿ ತಮ್ಮ ಪಾಳೆಯಕ್ಕೆ ಅನೇಕ ದೊಡ್ಡ ದಿಮ್ಮಿಗಳನ್ನು ತಂದು ಹಾಕಿದರು. ಅಲ್ಲಿದ್ದ ಈಪಿಯಸ್ ಎಂಬ ಚತುರನಾದ ಬಡಗಿಯೊ

ಬ್ಬನು ಆ ದಿಮ್ಮಿಗಳನ್ನು ಹಲಗೆಗಳನ್ನಾಗಿ ಕೊಯ್ದು ಟ್ರಾಯ್‌ಪಟ್ಟಣದ ಬಾಗಿಲ ಒಳಗೆ ತರಿಸಿ ಹಾಕಿಸಿ ಒಂದೆರಡು ದಿನಗಳಲ್ಲಿಯೇ ಒಂದು ಕುದುರೆಯ ಆಕೃತಿಯನ್ನು ಸಿದ್ಧಪಡಿಸಿದನು. ಪುನಃ ಗ್ರೀಕರ ಒಂದು ಸಭೆಯು ನಡೆದು ಅದರಲ್ಲಿ, ಒಡಿಸಿಯಸ್ಸನು ಉಳಿದ ಗ್ರೀಕರನ್ನು ಕುರಿತು ಮರದ ಕುದುರೆಯೊಳಗೆ ಸೇರಿಕೊಂಡಿರಲು ಇಷ್ಟಪಡುವ ಶೂರರು ಮುಂದೆಬರಬಹುದೆಂದು ತಿಳಿಸಿದನು. ಮೊತ್ತಮೊದಲು ನೆಸ್ಟಾರನು ಮುಂದೆ ಬಂದನು. ಆದರೆ ಒಡಿಸಿಯಸ್ಸನು ಅಂತಹ ವೃದ್ಧನನ್ನು ತೊಂದರೆಪಡಿಸಬಾರದೆಂದು ತಿಳಿಸಿ ತಾನೇ ಮುಂದಕ್ಕೆ ಬಂದು ಆ ಸಾಹಸಕಾರ್ಯಕ್ಕೆ ಸಿದ್ಧನಾಗಿರುವುದಾಗಿ ತಿಳಿಸಿದನು. ನಿಯಾಪ್ಟಾಲಿಮಸ್, ಡೈಯೊಮಿಡೀಸ್ ಮುಂತಾದ ಇತರ ಗ್ರೀಕ್ ಪ್ರಮುಖರುಗಳೂ ನಾನುತಾನೆಂದು ಆ ಸಾಹಸಕಾರ್ಯಕ್ಕೆ ಸಿದ್ಧರಾಗಿ ನಿಂತರು. ಹಾಗೆಯೇ ಅಗಮೆಮ್ನಾನನೂ ಮುಂದಕ್ಕೆ ಬಂದಾಗ ಆತನು ಅದರಲ್ಲಿ ಪ್ರವರ್ತಿಸಕೂಡದೆಂದೂ, ಗ್ರೀಕರ ಹಡಗುಗಳನ್ನು ಟೆನೆಡಾಸ್ ದ್ವೀಪದ ಒಳಗೆ ಕರೆದುಕೊಂಡು ಹೋಗತಕ್ಕ ಕಾರ್ಯವನ್ನು ಆತನು ನೋಡಿಕೊಳ್ಳಬೇಕೆಂದೂ ಉಳಿದ ಗ್ರೀಕ್ ಪ್ರಮುಖರು ಒತ್ತಾಯಮಾಡಿದುದರಿಂದ ಅಗಮೆಮ್ನಾನನು ಮರದ ಕುದುರೆಯೊಳಗೆ ಸೇರಲು ಅವಕಾಶವಾಗಲಿಲ್ಲ.

೧೧೩. ಮರದ ಕುದುರೆಯನ್ನು ಸಿದ್ಧಪಡಿಸುವಷ್ಟು ಕಾಲವೂ ಮುತ್ತಿಗೆಯು ಎಂದಿನಂತೆಯೇ ನಡೆಯುತ್ತಿದ್ದಿತು. ಆದದರಿಂದ ಗ್ರೀಕರ ಹೆಚ್ಚುಗಟ್ಟಲೆಯ ಕಾರ್ಯಗಳನ್ನು ಟ್ರೋಜನರು ತಿಳಿದುಕೊಳ್ಳಲಾಗಲಿಲ್ಲ. ಕೋಟೆಯ ಒಳಿಯಲ್ಲಿ ಸಿದ್ಧವಾಗಿದ್ದ ಮರದ ದೊಡ್ಡ ಕುದುರೆಯೊಂದನ್ನು ಕಂಡರೂ, ಟ್ರೋಜನರಿಗೆ ತಮ್ಮ ಕೋಟೆಯ ಹೊರಕ್ಕೆ ಬರಲು ಧೈರ್ಯವಿರಲಿಲ್ಲವಾದುದರಿಂದ, ಅದನ್ನು ಜ್ಯೂಪಿಸನ ಪ್ರೀತ್ಯರ್ಥವಾಗಿ ಸುಟ್ಟುಬಿಡಬೇಕೆಂದು ಗ್ರೀಕರು ಸಿದ್ಧಪಡಿಸಿಕೊಂಡಿರಬಹುದೆಂದು ಅವರು ಭಾವಿಸಿಕೊಂಡರು. ಮೂರು ನಾಲ್ಕು ದಿನಗಳಾದರೂ ಆ ಮರದ ಕುದುರೆಯು ಇದ್ದಲ್ಲಿಯೇ ಇರುತ್ತಿದ್ದಿತು. ಒಂದಾನೊಂದು ದಿನ ಗಾಢಾಂಧಕಾರವಾಗಿದ್ದ ರಾತ್ರಿಯಲ್ಲಿ ಹಿಂದೆಯೇ ನಿಷ್ಕರ್ಷೆಯಾಗಿದ್ದ ವೀರರಿಗೆ ಅಗಮೆಮ್ನಾನೊಬ್ಬನ ಹೊರತಾಗಿ ಉಳಿದ ಪ್ರಮುಖರು ಆ ಮರದ ಕುದುರೆಯೊಳಕ್ಕೆ ಹೋಗಿ ಸೇರಿಕೊಂಡರು. ಅಷ್ಟು ಹೊತ್ತಿಗೆ ಗ್ರೀಕರ ಹಡಗುಗಳೆಲ್ಲವೂ ಪಯಣಕ್ಕೆ ಸಿದ್ಧವಾಗಿದ್ದುದರಿಂದ ಅಗಮೆ

ಮ್ನಾನನು ಸೈನಾನ್ ಎಂಬ ಗ್ರೀಕ ತರುಣನೊಬ್ಬನ ಹೊರತಾಗಿ ಉಳಿದ ಗ್ರೀಕರೊಡನೆ ಪಯಣಹೊರಟನು. ಬೆಳಗ್ಗೆ ಟ್ರೋಜನರು ಕೋಟೆಯ ಹೊರಗಾಗಲಿ, ತಮ್ಮ ಶತ್ರುಗಳು ಇಳಿದುಕೊಂಡಿದ್ದ ಸ್ಥಳದಲ್ಲಿಯಾಗಲಿ ಗ್ರೀಕರಲ್ಲಿ ಒಬ್ಬರನ್ನಾದರೂ ಕಾಣದಿದ್ದುದರಿಂದಲೂ, ತಮ್ಮ ಪಟ್ಟಣದ ಬಾಗಿಲ ಬಳಿಯಲ್ಲಿ ಮರದ ಕುದುರೆ ಹಾಗೆಯೇ ನಿಂತಿದ್ದುದನ್ನು ನೋಡಿ ಬಹಳ ಆಶ್ಚರ್ಯಪಟ್ಟುಕೊಂಡರು. ಇನ್ನೂ ಸ್ವಲ್ಪ ಹೊತ್ತಾದ ಬಳಿಕ ಅವರು ಕೋಟೆಯ ಬಾಗಿಲನ್ನು ಸ್ವಲ್ಪ ತೆರೆದು, ಗ್ರೀಕರು ಹೊರಗೆ ಎಲ್ಲಾದರೂ ಅವಿತುಕೊಂಡಿರಬಹುದೆಂದು ಹುಡುಕಿ ನೋಡಿದರು. ಎಷ್ಟು ನೋಡಿದರೂ ಗ್ರೀಕರ ಸುಳಿವೇ ಕಾಣದಿದ್ದುದರಿಂದ ತಮ್ಮ ಶತ್ರುಗಳು ಕಡೆಗೆ ನಿರಾಶರಾಗಿ ತೊಲಗಿಹೋದರೆಂದು ಟ್ರೋಜನರು ಸಂತೋಷಪಟ್ಟುಕೊಂಡರು.

೨೧೪. ಆದರೂ ಟ್ರೋಜನರ ಸಂಶಯವು ಸಂಪೂರ್ಣವಾಗಿ ಹೋಗದಿದ್ದುದರಿಂದ, ಅವರಲ್ಲಿ ಬಹಳ ಚತುರರಾಗಿದ್ದವರನ್ನು ತಮ್ಮ ಪಟ್ಟಣದ ಸುತ್ತಲೂ ಹೋಗಿ ಚೆನ್ನಾಗಿ ಹುಡುಕಿಕೊಂಡು ಬರುವಂತೆ ಪುನಃ ನಿಯಮಿಸಿದರು. ಅವರುಗಳು ಬಂದು ಗ್ರೀಕರು ಹೊರಟುಹೋಗುವಾಗ ಸುಟ್ಟುಹಾಕಿದ್ದ ಗುಡಿಸಿಲುಗಳ ಬೂದಿಯ ರಾಶಿಯನ್ನೂ, ಮುರಿದು ಎಸೆದಿದ್ದ ಅನೇಕ ಪದಾರ್ಥಗಳ ಕುಪ್ಪೆಗಳನ್ನೂ ನೋಡಿ ಹಿಂದಿರುಗುತ್ತಿದ್ದಾಗ, ಆ ಕುಪ್ಪೆಗಳ ನಡುವೆ ಸೈನಾನನು ಮಲಗಿದ್ದುದನ್ನು ಕಂಡು ಅವನನ್ನು ಹಿಡಿದುಕೊಂಡು ಹೆಡಮುರಿ ಕಟ್ಟಿ ಅತ್ತಿತ್ತ ಎಳೆಯುತ್ತಲೂ, ಅಡಿಗಡಿಗೆ ಅವನನ್ನು ಗುದ್ದುತ್ತಲೂ ತಿವಿಯುತ್ತಲೂ ಟ್ರಾಯ್ ಪಟ್ಟಣದೊಳಕ್ಕೆ ಎಳೆದುಕೊಂಡು ಹೋಗಿ ಅಲ್ಲಿ ಪ್ರಮುಖರ ಇದಿರಿನಲ್ಲಿ ನಿಲ್ಲಿಸಿದರು. ಆ ಪ್ರಮುಖರಲ್ಲಿ ಅನೇಕರು ಇವನೊಬ್ಬ ಗೂಢಚಾರನಾಗಿರಬಹುದೆಂದೂ ಅವನನ್ನು ಪಂಜುಗಳಿಂದ ಸ್ವಲ್ಪಸ್ವಲ್ಪವಾಗಿ ಸೀದು ಅವನ ಬಾಯಿಂದಲೇ ಗುಟ್ಟನ್ನು ಹೊರಡಿಸಬೇಕೆಂದೂ ಸೂಚಿಸಿದರು. ಆದರೆ ಎಂತಹ ಚಿತ್ರಹಿಂಸೆಯನ್ನಾದರೂ ಸಹಿಸಿಕೊಂಡು ತನ್ನ ದೇಶಕ್ಕೆ ಉಪಕಾರ ಮಾಡಬೇಕೆಂದು ಕಲ್ಲೆದೆಮಾಡಿಕೊಂಡಿದ್ದ ಸೈನಾನನು ಅವರ ಆರ್ಭಟಗಳನ್ನೂ ಬಗೆಬಗೆಯ ಹಿಂಸೆಗಳನ್ನೂ ಲಕ್ಷ್ಯಮಾಡದೆ ಮೇಲೆಮೇಲೆ ಮಾತ್ರ 'ಬಾಧೆಯನ್ನು ಸಹಿಸಿಕೊಳ್ಳಲಾರದವನಂತೆ ಅರಿಚಿಕೊಳ್ಳುತ್ತಾ „ಅಯ್ಯೋ ನನಗೆ ಎಂತಹ ದುರ್ಗತಿ ಬಂದಿತು! ಅತ್ತ ಕಡೆ, ಗ್ರೀಕರಿಗೆ ನನ್ನ ಮೇಲೆ ದಯೆಯಿಲ್ಲದೆ ನನ್ನನ್ನು ಇಲ್ಲಿಯೇ

ತಿ

ಬಿಟ್ಟು ಹೊರಟುಹೋದರು; ಇತ್ತಕಡೆ, ದಯಾಳುಗಳಾದ ನೀವಾದರೂ ನನ್ನನ್ನು ಕಾಪಾಡುವಿರೆಂದು ಯೋಚಿಸಿದ್ದರೆ, ನೀವೂ ಹೀಗೆ ನನಗೆ ಚಿತ್ರಹಿಂಸೆಯನ್ನು ಮಾಡುತ್ತಿರುವಿರಿ ! ಇಷ್ಟೆಲ್ಲ ಆಗುವುದಕ್ಕೆ ಮುಂಚೆ ನನಗೆ ಸಾವು ಉಂಟಾಗಿದ್ದರೆ ಚೆನ್ನಾಗಿದ್ದಿತಲ್ಲಾ ! ಏನುಮಾಡಲಿ ?'' ಎಂದು ಗೋಳಾಡಿದನು. ಸೈನಾನಿನ ಆತಾರ್ಗಲಾಪಗಳನ್ನು ಕೇಳಿ, ಪ್ರಯಾಮನು ಅವನ ವೃತ್ತಾಂತವನ್ನು ಮತ್ತಷ್ಟು ವಿವರವಾಗಿ ವಿಚಾರಿಸಲು, ಸೈನಾನನು ಪಾಲಮೆಡೀಸ್ ಎಂಬೊಬ್ಬ ಗ್ರೀಕ್ ಪ್ರಮುಖನ ಆಳಾಗಿದ್ದನೆಂದೂ ತನ್ನ ಯಜಮಾನನು ಒಂದು ದಿನ ನದಿಯಲ್ಲಿ ಮೀನುಗಳನ್ನು ಹಿಡಿಯುತ್ತಿದ್ದಾಗ, ಅವನನ್ನು ಒಡಿಸಿಯಸ್ಸನು ಮುಳುಗಿಸಿ ಕೊಂದುಬಿಟ್ಟಿದ್ದನೆಂದೂ, ಅದಕ್ಕಾಗಿ ಒಡಿಸಿಯಸ್ಸನ್ನು ನಿರ್ಭಯವಾಗಿ ದೂಷಿಸಿದ ಕಾರಣ, ಅವನು ಉಳಿದ ಗ್ರೀಕ್ ಪ್ರಮುಖರಿಗೆಲ್ಲಾ ದುರ್ಬೋಧನೆಯನ್ನು ಮಾಡಿ ತನ್ನನ್ನು ಹಿಂದೆಯೇ ಬಿಟ್ಟುಬಿಟ್ಟು ಉಳಿದವರೆಲ್ಲರನ್ನೂ ಕರೆದುಕೊಂಡು ಹೊರಟುಹೋಗಿದ್ದನೆಂದೂ ತಿಳಿಸಿದನು. ಆ ಮರದ ಕುದುರೆಯನ್ನು ಗ್ರೀಕರು ಏತಕ್ಕೆ ಮಾಡಿಸಿದ್ದರೆಂದು ಪ್ರಯಾಮನು ಕೇಳಲಾಗಿ, ಅದನ್ನು ಅಥೆನಿಯ ಗುಡಿಯಿಂದ ಶಿಲೆಯನ್ನು ಅಪಹರಿಸಿದ್ದ ದೋಷಪರಿಹಾರಾರ್ಥವಾಗಿ ಆ ದೇವತೆಗೆ ಅರ್ಪಿಸುವುದಕ್ಕೋಸುಗ ಮಾಡಿಸಿದ್ದರೆಂದೂ, ಆದರೆ ಅದನ್ನು ಹಾಗೆ ಅರ್ಪಿಸುವುದಕ್ಕೆ ಮುಂಚೆ ಟ್ರಾಯ್ ಪಟ್ಟಣದಿಂದ ಅಪಹರಿಸಿಕೊಂಡುಬಂದಿದ್ದ ಸೌಭಾಗ್ಯಶಿಲೆಯನ್ನೂ ಸಮರ್ಪಿಸಬೇಕೆಂದು ಯೋಚಿಸಿ ಅದನ್ನು ಗ್ರೀಸಿನಿಂದ ಹಿಂದಕ್ಕೆ ತರುವುದಕ್ಕಾಗಿಯೂ ಅನೇಕ ವರ್ಷಗಳಿಂದ ಬೇಸತ್ತುಹೋಗಿದ್ದ ಒಂದು ಗುಂಪಿನ ಸೈನ್ಯವನ್ನು ಸ್ವದೇಶದಲ್ಲಿಯೇ ಬಿಟ್ಟು ಮತ್ತೊಂದು ಹೊಸ ಸೈನ್ಯವನ್ನು ತೆಗೆದುಕೊಂಡು ಬರುವುದಕ್ಕಾಗಿಯೂ, ಗ್ರೀಕರ ಪ್ರಮುಖರು ಹೊರಟುಹೋಗಿದ್ದರೆಂದೂ ಸೈನಾನನು ಉತ್ತರಕೊಟ್ಟನು.

೨೧೫. ಸೈನಾನಿನ ಮಾತುಗಳನ್ನು ಕಿವಿಗೊಟ್ಟು ಕೇಳುತ್ತಲೂ, ಅವನ ಮುಖವಿಕಾರಗಳನ್ನು ಲಕ್ಷ್ಯವಿಟ್ಟು ನೋಡುತ್ತಲೂ ಇದ್ದ ಪ್ರಯಾಮ್ ಮೊದಲಾದ ವೃದ್ಧರು, ಆ ಮಾತುಗಳು ನಿಜವೆಂದೇ ನಂಬಿದರು. ಡೆಯಿಫೋಬಸ್ಸಿಗೆ ಮಾತ್ರ, ಶತ್ರುಗಳು ದುರುದ್ದೇಶದಿಂದಲೇ ಕುದುರೆಯನ್ನು ಬಿಟ್ಟು ಹೋಗಿರಬಹುದೆಂದು ಸಂಶಯವಿದ್ದಿತು. ಆದರೆ ಹಿರಿಯರ ಮುಂದೆ ಕಿರಿಯರು ಪ್ರತಿಭಟಿಸುವುದು ಸರಿಯಲ್ಲವೆಂದು ಅವನು ಸುಮ್ಮನಿದ್ದನು.

೨೧೬. ಟ್ರಾಯ್ ಪಟ್ಟಣದಲ್ಲಿದ್ದ ದೇವಸ್ಥಾನಗಳಲ್ಲಿ ಅಪೋಲೋ ದೇವನ ಗುಡಿಯು ಪ್ರಸಿದ್ಧವಾಗಿದ್ದಿತು. ಅದರಲ್ಲಿ ಅರ್ಚಕನಾಗಿದ್ದ ಲ್ಯಾವೊ ಕೂನ್ ಎಂಬವನು ತನ್ನ ಇಬ್ಬರು ಮಕ್ಕಳನ್ನು ತನ್ನ ಬಳಿಯಲ್ಲಿ ನಿಲ್ಲಿಸಿಕೊಂಡು ಪೊಸೈಡನ್ನಿಗೆ ಒಂದು ಗೂಳಿಯನ್ನು ಯಜ್ಞಮಾಡುವುದರಲ್ಲಿದ್ದನು. ಅವನು ಸೈನಾನನ್ನು ಕಂಡ ಕೂಡಲೆ ವೃದ್ಧಾಮಾತ್ಯರುಗಳು ನಿಂತಿದ್ದ ಬಳಿಗೆ ಬಂದು ಅಲ್ಲಿ ನಡೆದ ಸಕಲವೃತ್ತಾಂತವನ್ನೂ ಅರಿತು, ಶತ್ರುಗಳ ಕಪಟಕ್ಕೆ ತುತ್ತಾಗಬಾರದೆಂದು ಬುದ್ಧಿಹೇಳಿದನು. ಆದರೆ ಟ್ರೋಜನರ ದೌರ್ಭಾಗ್ಯವಶದಿಂದ ಲ್ಯಾವೊಕೂನಿನ ಬುದ್ಧಿವಾದವು ಯಾರಿಗೂ ರುಚಿಸಲಿಲ್ಲ. ಅದನ್ನು ಕಂಡು ಡೆಯಿಫೋಬಸ್ಸನೂ ಆ ಸಂದರ್ಭದಲ್ಲಿ ಮೌನವಾಗಿರುವುದೇ ಯುಕ್ತವೆಂದು ಸುಮ್ಮನಿದ್ದುಬಿಟ್ಟನು. ಸಾಲದುದಕ್ಕೆ, ಈ ಸಮಯದಲ್ಲಿ ಸಾಗರಮಧ್ಯದಿಂದ ಎರಡು ಹೆಬ್ಬಾವುಗಳು ಬಂದು ಲ್ಯಾವೊಕೂನಿಗೂ ಅವನ ಇಬ್ಬರು ಮಕ್ಕಳಿಗೂ ಸುತ್ತಿಕೊಂಡು ಅವರನ್ನು ಮಾಂಸದ ಮುದ್ದೆಗಳನ್ನಾಗಿಮಾಡಿ ಅಪೋಲೋದೇವನ ಗುಡಿಗೆ ಹೋಗಿ ಅಲ್ಲಿ ಅದೃಶ್ಯವಾದುವು. ಈ ಶಕುನವನ್ನು ಕಂಡು ಟ್ರೋಜನರು ಲ್ಯಾವೊಕೂನಿನ ಮಾತುಗಳು ಸುಳ್ಳೆಂದೂ, ಆ ಕುದುರೆಯನ್ನು ತಾವೇ ತಮ್ಮ ಪಟ್ಟಣದೊಳಕ್ಕೆ ತೆಗೆದುಕೊಂಡು ಬಂದು ಅಥೇನಿಗೆ ಸಮರ್ಪಿಸುವುದೇ ಯುಕ್ತವೆಂದೂ ನಿರ್ಧರಿಸಿ ಕೊಂಡರು.

೨೧೭. ಟ್ರೋಜನರು ತಮ್ಮ ನಿರ್ಣಯಕ್ಕೆ ಅನುಸಾರವಾಗಿ ಮಾರನೆಯ ದಿನ ಬೆಳಗ್ಗೆ ಪಟ್ಟಣದ ಹೊರಕ್ಕೆ ಬಂದು ಅತ್ಯಂತಪ್ರಯಾಸದಿಂದ ಆ ಅದ್ಭುತಾ ಶ್ವವನ್ನು ಪಟ್ಟಣದೊಳಕ್ಕೆ ತಂದರು. ಅಷ್ಟು ಹೊತ್ತಿಗೆ ಸೂರ್ಯಾಸ್ತಮಯ ವಾಗಿದ್ದಿತು. ಅಷ್ಟು ಭಾರವಾಗಿಯೂ ದೊಡ್ಡದಾಗಿಯೂ ಇದ್ದ ಕುದುರೆ ಯನ್ನು ತಮ್ಮ ಪಟ್ಟಣದೊಳಕ್ಕೆ ಸಾಗಿಸಿಕೊಂಡು ಬಾದಿದ್ದುದರಿಂದ ಅಲ್ಲಿಯ ನಿವಾಸಿಗಳೆಲ್ಲರಿಗೂ ಬಹಳ ಸಂತೋಷವಾಗಿದ್ದಿತು; ಶತ್ರುಗಳ ಕಾಟವು ಕೆಲವು ದಿನಗಳ ಮಟ್ಟಿಗಾದರೂ ತಪ್ಪಿದ್ದಿತಾದುದರಿಂದ ಟ್ರೋಜನರಿಗೆ ಅತ್ಯಾನಂದ ಉಂಟಾಗಿ, ಆ ದಿನ ರಾತ್ರಿಯೇ ಬಹಳ ಹೊತ್ತಿನವರೆಗೂ ಬಗೆಬಗೆಯ ಉತ್ಸವ ಗಳನ್ನು ನಡೆಸಿ ಮೈಮರೆತಿದ್ದರು. ಆದರೆ ಟ್ರೋಜನರಲ್ಲಿ ಡೆಯಿಫೋಬಸ್ಸನು ಮಾತ್ರ ಇತರರಂತೆ ಉತ್ಸವಮಗ್ನನಾಗದೆ, ತನ್ನೊಡನೆಯೇ ಸಂಸಾರಮಾಡಿ ಕೊಂಡಿದ್ದ ಹೆಲೆನಳನ್ನು ಆ ಮರದ ಕುದುರೆಯ ಬಳಿಗೆ ಕರೆದುಕೊಂಡುಬಂದನು.

ಒಡಿಸಿಯಸ್ಸಿನ ಕೋರಿಕೆಯನ್ನು ನೆರವೇರಿಸುವುದಾಗಿ ಸಂತೋಷದಿಂದ ಪುನಃ ಮಾತುಕೊಟ್ಟನು. ಇಷ್ಟರಲ್ಲಿ ಮೆನೆಲಾಸನು ಹೆಲೆನಳನ್ನು ಕಂಡು, ಕೂಡಲೆ ಆಕೆಯನ್ನು ಕತ್ತಿಯಿಂದ ಕತ್ತರಿಸಿಹಾಕಬೇಕೆಂದು ಯತ್ನಿಸುತ್ತಿದ್ದಾಗ, ಒಡಿಸಿಯಸ್ಸನು ಅವನನ್ನು ತಡೆದು "ಮೆನೆಲಾಸ್, ನೀನು ಈಕೆಯ ಪ್ರಾಣದಾನವನ್ನು ಮಾಡಬೇಕೆಂಬುದು ನನ್ನ ಪ್ರಾರ್ಥನೆ. ವಾಗ್ದಾನಭಂಗವು ಬಹಳ ಹಾನಿಕರವಾದುದು. ಆದುದರಿಂದ ನಿನ್ನ ಹಿಂದಣ ವಾಗ್ದಾನವನ್ನು ಸ್ಮರಿಸಿಕೊಂಡು, ನನ್ನ ಈ ಪ್ರಾರ್ಥನೆಯನ್ನು ನಡೆಯಿಸಿಕೊಡು" ಎಂದು ಕೇಳಿಕೊಂಡನು. ಮೆನೆಲಾಸನು ತನ್ನ ಮಾತಿಗೆ ಕಟ್ಟುಬಿದ್ದು ಹೆಲೆನಳ ಪ್ರಾಣವನ್ನು ಉಳಿಸಿದನು. ಅನಂತರ ತಾನು ಹಿಂದೆ ಟ್ರಾಯ್ ಪಟ್ಟಣಕ್ಕೆ ಉಲ್ಕಶಿಲೆಗಾಗಿ ಬಂದಿದ್ದಾಗ ಹೆಲೆನಳಿಂದ ತನಗೆ ಆಗಿದ್ದ ಉಪಕಾರವನ್ನು ಒಡಿಸಿಯಸ್ಸನು ಮೆನೆಲಾಸಿಗೆ ವಿವರಿಸಿ ತನ್ನ ಪ್ರಾರ್ಥನೆಗೆ ಆಕೆಯ ಉಪಕಾರವೇ ಕಾರಣವೆಂದು ತಿಳಿಸಿದನು

೨೨೦. ಇಷ್ಟರಲ್ಲಿ ಪಟ್ಟಣದಲ್ಲೆಲ್ಲಾ ಎಲ್ಲೆಲ್ಲಿಯೂ ಅನಿರ್ವಚನೀಯವಾದ ಹಾವಳಿಯಾಗುತ್ತಿದ್ದಿತು. ಎತ್ತಕಡೆ ನೋಡಿದರೂ ರಕ್ತದ ಕೋಡಿಯು ಹರಿಯುತ್ತಿದ್ದಿತು; ನೂರಾರು ಸುಂದರಮಂದಿರಗಳೂ ದೇವತಾಯತನಗಳೂ ಕೆಲವು ಗಂಟೆಗಳ ಹೊತ್ತಿನಲ್ಲಿಯೇ ಬೆಂಕಿಯ ಪಾಲಾದುವು. ಎಂದೂ ಕಷ್ಟಕ್ಕೆ ಈಡಾಗದಿದ್ದ ಶ್ರೀಮಂತಸ್ತ್ರೀಯರೂ ಅವರ ಮಕ್ಕಳೂ ಗ್ರೀಕ್‌ಯೋಧರಿಗೆ ಸೆರೆಸಿಕ್ಕಿದರು; ಎಷ್ಟೋ ಮಕ್ಕಳುಗಳು ಗ್ರೀಕ್‌ಯೋಧರ ಈಟಿಕತ್ತಿಗಳಿಗೆ ಬಲಿಯಾದರು; ಟ್ರಾಯ್ ಪಟ್ಟಣದ ಐಶ್ವರ್ಯವೆಲ್ಲವೂ ಸೂರೆಹೋಯಿತು. ಆ ಗದ್ದಲದಲ್ಲಿ ಈನಿಯಾಸನೇ ಮೊದಲಾದ ಕೆಲವರು ಮಾತ್ರ ತಮ್ಮ ಬಂಧುಗಳೊಡನೆ ತಪ್ಪಿಸಿಕೊಂಡು ಪಟ್ಟಣದ ಹೊರಕ್ಕೆ ಹೊರಟುಹೋದರು. ಉಳಿದವರು ಶತ್ರುಗಳ ಕೊಲೆಗೀಡಾದರು.

೨೨೧. ಹೀಗೆ ವಿಜಯಿಗಳಾಗಿದ್ದ ಗ್ರೀಕರು, ಕಡೆಯಲ್ಲಿ ತಮಗೆ ಜಯವನ್ನುಂಟುಮಾಡಿದ್ದ ಜ್ಯೂಸಿಗೆ ಸ್ವಲ್ಪ ಪ್ರಾರ್ಥನೆಯನ್ನು ಸಲ್ಲಿಸಿ, ಒಂದೆರಡು ದಿನಗಳವರೆಗೆ ತಮ್ಮ ಪಾಳೆಯದಲ್ಲಿ ವಿಶ್ರಮಿಸಿಕೊಳ್ಳುತ್ತಿದ್ದು, ಬಳಿಕ ತಮ್ಮತಮ್ಮ ಊರುಗಳಿಗೆ ಪ್ರಯಾಣ ಹೊರಟರು. ಅವರಲ್ಲಿ ಪ್ರತಿಯೊಬ್ಬನಿಗೂ ಬೇಕಾದಷ್ಟು ಧನಧಾನ್ಯಗಳೂ ದಾಸಿಯರೂ ವಶವಾಗಿದ್ದರು. ಆದುದರಿಂದ ಗ್ರೀಕರಲ್ಲಿ ಪ್ರತಿಯೊಬ್ಬನಿಗೂ ತನ್ನ ಊರನ್ನು ಎಷ್ಟು ಹೊತ್ತಿಗೆ ಸೇರಿಯೇನೆಂದು ಬಹಳ ಕುತೂಹಲವುಂಟಾಗಿದ್ದಿತು.

## XXXII

೨೨೨. ಗ್ರೀಕರು ತಮ್ಮ ಪ್ರಯಾಣದ ಸಂಭ್ರಮದಲ್ಲಿ ದೇವತೆಗಳಿಗೆ ಯಥಾವಿಧಿಯಾಗಿ ಯಜ್ಞಗಳನ್ನು ನಡೆಸುವುದಕ್ಕೆ ಪ್ರತಿಯಾಗಿ, ಬೇಗಬೇಗನೆ ಕಾರ್ಯಗಳನ್ನು ಆಗುಮಾಡಿಸಿ ಹೊರಟುಬಿಟ್ಟಿದ್ದರು. ಇದರಿಂದ ಪೋಸೈಡನ್ ಮುಂತಾದ ದೇವತೆಗಳಿಗೆ ಕೋಪವುಂಟಾಗಿದ್ದಿತು; ಇದೂ ಅಲ್ಲದೆ, ಟ್ರಾಯ್ ಪಟ್ಟಣದಲ್ಲಿದ್ದ ದೇವತಾಗೃಹಗಳನ್ನೂ ಲಕ್ಷ್ಯಮಾಡದೆ, ಅವುಗಳಿಗೆ ನುಗ್ಗಿ ಬಹಳ ಅಪವಿತ್ರಪಡಿಸಿ ಸುಟ್ಟುಹಾಕಿದ್ದರು. ಹಿಂದೆ ಗ್ರೀಕರು ತಮ್ಮ ಪಾಳೆಯದ ಸುತ್ತಲೂ ಕಂದಕವನ್ನು ಅಗೆದು ಕೋಟೆಯ ಗೋಡೆಯನ್ನು ಹಾಕಿಕೊಂಡಿದ್ದಾಗಲೂ, ಅವರು ತನಗೆ ಸರಿಯಾಗಿ ಪ್ರಾರ್ಥನಾದಿಗಳನ್ನು ಅರ್ಪಿಸಿರಲಿಲ್ಲವೆಂದು ಪೋಸೈಡನ್ನಿಗೆ ಮೊದಲೇ ಖೇದವುಂಟಾಗಿದ್ದಿತು. ಇಷ್ಟೇ ಅಲ್ಲದೆ, ಹಿಂದೆ ಲ್ಯಾಮೋಮೀಡನ್ನನು ಆಸೆ ಹುಟ್ಟಿಸಿ ತನ್ನಿಂದಲೂ ಅಪೋಲೋವಿನಿಂದಲೂ ಕೋಟೆಯ ಗೋಡೆಗಳನ್ನು ಹಾಕಿಸಿ ಕಡೆಗೆ ಆಶಾಭಂಗಮಾಡಿದ್ದುದಕ್ಕಾಗಿ ಟ್ರಾಯ್ ಪಟ್ಟಣದ ಕೋಟೆಯನ್ನೂ ಧ್ವಂಸಮಾಡಬೇಕೆಂದು ಪೋಸೈಡನ್ನಿಗೆ ಎಷ್ಟೋ ಕಾಲದಿಂದ ಮನಸ್ಸಿದ್ದಿತು. ಆದರೆ ಗ್ರೀಕರ ವಿಷಯದಲ್ಲಿ ಬಹಳ ಕರುಣಾಮಯಿಯಾಗಿದ್ದ ಹೀರಾದೇವಿಯು ಮುತ್ತಿಗೆಯ ಕಾಲದಲ್ಲಿ ತನ್ನ ಆಶ್ರಿತರಿಗೆ ಹಿಂಸೆಯನ್ನು ಕೊಡಕೂಡದೆಂದು ಪೋಸೈಡನ್ನನ್ನು ತಡೆದಿದ್ದುದರಿಂದ, ಆತನು ಸುಮ್ಮನಿದ್ದನು. ಈಗ ಪೋಸೈಡನ್ನಿಗೆ ಪುನಃ ಕೋಪೋದ್ರೇಕವುಂಟಾಗಿ ಸಮುದ್ರವನ್ನು ಉಲ್ಲೋಲಕಲ್ಲೋಲಮಾಡಿ ಮೊದಲು ಗ್ರೀಕರುಹಾಕಿಕೊಂಡಿದ್ದ ಗೋಡೆಗಳನ್ನು ನಿರ್ಮೂಲಮಾಡಿಬಿಟ್ಟು, ಬಳಿಕ ಟ್ರಾಯ್ ಪಟ್ಟಣವನ್ನು ಕೊಚ್ಚಿಹಾಕಿ ಗ್ರೀಕರ ಪಾಳೆಯವಿದ್ದ ಸ್ಥಳದಲ್ಲಿಯೂ ಟ್ರಾಯ್ ಪಟ್ಟಣವಿದ್ದ ಸ್ಥಳದಲ್ಲಿಯೂ ಅದ್ಭುತವಾದ ಮರಳಿನಗುಡ್ಡೆಯಾಗುವಂತೆ ಮಾಡಿಬಿಟ್ಟನು. ಹೀಗೆಯೇ ಎಷ್ಟೋ ವರುಷಗಳ ವರೆಗೆ ಮರಳು ಬಳೆಯುತ್ತ ಹೋಯಿತು. ಕೆಲವು ಶತಮಾನಗಳಾದಮೇಲೆ ಬೇರೆ ಜನರು ಬಂದು ಪುನಃ ಅಲ್ಲಿ ಮನೆ ಮಠಗಳನ್ನು ಕಟ್ಟಿಕೊಂಡು ಮತ್ತೊಂದು ಪಟ್ಟಣವನ್ನು ಸ್ಥಾಪಿಸಿಕೊಂಡರು. ಟ್ರಾಯ್ ಪಟ್ಟಣವು ನಿರ್ನಾಮವಾದಮೇಲೂ ಪೋಸೈಡನ್ನಿಗೆ ಆ ಸ್ಥಳದ ಮೇಲಣ ದ್ವೇಷವು ಶಮನವಾಗದೆ, ಮತ್ತೆ ಮತ್ತೆ ಅಂತಹ ಪ್ರಳಯಗಳನ್ನು ಮಾಡಿ ಕಡೆಗೆ ಶಾಂತನಾದನು. ಈಗ ಕೆಲವು ವರುಷಗಳಿಂದ ಪ್ರಾಚೀನವಸ್ತ್ವನ್ವೇಷಕರು ಟ್ರಾಯ್ ಪಟ್ಟಣವಿದ್ದ

ಸ್ಥಳದಲ್ಲಿ ಸಾವಿರಾರು ಅಡಿಗಳ ಆಳದ ವರೆಗೆ ಭೂಮಿಯನ್ನು ಅಗೆಸಿ, ಏಳು ಬೇರೆ ಬೇರೆ ಪಟ್ಟಣಗಳ ಅವಶಿಷ್ಟಗಳನ್ನು ಕಂಡು ಹಿಡಿದಿರುವರು. ಈ ಪಟ್ಟಣಗಳಲ್ಲಿ ಯಾವುದು ಈ ಟ್ರೋಜನ್ ದಂಡಯಾತ್ರೆಗೆ ಸಂಬಂಧಪಟ್ಟುದೆಂಬುದು ಮಾತ್ರ ಇನ್ನೂ ನಿರ್ವಿವಾದವಾಗಿ ವ್ಯವಸ್ಥೆಯಾಗಿಲ್ಲ

೨೨೩. ಅತ್ತಕಡೆ, ಪೊಸೈಡನ್ನಿನ ಕೋಪದಿಂದ ಉಂಟಾದ ಉಲ್ಲೋಲಕಲ್ಲೋಲದಿಂದ ಗ್ರೀಕರ ಪಾಳೆಯದ ಗೋಡೆಯೂ ಟ್ರಾಯ್ ಪಟ್ಟಣವೂ ನಾಶವಾಗುತ್ತಿದ್ದಾಗ, ಇತ್ತಕಡೆ, ಗ್ರೀಕರ ಹಡಗುಗಳೂ ದಿಕ್ಕುದಿಕ್ಕಿಗೆ ಚೆದರಿ ಹೋದುವು. ಈ ಹಡಗುಗಳಲ್ಲಿ ನೆಸ್ಟಾರನ ಯಾನಪಾತ್ರವು ಮಾತ್ರ ಅಷ್ಟ ಕಷ್ಟಗಳಿಗೆ ಸಿಕ್ಕಲಿಲ್ಲವಾದುದರಿಂದ, ಟ್ರೋಜನ್ ದಂಡಯಾತ್ರೆಗೆ ಹೋಗಿದ್ದ ಪ್ರಮುಖರಲ್ಲಿ ನೆಸ್ಟಾರನದೇ ಮೊಟ್ಟಮೊದಲು ಗ್ರೀಸಿಗೆ ಬಂದು ಮುಟ್ಟಿತು. ಅದನ್ನು ಕಂಡು ಅನೇಕರು ವಿವೇಕಶಾಲಿಯಾದವನಿಗೆ ದೈವ ಸಹಾಯವು ಸಿದ್ಧವಾಗಿಯೇ ಇರುವುದೆಂದು ಭಾವಿಸಿಕೊಂಡರು. ತನ್ನ ಊರಿಗೆ ಬಂದ ಬಳಿಕ ಅನೇಕ ವರುಷಗಳ ಕಾಲ ನೆಸ್ಟಾರನು ಸುಖದಿಂದಿದ್ದನು. “ನೆಸ್ಟಾರನಂತೆ ದೀರ್ಘಾಯುವೂ ವಿವೇಕಿಯೂ ಆಗು” ಎಂದು ಹರಸುವುದು ಗ್ರೀಕರಲ್ಲಿಯೂ ರೋಮನರಲ್ಲಿಯೂ ಅನೇಕಶತಮಾನಗಳ ವರೆಗೆ ರೂಢಿಯಲ್ಲಿದ್ದಿತು.

೨೨೪. ಒಡಿಸಿಯಸ್ಸಿನ ಹಡಗು ಅನೇಕ ಕಷ್ಟಗಳಿಗೆ ಗುರಿಯಾಯಿತು. ಅವನ ಪ್ರಯಾಣವನ್ನು ಕುರಿತು ಟ್ರೋಜನ್ ದಂಡಯಾತ್ರೆಯ ಮೂಲಗ್ರಂಥಕರ್ತನಾದ ಹೋಮರನೇ ಗ್ರೀಕ್‌ಭಾಷೆಯಲ್ಲಿ “ಒಡಿಸಿ” * ಎಂಬ ಮತ್ತೊಂದು ದೊಡ್ಡಗ್ರಂಥವನ್ನೂ ರಚಿಸಿರುವನು. ಒಡಿಸಿಯಸ್ಸನು ನಾನಾ ಸ್ಥಳಗಳಲ್ಲಿ ಹತ್ತು ವರುಷಗಳ ವರೆಗೆ ಅಲೆದಾಡಿ ಅನೇಕ ಕಷ್ಟಗಳಿಗೆ ಸಿಕ್ಕಿದನು. ಟ್ರಾಯ್ ಪಟ್ಟಣದ ಸಮೀಪದಿಂದ ಪ್ರಯಾಣಕ್ಕೆ ಮೊದಲು ಮಾಡಿದಾಗ, ಒಡಿಸಿಯಸ್ಸನು ತನ್ನ ಪಾಲಿಗೆ ಬಂದಿದ್ದ ಹೆಕ್ಯೂಬಳನ್ನೂ ಅವಳ ಮಗಳಾದ ಪಾಲಿಕ್ಸಿನಳನ್ನೂ ಕರೆದುಕೊಂಡು ಹೊರಟಿದ್ದನು. ಗ್ರೀಕರ ಪಕ್ಷವನ್ನು ತ್ಯಜಿಸಿ ಬಿಟ್ಟರೆ, ಸುಂದರಿಯಾದ ಪಾಲಿಕ್ಸಿನಳನ್ನು ಏಕಿಲೀಸಿಗೆ ಕೊಟ್ಟು ಮದುವೆ

* ಒಡಿಸಿಯಸ್ಸಿನ ದೇಶಪರ್ಯಟನ ವಿಷಯವನ್ನು ಕುರಿತು ಮ|| ರಾ|| ಎಂ. ಆರ್. ಅಣ್ಣಾಜಿರಾಯರು ಚರಿತಾಮೃತವೆಂಬ ಹೆಸರಿನಿಂದ ಕನ್ನಡದಲ್ಲಿ ಒಂದು ಸಣ್ಣ ಗ್ರಂಥವನ್ನು ರಚಿಸಿರುವರು.

ಮಾಡುವುದಾಗಿ ಭೇದೋಪಾಯವನ್ನು ಮಾಡಲು ಪ್ರಯಾಮನು ಯತ್ನಿಸಿದ್ದನು. ಇದನ್ನು ಗ್ರೀಕರು ತಿಳಿದಿದ್ದುದರಿಂದ ಅವರು ಒಡಿಸಿಯಸ್ಸಿನ ಅನುಮತಿಯನ್ನು ಪಡೆದು, ಪಾಲಿಕ್ಸಿನಳನ್ನು ಏಕಿಲೀಸಿನ ತೃಪ್ತ್ಯರ್ಥವಾಗಿ ಆತನ ಸಮಾಧಿಯ ಬಳಿಯಲ್ಲಿ ಯಜ್ಞಮಾಡಿಬಿಟ್ಟರು. ಬಳಿಕ ಒಡಿಸಿಯಸ್ಸಿನ ಹಡಗು ಥ್ರೇಸಿಗೆ ಬಂದಾಗ ಹೆಕ್ಯೂಬಳು ತನ್ನ ಜೊತೆಯ ಕೆಲವರು ದಾಸಿಯರೊಡನೆ ತಪ್ಪಿಸಿಕೊಂಡು ಹೋಗಲು ಯತ್ನಿಸಿದಳು. ಆದರೆ ಅವಳನ್ನು ಗ್ರೀಕರು ಅಟ್ಟಿಕೊಂಡು ಹೋಗಿ ಹಿಡಿಯುವಷ್ಟರಲ್ಲಿ ದೇವತೆಗಳಿಗೆ ಕರುಣೆಹುಟ್ಟಿ ಅವರು ಅವಳನ್ನು ಒಂದು ಹೆಣ್ಣುನಾಯನ್ನಾಗಿ ಮಾರ್ಪಡಿಸಿಬಿಟ್ಟರು. ಗ್ರೀಕರು ಆ ಹೆಣ್ಣುನಾಯನ್ನೇ ವಶಪಡಿಸಿಕೊಳ್ಳಲು ಯತ್ನಿಸಿದಾಗ, ಅದು ಸಮುದ್ರದೊಳಕ್ಕೆ ಹಾರಿ ಅದೃಶ್ಯವಾಯಿತು. ಒಡಿಸಿಯಸ್ಸನು ಕಟ್ಟಕಡೆಗೆ ತನ್ನ ಸ್ವದೇಶವಾದ ಇಥಾಕಾ ದ್ವೀಪಕ್ಕೆ ಬಂದು ಸೇರಿದಾಗ, ಅವನ ಅರಮನೆಯಲ್ಲಿ ನಾನಾಪ್ರಾಂತಗಳ ದುಷ್ಪ್ರಭುಗಳು ತುಂಬಿಕೊಂಡು ಹಾವಳಿಮಾಡುತ್ತಿದ್ದ ವಿಷಯವು ತಿಳಿದು ಬಂದಿತು. ಇವರ ಹಾವಳಿಗೆ ಪ್ರತೀಕಾರವನ್ನು ಮಾಡಲು ವೃದ್ಧನಾಗಿದ್ದ ಲಿಯಾರ್ಟಿಸ್ಸಿಗಾಗಲಿ, ಇನ್ನೂ ಲೋಕಾನುಭವವು ಸಾಲದ ಟೆಲಿಮಾಕಸ್ಸಿಗಾಗಲಿ, ಅಬಲೆಯಾದ ಪೆನಿಲೊಪಿಗಾಗಲಿ, ಸಾಮರ್ಥ್ಯವಿರಲಿಲ್ಲ. ಆದರೂ ಪೆನಿಲೊಪಿಯು ಒಂದು ಯುಕ್ತಿಯಿಂದ ಆ ದುಷ್ಟರ ಕೈಗೆ ಸಿಕ್ಕದೆ ತನ್ನ ಪಾತಿವ್ರತ್ಯವನ್ನು ಉಳಿಸಿಕೊಂಡಿದ್ದಳು. ಅಷ್ಟೊಂದುಮಂದಿ ದುರಾತ್ಮರ ಮಧ್ಯದಲ್ಲಿದ್ದರೂ ಹೆದರದೆ, ಒಡಿಸಿಯಸ್ಸನು ಒಂದು ಒಳಸಂಚನ್ನು ನಡೆಸಿ ಅವರನ್ನು ನಿರ್ಮೂಲಮಾಡಿದ ಬಳಿಕ, ತನ್ನ ಪತ್ನೀಪುತ್ರರೊಡನೆ ಬಹುಕಾಲ ಸುಖದಿಂದಿದ್ದನು. ಅವನ ವೃದ್ಧಪಿತೃವಾದ ಲಿಯಾರ್ಟಿಸ್ಸನು ತನ್ನ ಪುತ್ರನು ಹಿಂದಿರುಗಿಬಂದುದಕ್ಕಾಗಿಯೂ, ತನ್ನ ಮನೆತನಕ್ಕೆ ಉಂಟಾಗಿದ್ದ ದುಷ್ಟರ ಹಾವಳಿಯು ಪರಿಹಾರವಾದುದಕ್ಕಾಗಿಯೂ ಬಹಳ ಹರ್ಷಿತನಾಗಿ ಕೆಲವು ವರ್ಷಗಳಕಾಲ ತನ್ನ ಮಗನಿಂದಲೂ, ಮೊಮ್ಮಗನಿಂದಲೂ, ಸೊಸೆಯಿಂದಲೂ ಅನೇಕವಾದ ಸೇವೆಸತ್ಕಾರಗಳನ್ನು ಅನುಭವಿಸುತ್ತಾ ಇದ್ದು ಕಾಲವಾದನು.

೨೨೫ ಗ್ರೀಕರ ದಳಕ್ಕೆ ಯಜಮಾನನಾಗಿದ್ದ ಅಗಮೆಮ್ನಾನಿನ ಪರಿಣಾಮವು ಅಷ್ಟು ಸಂತೋಷಾವಹವಾದುದಾಗಿರಲಿಲ್ಲ. ಸಮುದ್ರಯಾನಕಾಲದಲ್ಲಿ ಅವನು ಅನೇಕ ಕಷ್ಟಗಳನ್ನನುಭವಿಸಿ, ತನ್ನ ಪಾಲಿಗೆ ಬಂದಿದ್ದ ಕಸಾಂಡ್ರ

ಳೆಂಬ, ಪ್ರಿಯಾಮಿನ ಪುತ್ರಿಯೊಡನೆ ಮೈಕೆನಿಗೆ ಹಿಂದಿರುಗಿ ಬಂದಾಗ, ತನ್ನ ಅರಮನೆಯಲ್ಲಿ ಪ್ರಬಲನಾಗಿದ್ದ ಒಬ್ಬ ಜ್ಞಾತಿಯ ಕೈಯಿಂದ ಹತನಾದನು. ಕ್ರೀಟ್ ದ್ವೀಪಾಧಿಪತಿಯಾದ ಐಡೊಮಿನಿಯಸ್ಸನು ಪೊಸೈಡನ್ನಿನ ಅಸಮಾಧಾನದಿಂದ ಉಂಟಾಗಿದ್ದ ಸಮುದ್ರದ ಉಲ್ಲೋಲಕಲ್ಲೋಲವನ್ನು ಸಹಿಸಲಾರದೆ, ತನ್ನ ರಾಜ್ಯವನ್ನು ಸುರಕ್ಷಿತವಾಗಿ ಸೇರುವಂತಾದರೆ ತನ್ನ ದೃಷ್ಟಿಗೆ ಮೊತ್ತಮೊದಲು ಗೋಚರವಾಗುವ ಪ್ರಾಣಿಯನ್ನು ಅರ್ಪಿಸುವುದಾಗಿ ಹರಕೆಕಟ್ಟಿಕೊಂಡನು. ಸ್ವಲ್ಪಕಾಲಾನಂತರ ಐಡೊಮಿನಿಯಸ್ಸನು ಕ್ರೀಟ್ ದ್ವೀಪವನ್ನು ಸುರಕ್ಷಿತವಾಗಿ ಸೇರಿದನು. ಆದರೆ ಆ ಹೊತ್ತಿಗೆ ಸರಿಯಾಗಿ ದುರದೃಷ್ಟವಶದಿಂದ, ಅವನ ಮಗನೇ ಮೊತ್ತಮೊದಲು ಅವನಿಗೆ ಗೋಚರವಾದನು. ಐಡೊಮಿನಿಯಸ್ಸನು ತನ್ನ ಹರಕೆಯಂತೆ ಅವನನ್ನು ಪೊಸೈಡನ್ನಿಗೆ ಅರ್ಪಿಸದೆ ಹೋದುದರಿಂದ, ಅವನ ರಾಜ್ಯದಲ್ಲಿ ಘೋರವಾದ ಒಂದು ರೋಗವುಂಟಾಯಿತು. ಐಡೊಮಿನಿಯಸ್ಸನು ಮುಂದಣ ಯೋಜನೆಯಿಲ್ಲದೆ ಅನುಚಿತವಾದ ಹರಕೆಯನ್ನು ಕಟ್ಟಿಕೊಂಡಿದ್ದುದಕ್ಕಾಗಿ, ಅವನ ಪ್ರಜೆಗಳು ಅಸಮಾಧಾನಪಟ್ಟುಕೊಂಡು ಅವನನ್ನು ರಾಜ್ಯಭ್ರಷ್ಟನನ್ನಾಗಿಮಾಡಿಬಿಟ್ಟರು. ಡೈಯೊಮಿಡೀಸನೂ ಎಷ್ಟೋ ಕಷ್ಟಗಳಿಗೆ ಗುರಿಯಾಗಿ, ಕಟ್ಟಕಡೆಗೆ ತನ್ನ ರಾಜ್ಯವನ್ನು ಸೇರಿದಾಗ ಅದು ಅನ್ಯಾಕ್ರಾಂತವಾಗಿದ್ದುದನ್ನು ಕಂಡು ಅದರ ಆಸೆಯನ್ನೇ ತೊರೆದು ಇಟಲಿಯ ಸಮುದ್ರತೀರಕ್ಕೆ ಹೋಗಿ ಅಲ್ಲಿಯೇ ನೆಲೆಸಿ ಒಂದು ಊರನ್ನು ಕಟ್ಟಿಕೊಂಡು ವಾಸಮಾಡುತ್ತಿದ್ದನು. ಕೆಲವು ದಿನಗಳಾದ ಬಳಿಕ ಅವನಿಗೆ ತನ್ನ ಪೂರ್ವನಿವಾಸಸ್ಥಾನದಮೇಲೂ ಪೂರ್ವದ ಬಾಂಧವರಮೇಲೂ ಇದ್ದ ಶ್ರೀಳು ತೊರೆದು ಹೋಗಿ ತನ್ನ ಹೊಸ ನಿವಾಸಸ್ಥಳದಲ್ಲಿಯೇ ಬಹಳ ಕಾಲವಾಸವಾಗಿದ್ದು ಕಡೆಗೆ ಕಾಲವಾದನು. ಅವನು ಸತ್ತಾಗ ಅವನ ಸಂಗಡಿಗರಲ್ಲಿ ಕೆಲವರು ಬಹಳ ದುಃಖಪಟ್ಟುದನ್ನು ದೇವತೆಗಳು ನೋಡಿ, ಕನಿಕರದಿಂದ ಅವರನ್ನು ಪಕ್ಷಿಗಳಾಗಿ ಮಾರ್ಪಡಿಸಿದರಂತೆ !

೨೨೬. ಕಿರಿಯ ಏಯಾಸನು ಪ್ರಯಾಣಮಾಡಿಕೊಂಡು ಹೋಗುತ್ತಿದ್ದ ಹಡಗು ಒಂದು ಬಂಡೆಗೆ ತಗುಲಿ ಒಡೆದುಹೋಯಿತು. ಆಗ ಅವನು ಬಹಳ ಭಕ್ತಿಯಿಂದ ಪೊಸೈಡನ್ನನ್ನು ಪ್ರಾರ್ಥಿಸಿದುದರಿಂದ, ಅವನು ಆ ಬಂಡೆಯ ಮೇಲೆ ಹೋಗಿ ಬೀಳುವಂತೆ ಆ ದೇವನು ಅನುಗ್ರಹಿಸಿದನು. ಆದರೆ ಉತ್ತರ

ಕ್ಷಣದಲ್ಲಿಯೇ ಏಯಾಸನು ತನ್ನ ಸ್ವಶಕ್ತಿಯಿಂದಲೇ ಆ ಬಂಡೆಯನ್ನು ಹತ್ತಿ ಪ್ರಾಣವನ್ನುಳಿಸಿಕೊಂಡಿದ್ದನೆಂದೂ, ದೇವತೆಗಳ ಸಹಾಯದಿಂದ ತನಗೆ ಅಂತಹ ಉಪಕಾರವೇನೂ ಆಗಲಿಲ್ಲವೆಂದೂ ನಿರಾಕರಿಸಿದುದರಿಂದ ಪೊಸೈಡನ್ನಿಗೆ ಕೋಪ ಬಂದು ಅವನು ಕುಳಿತಿದ್ದ ಬಂಡೆಯನ್ನು ಸೀಳಿಬಿಟ್ಟ ಕಾರಣ ಏಯಾಸಿಗೆ ಜಲಸಮಾಧಿಯುಂಟಾಯಿತು. ಈ ಶಿಕ್ಷೆಗೆ ಮತ್ತೂ ಒಂದು ಕಾರಣವಿದ್ದಿತೆಂದು ತೋರುವುದು. ಟ್ರಾಯ್ ಪಟ್ಟಣವನ್ನು ಕೊಳ್ಳೆ ಹೊಡೆದ ರಾತ್ರಿಯಲ್ಲಿ ಕಿರಿಯ ಏಯಾಸನು ಅಥೆನಿ ದೇವಿಯ ಗುಡಿಯಲ್ಲಿಯೇ ಒಂದು ದುಷ್ಕಾರ್ಯವನ್ನು ನಡೆಯಿಸಿದುದಕ್ಕಾಗಿ, ಆ ದೇವಿಯು ಪೊಸೈಡನ್ನನ್ನು ಪ್ರೇರಿಸಿ ಆ ದೈವದ್ರೋಹಿಗೆ ಜಲಸಮಾಧಿಯನ್ನುಂಟುಮಾಡಿಸಿದ್ದಳೆಂದೂ ಕೆಲವರು ಹೇಳುವರು. ಹಿರಿಯ ಏಯಾಸಿನ ಒಲತಮ್ಮನಾದ ಟ್ಯೂಸರನೂ ಅನೇಕ ಕಷ್ಟಗಳಿಗೆ ಗುರಿಯಾಗಿ ತನ್ನ ಸ್ವದೇಶವಾದ ಸೆಲ್ಯಾಮಿಸ್ ದ್ವೀಪಕ್ಕೆ ಬಂದು ಸೇರಿದಾಗ, ಅವನ ತಂದೆಯಾದ ಟೆಲ್ಯಾಮನ್ನನು ಏಯಾಸನ್ನು ಕಳೆದುಕೊಂಡು ಹಿಂದಿರುಗಿದ್ದುದಕ್ಕಾಗಿ ಟ್ಯೂಸರನ್ನು ಆದರಿಸದೆ ಹೋದನು. ಆದುದರಿಂದ ಅವನು ಸೈಪ್ರಸ್ ದ್ವೀಪಕ್ಕೆ ಹೋಗಿ ಅದರ ಸಮುದ್ರ ತೀರದಲ್ಲಿ ಒಂದು ಪಟ್ಟಣವನ್ನು ಕಟ್ಟಿಕೊಂಡು ಅದಕ್ಕೆ ತನ್ನ ಪೂರ್ವನಿವಾಸಸ್ಥಾನವಾಗಿದ್ದ ಸೆಲ್ಯಾಮಿಸ್ ಎಂಬ ಹೆಸರನ್ನೇ ಇಟ್ಟು ಅಲ್ಲಿ ಸುಖವಾಗಿ ಇದ್ದುಕೊಂಡಿದ್ದನು.

೨೨೭. ಪ್ಯಾರಿಸ್ಸಿನ ಮರಣಾನಂತರ, ಹೆಲೆನಳು ತನ್ನ ವಶವಾಗುವಳೆಂದು ಹೆಲೆನಸ್ಸನು ನೆನೆಸಿಕೊಂಡಿದ್ದನು; ಆದರೆ ಹೆಲೆನಳು ಡೆಯಿಫೋಬಸ್ಸಿನ ವಶಕ್ಕೆ ಸಿಕ್ಕಿದ್ದುದರಿಂದ ಹೆಲೆನಸ್ಸನು ಅಸಮಾಧಾನಪಟ್ಟುಕೊಂಡು ಐಡಾ ಪರ್ವತಪ್ರಾಂತಕ್ಕೆ ಹೊರಟುಹೋಗಿದ್ದನು. ಟ್ರಾಯ್ ಪಟ್ಟಣದ ಮುತ್ತಿಗೆಯ ಕಡೆಕಡೆಯಲ್ಲಿ ಕೆಲವರು ಗ್ರೀಕ್ ಯೋಧರುಗಳು ಐಡಾಪರ್ವತಪ್ರಾಂತಕ್ಕೆ ಹೋಗಿದ್ದಾಗ ಅಲ್ಲಿ ಹೆಲೆನಸ್ಸನ್ನು ಕಂಡು ಅವನನ್ನು ತಮ್ಮ ಪಾಳೆಯಕ್ಕೆ ಹಿಡಿದುಕೊಂಡುಬಂದು ಸೆರೆಯಲ್ಲಿಟ್ಟಿದ್ದರು. ಟ್ರಾಯ್ ಪಟ್ಟಣದ ಕೊಳ್ಳೆಯನ್ನು ಹಂಚಿಕೊಳ್ಳುವ ಸಮಯದಲ್ಲಿ ಹೆಲೆನಸ್ಸನೂ ಹೆಕ್ಟರಿನ ಹೆಂಡತಿಯಾದ ಆಂಡ್ರೊಮೇಕಿಯೂ ನಿಯಾಪ್ಟಾಲಿಮಸ್ಸಿನ ಪಾಲಿಗೆ ಬಂದಿದ್ದರು. ನಿಯಾಪ್ಟಾಲಿಮಸ್ಸನು ಮೆನೆಲಾಸ್ ಮುಂತಾದ ಕೆಲವರು ಪ್ರಮುಖರೊಡನೆ ಸಮುದ್ರಪ್ರಯಾಣ ಹೊರಟು ಸ್ವಲ್ಪದೂರ ಬಂದಮೇಲೆ, ಉಳಿದ ಗ್ರೀಕರೊಡನೆ ಒಟ್ಟಿಗೆ ಪ್ರಯಾಣಮಾಡಿದರೆ

ಅನೇಕ ಕಷ್ಟನಷ್ಟಗಳಿಗೆ ಗುರಿಯಾಗಬೇಕಾಗುವುದೆಂದು ಹೆಲೆನಸ್ಸನು ಭವಿಷ್ಯವನ್ನು ಸೂಚಿಸಿ, ತನ್ನ ಭವಿಷ್ಯಜ್ಞಾನದ ಮೂಲಕ ಸ್ವಲ್ಪಸ್ವಲ್ಪವಾಗಿ ನಿಯಾಪ್ಟಾಲಿಮಸ್ಸಿನ ನಂಬಿಕೆಗೆ ಪಾತ್ರನಾಗುತ್ತ ಬಂದನು. ನಿಯಾಪ್ಟಾಲಿಮಸ್ಸನು ಫ್ರೇಸ್ ದೇಶಕ್ಕೆ ಹೋದಾಗ, ಅಲ್ಲಿ ರಾಣಿಯಾಗಿದ್ದ ಹಾರ್ಪೋಲ್ಲೈಸಿಯು ಅವನನ್ನು ಇದಿರಿಸಿ ಸ್ವಲ್ಪ ಕಾಲದಲ್ಲಿಯೇ ಅಟ್ಟಿಬಿಟ್ಟಳು. ಬಳಿಕ ಅತನು ತನ್ನ ಸ್ವದೇಶವಾದ ಥೆಸಲಿ ಪ್ರಾಂತಕ್ಕೆ ಹೋಗಿ ನೋಡಿದಾಗ, ಅದು ಅನ್ಯಾಕ್ರಾಂತವಾಗಿದ್ದಿತು. ಆದುದರಿಂದ ಅವನು ಎಪಿರಸ್ ಎಂಬ ಪ್ರಾಂತಕ್ಕೆ ಹೋಗಿ ಅಲ್ಲಿ ಒಂದು ಹೊಸ ರಾಜ್ಯವನ್ನು ಸ್ಥಾಪಿಸಿ, ಅದನ್ನು ವಿವೇಕದಿಂದ ಆಳುತ್ತಿದ್ದನು. ಅವನು ಗ್ರೀಸನ್ನು ಮುಟ್ಟಿದ ಕೆಲವು ದಿನಗಳಲ್ಲಿಯೇ ಮೆನೆಲಾಸನೂ ಸ್ಪಾರ್ಟಾ ದೇಶಕ್ಕೆ ಹಿಂದಿರುಗಿದುದರಿಂದ, ಟ್ರಾಯ್ ಪಟ್ಟಣವನ್ನು ಜಯಿಸಿದಾಗ ಅವನಿಗೆ ಕೊಟ್ಟಿದ್ದ ವಾಗ್ದಾನದಂತೆ ಮೆನೆಲಾಸನು ತನ್ನ ಮಗಳಾದ ಹರ್ಮಿಯೋನಿಯನ್ನು ನಿಯಾಪ್ಟಾಲಿಮಸ್ಸಿಗೆ ಬಹಳ ವಿಜೃಂಭಣೆಯಿಂದ ಮದುವೆಮಾಡಿಕೊಟ್ಟನು. ಆದರೆ ಆಕೆಯೊಡನೆ ಬಹುಕಾಲ ಸಂಸಾರಮಾಡಿಕೊಂಡಿರುವುದು ನಿಯಾಪ್ಟಾಲಿಮಸ್ಸಿಗೆ ಲಭ್ಯವಿಲ್ಲದೆಹೋಯಿತು: ಹರ್ಮಿಯೋನಿಯನ್ನು ಮದುವೆಮಾಡಿಕೊಳ್ಳಬೇಕೆಂದಿದ್ದವನೊಬ್ಬನು ನಿಯಾಪ್ಟಾಲಿಮಸ್ಸನ್ನು ಕೊಂದುಬಿಟ್ಟನು. ಬಳಿಕ ಹೆಲೆನಸ್ಸನು ಆಂಡ್ರೊಮೇಕಿಯನ್ನು ತನ್ನ ವಶಪಡಿಸಿಕೊಂಡು ಆಕೆಯೊಡನೆ ಎಪಿರಸ್ಸಿನಲ್ಲಿ ಕೆಲವು ಕಾಲ ಸಂಸಾರಮಾಡಿಕೊಂಡಿದ್ದನು. ಪ್ರಯಾಮಿಗೂ ಹೆಕ್ಯೂಬಳಿಗೂ ಆಗಿದ್ದ ಪುತ್ರರುಗಳಲ್ಲಿ ಟ್ರಾಯ್ ಪಟ್ಟಣದ ಪ್ರಳಯದಲ್ಲಿ ಉಳಿದುಕೊಂಡವನು ಹೆಲೆನಸ್ಸನೊಬ್ಬನೇ. ಈನಿಯಾಸನು ನಾನಾ ದೇಶಗಳಲ್ಲಿ ಅಲೆದು ಕೊನೆಗೆ ಎಪಿರಸ್ಸಿಗೆ ಬಂದು ಸೇರಿದಾಗ ಹೆಲೆನಸ್ಸನು ತನ್ನ ಪೂರ್ವಸ್ನೇಹಿತನನ್ನು ಆದರದಿಂದ ಬರಮಾಡಿಕೊಂಡು ಬಹಳ ಸತ್ಕಾರಮಾಡಿ ಅವನನ್ನು ಸಂತೋಷಪಡಿಸಿ ಮುಂದಕ್ಕೆ ಇಟಲಿಗೆ ಕಳುಹಿಸಿಕೊಟ್ಟನು

೨೨೮ ಮೆನೆಲಾಸನು ಹೆಲೆನಳೊಡನೆ ಪ್ರಯಾಣಮಾಡಿಕೊಂಡು ಬರುತ್ತಿದ್ದಾಗ ದಾರಿಯಲ್ಲಿ ಅನೇಕ ಕಷ್ಟಗಳಿಗೆ ಗುರಿಯಾಗಿ ಕಡೆಗೆ ಟ್ರಾಯ್ ಪಟ್ಟಣದಿಂದ ಹೊರಟ ಎಂಟು ವರ್ಷಗಳಾದಮೇಲೆ, ತನ್ನ ಸ್ವದೇಶವಾದ ಸ್ಪಾರ್ಟಾಕ್ಕೆ ಬಂದು ಸೇರಿದನು. ಅವನು ಬಂದು ತನ್ನ ಸ್ವದೇಶವನ್ನು ಸೇರಿದ ದಿವಸವೇ ಅಗಮೆಮ್ನಾನಿನ ಪುತ್ರನಾದ ಆರೆಸ್ಟಸ್ಸನು ತನ್ನ ತಂದೆಯನ್ನು ಕೊಂದ ಘಾತು

ಕನನ್ನು ನಾಶಮಾಡಿ ತನ್ನ ತಂದೆಯ ತೃಪ್ತ್ಯರ್ಥವಾಗಿ ಅವನ ಸಮಾಧಿಯ ಬಳಿಯಲ್ಲಿ ಕೆಲವು ಸಂಸ್ಕಾರಗಳನ್ನು ನಡೆಯಿಸುತ್ತಿದ್ದನು. ತನಗಾಗಿ ಅಷ್ಟು ಕಷ್ಟಗಳನ್ನನುಭವಿಸಿದ್ದ ಅಗಮೆಮ್ನಾನಿಗೆ ಒದಗಿದ್ದ ವಿಪತ್ತಿಗಾಗಿ ಮೆನೆಲಾಸನು ಬಹಳ ವ್ಯಸನಪಟ್ಟನು. ತನ್ನ ಅವಿವೇಕಕ್ಕಾಗಿ ಹೆಲೆನಳಿಗೂ ಬಹಳ ಪಶ್ಚಾತ್ತಾಪವುಂಟಾಗಿದ್ದಿತು. ಮೆನೆಲಾಸನು ಗ್ರೀಸಿಗೆ ಹಿಂದಿರುಗಿದಮೇಲೆ ಕೆಲವು ಕಾಲದವರೆಗೆ ಹೆಲೆನಳೊಡನೆ ಸುಖವಾಗಿ ಸಂಸಾರಮಾಡಿಕೊಂಡಿದ್ದು ಕಡೆಗೆ ಕಾಲವಾಗಲು, ಅವನ ಪ್ರಜೆಗಳು ಅವನ ಜ್ಞಾಪಕಾರ್ಥವಾಗಿ ಒಂದು ದೇವಸ್ಥಾನವನ್ನು ಕಟ್ಟಿಸಿದರು. ಅದು ಬಹಳ ಕಾಲದವರೆಗೂ ಇದ್ದಿತಂತೆ. ಮೆನೆಲಾಸನೂ ಹೆಲೆನಳೂ ವಾಸಮಾಡುತ್ತಿದ್ದ ಅರಮನೆಯು ಅವರು ಕಾಲವಾದ ಒಳಿಕವೂ ಸುಮಾರು ಏಳುನೂರು ವರುಷಗಳವರೆಗೆ ಅಚ್ಚಳಿಯದೆ ನಿಂತಿದ್ದಿತು. ಎಷ್ಟೋ ವರುಷಗಳವರೆಗೆ ಜನರು ಅದನ್ನು ಸಂದರ್ಶಿಸಿ ಹಿಂದಣ ವೀರರುಗಳ ಕಾಲವೇ ಕಾಲವೆಂದು ಹೇಳಿಕೊಳ್ಳುತ್ತಿದ್ದರು.

೨೨೯. ಮೆನೆಲಾಸಿನ ಕಾಲಾನಂತರ ಹೆಲೆನಳಿಗೆ ಪುನಃ ಕಷ್ಟಗಳು ಒದಗಿದುವು. ಆಕೆಯ ಮಲಮಗನೊಬ್ಬನು ಅರಮನೆಯಲ್ಲಿ ಪ್ರಬಲನಾಗಿ ಸ್ವಲ್ಪ ಕಾಲದಲ್ಲಿಯೇ ಅವಳನ್ನು ದೇಶಭ್ರಷ್ಟಳನ್ನಾಗಿ ಮಾಡಿದುದರಿಂದ, ಅವಳು ರೋಡ್ಸ್ ದ್ವೀಪಕ್ಕೆ ತಪ್ಪಿಸಿಕೊಂಡು ಹೊರಟುಹೋಗಬೇಕಾಯಿತು. ಅಲ್ಲಿಯೂ ಅವಳಿಗೆ ಕಷ್ಟವು ತಪ್ಪಲಿಲ್ಲ. ಆ ಸಮಯದಲ್ಲಿ ಆ ದ್ವೀಪಕ್ಕೆ ಪಾಲಿಕ್ಸೋ ಎಂಬಾಕೆಯು ರಾಣಿಯಾಗಿದ್ದಳು. ಆಕೆಯ ಪತಿಯು ಟ್ರಾಯ್‌ಪಟ್ಟಣದ ಮುತ್ತಿಗೆಯಲ್ಲಿ ಮಡಿದುಹೋಗಿದ್ದನು. ಅದಕ್ಕೆ ದುಷ್ಟಳಾದ ಹೆಲೆನಳೇ ಕಾರಣಭೂತಳೆಂದು ಆ ರಾಣಿಯು ಭಾವಿಸಿ, ತನ್ನ ಕೈಗೆ ಸಿಕ್ಕಿದ್ದ ಅವಳನ್ನು ಒಂದು ಮರಕ್ಕೆ ನೇಣುಹಾಕಿಸಿಬಿಟ್ಟಳು. ಹೆಲೆನಳು ದೈವಚಿತ್ತದಿಂದ ದುರ್ಮಾರ್ಗಕ್ಕೆ ಬಿದ್ದಿದ್ದಳೆಂದುಕೊಂಡು ಅವಳಲ್ಲಿ ದೋಷವನ್ನು ಎಣಿಸದಿದ್ದ ಕೆಲವರು, ಆಕೆಯನ್ನು ಗಲ್ಲಿಗೇರಿಸಿದ್ದ ಸ್ಥಳದಲ್ಲಿ ಒಂದು ದೇವಸ್ಥಾನವನ್ನು ಕಟ್ಟಿಸಿ, ಅಲ್ಲಿ ಅನೇಕ ವರ್ಷಗಳವರೆಗೆ ಪೂಜಾದಿಗಳನ್ನು ನಡೆಸಿಕೊಂಡು ಬರುತ್ತಿದ್ದರು.

೨೩೦. ಪೊಸೈಡನ್ನನು ಉಂಟುಮಾಡಿದ್ದ ಚಂಡಮಾರುತದಲ್ಲಿ ಉಳಿದ ಅನೇಕಗ್ರೀಕರ ಹಡಗುಗಳು ಸಿಕ್ಕಿಸಿಕ್ಕಿದ ಕಡೆಗೆ ಚೆದರಿಹೋದುವು. ಅವುಗಳಲ್ಲಿ ಅನೇಕ ಹಡಗುಗಳು ಮುಳುಗಿಹೋದುವು. ಟ್ರೋಜನ್ ತೀರವನ್ನು ಬಿಟ್ಟು ಹೊರಟ ಕೆಲವುದಿವಸಗಳೊಳಗಾಗಿ ಅನೇಕ ಗ್ರೀಕರ ಹೆಣಗಳು ಈಜಿಯನ್

ಸಮುದ್ರತೀರದ ಹಲವು ದ್ವೀಪಗಳ ತೀರಕ್ಕೂ ಗ್ರೀಸಿನ ಪೂರ್ವತೀರಕ್ಕೂ ತೇಲಿಕೊಂಡುಹೋಗಿ ಕುಪ್ಪೆಕುಪ್ಪೆಗಳಾಗಿ ಬಿದ್ದುವು. ಈ ಮಹೋತ್ಪಾತದಲ್ಲಿ ಉಳಿದುಳಿದ ಕೆಲವರು ಗ್ರೀಕ್ ಯೋಧರುಗಳು ಎಷ್ಟೋಕಾಲ ಅಲೆದಾಡಿ, ತಮ್ಮ ತಮ್ಮ ಮನೆಗಳಿಗೆ ಹೋಗಿ ಸೇರಿದಾಗ, ಅನೇಕರ ಸಂಸಾರಗಳಲ್ಲಿ ಬಹಳ ವ್ಯತ್ಯಾಸಗಳು ನಡೆದುಹೋಗಿದ್ದುವು. ಕೆಲವರ ಸಮೀಪಬಂಧುಗಳೂ ಮಿತ್ರರುಗಳೂ ಕಾಲವಾಗಿ ಹೋಗಿದ್ದರು. ಮತ್ತೆ ಕೆಲವರ ಮನೆಮಠಗಳು ಅನ್ಯಾಕ್ರಾಂತವಾಗಿ ಹೋಗಿದ್ದುವು ಕಾಲಸ್ರೋತಕ್ಕೆ ಸಿಕ್ಕಿ ಸವೆದುಹೋಗದಿದ್ದ ಕೆಲವು ಸಂಸಾರಗಳು ಮಾತ್ರ ಅಲ್ಲಲ್ಲಿ ಕಂಡು ಬರುತ್ತಿದ್ದುವು. ಅವುಗಳನ್ನು ಕಂಡು ಸಂತುಷ್ಟರಾಗಿದ್ದ ಕೆಲವರು ಯೋಧರುಗಳು, ತಾವೂ ತಮ್ಮ ಸಂಗಡಿಗರೂ ನಡೆಸಿದ್ದ ಸಾಹಸಕಾರ್ಯಗಳನ್ನು ಅತಿಶಯೋಕ್ತಿಗಳಿಂದ ಬಹಳ ಸ್ವಾರಸ್ಯವಾಗಿ ವರ್ಣಿಸುತ್ತಾ ತಮ್ಮ ಶತ್ರುಗಳನ್ನೂ ಅವರ ದೇಶಕೋಶಗಳನ್ನೂ, ನಿರ್ಮೂಲಮಾಡಿದ್ದುದಕ್ಕಾಗಿ ಹೆಮ್ಮೆಪಟ್ಟುಕೊಳ್ಳುತ್ತಿದ್ದರು. ಮತ್ತೆ ಕೆಲವರು ತಾವು ಕಷ್ಟಪಟ್ಟರೂ ಚಿಂತೆಯಿಲ್ಲವೆಂದೂ, ತಮ್ಮ ಕಡೆಯುವರಲ್ಲಿ ಅನೇಕರು ಮೃತ್ಯುವಶರಾಗಿ ಹೋಗಿದ್ದರೂ ವ್ಯಸನವಿಲ್ಲವೆಂದೂ ಸಮಾಧಾನಪಟ್ಟುಕೊಳ್ಳುತ್ತಾ, ಗ್ರೀಕರಿಗೆ ಉಂಟಾಗಿದ್ದ ಮಾನಹಾನಿಯು ಪರಿಹಾರವಾಗಿದ್ದುದಕ್ಕಾಗಿ ಅತ್ಯಂತಸಂತೋಷಭರಿತರಾಗಿದ್ದರು. ಟ್ರೋಜನರ ಪಕ್ಷಪಾತಿಗಳಾಗಿದ್ದ ಮತ್ತೆ ಕೆಲವರಾದರೋ, ಗ್ರೀಕರ ದಂಡಯಾತ್ರೆಯು ಬಹಳ ಅನ್ಯಾಯವಾದುದೆಂದೂ, ಅಷ್ಟು ಸುಖಸಂತೋಷಗಳಿಂದ ಕಂಗೊಳಿಸುತ್ತಿದ್ದ ಟ್ರಾಯ್ ದೇಶವನ್ನು ಗ್ರೀಕರು ವೃಥಾ ಮಣ್ಣುಪಾಲುಮಾಡಿಬಿಟ್ಟರೆಂದೂ ಹೇಳಿಕೊಂಡು ಗ್ರೀಕರನ್ನು ದೂರುತ್ತಿದ್ದರು. ಅಂತೂ ಟ್ರೋಜನ್ ದಂಡಯಾತ್ರೆಯ ವೃತ್ತಾಂತವು ಅನೇಕ ಶತಮಾನಗಳವರೆಗೆ ನಾನಾ ದೇಶಗಳಲ್ಲಿ ಪ್ರಚಾರವಾಗಿದ್ದಿತು. ಈ ದಂಡಯಾತ್ರೆಯ ಸಂಗತಿಗಳು ನಡೆದುಹೋಗಿ ಮೂವತ್ತು ಶತಮಾನಗಳಾಗಿದ್ದರೂ, ಈಗಲೂ ವರ್ಧಿಷ್ಣುಗಳಾದ ಹಲವು ಭಾಷೆಗಳಲ್ಲಿ ಈ ವಿಷಯವನ್ನು ಕುರಿತು ಗ್ರಂಥಗಳು ಅಗಣಿತವಾಗಿ ಮತ್ತೆ ಮತ್ತೆ ಪ್ರಚಾರಕ್ಕೆ ಬರುತ್ತಲಿರುವುವು.

ಯವನಪುರಾಣಗ್ರಂಥಾವಳಿಯಲ್ಲಿ ಎರಡನೆಯದಾದ

ಟ್ರೋಜನ್ ದಂಡಯಾತ್ರೆಯು

ಸಂಪೂರ್ಣವು.

# ಶುದ್ಧಿಪತ್ರ.

| ಪುಟ | ಪಙ್ಕ್ತಿ | ಅಶುದ್ಧ | ಶುದ್ಧ |
|---|---|---|---|
| ೨ | ೨೨ | ಸೈಲೆನಸ್ | ಹೆಲೆನಸ್ |
| ೪ | ೨೧ | ಪೆಲಸ್ಸನ್ನು | ಪೆಲಪ್ಸನ್ನು |
| ೫ | ೪, ೧೨ | ಪೆಲಸ್ಸನು | ಪೆಲಪ್ಸನು |
| ೧೨ | ೪ | ದೇವತ | ದೇವತೆ |
| ೧೪ | ೯ | ಮತೆ | ಮತ್ತೆ |
| ೧೫ | ೨೧ | III | (ಇದನ್ನು ಬಿಡಬೇಕು) |
| ೧೬ | ೨೬ | ಕಡೆಗೆಕಡೆ | ಕಡೆಕಡೆಗೆ |
| ೨೧ | ೯ | ಆತನ | ಆತನು |
| ,, | ೨೩ | ಶುಭವನ್ನ | ಶುಭವನ್ನು |
| ೨೨ | ೯ | ತಚ್ಛವಾದ | ತುಚ್ಛವಾದ |
| ,, | ೧೩ | ಪ್ರತರ್ಥಿ | ಪ್ರತ್ಯರ್ಥಿ |
| ೨೪ | ೧೩ | ಅನಯಾಯಿ | ಅನುಯಾಯಿ |
| ೨೮ | ೨ | ಅತ್ಯಪಾರವಾಗಿರುವುರು | ಅತ್ಯಪಾರವಾಗಿರುವುದು. |
| ೨೯ | ೧ | ಗ್ರೀಕಂನ್ನು | ಗ್ರೀಕರನ್ನು |
| ,, | ೨೦ | ಬೇಕೆಂದಿರವೆ ? | ಬೇಕೆಂದಿರುವೆ ? |
| ,, | ೨೬ | ಅಗವೆಮ್ನಾನಿನ | ಅಗಮೆಮ್ನಾನಿನ |
| ೩೦ | ೧ | ೩೪ | ೩೫. |
| ,, | ೯ | ಥರ್ಸಟೀಸನು | ಥರ್ಸೈಟೀಸನು |
| ,, | ೨೫ | ಕಾದಿದ್ರು | ಕಾದಿದ್ದು |
| ೩೨ | ೧೯ | ಕೂಂಡು | ಕೊಂಡು |
| ,, | ೨೬ | ಬಾರ್ಬೇರಿಯಿನ್ | ಬಾರ್ಬೇರಿಯನ್ |
| ೩೩ | ೨೪ | ನ್ಯಾಯುವಾದುದ | ನ್ಯಾಯವಾದುದು. |
| ೩೮ | ೧೫ | ಭೂವಿ | ಭೂವಿಃ |
| ೪೨ | ೨ | ಶಬ್ದುವನ್ನ | ಶಬ್ದವನ್ನು |
| ೪೪ | ೧ | ಡ್ಯೆಯೋಮೀಡಿಯು | ಪ್ಯಾಂಡಾರಸ್ಸನು |
| ೪೮ | ೨೬ | ಒಲಿಂಪಸ್ | ಒಲಿಂಪಸ್ |
| ೫೦ | ೧೮ | ಜನಕ ು | ಜನಕರು |
| ೫೩ | ೩ | ಆಯುಧಗಳಸ್ನು | ಆಯುಧಗಳನ್ನು |
| ,, | ೧೮ | ದರ್ಗದ | ದುರ್ಗದ |
| ೬೫ | ೧೯ | ವಶ | ವಶಕ್ಕೆ |
| ೬೮ | ೧ | ಸಮಯುದಲ್ಲ | ಸಮಯುದಲ್ಲಿ |
| ೭೪ | ೮ | ಧರಿಸಿದ | ಧರಿಸಿದ್ದ |
| ೭೬ | ೪ | ಹಕ್ಟರನು | ಹೆಕ್ಟರನು |
| ೭೬ | ೧೦ | ಗಾಯಗಾಣಿಸಡನು | ಗಾಯಗಾಣಿಸಿದನು. |
| ೮೭ | ೧೬ | ಕಾರ್ಯಗಳನ್ನು | ಕಾರ್ಯಗಳನ್ನು |

| | | | |
|---|---|---|---|
| ೮೪ | ೭ | ಏಡೊಮಿನಿಯುಸ್ | ಐಡೊಮಿನಿಯಸ್ |
| ೯೦ | ೧೬ | ಇಪ್ಪೆಯು | ಇಪ್ಪೆಯ |
| ೯೧ | ೧೦ | ನಿದ್ರೆಯನ್ನುಂಟಾಗು | ನಿದ್ರೆಯುಂಟಾಗು |
| ೯೪ | ೨೪ | ಆ ಯನ್ನ | ಆಜ್ಞೆಯನ್ನು |
| ೯೫ | ೧೩ | ಗೊಳಾಡಿಸಿ | ಗೋಳಾಡಿಸಿ |
| ೯೮ | ೮ | ಯುರಿಸ್ಥಿಯುಸ್ಸಿಗೆ | ಯುರಿಸ್ಥಿಯುಸ್ಸಿನ |
| ,, | ೯ | ಆಪಾಲ | ಆಘಾಲ |
| ೧೦೧ | ೯ | ಪಿವ್ಮಟ್ಟ | ಹೆಪ್ಮಟ್ಟ |
| ೧೦೩ | ೧೩ | ಪಟ್ರೋಕ್ಲನ್ನನೂ | ಪೆಟ್ರೋಕ್ಲಸ್ಸನೂ |
| ೧೦೪ | ೧೩ | ಬಿದನು | ಬಿದ್ದನು |
| ೧೨೧ | ೧೧ | ಸಟಿಯುನೂ | ಸಟೆಯುನ್ನೂ |
| ,, | ೨೩ | ಉಳಿದು ಳ್ಳ | ಉಳಿದುಕೊಳ್ಳ |
| ೧೨೨ | ೮ | ೧೫೨. | ೧೫೨. ಎ. |
| ೧೨೫ | ೬ | ಸ್ಕಮಾಂಡ್ರಾನ್ | ಸ್ಕಮಾಂಡ್ರಾಸ್ |
| ೧೨೬ | ೨೩ | ಫೊಸೈಡನ್ನನ್ನೂ | ಫೊಸೈಡನ್ನನೂ |
| ೧೨೭ | ೧೩ | ತನ್ನ | ತನ್ನ |
| ೧೩೭ | ೨೭ | ಮೆರಿಯೋನಸ್ | ಮೆರಿಯೋನಸ್ |
| ೧೫೩ | ೭ | ಅಂಗೈ | ಅಂಗೈ |
| ೧೫೮ | ೭ | ಸೆರ | ಸೆರೆ |
| ೧೬೧ | ೬, ೨೪ | ಹೊತ್ತಿನಲ್ಲಿಯು | ಹೊತ್ತಿನಲ್ಲಿಯೇ |
| ,, | ೧೭ | ಅನೇಕವೇಳೆ ಪಟ್ಟಣದೊಳಕ್ಕೆ | ಪಟ್ಟಣದೊಳಕ್ಕೆ |
| ,, | ೧೮ | ಡೇಯುಸನ್ನು | ಪಾಲಿಡೇಮುಸ್ಸನ್ನು |
| ,, | ೨೨ | ಥ್ರಾಸಿಮೆಡೀಸರು | ಥ್ರಾಸಿಮೆಡೀಸನು |
| ೧೬೨ | ೧ | ಇದ್ದುದರಿಂದ | ಇದ್ದುದರಿಂದ |
| ,, | ೨ | ಗುಡಿಗಿನ | ಗುಡುಗಿನ |
| ೧೬೨ | ೧೮ | ಹೆರ್ಯಾಕ್ಲಿಸ | ಹೆರ್ಯಾಕ್ಲಿಸಿನ |
| ೧೬೩ | ೩ | ಆಹಾರ | ಆಹಾರ |
| ,, | ೧೧ | ಫಿಲಾಕ್ಟೀಟಸ್ಸನು | ಫಿಲಾಕ್ಟೀಟಸ್ಸನು |
| ೧೬೪ | ೧ | ಕರೆದುಕೊಂಚು | ಕರೆದುಕೊಂಡು |
| ,, | ೧೭ | ಓಂದರ | ಒಂದರ |
| ೧೬೫ | ೨ | ಟ್ರೋಜನರುಮೇಲಿನಿಂದ ಉರಳಿಸು | ಟ್ರೋಜನರು ಉರುಳಿಸು |
| ,, | ೧೫ | ಅದರೂಳಗೆ | ಅದರೊಳಗೆ |
| ೧೬೬ | ೧೪ | ಅಗಮೆಮ್ನಾನನು | ಅಗಮೆಮ್ನಾನನು |
| ,, | ೧೬ | ೧೧೩ | ೨೧೩. |
| ೧೬೮ | ೭ | ಪ್ರಮುಖನ | ಪ್ರಮುಖನ |
| ೧೭೨ | ೯ | ಉಲ್ಕ | ಉಲ್ಕಾ |